# ಇಸ್ಲಾಮ್ ಧರ್ಮ

ಸಯ್ಯದ್ ಅಬುಲ್ ಆಲಾ ಮೌದೂದಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

'ಇಸ್ಲಾಮ್ ಧರ್ಮ' ಎಂಬುದು ವಿಶ್ವವಿಖ್ಯಾತ ವಿದ್ವಾಂಸರಾದ ಮೌಲಾನಾ ಸಯ್ಯದ್ ಅಬುಲ್ ಆಲಾ ಮೌದೂದಿಯವರು(ರ) 1937ರಲ್ಲಿ ರಚಿಸಿದ ಸುಪ್ರಸಿದ್ಧ ಉರ್ದು ಪುಸ್ತಕ 'ರಿಸಾಲ ಯೆ ದೀನಿಯ್ಯಾತ್' ಇದರ ಕನ್ನಡಾನುವಾದವಾಗಿದೆ. ಈ ಪುಸ್ತಕವು ಹಿಂದಿ ಹಾಗೂ ಇತರ ಎಲ್ಲ ರಾಜ್ಯ ಭಾಷೆಗಳಲ್ಲಿಯೂ ಲೋಕದ ಹೆಚ್ಚಿನ ಎಲ್ಲ ಭಾಷೆಗಳಲ್ಲಿಯೂ ಅನುವಾದಗೊಂಡು ಲಕ್ಷಾವಧಿ ಸಂಖ್ಯೆಯಲ್ಲಿ ಪ್ರಕಾಶನಗೊಳ್ಳುತ್ತಾ ಇದೆ. Towards Understanding Islam ಎಂಬುದು ಅದರ ಇಂಗ್ಲಿಷ್ ಅನುವಾದ ಗ್ರಂಥ.

ಈ ಪುಸ್ತಕವನ್ನು ಲೋಕದಾದ್ಯಂತ ಅನೇಕ ಇಸ್ಲಾಮೀ ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕವನ್ನಾಗಿ ಕಲಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲದೆ ಇಸ್ಲಾಮಿನ ಮೂಲಭೂತ ವಿಶ್ವಾಸ-ಶ್ರದ್ಧೆ, ಆಚಾರ-ವಿಚಾರಗಳನ್ನು ತಿಳಿಯಬಯಸುವ ಇತರರು ಸಹ ಈ ಕೃತಿಯಿಂದ ಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ.

ಜೀವನದ ಮೂಲ ಉದ್ದೇಶ ಮತ್ತು ಸಮಸ್ಯೆಗಳನ್ನರಿಯಲು ಈ ಪುಸ್ತಕ ಸಹಕಾರಿಯಾಗಿದೆ. ಇದನ್ನು ಮುಸ್ಲಿಮರಿಗೆ ಮಾತ್ರವಲ್ಲ, ಮುಸ್ಲಿಮೇತರರಿಗೂ ಉಪಯುಕ್ತವಾಗುವ ರೀತಿಯಲ್ಲಿ ಬರೆಯಲಾಗಿದೆ. ಇಸ್ಲಾಮ್ ಧರ್ಮವನ್ನು ತಿಳಿಯಬಯಸುವ ಎಲ್ಲರಿಗೂ ಇದರ ಅಧ್ಯಯನವು ಉಪಯುಕ್ತವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಮುನ್ನುಡಿ

ಈ ಪುಸ್ತಕವನ್ನು ವಿಶೇಷವಾಗಿ ಹೈಸ್ಕೂಲಿನ ಕೊನೆಯ ಮತ್ತು ಕಾಲೇಜಿನ ಆರಂಭದ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗಾಗಿ ಬರೆಯಲಾಗಿದೆ. ಅವರ ಹೊರತು ಇತರರೂ ಇದರಿಂದ ಪ್ರಯೋಜನ ಪಡೆಯಬಹುದು. ಇದರ ಪ್ರಥಮ ಆವೃತ್ತಿಯು 1937ರಲ್ಲಿ ಪ್ರಕಾಶನಗೊಂಡಿತು. ಅಂದಿನಿಂದಲೇ ಭಾರತದ ಅನೇಕ ಶಾಲೆಗಳಲ್ಲಿ ಮತ್ತು ಪಾಕಿಸ್ತಾನ ಅಸ್ತಿತ್ವಕ್ಕೆ ಬಂದ ಬಳಿಕ ಅಲ್ಲಿನ ಹೆಚ್ಚಿನ ಶಾಲೆಗಳ ಉನ್ನತ ತರಗತಿಗಳಲ್ಲಿ ಇದನ್ನು ಪಠ್ಯಪುಸ್ತಕವಾಗಿ ಮಾಡಲಾಯಿತು. 26 ವರ್ಷಗಳಲ್ಲಿ ಇದೀಗ 23ನೇ ಸಲ ಪ್ರಕಾಶನಗೊಳ್ಳುತ್ತಿದೆ. ಲೋಕದ ಐದು ಅಂತಾರಾಷ್ಟ್ರೀಯ ಭಾಷೆಗಳಲ್ಲಿ ಒಂದು ಲಕ್ಷಕ್ಕಿಂತಲೂ ಅಧಿಕ ಪ್ರತಿಗಳು ಈ ತನಕ ಮುದ್ರಣಗೊಂಡಿವೆ.*

ನಮ್ಮಲ್ಲಿ ಧಾರ್ಮಿಕ ಶಿಕ್ಷಣದ ಸಾಮಾನ್ಯ ಸ್ವರೂಪವು ಈ ತನಕ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಕರ್ಮಶಾಸ್ತ್ರದ ವಿಷಯಗಳನ್ನು ಕಲಿಸುವುದಕ್ಕೆ ಸೀಮಿತವಾಗಿದೆ. ಅವರಲ್ಲಿ ನಮಾಝ್, ಉಪವಾಸ ವ್ರತ, ಶುದ್ಧೀಕರಣ ಮತ್ತು ಅಂತಹದೇ ಇತರ ವಿಷಯಗಳ ವಿವರಣೆ ಇರುತ್ತದೆ. ವಿಶ್ವಾಸ-ಶ್ರದ್ಧೆಗಳ ಶಿಕ್ಷಣವು ತುಲನಾತ್ಮಕವಾಗಿ ಕಡಿಮೆ ಇರುತ್ತದೆ. ಅದೂ ಪರಿಣಾಮಕಾರಿಯಾಗಿರುವುದಿಲ್ಲ. ಇಸ್ಲಾಮ್ ಏನು? ಅದು ಏನನ್ನು ಬಯಸುತ್ತದೆ ಮತ್ತು ಏಕೆ ಬಯಸುತ್ತದೆ? ಅದರ ವಿಶ್ವಾಸ-ಶ್ರದ್ಧೆಗಳಿಗೆ ಮನುಷ್ಯ ಜೀವನದೊಂದಿಗೆ ಇರುವ ಸಂಬಂಧವೇನು? ಅವುಗಳನ್ನು ನಂಬಿದರೆ ಇರುವ ಪ್ರಯೋಜನಗಳೇನು? ನಂಬದಿದ್ದರೆ ಆಗುವ ನಷ್ಟವೇನು? ಇಸ್ಲಾಮ್ ಕೇವಲ ಅಧಿಕಾರ ಬಲದಿಂದ ಈ ವಿಶ್ವಾಸ-ಶ್ರದ್ಧೆಗಳನ್ನು ಅಂಗೀಕರಿಸುವಂತೆ ಮಾಡುತ್ತದೆಯೇ ಅಥವಾ ಅದರ ಬಳಿ ಅವುಗಳ ಔಚಿತ್ಯ ಮತ್ತು ಪ್ರಾಮಾಣಿಕತೆಯ ಬಗ್ಗೆ ಏನಾದರೂ ಪುರಾವೆ ಇದೆಯೇ ಎಂಬುದು ವಿದ್ಯಾರ್ಥಿಗೆ ಕೊನೆಯ ತನಕವೂ ತಿಳಿದಿರುವುದಿಲ್ಲ. ಈ ಎಲ್ಲ ವಿಷಯಗಳು ಧರ್ಮದ ತಿಳುವಳಿಕೆ ಮತ್ತು ವಿಶ್ವಾಸ-ಶ್ರದ್ಧೆಯ ತಿದ್ದುವಿಕೆಗೆ

---

*** [ಈ ಪುಸ್ತಕವು ಲೋಕದ 72 ಭಾಷೆಗಳಲ್ಲಿ ಅನುವಾದಗೊಂಡು ಲಕ್ಷಾವಧಿ ಸಂಖ್ಯೆಯಲ್ಲಿ ಪ್ರಕಾಶನಗೊಳ್ಳುತ್ತಾ ಇದೆ. ಭಾರತದ ಹೆಚ್ಚಿನೆಲ್ಲ ಪ್ರಾಂತೀಯ ಭಾಷೆಗಳಲ್ಲೂ ಇದು ಪ್ರಕಾಶನಗೊಂಡಿದೆ. –ಅನು]**

ಅತ್ಯಗತ್ಯವಾಗಿದೆ. ಈ ವಿಷಯಗಳು ಚೆನ್ನಾಗಿ ಮನದಟ್ಟಾಗುವ ತನಕ ಕರ್ಮಶಾಸ್ತ್ರದ ಶಿಕ್ಷಣದಿಂದ ಯಾವ ಪ್ರಯೋಜನವೂ ಸಿಗಲಾರದು. ಏಕೆಂದರೆ, ಸತ್ಯವಿಶ್ವಾಸದ ಹೊರತು ಆಜ್ಞೆಗಳ ಅನುಸರಣೆ ಸಾಧ್ಯವಿಲ್ಲ. ಸತ್ಯವಿಶ್ವಾಸವು ವಿಶ್ವಾಸ-ಶ್ರದ್ಧೆಗಳನ್ನು ಸರಿಯಾಗಿ ಅರಿತುಕೊಳ್ಳುವುದರಿಂದ ಮಾತ್ರ ಸುದೃಢವಾಗುತ್ತದೆ.

ಇದೇ ರೀತಿ ನಮಾಝ್, ಉಪವಾಸ ವ್ರತಗಳ ವಿಧಿ-ವಿಧಾನಗಳನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗೆ ಆರಾಧನಾ ಕರ್ಮಗಳು ಮತ್ತು ಧಾರ್ಮಿಕ ವಿಧಿಗಳ ಯುಕ್ತಿ ಮತ್ತು ಔಚಿತ್ಯವನ್ನು ಮನದಟ್ಟು ಮಾಡಿಸಬೇಕಾಗಿದೆ. ತನ್ಮೂಲಕ ಅವನು ಮನಃಪೂರ್ವಕವಾಗಿ ಆ ಆಜ್ಞೆಗಳನ್ನು ಪಾಲಿಸಬಹುದು. ನಮಾಝ್ ಮಾಡಬಯಸುವವನಿಗೆ ಮಾತ್ರ ನಮಾಝ್ ಕ್ರಮ ಕಲಿಯುವುದರಿಂದ ಪ್ರಯೋಜನವಾದೀತೆಂಬುದು ವ್ಯಕ್ತ. ನಮಾಝ್ ಮಾಡಲಿಕ್ಕೇ ಸಿದ್ಧನಿಲ್ಲದವನಿಗೆ ನಮಾಝ್ ಹೇಗೆ ಮಾಡಬೇಕೆಂದು ಕಲಿಸುವುದರಿಂದ ಏನು ಫಲ. ಆದ್ದರಿಂದ ನಮಾಝ್‌ನ ವಿಧಿಗಳನ್ನು ಕಲಿಸುವುದಕ್ಕಿಂತ ಮುಂಚೆ ವಾಸ್ತವದಲ್ಲಿ ನಮಾಝ್ ಎಂದರೇನು, ಅದು ಏಕೆ ಕಡ್ಡಾಯಗೊಳಿಸಲ್ಪಟ್ಟಿದೆ, ಅದರ ಪ್ರಯೋಜನಗಳೇನು, ಅದನ್ನು ತೊರೆದರೆ ಆಗುವ ನಷ್ಟವೇನು ಎಂಬಿತ್ಯಾದಿ ವಿಷಯಗಳನ್ನು ವಿದ್ಯಾರ್ಥಿಗೆ ಕಲಿಸುವುದು ಅಗತ್ಯ. ಇದೇ ರೀತಿ ಇತರ ಧಾರ್ಮಿಕ ವಿಧಿಗಳ ಕುರಿತೂ ಮೊದಲು ಈ ಪ್ರಶ್ನೆಗಳ ಉತ್ತರವನ್ನು ಮನದಟ್ಟು ಮಾಡಿಕೊಡಬೇಕು. ಆ ಬಳಿಕವೇ ಅದರ ವಿವರಗಳನ್ನು ತಿಳಿಸುವುದು ಉಪಯುಕ್ತವೆನಿಸೀತು.

ಇದೇ ಅಗತ್ಯವನ್ನು ಮುಂದಿರಿಸಿಕೊಂಡು ನಾನು ಈ ಪುಸ್ತಕವನ್ನು ರಚಿಸಿದ್ದೇನೆ. ಇದರಲ್ಲಿ ಧಾರ್ಮಿಕ ಶಿಕ್ಷಣದ ಒಂದು ಹೊಸ ವಿಧಾನವನ್ನು ಅನುಸರಿಸುವ ಪ್ರಯತ್ನ ಮಾಡಲಾಗಿದೆ. ಇದು ಹಳೆಯ ವಿಧಾನಗಳಿಂದ ಬಹಳಷ್ಟು ಭಿನ್ನವಾಗಿದ್ದು ವಿಶೇಷವಾಗಿ ಇಂದಿನ ಪರಿಸ್ಥಿತಿಗೆ ಹೆಚ್ಚು ಉಪಯುಕ್ತವಾಗಿದೆ.

ಇದರಲ್ಲಿ ನಾನು ಪವಿತ್ರ ಕುರ್‌ಆನಿನ ಬೋಧನೆಗಳ ಸಾರವನ್ನು ಪ್ರಸ್ತುತ ಪಡಿಸಿರುವೆನು. ಪವಿತ್ರ ಕುರ್‌ಆನಿನ ಪ್ರತಿಪಾದನಾ ಶೈಲಿಯನ್ನೇ ಇದರಲ್ಲಿ ಅಳವಡಿಸಿರುವೆನು. ಯಾವ ಉದ್ದೇಶಕ್ಕಾಗಿ ಈ ಪ್ರಯತ್ನ ಮಾಡಲಾಗಿದೆಯೋ ಅದು ಪೂರ್ಣಗೊಳ್ಳುವಂತಾಗಲಿ ಮತ್ತು ಈ ಪುಸ್ತಕವು ಧಾರ್ಮಿಕ ಶಿಕ್ಷಣದ ತುಲನಾತ್ಮಕವಾಗಿ ಹೆಚ್ಚು ಪರಿಣಾಮಕಾರಿಯಾದ ಒಂದು ಹೊಸ ವಿಧಾನದ ಬಾಗಿಲು ತೆರೆಯುವಂತಾಗಲಿ ಎಂದು ಹಾರೈಸುತ್ತೇನೆ.

**ಎಪ್ರಿಲ್ 1960** **ಅಬುಲ್ ಆಲಾ ಮೌದೂದಿ**

# ಅನುಕ್ರಮಣಿಕೆ


- **ಇಸ್ಲಾಮ್** 09

ನಾಮಕರಣಕ್ಕೆ ಕಾರಣ 09

'ಇಸ್ಲಾಮ್' ಪದದ ಅರ್ಥ 09

ಇಸ್ಲಾಮಿನ ವಾಸ್ತವಿಕತೆ 10

ಈಗ ಇನ್ನೊಂದು ಕೋನದಿಂದ ನೋಡಿರಿ 11

ಕುಫ್ರ್ ಅಥವಾ ನಿರಾಕರಣೆಯ ವಾಸ್ತವಿಕತೆ 12

ಕುಫ್ರ್‌ನ ನಷ್ಟಗಳು 13

ಇಸ್ಲಾಮಿನ ಪ್ರಯೋಜನಗಳು 14

- **ಸತ್ಯವಿಶ್ವಾಸ ಮತ್ತು ಅನುಸರಣೆ** 23

ಅನುಸರಣೆಗೆ ಜ್ಞಾನ ಮತ್ತು ದೃಢನಂಬಿಕೆಯ ಅಗತ್ಯ 23

ಸತ್ಯವಿಶ್ವಾಸದ ವಿವರಣೆ 25

ಜ್ಞಾನದ ಮೂಲ 26

ಅದೃಶ್ಯದ ಮೇಲೆ ವಿಶ್ವಾಸ 28

- **ಪ್ರವಾದಿತ್ವ** 30

ಪ್ರವಾದಿತ್ವದ ವಾಸ್ತವಿಕತೆ 30

ಪ್ರವಾದಿಯ ಪರಿಚಯ 33

ಪ್ರವಾದಿಯ ಅನುಸರಣೆ 34

ಪ್ರವಾದಿಗಳ ಮೇಲೆ ವಿಶ್ವಾಸವಿಡುವುದರ ಅಗತ್ಯ 35

ಪ್ರವಾದಿತ್ವದ ಸಂಕ್ಷಿಪ್ತ ಚರಿತ್ರೆ 38

ಹ. ಮುಹಮ್ಮದ್‌ರ(ಸ) ಪ್ರವಾದಿತ್ವ 43

ಮುಹಮ್ಮದ್‌ರ(ಸ) ಪ್ರವಾದಿತ್ವದ ಆಧಾರ 45

ಪ್ರವಾದಿತ್ವ ಪರಿಸಮಾಪ್ತಿ 53

ಪ್ರವಾದಿತ್ವ ಪರಿಸಮಾಪ್ತಿಯ ಪುರಾವೆಗಳು 53

- **ಸತ್ಯವಿಶ್ವಾಸದ ವಿವರಣೆ** 56

ಅಲ್ಲಾಹನ ಮೇಲೆ ವಿಶ್ವಾಸ 57

'ಲಾ ಇಲಾಹ ಇಲ್ಲಲ್ಲಾಹ್'- ಇದರ ಅರ್ಥ 58
'ಲಾ ಇಲಾಹ ಇಲ್ಲಲ್ಲಾಹ್'ನ ವಾಸ್ತವಿಕತೆ 59
ಮನುಷ್ಯ ಜೀವನದ ಮೇಲೆ ಏಕದೇವ ವಿಶ್ವಾಸದ ಪ್ರಭಾವ 65
ದೇವಚರರ ಮೇಲೆ ವಿಶ್ವಾಸ 69
ಅಲ್ಲಾಹನ ಗ್ರಂಥಗಳ ಮೇಲೆ ವಿಶ್ವಾಸ 71
ಅಲ್ಲಾಹನ ಪ್ರವಾದಿಗಳ ಮೇಲೆ ವಿಶ್ವಾಸ 76
ಪರಲೋಕದ ಮೇಲೆ ವಿಶ್ವಾಸ 79
ಪರಲೋಕ ವಿಶ್ವಾಸದ ಅಗತ್ಯ 79
ಪರಲೋಕ ವಿಶ್ವಾಸದ ಸತ್ಯತೆ 83
ಪವಿತ್ರ ವಚನ 87

- **ಆರಾಧನೆಗಳು** **88**

ನಮಾಝ್ 90
ಉಪವಾಸ ವ್ರತ 94
ಝಕಾತ್ 95
ಹಜ್ಜ್ 98
ಇಸ್ಲಾಮಿನ ಸೇವೆ 100

- **ದೀನ್ ಮತ್ತು ಶರೀಅತ್** **103**

ದೀನ್ ಮತ್ತು ಶರೀಅತ್‌ನ ವ್ಯತ್ಯಾಸ 103
ಶರೀಅತ್ ನಿಯಮಗಳನ್ನು ತಿಳಿಯುವ ಮೂಲಗಳು 104
ಫಿಕ್ಹ್ ಅಥವಾ ಕರ್ಮಶಾಸ್ತ್ರ 105
ತಸವ್ವುಫ್ 106

- **ಶರೀಅತ್‌ನ ವಿಧಿಗಳು** **110**

ಶರೀಅತ್‌ನ ತತ್ವಗಳು 110
ಹಕ್ಕುಗಳ ನಾಲ್ಕು ವಿಧಗಳು 113
ಅಲ್ಲಾಹನ ಹಕ್ಕುಗಳು 113
ಆತ್ಮ ಮತ್ತು ಶರೀರದ ಹಕ್ಕುಗಳು 117
ಇತರ ಮನುಷ್ಯರ ಹಕ್ಕುಗಳು 119
ಇತರ ಸೃಷ್ಟಿಗಳ ಹಕ್ಕುಗಳು 126
ವಿಶ್ವವ್ಯಾಪಿ ಹಾಗೂ ಶಾಶ್ವತ ಶರೀಅತ್ 127

ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ. ಸನ್ಮಾರ್ಗವು ದುರ್ಮಾರ್ಗದಿಂದ ಬೇರ್ಪಡಿಸಲ್ಪಟ್ಟಿದೆ. ಇನ್ನು 'ತಾಗೂತ'(ಅತಿಕ್ರಮ)ನ್ನು ನಿರಾಕರಿಸಿ ಅಲ್ಲಾಹನಲ್ಲಿ ವಿಶ್ವಾಸವಿಟ್ಟಾತನು ಎಂದೆಂದಿಗೂ ಮುರಿಯದಂತಹ ಬಲವಾದ ಆಧಾರವನ್ನು ನೆಚ್ಚಿಕೊಂಡನು. (ಅವನು ಆಶ್ರಯ ಪಡೆದ) ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. ಅಲ್ಲಾಹನು ವಿಶ್ವಾಸಿಗಳ ರಕ್ಷಕ ಮಿತ್ರನಾಗಿರುತ್ತಾನೆ ಮತ್ತು ಅವನು ಇವರನ್ನು ಅಂಧಕಾರ ದಿಂದ ಹೊರತೆಗೆದು ಪ್ರಕಾಶಕ್ಕೆ ತರುತ್ತಾನೆ ಮತ್ತು ನಿರಾಕರಣೆ ಮಾರ್ಗವನ್ನು ಅನುಸರಿಸುವವರ ರಕ್ಷಕ ಮಿತ್ರರು ಅತಿಕ್ರಮಿಗಳಾಗಿದ್ದಾರೆ. ಅವರು ಇವರನ್ನು ಪ್ರಕಾಶದಿಂದ ಅಂಧಕಾರಗಳ ಕಡೆಗೆ ಎಳೆದೊಯ್ಯುತ್ತಾರೆ. ಇವರು ನರಕಾಗ್ನಿ ಯವರಾಗಿದ್ದು ಸದಾ ಅಲ್ಲೇ ಇರುವರು. **(ಪವಿತ್ರ ಕುರ್‌ಆನ್: 256–257)**

# ಇಸ್ಲಾಮ್

## ನಾಮಕರಣಕ್ಕೆ ಕಾರಣ

ಲೋಕದಲ್ಲಿ ಎಷ್ಟು ಧರ್ಮಗಳಿವೆಯೋ ಅವುಗಳ ಪೈಕಿ ಪ್ರತಿಯೊಂದಕ್ಕೂ ಅದರ ಹೆಸರು ಯಾವುದಾದರೂ ವಿಶಿಷ್ಟ ವ್ಯಕ್ತಿ ಅಥವಾ ಜನಾಂಗದಿಂದ ಬಂದಿದೆ. ಉದಾ: ಕ್ರೈಸ್ತ ಧರ್ಮದ ಸಂಬಂಧವು ಏಸುಕ್ರಿಸ್ತರೊಂದಿಗೆ(ಅ) ಇರುವುದರಿಂದ ಅದರ ಹೆಸರು ಕ್ರೈಸ್ತ ಧರ್ಮ ಎಂದಾಗಿದೆ. ಬೌದ್ಧ ಧರ್ಮದ ಸ್ಥಾಪಕರು ಗೌತಮ ಬುದ್ಧರಾಗಿರುವುದರಿಂದ ಅದನ್ನು ಬೌದ್ಧ ಧರ್ಮವೆನ್ನಲಾಗುತ್ತದೆ. ಝುರತುಷ್ತ್ರ ಧರ್ಮಕ್ಕೆ ಅದರ ಸ್ಥಾಪಕರಾದ ಝುರತುಷ್ತ್ರರಿಂದಾಗಿ ಆ ಹೆಸರು ಬಂದಿದೆ. ಯಹೂದಾ ಎಂಬ ಒಂದು ವಿಶಿಷ್ಟಗೋತ್ರದಲ್ಲಿ ಹುಟ್ಟಿ ಬಂದ ಧರ್ಮಕ್ಕೆ ಯಹೂದಿ ಧರ್ಮ ಎನ್ನಲಾಗುತ್ತದೆ. ಇತರ ಧರ್ಮಗಳ ಹೆಸರುಗಳ ಸ್ಥಿತಿಯೂ ಇದೇ ಆಗಿದೆ. ಆದರೆ ಇಸ್ಲಾಮಿನ ಸಂಬಂಧವು ಯಾವನೇ ವ್ಯಕ್ತಿ ಅಥವಾ ಯಾವುದೇ ಜನಾಂಗದ ಜತೆ ಇಲ್ಲವೆಂಬುದು ಅದರ ವೈಶಿಷ್ಟ್ಯವಾಗಿದೆ. 'ಇಸ್ಲಾಮ್' ಎಂಬ ಪದದ ಅರ್ಥದಲ್ಲಿ ಅಡಕವಾಗಿರುವ ಒಂದು ಗುಣವನ್ನೇ ಆ ಹೆಸರು ಸೂಚಿಸುತ್ತದೆ. ಈ ಧರ್ಮವು ಯಾವನೇ ಒಬ್ಬ ವ್ಯಕ್ತಿಯ ಆವಿಷ್ಕಾರವಲ್ಲ ಮತ್ತು ಇದು ಯಾವುದೇ ಜನಾಂಗಕ್ಕೆ ಬಂದ ಧರ್ಮವಲ್ಲ ಎಂಬುದನ್ನು ಈ ಹೆಸರೇ ಸ್ಪಷ್ಟ ಪಡಿಸುತ್ತದೆ. ಅದಕ್ಕೆ ವ್ಯಕ್ತಿ, ದೇಶ ಅಥವಾ ಜನಾಂಗದೊಂದಿಗೆ ಯಾವ ಸಂಬಂಧವೂ ಇಲ್ಲ. ಅದು 'ಇಸ್ಲಾಮ್' ಎಂಬ ಗುಣವನ್ನು ಜನರಲ್ಲಿ ಬೆಳೆಸಬಯಸುತ್ತದೆ. ಈ ಗುಣವನ್ನು ಹೊಂದಿರುವ ಎಲ್ಲ ಕಾಲ ಮತ್ತು ಎಲ್ಲ ಜನಾಂಗಗಳ ಸತ್ಯವಂತರೂ ಪುಣ್ಯಶಾಲಿಗಳೂ 'ಮುಸ್ಲಿಮ್' ಆಗಿದ್ದರು. ಈಗಲೂ 'ಮುಸ್ಲಿಮ್' ಆಗಿದ್ದಾರೆ. ಮುಂದೆಯೂ 'ಮುಸ್ಲಿಮ್' ಆಗಿರುವರು.

## 'ಇಸ್ಲಾಮ್' ಪದದ ಅರ್ಥ

ಅರಬೀ ಭಾಷೆಯಲ್ಲಿ ಇಸ್ಲಾಮ್ ಎಂದರೆ ಅನುಸರಣೆ ಮತ್ತು ವಿಧೇಯತೆಯಾಗಿದೆ. ಇಸ್ಲಾಮ್ ಧರ್ಮವು ಅಲ್ಲಾಹನ ಅನುಸರಣೆ ಮತ್ತು ವಿಧೇಯತೆಯಾಗಿರುವುದರಿಂದ ಅದನ್ನು ಇಸ್ಲಾಮ್ ಎಂದು ಹೆಸರಿಸಲಾಗಿದೆ.

## ಇಸ್ಲಾಮಿನ ವಾಸ್ತವಿಕತೆ

ಲೋಕದಲ್ಲಿರುವ ಪ್ರತಿಯೊಂದು ವಸ್ತುವೂ ಒಂದು ನಿಯಮ ಮತ್ತು ಕಾನೂನಿಗೆ ಅಧೀನವಾಗಿರುವುದನ್ನು ನೀವು ಕಾಣುತ್ತೀರಿ. ಸೂರ್ಯ–ಚಂದ್ರರು ಒಂದು ಬಲಿಷ್ಠ ನಿಯಮದಲ್ಲಿ ಬಂಧಿತರಾಗಿದ್ದು ಅದರ ವಿರುದ್ಧ ಅವು ಕೂದಲೆಳೆ ಯಷ್ಟೂ ಚಲಿಸಲಾರವು. ಭೂಮಿಯು ತನ್ನ ವಿಶಿಷ್ಟ ವೇಗದಲ್ಲಿ ಸುತ್ತುತ್ತಿದೆ. ಅದಕ್ಕೆ ನಿಗದಿಪಡಿಸಲಾಗಿರುವ ಸಮಯ, ವೇಗ ಮತ್ತು ಮಾರ್ಗದಲ್ಲಿ ಒಂದಿನಿತೂ ವ್ಯತ್ಯಾಸ ವಾಗುವುದಿಲ್ಲ. ನೀರು, ಗಾಳಿ, ಬೆಳಕು, ಶಾಖಗಳೆಲ್ಲವೂ ಒಂದು ನಿಯಮಕ್ಕೆ ಬದ್ಧ ವಾಗಿವೆ. ಜಡವಸ್ತುಗಳು, ಸಸ್ಯಗಳು ಮತ್ತು ಪ್ರಾಣಿಗಳ ಪೈಕಿ ಪ್ರತಿಯೊಂದಕ್ಕೂ ಒಂದು ನಿಶ್ಚಿತ ನಿಯಮವಿದೆ. ಅದರಂತೆಯೇ ಅದು ಹುಟ್ಟುತ್ತದೆ, ಬೆಳೆಯುತ್ತದೆ, ಜೀವಿಸುತ್ತದೆ ಮತ್ತು ಸಾಯುತ್ತದೆ. ಸ್ವಯಂ ಮನುಷ್ಯನ ಬಗ್ಗೆ ಯೋಚಿಸಿದರೂ ಅವನು ನಿಸರ್ಗ ನಿಯಮಕ್ಕೆ ಅಧೀನನಾಗಿದ್ದಾನೆಂಬುದು ತಿಳಿಯುತ್ತದೆ. ಅವನ ಸೃಷ್ಟಿಗೆ ನಿಶ್ಚಯಿಸಲಾಗಿ ರುವ ನಿಯಮದಂತೆಯೇ ಅವನು ಜನಿಸುತ್ತಾನೆ, ಉಸಿರಾಡುತ್ತಾನೆ. ನೀರು, ಆಹಾರ, ಶಾಖ ಮತ್ತು ಬೆಳಕನ್ನು ಹೊಂದುತ್ತಾನೆ. ಅವನ ಹೃದಯಬಡಿತ, ರಕ್ತಸಂಚಾರ, ಉಸಿರಾಟ ಕ್ರಿಯೆಗಳೆಲ್ಲವೂ ಆ ನಿಯಮಕ್ಕೆ ಬದ್ಧವಾಗಿವೆ. ಅವನ ಮಿದುಳು, ಜಠರ, ಶ್ವಾಸಕೋಶ, ಸ್ನಾಯುಗಳು, ಅಂಗಾಂಗಗಳು, ಕೈಕಾಲು, ನಾಲಗೆ, ಕಿವಿ, ಕಣ್ಣು ಮತ್ತು ಮೂಗು ಇತ್ಯಾದಿ ಅವನ ಶರೀರದ ಒಂದೊಂದು ಅಂಗವೂ ಅದಕ್ಕೆ ನಿಶ್ಚಯಿಸಿದ ಕೆಲಸವನ್ನು ನಿರ್ವಹಿಸುತ್ತದೆ ಮತ್ತು ಅದಕ್ಕೆ ತಿಳಿಸಲಾಗಿರುವ ಕ್ರಮದಲ್ಲೇ ನಿರ್ವಹಿಸುತ್ತದೆ.

ದೊಡ್ಡದೊಡ್ಡ ಗ್ರಹಗಳಿಂದ ಹಿಡಿದು ಭೂಮಿಯ ಅತ್ಯಂತ ಸಣ್ಣ ಕಣದ ವರೆಗೆ ಎಲ್ಲ ವಸ್ತುಗಳೂ ಬಂಧಿತವಾಗಿರುವಂತಹ ಈ ಬಲಿಷ್ಠ ನಿಯಮವು ಒಂದು ದೊಡ್ಡ ಅಧಿಪತಿಯಿಂದ ರಚಿತವಾದ ನಿಯಮವಾಗಿದೆ. ಸಂಪೂರ್ಣ ವಿಶ್ವ ಮತ್ತು ವಿಶ್ವದ ಪ್ರತಿಯೊಂದು ವಸ್ತು ಆ ಅಧಿಪತಿಯ ವಿಧೇಯ ಆಜ್ಞಾನುವರ್ತಿಯಾಗಿದೆ. ಏಕೆಂದರೆ, ಅದು ಆ ಅಧಿಪತಿಯಿಂದ ರಚಿತವಾದ ನಿಯಮವನ್ನೇ ಪಾಲಿಸುತ್ತಿದೆ. ಈ ದೃಷ್ಟಿಯಲ್ಲಿ ಇಡೀ ವಿಶ್ವದ ಧರ್ಮವು ಇಸ್ಲಾಮ್ ಆಗಿದೆ. ಅಲ್ಲಾಹನ ವಿಧೇಯತೆ ಮತ್ತು ಅನುಸರಣೆಯನ್ನೇ ಇಸ್ಲಾಮ್ ಎನ್ನಲಾಗುತ್ತದೆಂದು ನಾವು ಈಗಾಗಲೇ ವಿವರಿಸಿದ್ದೇವೆ. ಸೂರ್ಯ, ಚಂದ್ರ, ನಕ್ಷತ್ರಗಳೆಲ್ಲವೂ ಮುಸ್ಲಿಮ್ ಆಗಿವೆ. ಭೂಮಿಯೂ ಮುಸ್ಲಿಮ್ ಆಗಿದೆ. ಗಾಳಿ, ನೀರು ಮತ್ತು ಬೆಳಕು ಮುಸ್ಲಿಮ್ ಆಗಿವೆ. ವೃಕ್ಷ, ಕಲ್ಲು ಮತ್ತು ಪ್ರಾಣಿಗಳೂ ಮುಸ್ಲಿಮ್ ಆಗಿವೆ. ಅಲ್ಲಾಹನನ್ನು ಅರಿಯದ, ಅವನನ್ನು ನಿರಾಕರಿಸುವ, ಅವನ ಹೊರತು ಇತರರನ್ನು ಪೂಜಿಸುವ, ಆತನ ಜತೆ ಇತರರನ್ನು ಭಾಗೀದಾರರಾಗಿ ಮಾಡುವ ಮನುಷ್ಯನೂ ಮುಸ್ಲಿಮ್ ಆಗಿರುವನು. ಹೌದು ಅವನೂ ತನ್ನ ಪ್ರಕೃತಿ ಮತ್ತು ಸ್ವಭಾವದ ದೃಷ್ಟಿಯಿಂದ ಮುಸ್ಲಿಮ್ ಆಗಿರುವನು. ಏಕೆಂದರೆ ಅವನ ಜನನ,

ಜೀವನ ಮತ್ತು ಮರಣಗಳೆಲ್ಲವೂ ಅಲ್ಲಾಹನ ನಿಯಮದ ಪ್ರಕಾರವೇ ಆಗುತ್ತವೆ. ಅವನ ಎಲ್ಲಾ ಅಂಗಾಂಗಗಳು ಮತ್ತು ಅವನ ಶರೀರದ ಒಂದೊಂದು ರೋಮದ ಧರ್ಮವೂ ಇಸ್ಲಾಮ್ ಆಗಿದೆ. ಏಕೆಂದರೆ ಅವೆಲ್ಲವೂ ದೈವಿಕ ನಿಯಮದ ಪ್ರಕಾರವೇ ನಿರ್ಮಾಣವಾಗಿ ವಿಕಾಸಗೊಂಡು ಚಲಿಸುತ್ತಿರುತ್ತವೆ. ಅಷ್ಟು ಮಾತ್ರವಲ್ಲ, ಅವನು ತನ್ನ ಮೌಢ್ಯದಿಂದಾಗಿ ಬಹುದೇವವಿಶ್ವಾಸ ಮತ್ತು ದೇವಧಿಕ್ಕಾರದ ವಿಚಾರಗಳ ಪ್ರಕಟನೆಗಾಗಿ ಬಳಸುವ ಅವನ ನಾಲಗೆಯೂ ನಿಜವಾಗಿ ಮುಸ್ಲಿಮ್ ಆಗಿದೆ. ಅವನು ಅಲ್ಲಾಹನ ಹೊರತು ಇತರರ ಮುಂದೆ ಬಲಾತ್ಕಾರವಾಗಿ ಬಾಗಿಸುವ ಅವನ ಶಿರವೂ ಹುಟ್ಟು ಮುಸ್ಲಿಮ್ ಆಗಿದೆ. ಅವನು ತನ್ನ ಅಜ್ಞಾನ ದಿಂದಾಗಿ ಅಲ್ಲಾಹನ ಹೊರತು ಇತರರ ಗೌರವ ಮತ್ತು ಪ್ರೇಮದ ಭಾವವನ್ನು ಇರಿಸಿರುವ ಅವನ ಮನಸ್ಸು ಕೂಡಾ ಪ್ರಕೃತಿ ಸಹಜವಾದ ಮುಸ್ಲಿಮ್ ಆಗಿದೆ. ಏಕೆಂದರೆ ಅವೆಲ್ಲವೂ ದೇವ ನಿಯಮಗಳನ್ನು ಪಾಲಿಸುತ್ತಿದ್ದು ಅವುಗಳ ಪ್ರತಿಯೊಂದು ಚಲನೆಯು ದೈವಿಕ ನಿಯಮಗಳಿಗೆ ಬದ್ಧವಾಗಿವೆ.

## ಈಗ ಇನ್ನೊಂದು ಕೋನದಿಂದ ನೋಡಿರಿ

ಮನುಷ್ಯನ ಒಂದು ಸ್ಥಿತಿಯು ಇತರ ಸೃಷ್ಟಿಗಳಂತೆ ನಿಸರ್ಗ ನಿಯಮದ ಬಲಿಷ್ಠ ಕಾನೂನಿನಲ್ಲಿ ಬಂಧಿತನಾಗಿರುವ ಸ್ಥಿತಿಯಾಗಿದೆ. ಅವನು ಆ ಕಾನೂನುಗಳನ್ನು ಪಾಲಿಸಲು ನಿರ್ಬಂಧಿತನಾಗಿರುವನು.

ಅವನ ಇನ್ನೊಂದು ಸ್ಥಿತಿಯೇನೆಂದರೆ ಅವನು ಬುದ್ಧಿಯನ್ನು ಪಡೆದಿದ್ದಾನೆ. ಯೋಚಿಸುವ, ತಿಳಿಯುವ ಮತ್ತು ಅಭಿಪ್ರಾಯ ತಾಳುವ ಶಕ್ತಿಯನ್ನು ಪಡೆದಿದ್ದಾನೆ. ಅವನು ತನ್ನ ಆಯ್ಕೆಯಂತೆ ಒಂದು ವಿಷಯವನ್ನು ಒಪ್ಪುತ್ತಾನೆ, ಇನ್ನೊಂದನ್ನು ನಿರಾಕರಿಸುತ್ತಾನೆ. ಒಂದು ಕ್ರಮವನ್ನು ಮೆಚ್ಚುತ್ತಾನೆ, ಇನ್ನೊಂದನ್ನು ಮೆಚ್ಚುವುದಿಲ್ಲ. ಜೀವನದ ವ್ಯವಹಾರಗಳಲ್ಲಿ ತನ್ನಿಷ್ಟದಂತೆ ಒಂದು ನಿಯಮವನ್ನು ರಚಿಸುತ್ತಾನೆ ಅಥವಾ ಇತರರು ರಚಿಸಿದ ನಿಯಮವನ್ನು ಪಾಲಿಸುತ್ತಾನೆ. ಈ ನೆಲೆಯಲ್ಲಿ ಅವನು ಲೋಕದ ಇತರ ಸೃಷ್ಟಿಗಳಂತೆ ಒಂದು ನಿರ್ದಿಷ್ಟ ಕಾನೂನಿಗೆ ಅಧೀನನಾಗಿಲ್ಲ. ಬದಲಾಗಿ ಅವನಿಗೆ ತನ್ನ ವಿಚಾರ, ಅಭಿಪ್ರಾಯ ಮತ್ತು ಕರ್ಮಗಳಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಮನುಷ್ಯನ ಜೀವನದಲ್ಲಿ ಈ ಎರಡು ನೆಲೆಗಳು ಬೇರೆ ಬೇರೆಯಾಗಿ ಕಾಣಸಿಗುತ್ತವೆ. ಒಂದನೆಯ ನೆಲೆಯಲ್ಲಿ ಅವನು ಲೋಕದ ಇತರೆಲ್ಲ ವಸ್ತುಗಳಂತೆ ಹುಟ್ಟು ಮುಸ್ಲಿಮ್ ಆಗಿರುವನು. ಮುಸ್ಲಿಮ್ ಆಗಲು ನಿರ್ಬಂಧಿತನಾಗಿರುವನು. ಇದನ್ನು ಈಗಾಗಲೇ ನಾವು ತಿಳಿದುಕೊಂಡಿದ್ದೇವೆ. ಎರಡನೆಯ ನೆಲೆಯಲ್ಲಿ ಮುಸ್ಲಿಮ್ ಆಗುವುದೂ ಆಗದಿರುವುದೂ ಅವನ ಆಯ್ಕೆಗೆ ಬಿಟ್ಟ ವಿಷಯವಾಗಿದೆ. ಈ ಆಯ್ಕೆಯ ಆಧಾರದಲ್ಲಿಯೇ ಮನುಷ್ಯರು ಎರಡು ವರ್ಗಗಳಲ್ಲಿ ವಿಂಗಡಿಸಲ್ಪಡುತ್ತಾರೆ.

ಒಬ್ಬನು ತನ್ನ ಸೃಷ್ಟಿಕರ್ತನನ್ನು ಗುರುತಿಸುತ್ತಾನೆ. ಅವನನ್ನು ತನ್ನ ಒಡೆಯನೆಂದೂ ಪ್ರಭುವೆಂದೂ ಅಂಗೀಕರಿಸುತ್ತಾನೆ. ತನ್ನ ಜೀವನದ ಐಚ್ಛಿಕ ಕಾರ್ಯಗಳಲ್ಲಿಯೂ ಅವನ ಮೆಚ್ಚುಗೆಯ ಕಾನೂನಿನ ಅನುಸರಣೆ ಮಾಡುತ್ತಾನೆ. ಇವನು ಪೂರ್ಣ ಮುಸ್ಲಿಮನು. ಅವನ ಇಸ್ಲಾಮ್ ಪರಿಪೂರ್ಣಗೊಂಡಿದೆ. ಏಕೆಂದರೆ ಅವನ ಜೀವನವು ಸಾದ್ಯಂತ ಇಸ್ಲಾಮ್ ಆಗಿದೆ. ಯಾರನ್ನು ಅವನು ಅನೈಚ್ಛಿಕವಾಗಿ ಅನುಸರಿಸುತ್ತಿದ್ದನೋ ಅವನನ್ನು ಈಗ ಇಚ್ಛಾಪೂರ್ವಕವಾಗಿಯೂ ಅನುಸರಿಸುತ್ತಾನೆ. ಈಗ ಅವನ ಜ್ಞಾನವು ನೈಜ ಜ್ಞಾನವಾಗಿದೆ. ಏಕೆಂದರೆ ಅವನು ತನಗೆ ಅರಿಯುವ ಮತ್ತು ಜ್ಞಾನಾರ್ಜನೆ ಮಾಡುವ ಶಕ್ತಿ ದಯಪಾಲಿಸಿದ ದೇವನನ್ನು ಅರಿತಿದ್ದಾನೆ. ಈಗ ಅವನ ಬುದ್ಧಿ ಮತ್ತು ವಿವೇಕ ಸರಿಯಾದುದಾಗಿದೆ. ಏಕೆಂದರೆ ಯಾರು ಅವನಿಗೆ ಯೋಚನೆಯ ಮತ್ತು ವಿವೇಚನೆಯ ಶಕ್ತಿಯನ್ನು ದಯಪಾಲಿಸಿರುವನೋ ಆ ದೇವನ ಅನುಸರಣೆ ಮಾಡುತ್ತೇನೆಂದು ಅವನು ಚೆನ್ನಾಗಿ ಯೋಚಿಸಿ ತೀರ್ಮಾನಿಸಿರುವನು. ಈಗ ಅವನ ನಾಲಗೆಯು ಸತ್ಯವಾಗಿದೆ. ಏಕೆಂದರೆ ಯಾರು ಅದಕ್ಕೆ ಮಾತಾಡುವ ಶಕ್ತಿ ದಯಪಾಲಿಸಿ ರುವನೋ ಅದು ಆ ದೇವನ ಅಸ್ತಿತ್ವವನ್ನು ದೃಢೀಕರಿಸುತ್ತದೆ. ಈಗ ಅವನ ಜೀವನ ದಲ್ಲೆಲ್ಲಾ ಸತ್ಯಸಂಧತೆ ವ್ಯಾಪಿಸಿದೆ. ಏಕೆಂದರೆ ಅವನು ಐಚ್ಛಿಕವಾಗಿಯೂ ಅನೈಚ್ಛಿಕ ವಾಗಿಯೂ ದೈವಿಕ ನಿಯಮಗಳಿಗೆ ಬದ್ಧನಾಗಿದ್ದಾನೆ. ಈಗ ಸಂಪೂರ್ಣ ವಿಶ್ವದೊಂದಿಗೆ ಅವನು ಸಮನ್ವಯಗೊಂಡಿದ್ದಾನೆ. ಏಕೆಂದರೆ ವಿಶ್ವದ ಎಲ್ಲ ವಸ್ತುಗಳೂ ಯಾರ ದಾಸ್ಯ ಮಾಡುತ್ತಿದೆಯೋ ಅವನ ದಾಸ್ಯವನ್ನೇ ಆತನೂ ಮಾಡುತ್ತಿರುವನು. ಈಗ ಅವನು ಭೂಮಿಯ ಮೇಲೆ ಅಲ್ಲಾಹನ ಪ್ರತಿನಿಧಿಯಾಗಿರುವನು. ಇಡೀ ಲೋಕವೇ ಅವನದಾಗಿದ್ದು ಅವನು ಅಲ್ಲಾಹನಿಗೆ ಸೇರಿದವನಾಗಿದ್ದಾನೆ.

## ಕುಫ್ರ್ ಅಥವಾ ನಿರಾಕರಣೆಯ ವಾಸ್ತವಿಕತೆ

ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಬ್ಬನು ಮುಸ್ಲಿಮ್ ಆಗಿ ಜನಿಸಿ, ತನ್ನ ಜೀವನ ದುದ್ದಕ್ಕೂ ಅನೈಚ್ಛಿಕವಾಗಿ ಮುಸ್ಲಿಮನಾಗಿಯೇ ಇದ್ದನು. ಆದರೆ ತನ್ನ ಜ್ಞಾನ ಮತ್ತು ವಿವೇಕದ ಸಾಮರ್ಥ್ಯವನ್ನು ಬಳಸಿ ದೇವನನ್ನು ಗುರುತಿಸಲಿಲ್ಲ ಹಾಗೂ ತನ್ನ ಐಚ್ಛಿಕ ಮೇರೆಯಲ್ಲಿ ಆ ದೇವನಿಗೆ ವಿಧೇಯನಾಗಲು ನಿರಾಕರಿಸಿದನು. ಇವನೇ ಕಾಫಿರ್. 'ಕುಫ್ರ್' ಎಂಬ ಪದದ ಮೂಲ ಅರ್ಥ 'ಅಡಗಿಸು' ಮತ್ತು 'ಮರೆಮಾಡು' ಎಂದಾ ಗಿದೆ. ಇಂತಹ ಮನುಷ್ಯನನ್ನು 'ಕಾಫಿರ್' ಎನ್ನುವುದೇಕೆಂದರೆ ಅವನು ತನ್ನ ಪ್ರಕೃತಿಯ ಮೇಲೆ ಅಜ್ಞಾನದ ಪರದೆ ಹಾಕಿರುತ್ತಾನೆ. ಅವನು ಇಸ್ಲಾಮಿನ ಪ್ರಕೃತಿಯಲ್ಲಿ ಜನಿಸಿ ದನು. ಅವನ ಸಂಪೂರ್ಣ ಶರೀರ ಮತ್ತು ಅದರ ಪ್ರತಿಯೊಂದು ಅಂಗ ಇಸ್ಲಾಮಿನ ಪ್ರಕೃತಿಯಂತೆ ಕಾರ್ಯವೆಸಗುತ್ತಿದೆ. ಅವನ ಸುತ್ತಮುತ್ತಲಿನ ಇಡೀ ಲೋಕವು ಇಸ್ಲಾಮಿನಂತೆ ನಡೆಯುತ್ತಿದೆ. ಆದರೆ ಅವನ ಬುದ್ಧಿಯ ಮೇಲೆ ಪರದೆ ಬಿದ್ದಿದೆ.

ಸಂಪೂರ್ಣ ವಿಶ್ವದ ಮತ್ತು ತನ್ನ ಸ್ವಂತ ಪ್ರಕೃತಿಯ ವಾಸ್ತವಿಕತೆಯು ಅವನಿಂದ ಮರೆಯಾಗಿದೆ. ಅವನು ಅದರ ವಿರುದ್ಧ ಯೋಚಿಸುತ್ತಾನೆ ಮತ್ತು ಅದರ ವಿರುದ್ಧವೇ ಕಾರ್ಯವೆಸಗುತ್ತಾನೆ.

ಕಾಫಿರ್ ಆಗಿರುವವನು ಎಷ್ಟು ದೊಡ್ಡ ಭ್ರಷ್ಟತೆಯಲ್ಲಿ ಬಿದ್ದಿರುತ್ತಾನೆಂಬುದನ್ನು ಈಗ ನೀವೇ ತಿಳಿಯಬಹುದು.

## ಕುಫ್ರ್‌ನ ನಷ್ಟಗಳು

'ಕುಫ್ರ್' ಒಂದು ಅಜ್ಞಾನವಾಗಿದೆ. ವಾಸ್ತವದಲ್ಲಿ ಕುಫ್ರ್ ಎಂಬುದೇ ನೈಜ ಅಜ್ಞಾನವಾಗಿದೆ. ಮನುಷ್ಯನು ದೇವನ ಬಗ್ಗೆ ಅಜ್ಞಾನಿಯಾಗಿರುವುದಕ್ಕಿಂತ ದೊಡ್ಡ ಅಜ್ಞಾನ ಇನ್ನಾವುದಿರಬಹುದು? ಒಬ್ಬನು ವಿಶ್ವದ ಇಷ್ಟು ದೊಡ್ಡ ಕಾರ್ಖಾನೆಯನ್ನು ದಿನ ರಾತ್ರಿ ನಡೆಯುತ್ತಿರುವುದಾಗಿ ಕಾಣುತ್ತಾನೆ. ಆದರೆ ಆ ಕಾರ್ಖಾನೆಯನ್ನು ನಿರ್ಮಿಸಿದವನು ಮತ್ತು ಅದನ್ನು ನಡೆಸುವವನು ಯಾರೆಂಬುದನ್ನು ಅರಿಯುವುದಿಲ್ಲ. ಇದ್ದಲು, ಕಬ್ಬಿಣ, ಕ್ಯಾಲ್ಸಿಯಂ, ಸೋಡಿಯಮ್ ಇತ್ಯಾದಿ ವಸ್ತುಗಳನ್ನು ಸೇರಿಸಿ ಮನುಷ್ಯನಂತಹ ಅದ್ಭುತ ಸೃಷ್ಟಿಗೆ ರೂಪ ಕೊಟ್ಟವನು ಯಾರು ಎಂಬುದನ್ನು ಅವನು ಅರಿಯುವುದಿಲ್ಲ. ಒಬ್ಬನು ಲೋಕದ ಎಲ್ಲೆಡೆಯೂ ಅದ್ಭುತವಾದ ತಂತ್ರಜ್ಞಾನ, ಗಣಿತಶಾಸ್ತ್ರ, ರಸಾಯನ ಶಾಸ್ತ್ರ ಮತ್ತಿತರ ವಿಜ್ಞಾನಗಳ ಚಮತ್ಕಾರಗಳಿಂದ ಕೂಡಿದ ವಸ್ತುಗಳನ್ನೂ ಕ್ರಿಯೆಗಳನ್ನೂ ಕಾಣುತ್ತಾನೆ. ವಿಶ್ವದಲ್ಲಿ ಈ ಎಲ್ಲಾ ಕಾರ್ಯಗಳನ್ನೂ ನಡೆಸುತ್ತಿರುವ ಜ್ಞಾನ, ಯುಕ್ತಿ ಮತ್ತು ಬುದ್ಧಿವಂತಿಕೆಯಿರುವ ಅಸ್ತಿತ್ವ ಯಾವುದು ಎಂಬುದನ್ನು ಅವನು ತಿಳಿದಿಲ್ಲ. ಇಂತಹ ಮನುಷ್ಯನಿಗೆ ನೈಜ ಜ್ಞಾನದ ಬಾಗಿಲು ತೆರೆಯುವುದಾದರೂ ಹೇಗೆ ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿರಿ. ಯಾರಿಗೆ ಜ್ಞಾನದ ಪ್ರಥಮ ಅಂಶ ಕೂಡ ಸಿಗಲಿಲ್ಲವೋ ಅವನೆಷ್ಟು ಯೋಚಿಸಿದರೂ, ಅನ್ವೇಷಣೆ – ಸಂಶೋಧನೆಗಳಲ್ಲಿ ಎಷ್ಟೇ ತಲೆ ಖರ್ಚು ಮಾಡಿದರೂ, ಅವನಿಗೆ ಜ್ಞಾನದ ಯಾವುದೇ ವಿಭಾಗದ ನೇರ ಹಾಗೂ ಖಚಿತ ಮಾರ್ಗವು ಖಂಡಿತ ಸಿಗಲಾರದು. ಏಕೆಂದರೆ ಅವನಿಗೆ ಮೊದಲು ಅಂಧಕಾರವೇ ಕಾಣಸಿಗುವುದು ಮತ್ತು ಕೊನೆಗೂ ಅಂಧಕಾರದ ಹೊರತು ಇನ್ನೇನನ್ನೂ ಅವನು ಕಾಣಲಾರನು. 'ಕುಫ್ರ್' ಒಂದು ಅಕ್ರಮವಾಗಿದೆ. ಮಾತ್ರವಲ್ಲ ಅದುವೇ ಅತಿ ದೊಡ್ಡ ಅಕ್ರಮ ಆಗಿದೆ. ಅಕ್ರಮ ಎಂದರೇನೆಂದು ನಿಮಗೆ ಗೊತ್ತೇ? ಯಾವುದೇ ವಸ್ತುವನ್ನು ಅದರ ಸ್ವರೂಪ ಮತ್ತು ಪ್ರಕೃತಿಗೆ ವಿರುದ್ಧವಾಗಿ ಒತ್ತಾಯ ಪೂರ್ವಕ ಬಳಸುವುದೇ ಅಕ್ರಮವಾಗಿದೆ. ಲೋಕದಲ್ಲಿರುವ ಎಲ್ಲ ವಸ್ತುಗಳೂ ಅಲ್ಲಾಹನಿಗೆ ವಿಧೇಯವಾಗಿವೆ ಮತ್ತು ಅವುಗಳ ಪ್ರಕೃತಿ ಇಸ್ಲಾಮಿಗೆ ಅರ್ಥಾತ್ ದೈವಿಕ ನಿಯಮಕ್ಕೆ ವಿಧೇಯವಾಗಿರುವುದಾಗಿದೆ. ಸ್ವಯಂ ಮನುಷ್ಯನ ಪೂರ್ಣ ಶರೀರ ಮತ್ತು ಅದರ ಪ್ರತಿಯೊಂದು ಅಂಗ ಈ ಪ್ರಕೃತಿಯಲ್ಲೇ ಸೃಷ್ಟಿಸಲ್ಪಟ್ಟಿದೆ.

ದೇವನು ಈ ವಸ್ತುಗಳ ಮೇಲೆ ಆಡಳಿತ ನಡೆಸುವ ಸ್ವಲ್ಪ ಅಧಿಕಾರವನ್ನು ಮನುಷ್ಯನಿಗೆ ಕೊಟ್ಟಿದ್ದಾನೆಂಬುದು- ನಿಜ. ಆದರೆ ಪ್ರತಿಯೊಂದು ವಸ್ತುವನ್ನು ದೇವನ ಇಚ್ಛೆಗೆ ಬದ್ಧವಾಗಿ ಬಳಸಬೇಕೆಂಬುದು ಆ ವಸ್ತುವಿನ ಪ್ರಕೃತಿಯ ಬೇಡಿಕೆಯಾಗಿದೆ. ಯಾರು 'ಕುಫ್ರ್' ಮಾಡುತ್ತಾನೋ ಅವನು ಈ ವಸ್ತುಗಳನ್ನು ಅವುಗಳ ಪ್ರಕೃತಿಗೆ ವಿರುದ್ಧವಾಗಿ ಬಳಸುತ್ತಾನೆ. ಅವನು ತನ್ನ ಮನದಲ್ಲಿ ಇತರರ ಮಹಾನತೆ, ಪ್ರೇಮ ಮತ್ತು ಭಯದ ಮೂರ್ತಿಯನ್ನು ಇರಿಸುತ್ತಾನೆ. ವಾಸ್ತವದಲ್ಲಿ ಮನಸ್ಸಿನ ಪ್ರಕೃತಿಯು ಅದರಲ್ಲಿ ಕೇವಲ ಅಲ್ಲಾಹನ ಮಹಾನತೆ, ಪ್ರೇಮ ಮತ್ತು ಭಯವನ್ನು ಮಾತ್ರ ಇರಿಸಬೇಕೆಂದು ಬಯಸುತ್ತದೆ. ಅವನು ತನ್ನ ಅಂಗಾಂಗಗಳು ಮತ್ತು ಅವನ ಅಧೀನದಲ್ಲಿರುವ ಲೋಕದ ಇತರೆಲ್ಲ ವಸ್ತುಗಳನ್ನು ದೇವನ ಇಚ್ಛೆಗೆ ವಿರುದ್ಧವಾಗಿ ಬಳಸುತ್ತಾನೆ. ವಾಸ್ತವದಲ್ಲಿ ಪ್ರತಿಯೊಂದು ವಸ್ತುವಿನ ಪ್ರಕೃತಿಯು ಅದನ್ನು ದೇವಾಜ್ಞೆಗಳ ಪ್ರಕಾರವೇ ಬಳಸಬೇಕೆಂದು ಬಯಸುತ್ತದೆ. ತನ್ನ ಜೀವನದಲ್ಲಿ ಸದಾ ಎಲ್ಲ ವಸ್ತುಗಳ ಮೇಲೆ ಮತ್ತು ಸ್ವಯಂ ಅವನ ಅಸ್ತಿತ್ವದ ಮೇಲೆ ಈ ರೀತಿಯ ಅಕ್ರಮ ಮಾಡುತ್ತಿರುವವನಿಗಿಂತ ದೊಡ್ಡ ಅಕ್ರಮಿ ಇನ್ನಾರು ತಾನೇ ಇರಬಹುದು?

'ಕುಫ್ರ್' ಕೇವಲ ಅಕ್ರಮವಾಗಿರದೆ ಬಂಡಾಯ, ಕೃತಘ್ನತೆ ಮತ್ತು ದ್ರೋಹವೂ ಆಗಿದೆ. ಸ್ವಲ್ಪ ಯೋಚಿಸಿ ನೋಡಿ. ಮನುಷ್ಯನ ಬಳಿ ತನ್ನದಾದ ವಸ್ತು ಯಾವುದಿದೆ? ಅವನ ಮೆದುಳನ್ನು ಸೃಷ್ಟಿಸಿರುವವನು ಅವನೋ ಅಥವಾ ಅಲ್ಲಾಹನೋ? ಅವನ ಹೃದಯ, ಕಣ್ಣು, ನಾಲಗೆ, ಕೈಕಾಲು ಮತ್ತಿತರ ಎಲ್ಲ ಅವಯವಗಳನ್ನು ಸೃಷ್ಟಿಸಿರುವುದು ಅವನೋ ಅಥವಾ ಅಲ್ಲಾಹನೋ? ಅವನ ಸುತ್ತಮುತ್ತಲಿರುವ ವಸ್ತುಗಳ ಸೃಷ್ಟಿಕರ್ತನು ಮನುಷ್ಯನೋ ಅಥವಾ ಅಲ್ಲಾಹನೋ? ಈ ಎಲ್ಲ ವಸ್ತುಗಳನ್ನು ಮನುಷ್ಯನ ಮಟ್ಟಿಗೆ ಲಾಭದಾಯಕವಾಗಿಯೂ ಉಪಯುಕ್ತವಾಗಿಯೂ ಮಾಡಿ ಮನುಷ್ಯನಿಗೆ ಅವುಗಳನ್ನು ಬಳಸುವ ಸಾಮರ್ಥ್ಯ ನೀಡಿರುವುದು ಸ್ವಯಂ ಮನುಷ್ಯನೋ ಅಥವಾ ಅಲ್ಲಾಹನೋ? ಈ ಎಲ್ಲ ವಸ್ತುಗಳೂ ಅಲ್ಲಾಹನವು, ಅಲ್ಲಾಹನೇ ಅವುಗಳನ್ನು ಸೃಷ್ಟಿಸಿರುವನು, ಅಲ್ಲಾಹನೇ ಅವುಗಳ ಒಡೆಯನಾಗಿರುವನೆಂದೂ ಅಲ್ಲಾಹನು ನೀಡಿರುವುದರಿಂದಲೇ ಅವು ಮನುಷ್ಯನಿಗೆ ಲಭಿಸಿದುವೆಂದೂ ನೀವು ಹೇಳುವಿರಷ್ಟೆ. ವಾಸ್ತವಿಕತೆ ಹೀಗಿರುವಾಗ ಅಲ್ಲಾಹನು ನೀಡಿದ ಮೆದುಳಿನಿಂದ ಅಲ್ಲಾಹನ ವಿರುದ್ಧವೇ ಯೋಚಿಸುವ, ಅಲ್ಲಾಹನು ದಯಪಾಲಿಸಿದ ಮನಸ್ಸಿನಲ್ಲಿ ಅವನ ವಿರುದ್ಧವಾದ ವಿಚಾರಗಳನ್ನಿರಿಸುವ ಮತ್ತು ಅಲ್ಲಾಹನು ನೀಡಿರುವ ಕಣ್ಣು, ನಾಲಗೆ, ಕೈಕಾಲು ಮತ್ತಿತರ ಅವಯವಗಳನ್ನು ಅವನ ಇಚ್ಛೆಗೆ ವಿರುದ್ಧ ಉಪಯೋಗಿಸುವವನಿಗಿಂತ ದೊಡ್ಡ ವಿದ್ರೋಹಿ ಇನ್ನಾರಿರಬಹುದು? ಒಬ್ಬ ಸೇವಕನು ತನ್ನ ಒಡೆಯನ ಉಪ್ಪು ತಿಂದು ಅವನಿಗೆ ದ್ರೋಹ ಬಗೆದರೆ ಅವನನ್ನು ನೀವು ಕೃತಘ್ನನೆನ್ನುತ್ತೀರಿ. ಒಬ್ಬ ಸರಕಾರಿ ಅಧಿಕಾರಿಯು ಸರಕಾರ ನೀಡಿದ ಅಧಿಕಾರವನ್ನು ಅದೇ ಸರಕಾರದ ವಿರುದ್ಧ ಬಳಸಿದರೆ ಅವನನ್ನು ನೀವು ವಿದ್ರೋಹಿ

ಎನ್ನುತ್ತೀರಿ. ಯಾರಾದರೂ ತನ್ನ ಮೇಲೆ ಉಪಕಾರ ಮಾಡಿದವನಿಗೆ ವಂಚನೆ ಮಾಡಿದರೆ ಅವನನ್ನು ನೀವು ಉಪಕಾರಗೇಡಿ ಎನ್ನುತ್ತೀರಿ. ಆದರೆ ಮನುಷ್ಯನಿಗೆ ಮನುಷ್ಯನೇ ಮಾಡುವ ಕೃತಘ್ನತೆ, ವಿದ್ರೋಹ ಮತ್ತು ಉಪಕಾರಗೇಡಿತನದ ವಾಸ್ತವಿಕತೆಯಾದರೂ ಏನು? ಮನುಷ್ಯನಿಗೆ ಮನುಷ್ಯನು ಆಹಾರ ನೀಡುವುದು ಎಲ್ಲಿಂದ? ಅದು ಅಲ್ಲಾಹನೇ ನೀಡಿದ ಆಹಾರವಲ್ಲವೇ? ಸರಕಾರವು ತನ್ನ ನೌಕರರಿಗೆ ನೀಡುವ ಅಧಿಕಾರ ಎಲ್ಲಿಂದ ಬಂದದ್ದು? ಅದಕ್ಕೆ ಆಧಿಪತ್ಯವನ್ನು ನೀಡಿರುವುದು ಅಲ್ಲಾಹನೇ ಅಲ್ಲವೇ? ಉಪಕಾರ ಮಾಡುವವನೊಬ್ಬನು ಇತರರ ಮೇಲೆ ಉಪಕಾರ ಮಾಡುವುದಾದರೂ ಎಲ್ಲಿಂದ? ಎಲ್ಲವೂ ಅಲ್ಲಾಹನೇ ದಯಪಾಲಿಸಿರುವುದಲ್ಲವೇ? ತಂದೆ ತಾಯಿಯ ಮನದಲ್ಲಿ ಮಕ್ಕಳ ಬಗೆಗಿರುವ ಪ್ರೀತಿಯನ್ನು ಯಾರು ಉಂಟು ಮಾಡಿದನು? ತಾಯಿಯ ಎದೆಯಲ್ಲಿ ಹಾಲು ಉಂಟು ಮಾಡಿದವನಾರು? ಒಂದು ನಿರುಪಯುಕ್ತ ಮಾಂಸದ ಮುದ್ದೆಯ ಮೇಲೆ ತನ್ನ ಬೆವರಿಳಿಸಿ ಗಳಿಸಿದ ದುಡಿಮೆಯನ್ನು ಸಸಂತೋಷ ಖರ್ಚು ಮಾಡಲು, ಅದರ ಪೋಷಣೆ, ಶಿಕ್ಷಣ, ತರಬೇತಿಗಳಿಗೆ ತನ್ನ ಸಮಯ, ಸಂಪತ್ತು ಮತ್ತು ಸುಖವನ್ನು ತ್ಯಾಗ ಮಾಡಲು ತಂದೆಯನ್ನು ಪ್ರೇರೇಪಿಸಿದವನು ಯಾರು? ಈಗ ಹೇಳಿ – ಮನುಷ್ಯನ ನೈಜ ಉಪಕಾರಿಯೂ ನೈಜ ಅಧಿಪತಿಯೂ ಸರ್ವಶ್ರೇಷ್ಠ ಪರಿಪಾಲಕನೂ ಆದ ಅಲ್ಲಾಹನನ್ನೇ ಮನುಷ್ಯನು ನಿರಾಕರಿಸಿದರೆ, ಅವನನ್ನು ದೇವನೆಂದು ಅಂಗೀಕರಿಸದಿದ್ದರೆ, ಅವನ ವಿಧೇಯತೆಯನ್ನು ತಿರಸ್ಕರಿಸಿದರೆ, ಅವನ ಅನುಸರಣೆಗೆ ಸಿದ್ಧವಾಗದಿದ್ದರೆ, ಅದೆಷ್ಟು ದೊಡ್ಡ ವಿದ್ರೋಹ, ಎಷ್ಟು ದೊಡ್ಡ ಕೃತಘ್ನತೆ ಮತ್ತು ಉಪಕಾರಗೇಡಿತನವಾಗಿದೆ?

'ಕುಫ್ರ್' ಅಥವಾ ದೇವನ ನಿರಾಕರಣೆಯ ಮೂಲಕ ಅವನು ದೇವನಿಗೆ ಏನಾದರೂ ನಷ್ಟ ಉಂಟು ಮಾಡಬಲ್ಲನೆಂದು ಯೋಚಿಸಬೇಡಿ. ಯಾವ ಅಧಿಪತಿಯ ಸಾಮ್ರಾಜ್ಯವು ಎಲ್ಲಿಂದ ಆರಂಭವಾಗಿ ಎಲ್ಲಿ ಮುಗಿಯುತ್ತದೆಂದು ಅತ್ಯಂತ ಶಕ್ತಿಶಾಲಿ ದೂರದರ್ಶಕವನ್ನು ಬಳಸಿಯೂ ನಮಗೆ ಈ ತನಕ ತಿಳಿಯಲು ಸಾಧ್ಯವಾಗಲಿಲ್ಲವೋ, ಯಾವ ಅಧಿಪತಿಯ ಶಕ್ತಿಯು ನಮ್ಮ ಭೂಮಿ, ಸೂರ್ಯ, ಮಂಗಳ ಗ್ರಹ ಮತ್ತು ಇಂತಹದೇ ಕೋಟಿಗಟ್ಟಲೆ ಗ್ರಹಗಳನ್ನು ಚೆಂಡಿನಂತೆ ತಿರುಗಿಸುವಷ್ಟು ಪ್ರಚಂಡವಾಗಿದೆಯೋ, ಸಮಸ್ತ ವಿಶ್ವದಲ್ಲಿ ವ್ಯಾಪಿಸಿರುವ ಎಲ್ಲ ಸಂಪತ್ತು ಯಾವುದೇ ಇತರ ಪಾಲುದಾರರಿಲ್ಲದೆ ಯಾವ ಅಧಿಪತಿಗೆ ಸೇರಿದೆಯೋ, ಯಾವ ಅಧಿಪತಿಯು ಎಲ್ಲರೂ ಅವನದೇ ಆಶ್ರಿತರಾಗಿರುವಷ್ಟು ನಿರಪೇಕ್ಷನಾಗಿರುವನೋ ಅಂಥವನಿಗೆ ಮನುಷ್ಯನು ಅವನನ್ನು ನಂಬುವುದರಿಂದ ಅಥವಾ ನಂಬದಿರುವುದರಿಂದ ಆಗುವ ನಷ್ಟವಾದರೂ ಏನು? ಅಲ್ಲಾಹನ ಬಗ್ಗೆ ನಿರಾಕರಣೆ ಮತ್ತು ವಿದ್ರೋಹದ ನೀತಿ ಅನುಸರಿಸುವ ಮೂಲಕ ಮನುಷ್ಯನು ಅವನಿಗೇನೂ ನಷ್ಟ ಉಂಟು ಮಾಡುವುದಿಲ್ಲ. ಬದಲಾಗಿ ಸ್ವಯಂ ತನ್ನ ವಿನಾಶಕ್ಕೇ ಹಾದಿ ಮಾಡುತ್ತಾನೆ.

'ಕುಫ್ರ್' ಮತ್ತು ಅವಿಧೇಯತೆಯ ಅನಿವಾರ್ಯ ಪರಿಣಾಮವೆಂಬಂತೆ ಮನುಷ್ಯನು ಶಾಶ್ವತವಾಗಿ ಪರಾಜಿತನಾಗುತ್ತಾನೆ. ಇಂತಹವನಿಗೆ ಜ್ಞಾನದ ನೇರ ಮಾರ್ಗವು ಎಂದೂ ಸಿಗಲಾರದು. ಏಕೆಂದರೆ ಯಾವ ಜ್ಞಾನವು ಸ್ವಯಂ ತನ್ನ ಸೃಷ್ಟಿಕರ್ತನನ್ನು ಅರಿಯುವುದಿಲ್ಲವೋ ಅದು ಬೇರಾವ ವಸ್ತುವನ್ನೂ ಸರಿಯಾಗಿ ಅರಿಯಲಾರದು. ಅವನ ಬುದ್ಧಿಯು ಯಾವಾಗಲೂ ವಕ್ರ ಮಾರ್ಗದಲ್ಲೇ ನಡೆಯುವುದು. ಏಕೆಂದರೆ ಯಾವ ಬುದ್ಧಿಯು ಸ್ವಯಂ ತನ್ನ ಸೃಷ್ಟಿಕರ್ತನನ್ನು ಅರಿಯುವುದರಲ್ಲಿ ತಪ್ಪಿದೆಯೋ ಅದು ಇನ್ನಾವ ವಿಷಯವನ್ನೂ ಸರಿಯಾಗಿ ಅರಿಯಲಾರದು. ಅವನು ಜೀವನದ ಸಕಲ ವ್ಯವಹಾರಗಳಲ್ಲಿ ಎಡವುತ್ತಲೇ ಸಾಗುವನು. ಅವನ ಚಾರಿತ್ರ್ಯವು ಕೆಡುವುದು. ಅವನ ನಾಗರಿಕತೆ ಕೆಡುವುದು. ಅವನ ಸಮಾಜವು ಕೆಡುವುದು. ಅವನ ಆರ್ಥಿಕ ಜೀವನ ಕೆಡುವುದು. ಅವನ ಸರಕಾರ ಮತ್ತು ರಾಜಕಾರಣವೂ ಕೆಡುವುದು. ಅವನು ಲೋಕದಲ್ಲಿ ಅಶಾಂತಿ ಹರಡುವನು. ಕೊಲೆ–ಸುಲಿಗೆಗಳನ್ನು ನಡೆಸುವನು. ಇತರರ ಹಕ್ಕುಗಳನ್ನು ಕಸಿಯುವನು, ಅಕ್ರಮ ಅನ್ಯಾಯಗಳನ್ನು ಮಾಡುವನು. ಸ್ವಯಂ ತನ್ನ ಜೀವನವನ್ನು ತನ್ನ ದುರ್ವಿಚಾರ, ಕಿಡಿಗೇಡಿತನ ಮತ್ತು ದುರಾಚಾರಗಳಿಂದಾಗಿ ತನ್ನ ಪಾಲಿಗೆ ಕಹಿಯಾಗಿ ಮಾಡಿಕೊಳ್ಳುವನು. ಇನ್ನು ಅವನು ಈ ಲೋಕವನ್ನು ತ್ಯಜಿಸಿ, ಪರಲೋಕವನ್ನು ತಲಪಿದಾಗ ಅವನು ಜೀವನ ಪರ್ಯಂತ ಯಾವುದರ ಮೇಲೆಲ್ಲ ಅನ್ಯಾಯ ಮಾಡುತ್ತಿದ್ದನೋ ಅವುಗಳೆಲ್ಲಾ ಅವನ ವಿರುದ್ಧ ದೂರು ಸಲ್ಲಿಸುವುವು. ಅವನ ಬುದ್ಧಿ, ಮನಸ್ಸು, ಕಣ್ಣು, ಕಿವಿ, ಕೈ–ಕಾಲುಗಳು, ಒಟ್ಟಿನಲ್ಲಿ ಅವನ ಪ್ರತಿಯೊಂದು ರೋಮವೂ 'ಈ ಅಕ್ರಮಿಯು ನಿನ್ನ ವಿರುದ್ಧ ಬಂಡಾಯ ಹೂಡಿದನು ಮತ್ತು ಆ ಬಂಡಾಯದಲ್ಲಿ ನಮ್ಮಿಂದ ಒತ್ತಾಯಪೂರ್ವಕ ಕೆಲಸ ಮಾಡಿಸಿದನು' ಎಂದು ಅಲ್ಲಾಹನ ನ್ಯಾಯಾಲಯದಲ್ಲಿ ಅವನ ವಿರುದ್ಧ ದೂರು ಸಲ್ಲಿಸುವುವು. ಅವನು ಯಾವ ಭೂಮಿಯ ಮೇಲೆ ಅಲ್ಲಾಹನ ಅವಿಧೇಯತೆಯ ಬದುಕು ಸಾಗಿಸಿದನೋ, ಯಾವ ಆಹಾರವನ್ನು ಅನ್ಯಾಯವಾಗಿ ಸಂಪಾದಿಸಿದನೋ, ಯಾವ ಸಂಪತ್ತನ್ನು ಅನ್ಯಾಯವಾಗಿ ಗಳಿಸಿ ಅನ್ಯಾಯದ ಮಾರ್ಗದಲ್ಲಿ ವ್ಯಯಿಸಿದನೋ, ಯಾವ ವಸ್ತುಗಳನ್ನು ತನ್ನ ಬಂಡಾಯ ನೀತಿಯಲ್ಲಿ ಅನ್ಯಾಯವಾಗಿ ಬಳಸಿದನೋ, ಯಾವ ಸಲಕರಣೆ ಮತ್ತು ಉಪಕರಣಗಳನ್ನು ತನ್ನ ಈ ಬಂಡಾಯದಲ್ಲಿ ಉಪಯೋಗಿಸಿದನೋ ಅವೆಲ್ಲವೂ ಅವನ ವಿರುದ್ಧ ದೂರು ನೀಡುವವರಾಗಿ ಬರುವುವು.

ನೈಜ ನ್ಯಾಯ ಪಾಲಕನಾದ ಅಲ್ಲಾಹನು ಆ ಎಲ್ಲ ಮರ್ದಿತರ ದೂರುಗಳನ್ನು ಸ್ವೀಕರಿಸಿ ಈ ವಿದ್ರೋಹಿಗೆ ಹೀನಾಯವಾದ ಶಿಕ್ಷೆ ನೀಡುವನು.

## ಇಸ್ಲಾಮಿನ ಪ್ರಯೋಜನಗಳು

ಇವೆಲ್ಲ 'ಕುಫ್ರ್'ನ ನಷ್ಟಗಳಾಗಿವೆ. ಇನ್ನು 'ಇಸ್ಲಾಮ್'ನ ಕ್ರಮವನ್ನು ಅನುಸರಿಸು

ವುದರಿಂದಾಗುವ ಪ್ರಯೋಜನಗಳಾವುವು ಎಂಬುದರ ಕಡೆಗೂ ದೃಷ್ಟಿ ಹಾಯಿಸೋಣ. ಈ ಲೋಕದಲ್ಲಿ ಎಲ್ಲೆಡೆಯೂ ಅಲ್ಲಾಹನ ದೇವತ್ವದ ಕುರುಹುಗಳು ಹರಡಿರುವುದೆಂಬು ದನ್ನು ನಾವು ಈಗಾಗಲೇ ಕಂಡುಕೊಂಡೆವು. ವಿಶ್ವದ ಈ ವಿರಾಟ್ ಕಾರ್ಯಾಗಾರವು ಒಂದು ಪರಿಪೂರ್ಣ ವ್ಯವಸ್ಥೆ ಮತ್ತು ಒಂದು ಅಚಲ ನಿಯಮದಂತೆ ನಡೆಯುತ್ತಿರುವುದೇ ಇದನ್ನು ಸೃಷ್ಟಿಸಿ ನಡೆಸುತ್ತಿರುವವನು ಒಬ್ಬ ಸರ್ವಶಕ್ತ ಅಧಿಪತಿಯಾಗಿದ್ದು ಅವನ ಆಧಿಪತ್ಯವನ್ನು ಮೀರುವ ಶಕ್ತಿ ಯಾವ ವಸ್ತುವಿಗೂ ಇಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಸಂಪೂರ್ಣ ವಿಶ್ವದಂತೆ ಸ್ವಯಂ ಮನುಷ್ಯನ ಪ್ರಕೃತಿಯೂ ಅವನನ್ನು ಅನುಸರಿಸ ಬೇಕೆಂಬುದೇ ಆಗಿದೆ. ಆದ್ದರಿಂದಲೇ ಅವನು ತನಗರಿವಿಲ್ಲದಂತೆಯೇ ರಾತ್ರಿ, ಹಗಲು ಅವನನ್ನು ಅನುಸರಿಸುತ್ತಲೇ ಇರುವನು. ಏಕೆಂದರೆ ಅವನ ಪ್ರಕೃತಿ ನಿಯಮವನ್ನು ಮೀರಿ ಅವನು ಬದುಕುವುದೇ ಸಾಧ್ಯವಿಲ್ಲ.

ಆದರೆ ಅಲ್ಲಾಹನು ಮನುಷ್ಯನಿಗೆ ಜ್ಞಾನ ಸಾಮರ್ಥ್ಯ, ಯೋಚಿಸುವ ಮತ್ತು ತಿಳಿಯುವ ಶಕ್ತಿ ಹಾಗೂ ಒಳಿತು ಕೆಡುಕುಗಳ ವಿವೇಚನ ಶಕ್ತಿ ನೀಡಿ ಇಚ್ಛೆ ಮತ್ತು ಆಯ್ಕೆಯ ಒಂದಿಷ್ಟು ಸ್ವಾತಂತ್ರ್ಯವನ್ನು ದಯಪಾಲಿಸಿರುವನು. ಈ ಸ್ವಾತಂತ್ರ್ಯದಲ್ಲಿ ನಿಜವಾಗಿ ಮನುಷ್ಯನ ಪರೀಕ್ಷೆ ಇದೆ. ಅವನ ಜ್ಞಾನ, ಬುದ್ಧಿ ಮತ್ತು ವಿವೇಚನೆಯ ಪರೀಕ್ಷೆ ಇದೆ. ಅವನಿಗೆ ನೀಡಲ್ಪಟ್ಟಿರುವ ಸ್ವಾತಂತ್ರ್ಯವನ್ನು ಅವನು ಹೇಗೆ ಬಳಸಿಕೊಳ್ಳು ತ್ತಾನೆ ಎಂಬುದರ ಪರೀಕ್ಷೆಯೂ ಇದೆ. ಈ ಪರೀಕ್ಷೆಯಲ್ಲಿ ಅವನನ್ನು ಯಾವುದಾದರೂ ಒಂದು ಕ್ರಮವನ್ನು ಸ್ವೀಕರಿಸುವಂತೆ ನಿರ್ಬಂಧಿಸಲಾಗಿಲ್ಲ. ಏಕೆಂದರೆ ಈ ರೀತಿ ನಿರ್ಬಂಧಿಸುವುದರಿಂದ ಪರೀಕ್ಷೆಯ ಉದ್ದೇಶವೇ ವಿಫಲವಾಗುತ್ತದೆ. ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ನೀಡಿದ ಬಳಿಕ ಒಂದು ನಿರ್ದಿಷ್ಟ ಉತ್ತರವನ್ನೇ ಬರೆಯಬೇಕೆಂದು ನಿಮ್ಮನ್ನು ನಿರ್ಬಂಧಿಸಿದರೆ ಅಂತಹ ಪರೀಕ್ಷೆಯಿಂದ ಯಾವ ಪ್ರಯೋಜನವೂ ಇರ ಲಾರದು ಎಂಬುದು ನಿಮಗೆ ತಿಳಿದಿದೆ. ನಿಮಗೆ ಎಲ್ಲ ರೀತಿಯ ಉತ್ತರ ಬರೆಯುವ ಸ್ವಾತಂತ್ರ್ಯ ಇದ್ದಾಗಲೇ ನಿಮ್ಮ ನೈಜ ಪ್ರತಿಭೆಯು ಪ್ರಕಟವಾಗಬಲ್ಲುದು. ನೀವು ಸರಿ ಯಾದ ಉತ್ತರ ಬರೆದರೆ ಪಾಸಾಗುವಿರಿ ಮತ್ತು ನಿಮ್ಮ ಮಟ್ಟಿಗೆ ಮುಂದಿನ ಪ್ರಗತಿಯ ಬಾಗಿಲು ತೆರೆಯುವುದು. ನೀವು ತಪ್ಪು ಉತ್ತರ ಬರೆದರೆ ಪರೀಕ್ಷೆಯಲ್ಲಿ ಸೋಲುವಿರಿ ಮತ್ತು ನಿಮ್ಮ ಅಸಾಮರ್ಥ್ಯದಿಂದಾಗಿ ಸ್ವಯಂ ನಿಮ್ಮ ಪ್ರಗತಿಯ ದಾರಿಯನ್ನೇ ಮುಚ್ಚಿಕೊಳ್ಳುವಿರಿ. ಇದೇ ರೀತಿ ಅಲ್ಲಾಹನೂ ತನ್ನ ಪರೀಕ್ಷೆಯಲ್ಲಿ ಮನುಷ್ಯನನ್ನು ಅವನ ಆಯ್ಕೆಯ ಕ್ರಮವನ್ನು ಅನುಸರಿಸಲು ಸ್ವತಂತ್ರವಾಗಿ ಬಿಟ್ಟಿದ್ದಾನೆ.

ಒಬ್ಬನು ತನ್ನ ಮತ್ತು ವಿಶ್ವದ ಪ್ರಕೃತಿಯನ್ನು ಅರಿಯುವುದಿಲ್ಲ. ತನ್ನ ಸೃಷ್ಟಿಕರ್ತನ ವ್ಯಕ್ತಿತ್ವ ಮತ್ತು ಗುಣಗಳನ್ನು ಅರಿಯುವಲ್ಲಿ ತಪ್ಪಿ ಬೀಳುತ್ತಾನೆ. ಅವನಿಗೆ ನೀಡಲ್ಪಟ್ಟಿರುವ ಸ್ವಾತಂತ್ರ್ಯವನ್ನು ಬಳಸಿ ಅವಿಧೇಯತೆ ಮತ್ತು ವಿದ್ರೋಹದ ಕ್ರಮ ವನ್ನು ಅನುಸರಿಸುತ್ತಾನೆ.

ಇವನು ಜ್ಞಾನ, ಬುದ್ಧಿ, ವಿವೇಚನೆ ಮತ್ತು ಕರ್ತವ್ಯನಿಷ್ಠೆಯ ಪರೀಕ್ಷೆಯಲ್ಲಿ ವಿಫಲವಾಗುತ್ತಾನೆ. ತಾನು ಎಲ್ಲ ರೀತಿಯಿಂದಲೂ ನಿಕೃಷ್ಟ ತರದ ಮನುಷ್ಯನೆಂಬುದನ್ನು ಅವನು ಸ್ವಯಂ ಸಾಬೀತು ಪಡಿಸುತ್ತಾನೆ. ಆದ್ದರಿಂದ ಅವನ ಪರಿಣಾಮವು ಮೇಲೆ ಪ್ರಸ್ತಾಪಿಸಿದ ವ್ಯಕ್ತಿಯ ಪರಿಣಾಮದಂತೆಯೇ ಆಗಬೇಕಾದುದು ಅನಿವಾರ್ಯ.

ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಬ್ಬನು ಈ ಪರೀಕ್ಷೆಯಲ್ಲಿ ಸಫಲನಾಗುತ್ತಾನೆ. ತನ್ನ ಜ್ಞಾನ ಮತ್ತು ಬುದ್ಧಿಯನ್ನು ಸರಿಯಾಗಿ ಬಳಸಿಕೊಂಡು ಅಲ್ಲಾಹನನ್ನು ಅರಿಯುತ್ತಾನೆ ಮತ್ತು ಅಂಗೀಕರಿಸುತ್ತಾನೆ. ನಿಜವಾಗಿ ಅವನನ್ನು ಅದಕ್ಕಾಗಿ ನಿರ್ಬಂಧಿಸಲಾಗಿರಲಿಲ್ಲ. ಅವನು ಒಳಿತು–ಕೆಡುಕುಗಳ ವಿವೇಚನೆಯಲ್ಲಿ ತಪ್ಪು ಮಾಡಲಿಲ್ಲ. ತನ್ನ ಸ್ವತಂತ್ರ ಆಯ್ಕೆಯಿಂದ ಒಳಿತನ್ನೇ ನೆಚ್ಚಿಕೊಂಡನು. ವಸ್ತುತಃ ಅವನಿಗೆ ಕೆಡುಕಿನತ್ತ ವಾಲುವ ಸ್ವಾತಂತ್ರ್ಯವೂ ಇತ್ತು. ಅವನು ತನ್ನ ಪ್ರಕೃತಿಯನ್ನು ಅರಿತನು. ತನ್ನ ದೇವನನ್ನು ಗುರುತಿಸಿದನು. ಅವಿಧೇಯತೆಯ ಸ್ವಾತಂತ್ರ್ಯವಿದ್ದಾಗ್ಯೂ ಅಲ್ಲಾಹನ ವಿಧೇಯತೆಯ ಮಾರ್ಗವನ್ನೇ ಅನುಸರಿಸಿದನು. ಅವನು ತನ್ನ ಬುದ್ಧಿಯನ್ನು ಸರಿಯಾಗಿ ಬಳಸಿಕೊಂಡ ಕಾರಣದಿಂದಲೇ ಅವನಿಗೆ ಈ ವಿಜಯ ಪ್ರಾಪ್ತವಾಯಿತು. ಅವನು ತನ್ನ ಕಣ್ಣು ಗಳಿಂದ ಸರಿಯಾಗಿ ನೋಡಿದನು. ಕಿವಿಗಳಿಂದ ಸರಿಯಾಗಿ ಕೇಳಿದನು. ಬುದ್ಧಿಯಿಂದ ಸರಿಯಾದ ಅಭಿಪ್ರಾಯವನ್ನೇ ತಾಳಿದನು. ಮನಸ್ಸಿನಿಂದ ಸರಿಯಾದ ವಿಷಯದ ಅನುಸರಣೆ ಮಾಡುವುದಾಗಿ ನಿರ್ಧರಿಸಿದನು. ಅವನು ಸತ್ಯವನ್ನು ಮನಗಾಣುವ ಮೂಲಕ ತಾನು ಸತ್ಯಸಂಧನೆಂಬುದನ್ನೂ ಸತ್ಯದ ಮುಂದೆ ಶಿರಬಾಗುವ ಮೂಲಕ ತಾನು ಸತ್ಯದ ಆರಾಧಕನೆಂಬುದನ್ನೂ ಸಾಬೀತುಪಡಿಸಿದನು.

ಇಂತಹ ಗುಣಗಳಿರುವ ವ್ಯಕ್ತಿ ಇಹ–ಪರಗಳೆರಡರಲ್ಲೂ ವಿಜಯಿಯಾಗಲೇ ಬೇಕೆಂಬುದು ಸ್ಪಷ್ಟ.

ಅವನು ಜ್ಞಾನ ಮತ್ತು ಕರ್ಮಗಳ ಎಲ್ಲ ರಂಗಗಳಲ್ಲೂ ಸರಿಯಾದ ದಾರಿಯನ್ನೇ ಅನುಸರಿಸುವನು. ಏಕೆಂದರೆ ಅಲ್ಲಾಹನ ಅಸ್ತಿತ್ವವನ್ನೂ ಅವನ ಗುಣಗಳನ್ನೂ ಅರಿತಿರುವ ಒಬ್ಬ ವ್ಯಕ್ತಿ ಜ್ಞಾನದ ಆರಂಭವನ್ನೂ ಅಂತ್ಯವನ್ನೂ ಅರಿತವನಾಗಿದ್ದಾನೆ. ಇಂತಹ ವ್ಯಕ್ತಿ ಎಂದೂ ದಾರಿಗೆಟ್ಟು ಅಲೆಯಲಾರನು. ಅವನ ಪ್ರಥಮ ಹೆಜ್ಜೆಯೂ ಸರಿಯಾದ ದಾರಿಯಲ್ಲೇ ಬಿದ್ದಿದೆ ಮತ್ತು ತಾನು ತಲುಪಬೇಕಾದ ಅಂತಿಮ ಗುರಿಯನ್ನೂ ಅವನು ಖಚಿತವಾಗಿ ತಿಳಿದಿದ್ದಾನೆ. ಈಗ ಅವನು ತಾತ್ವಿಕ ವಾದ ಚಿಂತನ – ಮಂಥನಗಳಿಂದ ವಿಶ್ವದ ರಹಸ್ಯಗಳನ್ನು ಅರಿಯಲು ಪ್ರಯತ್ನಿಸುತ್ತಾನೆ. ಆದರೆ ಓರ್ವ ಸತ್ಯನಿಷೇಧಿ ತತ್ವಜ್ಞಾನಿಯಂತೆ ಎಂದೂ ಸಂಶಯಗಳ ಗೊಂದಲದಲ್ಲಿ ಸಿಲುಕಿಕೊಳ್ಳುವುದಿಲ್ಲ. ಅವನು ವಿಜ್ಞಾನದ ಮೂಲಕ ಪ್ರಕೃತಿಯ ನಿಯಮಗಳನ್ನು ಅರಿಯಲು ಪ್ರಯತ್ನಿಸುವನು. ಪ್ರಕೃತಿಯ ಸುಪ್ತವಾದ ಭಂಡಾರಗಳನ್ನು ಹೊರ

ತೆಗೆಯುವನು. ಅಲ್ಲಾಹನು ವಿಶ್ವದಲ್ಲಿ ಮತ್ತು ಸ್ವಯಂ ಮಾನವನ ಅಸ್ತಿತ್ವದಲ್ಲಿ ಸೃಷ್ಟಿಸಿರುವ ಸಾಮರ್ಥ್ಯಗಳನ್ನು ಕಂಡು ಹಿಡಿಯುವನು. ಭೂಮಿ ಮತ್ತು ಆಕಾಶಗಳಲ್ಲಿರುವ ಎಲ್ಲ ವಸ್ತುಗಳನ್ನು ಅತ್ಯುತ್ತಮವಾಗಿ ಬಳಸುವ ಮಾರ್ಗಗಳನ್ನು ಕಂಡುಕೊಳ್ಳುವನು. ಆದರೆ ದೇವಭಯವು ಅವನನ್ನು ಪ್ರತಿಯೊಂದು ಸಂದರ್ಭದಲ್ಲೂ ವಿಜ್ಞಾನದ ದುರುಪಯೋಗದಿಂದ ತಡೆಯುವುದು. ಅವನೆಂದೂ ಈ ಎಲ್ಲ ವಸ್ತುಗಳ ಒಡೆಯ ತಾನೆಂಬ ತಪ್ಪುಕಲ್ಪನೆಯನ್ನು ಇಟ್ಟುಕೊಳ್ಳಲಾರನು. ತಾನು ಪ್ರಕೃತಿಯನ್ನು ಜಯಿಸಿರುವೆನು, ತಾನು ವಿಜ್ಞಾನವನ್ನು ತನ್ನ ಲಾಭಕ್ಕಾಗಿ ಬಳಸಿಕೊಳ್ಳುವೆನು. ಲೋಕವನ್ನು ಅಡಿಮೇಲಾಗಿಸುವೆನು, ಕೊಲೆ, ಸುಲಿಗೆ, ದರೋಡೆಗಳ ಮೂಲಕ ಇಡೀ ಜಗತ್ತಿನಲ್ಲಿ ತನ್ನ ಸಾಮರ್ಥ್ಯವನ್ನು ಮೆರೆಯುವೆನು ಎಂಬ ಭ್ರಮೆಯಲ್ಲಿ ಅವನು ಬೀಳಲಾರನು. ಅದು ಓರ್ವ ಸತ್ಯನಿಷೇಧಿ ವಿಜ್ಞಾನಿಯ ಕೆಲಸ.

ಮುಸ್ಲಿಮ್ ವಿಜ್ಞಾನಿ ವಿಜ್ಞಾನದ ಮೇಲೆ ಎಷ್ಟು ಪ್ರಭುತ್ವ ಸಾಧಿಸುವನೋ ಅಷ್ಟೇ ಪ್ರಮಾಣದಲ್ಲಿ ಅವನಲ್ಲಿ ಅಲ್ಲಾಹನ ಮೇಲಿರುವ ವಿಶ್ವಾಸವು ವೃದ್ಧಿಯಾಗುವುದು. ಅಷ್ಟೇ ಅಧಿಕವಾಗಿ ಅವನು ಅಲ್ಲಾಹನ ಕೃತಜ್ಞ ದಾಸನಾಗಿ ಮಾರ್ಪಡುವನು. ನನ್ನ ಪ್ರಭು ನನ್ನ ಸಾಮರ್ಥ್ಯ ಮತ್ತು ಜ್ಞಾನದಲ್ಲಿ ಎಷ್ಟು ಹೆಚ್ಚಳ ಮಾಡಿರುವನೋ ಅದರಿಂದ ನಾನು ನನ್ನ ಮತ್ತು ಸಕಲ ಮಾನವರ ಪ್ರಗತಿಗೆ ಪ್ರಯತ್ನಿಸುವೆನು ಎಂಬುದೇ ಅವನ ವಿಶ್ವಾಸವಾಗಿರುವುದು. ಇದುವೇ ಅವನ ನಿಜವಾದ ಕೃತಜ್ಞತೆಯಾಗಿದೆ.

ಇದೇ ರೀತಿ ಇತಿಹಾಸ, ಅರ್ಥಶಾಸ್ತ್ರ, ರಾಜಕೀಯ, ಕಾನೂನು ಮತ್ತಿತರ ವಿಜ್ಞಾನ ಮತ್ತು ಕಲೆಗಳಲ್ಲಿಯೂ ಒಬ್ಬ ಮುಸ್ಲಿಮನು ತನ್ನ ಸಂಶೋಧನೆ ಮತ್ತು ಪರಿಶ್ರಮದಲ್ಲಿ ಒಬ್ಬ ಸತ್ಯನಿಷೇಧಿಗಿಂತ ಹಿಂದಿರಲಾರನು. ಆದರೆ ಇಬ್ಬರ ದೃಷ್ಟಿಕೋನದಲ್ಲಿ ದೊಡ್ಡ ವ್ಯತ್ಯಾಸವಿರುವುದು. ಒಬ್ಬ ಮುಸ್ಲಿಮನು ಪ್ರತಿಯೊಂದು ಜ್ಞಾನದ ಅಧ್ಯಯನವನ್ನು ಸರಿಯಾದ ದೃಷ್ಟಿಕೋನದಿಂದ ಮಾಡುವನು, ಸರಿಯಾದ ಉದ್ದೇಶದಿಂದಲೇ ಮಾಡುವನು ಮತ್ತು ಸರಿಯಾದ ಪರಿಣಾಮಕ್ಕೇ ತಲಪುವನು. ಇತಿಹಾಸದಲ್ಲಿ ಅವನು ಮಾನವನ ಗತ ಅನುಭವಗಳಿಂದ ಸರಿಯಾದ ಪಾಠವನ್ನು ಹೊಂದುವನು. ಜನಾಂಗಗಳ ಉತ್ಥಾನ ಪತನಗಳ ನೈಜ ಕಾರಣಗಳನ್ನು ಅರಿಯುವನು. ಸಂಸ್ಕೃತಿ ಮತ್ತು ನಾಗರಿಕತೆಗಳ ಉತ್ತಮ ಅಂಶಗಳನ್ನು ಕಂಡುಕೊಳ್ಳುವನು. ಸಜ್ಜನರ ಸ್ಥಿತಿಗತಿಗಳಿಂದ ಪ್ರಯೋಜನ ಪಡೆಯುವನು. ಗತ ಜನಾಂಗಗಳು ಯಾವುದರಿಂದಾಗಿ ನಾಶ ಹೊಂದಿದವೋ ಆ ಎಲ್ಲ ವಿಷಯಗಳಿಂದ ದೂರವಿರುವನು. ಅರ್ಥಶಾಸ್ತ್ರದಲ್ಲಿ ಎಲ್ಲ ಮನುಷ್ಯರಿಗೂ ಉಪಯುಕ್ತವಾಗುವ ರೀತಿಯಲ್ಲಿ ಸಂಪತ್ತನ್ನು ಗಳಿಸುವ ಮತ್ತು ವ್ಯಯಿಸುವ ಮಾರ್ಗವನ್ನು ಕಂಡು ಹಿಡಿಯುವನು. ಒಬ್ಬನ ಲಾಭ ಮತ್ತು ಅನೇಕರ ನಷ್ಟಕ್ಕೆ ಕಾರಣವಾಗುವ ಮಾರ್ಗವನ್ನು ಅನುಸರಿಸಲಾರನು. ರಾಜಕೀಯದಲ್ಲಿ ಅವನ

ಎಲ್ಲ ಗಮನವೂ ಲೋಕದಲ್ಲಿ ಶಾಂತಿ, ನ್ಯಾಯ ಮತ್ತು ಒಳಿತಿನ ಆಡಳಿತ ಸ್ಥಾಪಿತವಾಗಬೇಕೆಂಬುದರ ಕಡೆಗೆ ಇರುವುದು. ಯಾವ ವ್ಯಕ್ತಿಯಾಗಲಿ, ಸಂಘಟನೆಯಾಗಲಿ ಅಲ್ಲಾಹನ ದಾಸರನ್ನು ತನ್ನ ದಾಸರಾಗಿ ಮಾರ್ಪಡಿಸದಂತೆ ಅವನು ಜಾಗ್ರತೆ ವಹಿಸುವನು. ಸರಕಾರ ಮತ್ತು ಅದರ ಎಲ್ಲ ಶಕ್ತಿಗಳನ್ನು ಅಲ್ಲಾಹನ ವಿಶ್ವಸ್ಥ ನಿಧಿಯೆಂದು ಪರಿಗಣಿಸಿ ಜನರ ಕಲ್ಯಾಣಕ್ಕಾಗಿ ಅದರ ಬಳಕೆಯಾಗುವಂತೆ ನೋಡಿಕೊಳ್ಳುವನು. ಕಾನೂನಿನಲ್ಲಿ ಅವನು ಜನರ ಹಕ್ಕುಗಳು ನ್ಯಾಯಪೂರ್ಣವಾಗಿ ನಿರ್ಣಯಿಸಲ್ಪಡುವಂತೆ ಮತ್ತು ಯಾವ ಪರಿಸ್ಥಿತಿಯಲ್ಲೂ ಯಾರ ಮೇಲೂ ಅನ್ಯಾಯವಾಗದಂತೆ ನೋಡಿಕೊಳ್ಳುವನು.

ಮುಸ್ಲಿಮನ ಚಾರಿತ್ರ್ಯದಲ್ಲಿ ದೇವಭಕ್ತಿ, ಸತ್ಯಸಂಧತೆ ಮತ್ತು ಪ್ರಾಮಾಣಿಕತೆ ಇರುವುದು. ಎಲ್ಲ ವಸ್ತುಗಳ ಒಡೆಯನು ಅಲ್ಲಾಹನಾಗಿರುವನು. ನನ್ನಲ್ಲಿಯೂ ಇತರೆಲ್ಲ ಮನುಷ್ಯರಲ್ಲಿಯೂ ಇರುವುದೆಲ್ಲವೂ ಅಲ್ಲಾಹನ ಕೊಡುಗೆಯಾಗಿದೆ. ನಾನು ನನ್ನ ಪ್ರಾಣ ಸಮೇತ ಯಾವುದೇ ವಸ್ತುವಿನ ಒಡೆಯನಲ್ಲ. ಎಲ್ಲವೂ ಅಲ್ಲಾಹನ ವಿಶ್ವಸ್ಥ ನಿಧಿಯಾಗಿದ್ದು ಅವುಗಳನ್ನು ಉಪಯೋಗಿಸಲು ನನಗೆ ನೀಡಲಾಗಿರುವ ಅಧಿಕಾರವನ್ನು ಆ ಅಲ್ಲಾಹನ ಇಚ್ಛೆಗೆ ಅನುಗುಣವಾಗಿಯೇ ಬಳಸಬೇಕು. ಒಂದು ದಿನ ಅಲ್ಲಾಹನು ನನ್ನಿಂದ ಈ ವಿಶ್ವಸ್ಥ ನಿಧಿಯನ್ನು ಹಿಂತೆಗೆದುಕೊಳ್ಳುವನು. ಆಗ ನನಗೆ ಪ್ರತಿಯೊಂದು ವಸ್ತುವಿನ ಲೆಕ್ಕಾಚಾರ ನೀಡಬೇಕಾಗಿದೆ ಎಂದು ಭಾವಿಸಿ ಅವನು ಜೀವನ ಸಾಗಿಸುವನು.

ಈ ರೀತಿ ತಿಳಿದುಕೊಂಡು ಲೋಕದಲ್ಲಿ ಜೀವಿಸುವ ಮನುಷ್ಯನ ಚಾರಿತ್ರ್ಯದ ಕುರಿತು ಯೋಚಿಸಿ ನೋಡಿರಿ. ಅವನು ತನ್ನ ಮನಸ್ಸನ್ನು ಕೆಟ್ಟ ವಿಚಾರಗಳಿಂದ ದೂರವಿಡುವನು. ಅವನು ತನ್ನ ಮಿದುಳನ್ನು ಕೆಡುಕಿನ ಚಿಂತೆಯಿಂದ ಮುಕ್ತವಾಗಿಡುವನು. ಅವನು ತನ್ನ ಕಣ್ಣನ್ನು ಕೆಟ್ಟ ದೃಷ್ಟಿಯಿಂದ ರಕ್ಷಿಸುವನು. ಅವನು ತನ್ನ ಕಿವಿಯನ್ನು ಕೆಡುಕನ್ನು ಆಲಿಸುವುದರಿಂದ ರಕ್ಷಿಸುವನು. ಸತ್ಯಕ್ಕೆ ವಿರುದ್ಧವಾದ ಯಾವುದೇ ಮಾತು ಹೊರಡದಂತೆ ಅವನು ತನ್ನ ನಾಲಗೆಯನ್ನು ಸಂರಕ್ಷಿಸುವನು. ಅವನು ನಿಷಿದ್ಧ ಸಂಪಾದನೆಯಿಂದ ತನ್ನ ಹೊಟ್ಟೆ ತುಂಬುವುದಕ್ಕಿಂತ ಹಸಿದಿರುವುದೇ ಲೇಸೆಂದು ಭಾವಿಸುವನು. ಅವನೆಂದೂ ತನ್ನ ಕೈಯನ್ನು ಅಕ್ರಮಕ್ಕಾಗಿ ಎತ್ತಲಾರನು. ಅವನು ತನ್ನ ಕಾಲನ್ನು ಕೆಡುಕಿನ ಮಾರ್ಗದಲ್ಲಿ ಎಂದೂ ನಡೆಸಲಾರನು. ಅವನ ಶಿರವು ಕಡಿಯಲ್ಪಡುವುದಾದರೂ ಅದನ್ನೆಂದೂ ಮಿಥ್ಯದ ಮುಂದೆ ಬಾಗಿಸಲಾರನು. ಅವನು ತನ್ನ ಯಾವುದೇ ಇಚ್ಛೆ ಅಥವಾ ಅವಶ್ಯಕತೆಯನ್ನು ಅಕ್ರಮ ಮತ್ತು ಅಸತ್ಯದ ಮಾರ್ಗದಿಂದ ಪೂರ್ತೀಕರಿಸಲಾರನು. ಅವನು ಒಳಿತು ಮತ್ತು ಸಜ್ಜನಿಕೆಯ ಸಾಕಾರ ಮೂರ್ತಿಯಾಗಿರುವನು. ಸತ್ಯ ಮತ್ತು ಪ್ರಾಮಾಣಿಕತೆಯನ್ನು ಅತ್ಯಧಿಕ ಪ್ರೀತಿಸುವನು.

ಅದಕ್ಕಾಗಿ ತನ್ನ ವೈಯಕ್ತಿಕ ಲಾಭಗಳನ್ನು, ತನ್ನ ಮನಸ್ಸಿನ ಇಚ್ಛೆಗಳನ್ನು ಮಾತ್ರವಲ್ಲ ತನ್ನ ಅಸ್ತಿತ್ವವನ್ನೇ ಬಲಿಕೊಡಲು ಸಿದ್ಧವಾಗುವನು. ಅವನು ಅಕ್ರಮ ಮತ್ತು ಅಸತ್ಯವನ್ನು ಅತ್ಯಧಿಕ ದ್ವೇಷಿಸುವನು. ನಷ್ಟದ ಭಯದಿಂದಾಗಲೀ ಲಾಭದ ಆಸೆ ಯಿಂದಾಗಲೀ ಅದರ ಪಕ್ಷ ವಹಿಸಲಾರನು. ಲೌಕಿಕ ವಿಜಯವೂ ಇಂತಹ ಮನುಷ್ಯನ ಪಾಲಿಗೇ ಬರುತ್ತದೆ.

ಲೋಕದಲ್ಲಿ ಯಾರೂ ಅವನಿಗಿಂತ ಹೆಚ್ಚು ಸನ್ಮಾನ್ಯನೂ ಗೌರವಾನ್ವಿತನೂ ಇರಲಾರನು. ಏಕೆಂದರೆ ಅವನು ಅಲ್ಲಾಹನ ಹೊರತು ಇನ್ನಾರ ಮುಂದೆಯೂ ಶಿರ ಬಾಗುವವನಲ್ಲ. ಅಲ್ಲಾಹನ ಹೊರತು ಇನ್ನಾರ ಮುಂದೆಯೂ ಅವನು ಕೈ ಚಾಚುವವನಲ್ಲ. ಇಂತಹ ವ್ಯಕ್ತಿಯ ಹತ್ತಿರ ನಿಂದ್ಯತೆಯು ಸುಳಿಯುವುದಾದರೂ ಹೇಗೆ?

ಲೋಕದಲ್ಲಿ ಅವನಿಗಿಂತ ಅಧಿಕ ಶಕ್ತಿಶಾಲಿ ಯಾರೂ ಇರಲಾರನು. ಏಕೆಂದರೆ ಅವನ ಮನದಲ್ಲಿ ಅಲ್ಲಾಹನ ಹೊರತು ಇನ್ನಾರ ಭಯವೂ ಇಲ್ಲ. ಅವನು ಅಲ್ಲಾಹನ ಹೊರತು ಇನ್ನಾರ ದಾನವನ್ನಾಗಲೀ ಕೊಡುಗೆಯನ್ನಾಗಲೀ ಬಯಸುವುದಿಲ್ಲ. ಇಂತಹ ವ್ಯಕ್ತಿಯನ್ನು ಸತ್ಯ ಮತ್ತು ಪ್ರಾಮಾಣಿಕತೆಯ ಹಾದಿಯಿಂದ ಸರಿಸಲು ಯಾವ ಶಕ್ತಿಗೂ ಸಾಧ್ಯವಿಲ್ಲ. ಇಂತಹ ವ್ಯಕ್ತಿಯ ವಿಶ್ವಾಸವನ್ನು ಖರೀದಿಸಲು ಯಾವ ಸಂಪತ್ತಿಗೂ ಸಾಧ್ಯವಿಲ್ಲ.

ಲೋಕದಲ್ಲಿ ಅವನಿಗಿಂತ ದೊಡ್ಡ ನಿರಪೇಕ್ಷ ಮತ್ತು ಶ್ರೀಮಂತ ವ್ಯಕ್ತಿಯೂ ಬೇರೆ ಇರಲಾರರು. ಏಕೆಂದರೆ ಅವನು ಸುಖಲೋಲುಪನಲ್ಲ, ಚಿತ್ತಾಕಾಂಕ್ಷೆಗಳ ಗುಲಾಮನಲ್ಲ ಮತ್ತು ಅತ್ಯಾಸೆ ಉಳ್ಳವನಲ್ಲ. ತನ್ನ ಧರ್ಮಸಮ್ಮತ ದುಡಿಮೆಯಿಂದ ಗಳಿಸಿದುದರಲ್ಲಿ ಅವನು ಸಂತೃಪ್ತನಾಗುತ್ತಾನೆ. ಅಕ್ರಮ ಸಂಪತ್ತಿನ ರಾಶಿಯೇ ಅವನ ಮುಂದಿಟ್ಟರೂ ಅವನು ಅದನ್ನು ತುಚ್ಛವೆಂದು ಪರಿಗಣಿಸಿ ತಿರಸ್ಕರಿಸಿ ಬಿಡುತ್ತಾನೆ. ಇದು ಸಂತೃಪ್ತಿಯ ಶ್ರೀಮಂತಿಕೆಯಾಗಿದ್ದು ಇದಕ್ಕಿಂತ ದೊಡ್ಡ ಶ್ರೀಮಂತಿಕೆ ಮನುಷ್ಯನ ಮಟ್ಟಿಗೆ ಬೇರೊಂದಿಲ್ಲ.

ಲೋಕದಲ್ಲಿ ಅವನಿಗಿಂತ ಹೆಚ್ಚು ಪ್ರೀತಿಪಾತ್ರನೂ ಜನಪ್ರಿಯನೂ ಇನ್ನಾರೂ ಇರಲಾರರು. ಏಕೆಂದರೆ ಅವನು ಎಲ್ಲರ ಹಕ್ಕುಗಳನ್ನೂ ಅವರಿಗೆ ಸಂದಾಯ ಮಾಡುವನು. ಯಾರ ಹಕ್ಕನ್ನೂ ಕಬಳಿಸಲಾರನು. ಎಲ್ಲರೊಂದಿಗೂ ಸದ್ವರ್ತನೆ ಕೈಗೊಳ್ಳುವನು. ಯಾರೊಂದಿಗೂ ಕೆಟ್ಟದಾಗಿ ವರ್ತಿಸಲಾರನು. ಪ್ರತಿಯೊಬ್ಬನ ಒಳಿತಿಗಾಗಿ ಶ್ರಮಿಸುವನು ಮತ್ತು ಅದಕ್ಕೆ ಪ್ರತಿಯಾಗಿ ಯಾವ ಪ್ರತಿಫಲವನ್ನೂ ಬಯಸಲಾರನು. ಜನರ ಮನವು ತನ್ನಿಂತಾನೇ ಅವನತ್ತ ವಾಲುವುದು ಮತ್ತು ಪ್ರತಿಯೊಬ್ಬನೂ ಅವನನ್ನು ಗೌರವಿಸಲು ಮತ್ತು ಪ್ರೀತಿಸಲು ನಿರ್ಬಂಧಿತನಾಗುವನು.

ಲೋಕದಲ್ಲಿ ಅವನಿಗಿಂತ ಹೆಚ್ಚು ಯಾರ ಮೇಲೆಯೂ ಭರವಸೆ ಇರಲಾರದು.

ಏಕೆಂದರೆ ಅವನು ತನ್ನನ್ನು ನಂಬಿದವರನ್ನು ವಂಚಿಸಲಾರನು. ಎಂದೂ ಸತ್ಯದಿಂದ ವಿಮುಖನಾಗಲಾರನು. ಅವನು ವಚನ ಪಾಲಿಸುವವನು ಮತ್ತು ವ್ಯವಹಾರದಲ್ಲಿ ಪ್ರಾಮಾಣಿಕನಾಗಿರುವನು. ಪ್ರತಿಯೊಂದು ಕೆಲಸ ಮಾಡುವಾಗಲೂ, ಇತರರು ನೋಡಲಿ – ನೋಡದಿರಲಿ ಅಲ್ಲಾಹನಂತೂ ಎಲ್ಲವನ್ನೂ ನೋಡುತ್ತಿದ್ದಾನೆ ಎಂಬ ದೃಢ ವಿಶ್ವಾಸದೊಂದಿಗೆ ಪ್ರಾಮಾಣಿಕತೆಯನ್ನು ಪಾಲಿಸುವನು. ಇಂತಹ ಮನುಷ್ಯನ ವರ್ಚಸ್ಸನ್ನು ವಿವರಿಸಲಸಾಧ್ಯ. ಅವನ ಮೇಲೆ ಭರವಸೆ ಇಡದವರು ಯಾರೂ ಇರಲಾರರು.

ಒಬ್ಬ ಮುಸ್ಲಿಮನ ಚಾರಿತ್ರ್ಯವನ್ನು ಚೆನ್ನಾಗಿ ತಿಳಿದುಕೊಂಡರೆ ಮುಸ್ಲಿಮನೆಂದೂ ಲೋಕದಲ್ಲಿ ನಿಂದ್ಯನೂ ಪರಾಧೀನನೂ ಗುಲಾಮನೂ ಆಗಿರುವುದು ಸಾಧ್ಯವಿಲ್ಲವೆಂಬುದು ಖಾತ್ರಿಯಾಗುತ್ತದೆ. ಅವನು ಸದಾ ಉನ್ನತನೂ ಅಧಿಪತಿಯೂ ಆಗಿರುವನು. ಏಕೆಂದರೆ ಇಸ್ಲಾಮ್ ಅವನಲ್ಲಿ ಬೆಳೆಸುವ ಗುಣಗಳಿಂದಾಗಿ ಅವನೆಂದೂ ಪರಾಜಿತನಾಗಲು ಸಾಧ್ಯವಿಲ್ಲ.

ಈ ರೀತಿ ಲೋಕದಲ್ಲಿ ಗೌರವ ಮತ್ತು ಹಿರಿಮೆಯ ಜೀವನ ಸಾಗಿಸಿ ಅವನು ತನ್ನ ಪ್ರಭುವಿನ ಮುಂದೆ ಹಾಜರಾದಾಗ ಅಲ್ಲಾಹನು ಅವನ ಮೇಲೆ ತನ್ನ ಅನುಗ್ರಹ ಮತ್ತು ಕರುಣೆಗಳ ಮಳೆಗೆರೆಯುವನು. ಏಕೆಂದರೆ ಯಾವ ವಿಶ್ವಸ್ಥ ನಿಧಿಗಳನ್ನು ಅವನ ವಶಕ್ಕೆ ಒಪ್ಪಿಸಲಾಗಿತ್ತೋ ಅವನು ಅವುಗಳನ್ನು ಪೂರ್ಣವಾಗಿ ಪಾಲಿಸಿರುವನು ಮತ್ತು ಯಾವ ಪರೀಕ್ಷೆಗೆ ಅಲ್ಲಾಹನು ಅವನನ್ನು ಗುರಿಪಡಿಸಿದ್ದನೋ ಅದರಲ್ಲಿ ಅವನು ಪೂರ್ಣ ಅಂಕಗಳೊಂದಿಗೆ ಯಶಸ್ವಿಯಾಗಿರುವನು. ಇದು ಶಾಶ್ವತವಾದ ವಿಜಯ. ಇದು ಇಹಲೋಕದಿಂದ ಪರಲೋಕದವರೆಗೆ ನಿರಂತರ ಸಾಗುತ್ತಿರುತ್ತದೆ. ಎಲ್ಲೂ ಅದು ಕೊನೆಗೊಳ್ಳುವುದಿಲ್ಲ.

ಇದುವೇ ಇಸ್ಲಾಮ್. ಮನುಷ್ಯನ ಪ್ರಾಕೃತಿಕ ಧರ್ಮ. ಇದು ಯಾವುದೇ ಜನಾಂಗ ಅಥವಾ ರಾಷ್ಟ್ರಕ್ಕೆ ಸೀಮಿತವಲ್ಲ. ಎಲ್ಲ ಕಾಲ, ಜನಾಂಗ ಮತ್ತು ರಾಷ್ಟ್ರಗಳಲ್ಲಿ ದೇವಭಕ್ತರೂ ಸತ್ಯಸಂಧರೂ ಆದ ಎಲ್ಲ ಮನುಷ್ಯರ ಧರ್ಮ ಇದುವೇ ಆಗಿತ್ತು. ಅವರ ಭಾಷೆಯಲ್ಲಿ ಅವರ ಧರ್ಮದ ಹೆಸರು ಇಸ್ಲಾಮ್ ಆಗಿರಲಿ ಅಥವಾ ಇನ್ನಾವುದಾದರೂ ಆಗಿರಲಿ ಅವರೆಲ್ಲರೂ ಮುಸ್ಲಿಮರಾಗಿದ್ದರು.

❖ ❖ ❖ ❖

# ಸತ್ಯವಿಶ್ವಾಸ ಮತ್ತು ಅನುಸರಣೆ

## ಅನುಸರಣೆಗೆ ಜ್ಞಾನ ಮತ್ತು ದೃಢನಂಬಿಕೆಯ ಅಗತ್ಯ

ಇಸ್ಲಾಮ್ ವಾಸ್ತವದಲ್ಲಿ ಅಲ್ಲಾಹನ ಅನುಸರಣೆಯ ಹೆಸರೆಂಬುದು ಕಳೆದ ಅಧ್ಯಾಯದಲ್ಲಿ ನಿಮಗೆ ತಿಳಿಯಿತು. ಮನುಷ್ಯನಿಗೆ ಕೆಲವು ವಿಷಯಗಳ ತಿಳುವಳಿಕೆಯಾಗಿ ಅದು ದೃಢ ನಂಬಿಕೆಯಾಗಿ ಮಾರ್ಪಡುವ ತನಕ ಮನುಷ್ಯನಿಗೆ ಅಲ್ಲಾಹನ ಅನುಸರಣೆ ಮಾಡಲು ಸಾಧ್ಯವಿಲ್ಲವೆಂಬುದನ್ನು ನಾವೀಗ ವಿವರಿಸ ಬಯಸುತ್ತೇವೆ.

ಪ್ರಥಮವಾಗಿ ಮನುಷ್ಯನಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ಪೂರ್ಣ ವಿಶ್ವಾಸವಿರಬೇಕು. ಏಕೆಂದರೆ ದೇವನಿದ್ದಾನೆ ಎಂಬ ದೃಢ ವಿಶ್ವಾಸವೇ ಅವನಿಗೆ ಇರದಿದ್ದರೆ ಅವನು ದೇವನ ಅನುಸರಣೆ ಮಾಡುವುದಾದರೂ ಹೇಗೆ?

ಇದರ ಜೊತೆಗೆ ಅಲ್ಲಾಹನ ಗುಣಗಳ ಜ್ಞಾನವು ಅತ್ಯಗತ್ಯವಾಗಿದೆ. ಅಲ್ಲಾಹನು ಏಕನು ಮತ್ತು ದೇವತ್ವದಲ್ಲಿ ಅವನಿಗೆ ಸಹಭಾಗಿಗಳಾರೂ ಇಲ್ಲವೆಂಬುದನ್ನು ತಿಳಿಯದ ವ್ಯಕ್ತಿ ಇತರರ ಮುಂದೆ ಶಿರಬಾಗದೆ ಮತ್ತು ಕೈಚಾಚದೆ ಇರುವುದಾದರೂ ಹೇಗೆ?

ಅಲ್ಲಾಹನು ಎಲ್ಲವನ್ನೂ ನೋಡುವವನೂ ಆಲಿಸುವವನೂ ಆಗಿರುವನು ಹಾಗೂ ಅವನಿಗೆ ಎಲ್ಲ ವಿಷಯಗಳ ತಿಳುವಳಿಕೆ ಇದೆ ಎಂಬ ದೃಢ ವಿಶ್ವಾಸವಿಲ್ಲದ ವ್ಯಕ್ತಿ ಅಲ್ಲಾಹನ ಅವಿಧೇಯತೆಯಿಂದ ತನ್ನನ್ನು ಹೇಗೆ ತಾನೇ ರಕ್ಷಿಸಿಕೊಳ್ಳಬಲ್ಲ? ಈ ವಿಷಯದ ಬಗ್ಗೆ ಚಿಂತನೆ ನಡೆಸಿದಾಗ ವಿಚಾರ, ಚಾರಿತ್ರ್ಯ ಮತ್ತು ಕರ್ಮಗಳಲ್ಲಿ ಇಸ್ಲಾಮಿನ ಮಾರ್ಗದಲ್ಲಿ ನಡೆಯಬೇಕಾದರೆ, ಮನುಷ್ಯನಲ್ಲಿ ಯಾವ ಗುಣಗಳು ಅನಿವಾರ್ಯವಾಗಿ ಇರಬೇಕೋ ಅವು ಅವನಲ್ಲಿ ಅಲ್ಲಾಹನ ಗುಣಗಳ ಬಗ್ಗೆ ಸರಿಯಾದ ಜ್ಞಾನ ಉಂಟಾಗುವ ತನಕ ಉಂಟಾಗ ಲಾರದು ಎಂಬುದು ತಿಳಿದು ಬರುತ್ತದೆ. ಈ ಜ್ಞಾನವು ಕೇವಲ ತಿಳುವಳಿಕೆಯ ಮಟ್ಟಕ್ಕೆ ಸೀಮಿತವಾಗಿರಬಾರದು. ಬದಲಾಗಿ ಅದು ದೃಢ ವಿಶ್ವಾಸದ ರೂಪದಲ್ಲಿ ಮನಸ್ಸಿನಲ್ಲಿ ಬೇರೂರಬೇಕು. ತನ್ಮೂಲಕ ಮಾತ್ರ ಮನುಷ್ಯನ ಮನಸ್ಸು ಅದಕ್ಕೆ ವ್ಯತಿರಿಕ್ತವಾದ ವಿಚಾರಗಳಿಂದ ಮತ್ತು ಅವನ ಜೀವನ ಆ ಜ್ಞಾನದ ವಿರುದ್ಧ ವರ್ತಿಸುವುದರಿಂದ ಸುರಕ್ಷಿತವಿದ್ದೀತು.

ಆ ಬಳಿಕ ಮನುಷ್ಯನಿಗೆ ಅಲ್ಲಾಹನ ಇಚ್ಛೆಯ ಪ್ರಕಾರ ಜೀವನ ಸಾಗಿಸುವ ಸರಿಯಾದ ಕ್ರಮ ಯಾವುದು ಎಂಬುದು ತಿಳಿದಿರಬೇಕು. ಯಾವುದನ್ನು ಅಲ್ಲಾಹನು ಇಷ್ಟಪಡುತ್ತಾನೆ ಎಂಬುದನ್ನು ತಿಳಿದು ಅದನ್ನು ಜೀವನದಲ್ಲಿ ಅಳವಡಿಸುವಂತಾಗಬೇಕು ಮತ್ತು ಯಾವುದನ್ನು ಅಲ್ಲಾಹನು ಮೆಚ್ಚುವುದಿಲ್ಲ ಎಂಬುದನ್ನು ತಿಳಿದು ಅದರಿಂದ ದೂರವಿರಬೇಕು. ಇದಕ್ಕೆ ಮನುಷ್ಯನಲ್ಲಿ ದೈವಿಕ ಕಾನೂನು ಮತ್ತು ದೈವಿಕ ಜೀವನ ವ್ಯವಸ್ಥೆಯ ಪೂರ್ಣ ಅರಿವು ಇರಬೇಕು. ಮಾತ್ರವಲ್ಲ ಅದು ದೈವಿಕ ಕಾನೂನು ಮತ್ತು ದೈವಿಕ ಜೀವನ ವ್ಯವಸ್ಥೆ ಆಗಿದೆ ಎಂಬ ಪೂರ್ಣ ವಿಶ್ವಾಸವಿದ್ದು ಅದರ ಅನುಸರಣೆಯಿಂದಲೇ ಅಲ್ಲಾಹನ ಸಂಪ್ರೀತಿಯನ್ನು ಗಳಿಸಬಹುದೆಂಬ ನಂಬಿಕೆ ಇರಬೇಕು. ಏಕೆಂದರೆ ಅವನಿಗೆ ಜ್ಞಾನವೇ ಇಲ್ಲದಿದ್ದರೆ ಅವನು ಅನುಸರಿಸುವುದಾದರೂ ಯಾವುದನ್ನು? ಒಂದು ವೇಳೆ ಜ್ಞಾನವಿದ್ದರೂ ಪೂರ್ಣ ವಿಶ್ವಾಸವಿಲ್ಲದಿದ್ದರೆ ಅಥವಾ ಈ ಕಾನೂನು ಮತ್ತು ಈ ಜೀವನ ವ್ಯವಸ್ಥೆಯ ಹೊರತು ಇತರ ಕಾನೂನು ಮತ್ತು ಜೀವನ ವ್ಯವಸ್ಥೆಯೂ ಸರಿಯಾಗಿರಬಹುದು ಎಂಬ ಭಾವನೆಯು ಮನಸ್ಸಿನಲ್ಲಿದ್ದರೆ ಅದನ್ನು ಅವನು ಸರಿಯಾಗಿ ಪಾಲಿಸುವುದಾದರೂ ಹೇಗೆ?

ಅಲ್ಲಾಹನ ಇಚ್ಛೆಗೆ ವಿರುದ್ಧ ನಡೆಯುವುದರ ಮತ್ತು ಅವನ ಮೆಚ್ಚುಗೆಯ ಜೀವನ ಕ್ರಮದ ಅನುಸರಣೆ ಮಾಡದಿರುವುದರ ಪರಿಣಾಮವೇನಾದೀತು ಹಾಗೂ ಅದರ ಅನುಸರಣೆಯ ಪುರಸ್ಕಾರವೇನು ಎಂಬುದು ಕೂಡಾ ಮನುಷ್ಯನಿಗೆ ತಿಳಿದಿರ ಬೇಕು. ಈ ಉದ್ದೇಶಕ್ಕೆ ಮನುಷ್ಯನಲ್ಲಿ ಪರಲೋಕ ಜೀವನದ, ದೈವಿಕ ನ್ಯಾಯಾಲಯದಲ್ಲಿ ಹಾಜರಾಗುವ, ಅವಿಧೇಯತೆಯ ಶಿಕ್ಷೆ ಪಡೆಯುವ ಹಾಗೂ ವಿಧೇಯತೆಗೆ ಪುರಸ್ಕಾರ ಪಡೆಯುವ ಬಗ್ಗೆ ಪೂರ್ಣ ಜ್ಞಾನ ಮತ್ತು ವಿಶ್ವಾಸವಿರಬೇಕಾದುದು ಅಗತ್ಯ. ಪರಲೋಕ ಜೀವನದ ಬಗ್ಗೆ ತಿಳುವಳಿಕೆ ಇಲ್ಲದವನು ಅಲ್ಲಾಹನ ಅನುಸರಣೆಯನ್ನೂ ವಿಧೇಯತೆಯನ್ನೂ ನಿರರ್ಥಕ ಎಂದು ಭಾವಿಸುತ್ತಾನೆ. ಏಕೆಂದರೆ ಅವನ ಅಭಿಪ್ರಾಯದಂತೆ ಅನುಸರಣೆ ಮಾಡಿದವನೂ ಅವಿಧೇಯನಾದವನೂ ಕೊನೆಗೆ ಒಂದೇ ಗುರಿ ಸೇರುವರು. ಏಕೆಂದರೆ ಇಬ್ಬರೂ ಸತ್ತು ಮಣ್ಣಾಗಲಿದ್ದಾರೆ. ಅಂತಹ ಮನುಷ್ಯನಿಂದ, ಅವನು ಅನುಸರಣೆಯ ನಿರ್ಬಂಧಗಳನ್ನು ಮತ್ತು ಸಂಕಷ್ಟಗಳನ್ನು ಸಹಿಸಲು ಸಿದ್ಧನಾಗುವನು ಎಂದು ನಿರೀಕ್ಷಿಸುವುದು ಹೇಗೆ? ಈ ಲೋಕದಲ್ಲಿ ಯಾವುದೇ ನಷ್ಟದ ಭೀತಿ ಇಲ್ಲದಂತಹ ಪಾಪಗಳಿಂದ ಅವನು ದೂರ ಉಳಿಯುವುದಾದರೂ ಹೇಗೆ? ಇಂತಹ ವಿಶ್ವಾಸದೊಂದಿಗೆ ಮನುಷ್ಯ ಅಲ್ಲಾಹನ ಕಾನೂನನ್ನು ಅನುಸರಿಸುವುದು ಸಾಧ್ಯವಿಲ್ಲ. ಅಂತೆಯೇ ಪರಲೋಕ ಜೀವನ ಮತ್ತು ದೈವಿಕ ನ್ಯಾಯಾಲಯದಲ್ಲಿ ಹಾಜರಾಗುವ ಕುರಿತು ಅರಿವು ಇದೆಯಾದರೂ ದೃಢ ವಿಶ್ವಾಸ ಇಲ್ಲದೆ ಹೋದರೆ ಅಂತಹ ವ್ಯಕ್ತಿಯು ಅಲ್ಲಾಹನ ಅನುಸರಣೆಯಲ್ಲಿ ಸ್ಥಿರಚಿತ್ತನಾಗಿರಲಾರ. ಏಕೆಂದರೆ ಸಂಶಯ ಮತ್ತು ಅರೆನಂಬಿಕೆಯೊಂದಿಗೆ ಮನುಷ್ಯನು ಯಾವ ವಿಷಯದ ಮೇಲೂ

ಸ್ಥಿರವಾಗಿರಲು ಸಾಧ್ಯವಿಲ್ಲ. ನೀವೊಂದು ಕೆಲಸವನ್ನು ಮನಸ್ಸಿಟ್ಟು ಮಾಡಬೇಕಾದರೆ ಆ ಕೆಲಸವು ಲಾಭದಾಯಕವೆಂದೂ ಇನ್ನೊಂದು ಕೆಲಸದಿಂದ ದೂರವಿರಬೇಕಾದರೆ ಅದು ಹಾನಿಕರವೆಂದೂ ನಿಮಗೆ ಪೂರ್ಣ ವಿಶ್ವಾಸವಿರಬೇಕಾದುದು ಅಗತ್ಯ. ಇದರಿಂದ ತಿಳಿಯುವುದೇನೆಂದರೆ ಒಂದು ಕ್ರಮವನ್ನು ಅನುಸರಿಸಬೇಕಾದರೆ ಅದರ ಪರಿಣಾಮ ಮತ್ತು ಫಲಿತಾಂಶದ ತಿಳುವಳಿಕೆ ಇರಬೇಕಾದುದು ಅಗತ್ಯ. ಈ ತಿಳುವಳಿಕೆಯು ದೃಢ ನಂಬಿಕೆಯ ಮಟ್ಟಕ್ಕೆ ತಲಪಿದ್ದಾಗಿರಬೇಕು.

## ಸತ್ಯವಿಶ್ವಾಸದ ವಿವರಣೆ

ಮೇಲಿನ ವಿವರಣೆಯಲ್ಲಿ ನಾವು ಯಾವುದನ್ನು ಜ್ಞಾನ ಮತ್ತು ವಿಶ್ವಾಸವೆಂದಿರುವೆವೋ ಅದರ ಹೆಸರೇ ಈಮಾನ್ ಅಥವಾ ಸತ್ಯವಿಶ್ವಾಸವಾಗಿದೆ. ಈಮಾನಿನ ಅರ್ಥ ಅರಿಯುವುದು ಮತ್ತು ಅಂಗೀಕರಿಸುವುದು ಎಂದಾಗಿದೆ. ಒಬ್ಬ ವ್ಯಕ್ತಿಗೆ ಅಲ್ಲಾಹನ ಏಕತೆ, ಅವನ ನೈಜ ಗುಣಗಳು, ಅವನ ಕಾನೂನು ಹಾಗೂ ಅವನ ಶಿಕ್ಷೆ ಮತ್ತು ಪುರಸ್ಕಾರದ ತಿಳುವಳಿಕೆ ಇದ್ದು ಅವನು ಮನಸ್ಸಿನಲ್ಲಿ ಅದರ ಮೇಲೆ ದೃಢ ವಿಶ್ವಾಸವಿರಿಸಿದ್ದರೆ ಅಂತಹ ವ್ಯಕ್ತಿಯನ್ನು ಮೂಮಿನ್ ಅಥವಾ ಸತ್ಯವಿಶ್ವಾಸಿ ಎನ್ನುತ್ತೇವೆ. ಇಂತಹ ಈಮಾನ್ ಅಥವಾ ಸತ್ಯವಿಶ್ವಾಸದ ಪರಿಣಾಮವಾಗಿ ಮನುಷ್ಯನು ಮುಸ್ಲಿಮ್ ಅರ್ಥಾತ್ ಅಲ್ಲಾಹನ ವಿಧೇಯನಾಗಿ ಮಾರ್ಪಡುತ್ತಾನೆ.

ಈಮಾನಿನ ಈ ವಿವರಣೆಯಿಂದ ತಿಳಿದು ಬರುವುದೇನೆಂದರೆ, ಸತ್ಯವಿಶ್ವಾಸದ ಹೊರತು ಯಾವ ವ್ಯಕ್ತಿಯೂ ಮುಸ್ಲಿಮ್ ಆಗಲಾರ. ಇಸ್ಲಾಮ್ ಮತ್ತು ಸತ್ಯವಿಶ್ವಾಸಕ್ಕೆ ಇರುವ ಸಂಬಂಧವು ಮರ ಮತ್ತು ಅದರ ಬೀಜಕ್ಕಿರುವ ಸಂಬಂಧದಂತೆಯೇ ಇದೆ. ಬೀಜದ ಹೊರತು ಮರ ಉಂಟಾಗಲು ಸಾಧ್ಯವೇ ಇಲ್ಲ. ಒಂದು ವೇಳೆ ಬೀಜವನ್ನು ಭೂಮಿಯಲ್ಲಿ ಬಿತ್ತಿದ ಬಳಿಕವೂ ನೆಲ ಕೆಟ್ಟದಾಗಿರುವ ಕಾರಣ ಅಥವಾ ಹವಾಗುಣ ಅನುಕೂಲಕರವಾಗಿಲ್ಲದ ಕಾರಣ ಮರ ಚೆನ್ನಾಗಿ ಬೆಳೆಯದೇ ಇರಬಹುದು. ಇದೇ ರೀತಿ ಒಬ್ಬ ಮನುಷ್ಯನಲ್ಲಿ ಸತ್ಯವಿಶ್ವಾಸ ಇಲ್ಲದೇ ಹೋದರೆ ಅವನು ಮುಸ್ಲಿಮ್ ಆಗಲು ಸಾಧ್ಯವೇ ಇಲ್ಲ. ಆದರೆ ಒಬ್ಬ ಮನುಷ್ಯನ ಹೃದಯದಲ್ಲಿ ಈಮಾನ್ ಇದ್ದೂ, ನಿರ್ಧಾರದ ಕೊರತೆ ಅಥವಾ ಶಿಕ್ಷಣ – ತರಬೇತಿಯ ಕೊರತೆ ಮತ್ತು ಕೆಟ್ಟ ಸಂಗದ ಪ್ರಭಾವದಿಂದಾಗಿ ಅವನು ಪೂರ್ಣ ಮತ್ತು ಪರಿಪಕ್ವ ಮುಸ್ಲಿಮ್ ಆಗದಿರಬಹುದು.

ಈಮಾನ್ ಮತ್ತು ಇಸ್ಲಾಮಿನ ದೃಷ್ಟಿಯಿಂದ ಮನುಷ್ಯರ ನಾಲ್ಕು ವರ್ಗಗಳಿವೆ:

**1. ಸತ್ಯವಿಶ್ವಾಸವುಳ್ಳವರು:** ಇವರ ಸತ್ಯವಿಶ್ವಾಸವು ಅವರನ್ನು ಅಲ್ಲಾಹನ ಆಜ್ಞೆಗೆ ಪೂರ್ಣವಾಗಿ ವಿಧೇಯಗೊಳಿಸುತ್ತದೆ. ಅಲ್ಲಾಹನು ಮೆಚ್ಚದ ವಸ್ತುವಿನಿಂದ ಇವರು ಒಬ್ಬ ವ್ಯಕ್ತಿಯು ಬೆಂಕಿಗೆ ಕೈ ಹಾಕುವುದರಿಂದ ದೂರವಿರುವಂತೆ ದೂರವಿರುತ್ತಾರೆ ಮತ್ತು ಯಾವುದನ್ನು ಅಲ್ಲಾಹನು ಮೆಚ್ಚುತ್ತಾನೋ ಅದಕ್ಕಾಗಿ ಇವರು, ಒಬ್ಬ ವ್ಯಕ್ತಿಯು

ಸಂಪತ್ತು ಗಳಿಸಲು ಯಾವ ರೀತಿಯಿಂದ ದುಡಿಯುತ್ತಾನೋ, ಆ ರೀತಿ ದುಡಿಯುತ್ತಾರೆ. ಇವರೇ ನೈಜ ಮುಸ್ಲಿಮರು.

2. **ದುರ್ಬಲ ವಿಶ್ವಾಸಿಗಳು:** ಇವರಿಗೂ ಈಮಾನ್ ಇದೆ. ಆದರೆ ಅದು ಇವರನ್ನು ಪೂರ್ಣವಾಗಿ ಅಲ್ಲಾಹನ ಆಜ್ಞೆಗಳಿಗೆ ವಿಧೇಯಗೊಳಿಸುವಷ್ಟು ಶಕ್ತಿಶಾಲಿ ಯಾಗಿಲ್ಲ. ಇವರು ಸ್ಥಾನದ ದೃಷ್ಟಿಯಿಂದ ಕೆಳಗಿನವರೆನಿಸಿದರೂ ಮುಸ್ಲಿಮರೇ ಆಗಿರುವರು. ಇವರು ಅಲ್ಲಾಹನ ಆಜ್ಞೋಲ್ಲಂಘನೆ ಮಾಡಿದರೆ ತಮ್ಮ ಅಪರಾಧಕ್ಕೆ ತಕ್ಕುದಾದ ಶಿಕ್ಷೆಗೆ ಅರ್ಹರಾಗುತ್ತಾರೆ. ಆದರೆ ಇವರ ನೆಲೆಯು ಅಪರಾಧಿಗಳದ್ದೇ ಹೊರತು ವಿದ್ರೋಹಿಗಳದ್ದಲ್ಲ. ಏಕೆಂದರೆ ಇವರು ನೈಜ ಅಧಿಪತಿಯನ್ನು ಅಧಿಪತಿ ಯೆಂದು ಒಪ್ಪುತ್ತಾರೆ ಮತ್ತು ಅವನ ಕಾನೂನನ್ನು ಕಾನೂನೆಂದು ಅಂಗೀಕರಿಸುತ್ತಾರೆ.

3. **ಈಮಾನ್ ಇಲ್ಲದವರು:** ಆದರೆ ಇವರು ಬಾಹ್ಯ ನೋಟಕ್ಕೆ ದೈವಿಕ ಕಾನೂನಿಗೆ ಅನುಗುಣವಾಗಿ ತೋರುವಂತಹ ಕೆಲವು ಕಾರ್ಯಗಳನ್ನು ಮಾಡುತ್ತಾರೆ. ಇವರು ನಿಜವಾಗಿ ವಿದ್ರೋಹಿಗಳು. ಇವರ ಬಾಹ್ಯ ಸತ್ಕರ್ಮಗಳು ವಾಸ್ತವದಲ್ಲಿ ಅಲ್ಲಾಹನ ವಿಧೇಯತೆ ಮತ್ತು ಅನುಸರಣೆಯಲ್ಲ. ಆದ್ದರಿಂದ ಅದಕ್ಕೆ ಏನೇನೂ ಬೆಲೆಯಿಲ್ಲ. ಇವರು ನೈಜ ಅಧಿಪತಿಯನ್ನು ಅಧಿಪತಿಯೆಂದು ಮನ್ನಿಸದವರು ಮತ್ತು ಅವನ ಕಾನೂನನ್ನು ಕಾನೂನೆಂದು ಅಂಗೀಕರಿಸದವರು. ಇಂತಹ ವ್ಯಕ್ತಿಯು ದೈವಿಕ ಕಾನೂನಿಗೆ ವಿರುದ್ಧವಲ್ಲದ ಕೆಲಸ ಮಾಡುತ್ತಿದ್ದಾನೆಂದಾದರೆ ಅದರಿಂದಾಗಿ ಅವನನ್ನು ನೈಜ ಅಧಿಪತಿಯ ನಿಷ್ಠಾವಂತನೆಂದೂ ಅವನ ಕಾನೂನಿನ ಪಾಲಕನೆಂದೂ ಪರಿಗಣಿಸ ಲಾಗದು. ಹೇಗಿದ್ದರೂ ಅವನು ವಿದ್ರೋಹಿ ಎಂದೇ ಪರಿಗಣಿಸಲ್ಪಡುವನು.

4. **ವಿದ್ರೋಹಿಗಳು:** ಇವರು ಸತ್ಯವಿಶ್ವಾಸ ಇಲ್ಲದವರು ಮಾತ್ರವಲ್ಲ, ಕರ್ಮದ ದೃಷ್ಟಿಯಿಂದಲೂ ದುಶ್ಶೀಲ ಮತ್ತು ದುಷ್ಟರಾಗಿರುವರು. ಇವರು ಎಲ್ಲರಿಗಿಂತಲೂ ನಿಕೃಷ್ಟ ತರದವರು. ಏಕೆಂದರೆ ಇವರು ವಿದ್ರೋಹಿಗಳೂ ದುರಾಚಾರಿಗಳೂ ಆಗಿರುವರು.

ಮನುಷ್ಯ ವರ್ಗದ ಈ ವಿಂಗಡನೆಯಿಂದ ಸ್ಪಷ್ಟವಾಗುವುದೇನೆಂದರೆ ಮನುಷ್ಯನ ನೈಜ ಯಶಸ್ಸು ವಾಸ್ತವದಲ್ಲಿ ಸತ್ಯವಿಶ್ವಾಸವನ್ನು ಅವಲಂಬಿಸಿದೆ. ಇಸ್ಲಾಮ್ ಪರಿ ಪೂರ್ಣವಾಗಿರಲಿ ಅಥವಾ ಅಪೂರ್ಣವಾಗಿರಲಿ ಅದು ಉಂಟಾಗುವುದು ಕೇವಲ ಈಮಾನಿನ ಬೀಜದಿಂದ. ಎಲ್ಲಿ ಸತ್ಯವಿಶ್ವಾಸ ಇರುವುದಿಲ್ಲವೋ ಅಲ್ಲಿ ಸತ್ಯನಿಷೇಧ ವಿರುವುದು. ಇನ್ನೊಂದರ್ಥದಲ್ಲಿ ಅದುವೇ ಅಲ್ಲಾಹನ ವಿದ್ರೋಹವಾಗಿದೆ. ಆದರೆ ಈ ವಿದ್ರೋಹದ ಮಟ್ಟದಲ್ಲಿ ಹೆಚ್ಚು ಕಡಿಮೆ ಇರಬಹುದು.

## ಜ್ಞಾನದ ಮೂಲ

ಅಲ್ಲಾಹನ ಆಜ್ಞಾಪಾಲನೆಗೆ ಈಮಾನ್ ಅತ್ಯಗತ್ಯವೆಂಬುದು ನಿಮಗೆ ಈಗಾಗಲೇ

ತಿಳಿಯಿತು. ಅಲ್ಲಾಹನ ಗುಣಗಳು, ಅವನ ಮೆಚ್ಚುಗೆಯ ಕಾನೂನು ಹಾಗೂ ಪರಲೋಕ ಜೀವನದ ಬಗ್ಗೆ ಸರಿಯಾದ ಮತ್ತು ವಿಶ್ವಾಸಾರ್ಹ ಜ್ಞಾನ ನಮಗೆ ಲಭಿಸುವುದಾದರೂ ಎಲ್ಲಿಂದ ಎಂಬುದೇ ಈಗಿರುವ ಪ್ರಶ್ನೆ.

ಈ ವಿಶ್ವ ಸಾಮ್ರಾಜ್ಯದಲ್ಲಿ ಎಲ್ಲೆಡೆಯೂ ಅಲ್ಲಾಹನ ಮಹಿಮೆಯ ಕುರುಹುಗಳು ವ್ಯಾಪಿಸಿವೆ ಎಂಬುದನ್ನು ನಾವು ಈಗಾಗಲೇ ವಿವರಿಸಿದ್ದೇವೆ. ಆ ಎಲ್ಲ ಕುರುಹುಗಳು ಈ ಸಮಸ್ತ ವಿಶ್ವವೆಂಬ ಕಾರ್ಖಾನೆಯನ್ನು ಒಬ್ಬನೇ ನಿರ್ಮಿಸಿದ್ದು ಅವನೇ ಅದನ್ನು ನಡೆಸುತ್ತಿದ್ದಾನೆ ಎಂಬುದಕ್ಕೆ ಸಾಕ್ಷ್ಯ ವಹಿಸುತ್ತದೆ. ಈ ಕುರುಹುಗಳಲ್ಲಿ ಅಲ್ಲಾಹನ ಗುಣಗಳ ಸಾಕ್ಷಾತ್ಕಾರವನ್ನು ಕಾಣಬಹುದಾಗಿದೆ. ಅವನ ಜಾಣ್ಮೆ, ಜ್ಞಾನ, ಸಾಮರ್ಥ್ಯ, ಕರುಣೆ, ಪರಿಪಾಲಕತ್ವ, ಕ್ರೋಧ ಒಟ್ಟಿನಲ್ಲಿ ವಿಶ್ವದ ನಿರ್ಮಾಣ ಮತ್ತು ಸಂಚಾಲನೆಯ ಕಾರ್ಯದಲ್ಲಿ ವ್ಯಕ್ತವಾಗದಂತಹ ಯಾವ ಗುಣವೂ ಇಲ್ಲ. ಆದರೆ ಮನುಷ್ಯನ ಬುದ್ಧಿ ಮತ್ತವನ ಸಾಮರ್ಥ್ಯವು ಈ ವಸ್ತುಗಳನ್ನು ನೋಡುವಲ್ಲಿ ಮತ್ತು ಅವುಗಳನ್ನು ತಿಳಿಯುವಲ್ಲಿ ಹೆಚ್ಚಿನ ವೇಳೆ ತಪ್ಪಿಬಿದ್ದಿದೆ. ಈ ಎಲ್ಲ ಕುರುಹುಗಳು ಕಣ್ಣ ಮುಂದಿರುತ್ತಲೇ ದೇವರು ಇಬ್ಬರಿದ್ದಾರೆ ಎನ್ನುವವರಿದ್ದಾರೆ. ಮೂವರಿರುವರು ಎನ್ನುವವರಿದ್ದಾರೆ. ಕೆಲವರಂತೂ ಅಸಂಖ್ಯಾತ ದೇವರುಗಳನ್ನು ಕಲ್ಪಿಸಿಕೊಂಡಿದ್ದಾರೆ. ಇನ್ನು ಕೆಲವರು ದೇವತ್ವವನ್ನೇ ವಿಂಗಡಿಸಿಬಿಟ್ಟಿದ್ದಾರೆ. ಮಳೆಗೊಬ್ಬ ದೇವರು, ಗಾಳಿಗೊಬ್ಬ ದೇವರು, ಅಗ್ನಿಗೊಬ್ಬ ದೇವರು. ಒಟ್ಟಿನಲ್ಲಿ ಒಂದೊಂದು ಶಕ್ತಿಗೆ ಭಿನ್ನಭಿನ್ನ ದೇವರನ್ನು ಕಲ್ಪಿಸಿಕೊಂಡು ಒಬ್ಬ ಮಹಾದೇವ ಈ ಎಲ್ಲ ದೇವರುಗಳ ಸರದಾರನೆಂದು ಬಗೆದರು. ಈ ರೀತಿ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳನ್ನು ತಿಳಿಯುವಲ್ಲಿ ಮನುಷ್ಯರ ಬುದ್ಧಿಯು ಬಹಳ ಮೋಸಹೋಗಿದೆ. ಅವುಗಳ ವಿವರಣೆಗೆ ಇಲ್ಲಿ ಅವಕಾಶವಿಲ್ಲ.

ಪರಲೋಕ ಜೀವನದ ಬಗೆಗೂ ಜನರು ಅನೇಕ ತಪ್ಪು ಕಲ್ಪನೆಗಳನ್ನು ಕಟ್ಟಿಕೊಂಡಿದ್ದಾರೆ. ಕೆಲವರು ಮನುಷ್ಯನು ಸತ್ತು ಮಣ್ಣಾಗಿ ಹೋಗುತ್ತಾನೆ. ಆ ಬಳಿಕ ಯಾವ ಜೀವನವೂ ಇಲ್ಲ ಎಂದು ಬಗೆದರೆ, ಇನ್ನು ಕೆಲವರು ಮನುಷ್ಯನು ಮತ್ತೆ ಮತ್ತೆ ಇದೇ ಲೋಕದಲ್ಲಿ ಜನ್ಮ ಪಡೆಯುತ್ತಾನೆ ಮತ್ತು ತನ್ನ ಕರ್ಮಗಳಿಗನುಸಾರ ಶಿಕ್ಷೆ ಅಥವಾ ಪುರಸ್ಕಾರ ಪಡೆಯುತ್ತಾನೆ ಎಂದು ಬಗೆಯುತ್ತಾರೆ.

ಅಲ್ಲಾಹನ ಇಚ್ಛೆಗೆ ಅನುಸಾರ ಜೀವನ ಸಾಗಿಸಲು ಯಾವ ಕಾನೂನಿನ ಪಾಲನೆ ಅಗತ್ಯವೋ ಅದನ್ನು ಮನುಷ್ಯ ಬುದ್ಧಿಯಿಂದ ನಿರ್ಮಿಸುವುದು ಇನ್ನಷ್ಟು ಕಷ್ಟದ ಕೆಲಸವಾಗಿದೆ.

ಒಂದು ವೇಳೆ ಮನುಷ್ಯನ ಬುದ್ಧಿಯು ಬಹಳ ಪರಿಪಕ್ವವಾಗಿದ್ದು ಅವನು ಅತ್ಯುನ್ನತ ಮಟ್ಟದ ಜ್ಞಾನವನ್ನು ಹೊಂದಿದ್ದರೆ ಅನೇಕ ವರ್ಷಗಳ ಅನುಭವ ಮತ್ತು ಚಿಂತನೆಯ ಬಳಿಕ ಈ ವಿಷಯಗಳ ಬಗ್ಗೆ ಒಂದು ಅಭಿಪ್ರಾಯವನ್ನು ತಾಳಬಹುದಾದರೂ

ತಾನು ಪೂರ್ಣ ಸತ್ಯವನ್ನು ಮನಗಂಡಿದ್ದೇನೆ ಎಂಬ ದೃಢ ವಿಶ್ವಾಸ ಅವನಿಗಿರಲಾರದು. ಮನುಷ್ಯನ ಬುದ್ಧಿ ಮತ್ತು ಜ್ಞಾನದ ಪರೀಕ್ಷೆಯಂತೂ ಪರಿಪೂರ್ಣ ರೂಪದಲ್ಲಿ ಆಗಬೇಕಾದರೆ ಅವನನ್ನು ಯಾವುದೇ ಮಾರ್ಗದರ್ಶನವಿಲ್ಲದೆ ಬಿಟ್ಟುಬಿಡುವುದೇ ಸರಿ. ಹಾಗಾದರೆ ಯಾರು ತಮ್ಮ ಪ್ರಯತ್ನ ಮತ್ತು ಸಾಮರ್ಥ್ಯದಿಂದ ಸತ್ಯವನ್ನು ಕಂಡುಕೊಳ್ಳುತ್ತಾರೋ ಅವರೇ ವಿಜಯಿಗಳಾಗುತ್ತಿದ್ದರು ಮತ್ತು ಯಾರು ಆ ಸತ್ಯ ವನ್ನು ಕಂಡುಕೊಳ್ಳುತ್ತಿರಲಿಲ್ಲವೋ ಅವರು ಪರಾಜಿತರಾಗುತ್ತಿದ್ದರು. ಆದರೆ ಅಲ್ಲಾಹನು ತನ್ನ ದಾಸರನ್ನು ಇಷ್ಟೊಂದು ಕಠಿಣ ಪರೀಕ್ಷೆಗೆ ಒಳಪಡಿಸಲಿಲ್ಲ. ಅವನು ತನ್ನ ಕರುಣೆಯಿಂದ ಸ್ವಯಂ ಮನುಷ್ಯರೊಳಗಿಂದಲೇ ಕೆಲವರನ್ನು ಆರಿಸಿ ಅವರಿಗೆ ತನ್ನ ಗುಣಗಳ ಸರಿಯಾದ ಜ್ಞಾನವನ್ನು ನೀಡಿದನು. ಮನುಷ್ಯನು ಲೋಕದಲ್ಲಿ ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ಜೀವನ ಸಾಗಿಸಬಹುದಾದ ಕ್ರಮವನ್ನು ಅವರಿಗೆ ಕಲಿಸಿಕೊಟ್ಟನು. ಪರಲೋಕ ಜೀವನದ ಬಗ್ಗೆಯೂ ಅವರಿಗೆ ಸರಿಯಾದ ಅರಿವು ನೀಡಿದನು. ತರುವಾಯ ಅದನ್ನು ಇತರ ಮನುಷ್ಯರಿಗೆ ತಲುಪಿಸಲು ಆಜ್ಞಾಪಿಸಿದನು. ಇವರೇ ಅಲ್ಲಾಹನ ಸಂದೇಶವಾಹಕರು ಅಥವಾ ಪ್ರವಾದಿಗಳು. ಯಾವ ಮಾಧ್ಯಮದ ಮೂಲಕ ಅಲ್ಲಾಹನು ಅವರಿಗೆ ಈ ಜ್ಞಾನವನ್ನು ನೀಡಿದನೋ ಅದರ ಹೆಸರೇ 'ವಹ್ಯ್' ಅಥವಾ ದಿವ್ಯವಾಣಿ. ಯಾವ ಗ್ರಂಥದಲ್ಲಿ ಅವರಿಗೆ ಈ ಜ್ಞಾನ ನೀಡಲಾಯಿತೋ ಅದನ್ನು ಅಲ್ಲಾಹನ ಗ್ರಂಥ ಅಥವಾ ಅಲ್ಲಾಹನ ವಾಣಿ ಎನ್ನುತ್ತೇವೆ. ಈಗ ಮನುಷ್ಯನ ಬುದ್ಧಿ ಮತ್ತು ಸಾಮರ್ಥ್ಯದ ಪರೀಕ್ಷೆ ಇರುವುದು ಈ ಪ್ರವಾದಿಗಳ ಪವಿತ್ರ ಜೀವನವನ್ನು ಕಂಡು ಮತ್ತು ಅವರ ಉನ್ನತ ಜ್ಞಾನದ ಬಗ್ಗೆ ಚಿಂತನೆ ನಡೆಸಿ ಅವರ ಮೇಲೆ ವಿಶ್ವಾಸ ತರುತ್ತಾನೋ ಇಲ್ಲವೋ ಎಂಬುದರಲ್ಲಿ. ಅವನು ಸತ್ಯಪ್ರಿಯನೂ ಸತ್ಯಸಂಧನೂ ಆಗಿದ್ದರೆ ಸತ್ಯವಾದ ಮಾತನ್ನು ಮತ್ತು ಆ ಉನ್ನತ ಮಟ್ಟದ ಮನುಷ್ಯನ ಬೋಧನೆಗಳನ್ನು ಅಂಗೀಕರಿಸಿ ಈ ಪರೀಕ್ಷೆಯಲ್ಲಿ ವಿಜಯಿಯಾಗುವನು. ಒಂದು ವೇಳೆ ಅವನು ಅವರನ್ನು ಅಂಗೀಕರಿಸದಿದ್ದರೆ ಸತ್ಯವನ್ನು ತಿಳಿಯುವ ಮತ್ತು ಅದನ್ನು ಒಪ್ಪಿಕೊಳ್ಳುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದಾನೆ ಎಂಬುದೇ ಇದರ ಅರ್ಥ. ಈ ನಿರಾಕರಣೆಯು ಅವನನ್ನು ಪರೀಕ್ಷೆಯಲ್ಲಿ ವಿಫಲಗೊಳಿಸುತ್ತದೆ. ಅಲ್ಲಾಹನನ್ನಾಗಲೀ ಅವನ ಕಾನೂನನ್ನಾಗಲೀ ಪರಲೋಕ ಜೀವನವನ್ನಾಗಲೀ ಅವನೆಂದೂ ಸರಿಯಾಗಿ ತಿಳಿದುಕೊಳ್ಳುವುದು ಸಾಧ್ಯವೇ ಇಲ್ಲ.

## ಅದೃಶ್ಯದ ಮೇಲೆ ವಿಶ್ವಾಸ

ನಿಮಗೆ ಯಾವುದಾದರೂ ವಿಷಯದ ಬಗ್ಗೆ ತಿಳುವಳಿಕೆ ಇಲ್ಲದೆ ಹೋದರೆ ನೀವು ಜ್ಞಾನ ಹೊಂದಿದವರನ್ನು ಹುಡುಕುತ್ತೀರಿ ಮತ್ತು ಅವರ ಆದೇಶದಂತೆ ವರ್ತಿಸುತ್ತೀರಿ. ನೀವು ರೋಗಿಯಾದರೆ ನಿಮ್ಮ ಚಿಕಿತ್ಸೆ ನೀವೇ ಮಾಡಿಕೊಳ್ಳುವುದಿಲ್ಲ,

ಬದಲಾಗಿ ಓರ್ವ ವೈದ್ಯರ ಬಳಿ ಹೋಗುತ್ತೀರಿ. ವೈದ್ಯರು ವೈದ್ಯಕೀಯ ಶಾಸ್ತ್ರದಲ್ಲಿ ಪದವೀಧರರಾಗಿದ್ದು, ಅನುಭವಿಯೂ ಆಗಿದ್ದಾರೆ ಮತ್ತು ಅನೇಕ ರೋಗಿಗಳು ಅವರಿಂದ ಗುಣ ಹೊಂದಿರುವರು ಎಂಬುದು ನಿಮ್ಮ ಚಿಕಿತ್ಸೆಗೆ ಅವರು ಸಮರ್ಥರು ಎಂದು ವಿಶ್ವಾಸವಿರಿಸಲು ಪರ್ಯಾಪ್ತವಾಗಿರುತ್ತವೆ. ಇದೇ ವಿಶ್ವಾಸದ ಕಾರಣದಿಂದಾಗಿ ಅವರು ಯಾವ ಮದ್ದನ್ನು ಯಾವ ರೀತಿ ಉಪಯೋಗಿಸಬೇಕೆಂದು ಆದೇಶಿಸುತ್ತಾರೋ ಅಂತೆಯೇ ನೀವು ಉಪಯೋಗಿಸುತ್ತೀರಿ ಮತ್ತು ಅವರು ಯಾವ ಆಹಾರವನ್ನು ತೊರೆಯಬೇಕು ಎಂದು ಹೇಳುತ್ತಾರೋ ಅದನ್ನು ತೊರೆಯುತ್ತೀರಿ. ಇದೇ ರೀತಿ ಕಾನೂನಿನ ವಿಷಯದಲ್ಲಿ ನೀವು ವಕೀಲರ ಮೇಲೆ ವಿಶ್ವಾಸವಿಡುತ್ತೀರಿ ಮತ್ತು ಅವರನ್ನು ಅನುಸರಿಸುತ್ತೀರಿ. ಶಿಕ್ಷಣದ ವಿಷಯದಲ್ಲಿ ಅಧ್ಯಾಪಕರ ಮೇಲೆ ವಿಶ್ವಾಸವಿಡುತ್ತೀರಿ. ಅವರು ನಿಮಗೆ ಕಲಿಸಿದ್ದೆಲ್ಲವನ್ನೂ ಅಂಗೀಕರಿಸುತ್ತೀರಿ. ನಿಮಗೆ ಒಂದು ಕಡೆ ಹೋಗಲಿಕ್ಕಿದ್ದು ದಾರಿ ಗೊತ್ತಿಲ್ಲದಿದ್ದರೆ ತಿಳಿದವರ ಮೇಲೆ ವಿಶ್ವಾಸವಿಟ್ಟು ಅವರು ತೋರಿಸಿದ ದಾರಿಯಲ್ಲಿ ನಡೆಯುತ್ತೀರಿ. ಒಟ್ಟಿನಲ್ಲಿ ಜೀವನದ ಪ್ರತಿಯೊಂದು ವಿಷಯದಲ್ಲೂ ನಿಮಗೆ ತಿಳುವಳಿಕೆ ಮತ್ತು ಜ್ಞಾನ ಗಳಿಸಲಿಕ್ಕಾಗಿ ಆ ಬಗ್ಗೆ ತಿಳಿದವರ ಮೇಲೆ ವಿಶ್ವಾಸವಿರಿಸಬೇಕಾಗುತ್ತದೆ. ಅವರನ್ನು ಅನುಸರಿಸಲು ನೀವು ನಿರ್ಬಂಧಿತ ರಾಗುತ್ತೀರಿ. ಇದನ್ನೇ ಅದೃಶ್ಯದ ಮೇಲೆ ವಿಶ್ವಾಸವೆನ್ನುತ್ತೇವೆ.

ಅದೃಶ್ಯದ ಮೇಲೆ ವಿಶ್ವಾಸವಿರಿಸುವುದೆಂದರೆ ಯಾವುದು ನಿಮಗೆ ಗೊತ್ತಿಲ್ಲವೋ ಅದನ್ನು ತಿಳಿದವನಿಂದ ತಿಳಿಯುವುದು ಮತ್ತು ಅವರ ಮೇಲೆ ವಿಶ್ವಾಸವಿರಿಸುವುದು. ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳ ಬಗ್ಗೆ ನಿಮಗೆ ತಿಳಿದಿಲ್ಲ. ದೇವಚರರು ಅವನ ಆಜ್ಞೆಯಂತೆ ಸಂಪೂರ್ಣ ವಿಶ್ವದಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ನಿಮ್ಮನ್ನು ಅವರು ಎಲ್ಲ ಕಡೆಗಳಿಂದಲೂ ಆವರಿಸಿಕೊಂಡಿದ್ದಾರೆ ಎಂಬುದೂ ನಿಮಗೆ ತಿಳಿದಿಲ್ಲ. ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ಜೀವನ ಸಾಗಿಸುವ ವಿಧಾನ ಯಾವುದೆಂಬುದೂ ನಿಮಗೆ ತಿಳಿದಿಲ್ಲ. ಪರಲೋಕ ಜೀವನದ ಸರಿಯಾದ ತಿಳುವಳಿಕೆಯೂ ನಿಮಗಿಲ್ಲ. ಈ ಎಲ್ಲ ವಿಷಯಗಳ ಜ್ಞಾನ ನಿಮಗೆ ಓರ್ವ ವ್ಯಕ್ತಿಯಿಂದ ಸಿಗುತ್ತದೆ. ಅವನ ಸತ್ಯಸಂಧತೆ, ಪ್ರಾಮಾಣಿಕತೆ, ದೇವಭಕ್ತಿ, ಅತ್ಯಂತ ಪರಿಶುದ್ಧ ಜೀವನ ಮತ್ತು ಅತ್ಯಂತ ಯುಕ್ತಿಪೂರ್ಣವಾದ ಮಾತುಗಳಿಂದ ಅವರು ಹೇಳುವುದೆಲ್ಲವೂ ಸತ್ಯವೆಂಬುದನ್ನು ನೀವು ಅರಿತುಕೊಳ್ಳುತ್ತೀರಿ. ಅವರ ಎಲ್ಲ ಮಾತುಗಳೂ ವಿಶ್ವಾಸಾರ್ಹವೆಂದು ನಿಮಗೆ ಮನವರಿಕೆಯಾಗುತ್ತದೆ. ಇದುವೇ ಅದೃಶ್ಯದ ಮೇಲೆ ವಿಶ್ವಾಸ. ಅಲ್ಲಾಹನ ಅನುಸರಣೆ ಮತ್ತು ಅವನ ಇಚ್ಛೆಯಂತೆ ಜೀವನ ಸಾಗಿಸುವುದಕ್ಕೆ ಅದೃಶ್ಯದ ಮೇಲೆ ವಿಶ್ವಾಸ ಅಗತ್ಯ. ಏಕೆಂದರೆ ಪ್ರವಾದಿಗಳ ಹೊರತು ಬೇರಾರಿಂದಲೂ ನಿಮಗೆ ಸರಿಯಾದ ಜ್ಞಾನ ಸಿಗಲಾರದು ಮತ್ತು ಸರಿಯಾದ ಜ್ಞಾನದ ಹೊರತು ನೀವು ಇಸ್ಲಾಮಿನ ಪ್ರಕಾರ ಜೀವನ ಸಾಗಿಸುವುದು ಸಾಧ್ಯವಿಲ್ಲ.

# ಪ್ರವಾದಿತ್ವ

ಹಿಂದಿನ ಅಧ್ಯಾಯದಲ್ಲಿ ಮೂರು ವಿಷಯಗಳನ್ನು ತಿಳಿಸಲಾಗಿದೆ:

1. ಅಲ್ಲಾಹನ ಅನುಸರಣೆಗೆ ಅವನ ಅಸ್ತಿತ್ವ ಮತ್ತು ಗುಣಗಳ ಸರಿಯಾದ ಜ್ಞಾನ ಮತ್ತು ಅವನು ಮೆಚ್ಚಿದ ಜೀವನಕ್ರಮ ಹಾಗೂ ಪರಲೋಕದ ಶಿಕ್ಷೆ ಮತ್ತು ಪುರಸ್ಕಾರದ ಕುರಿತು ಸರಿಯಾದ ತಿಳುವಳಿಕೆ ಅತ್ಯಗತ್ಯವಾಗಿದೆ. ಈ ತಿಳುವಳಿಕೆಯ ಮೇಲೆ ನಿಮಗ ದೃಢ ನಂಬಿಕೆ ಅಥವಾ ಈಮಾನ್ ಇರಬೇಕಾದುದು ಅಗತ್ಯ.

2. ಅಲ್ಲಾಹನು ಮನುಷ್ಯನನ್ನು ತನ್ನ ಸ್ವಯಂ ಪ್ರಯತ್ನದಿಂದ ಈ ಜ್ಞಾನ ಗಳಿಸಬೇಕೆಂಬ ಕಠಿಣ ಪರೀಕ್ಷೆಗೆ ಒಳಪಡಿಸಲಿಲ್ಲ. ಬದಲಾಗಿ ಅವನು ಮನುಷ್ಯರ ಪೈಕಿಯೇ ಕೆಲವು ಆಯ್ದ ವ್ಯಕ್ತಿಗಳಿಗೆ ಅರ್ಥಾತ್ ಪ್ರವಾದಿಗಳಿಗೆ ಈ ಜ್ಞಾನವನ್ನು ದಯಪಾಲಿಸಿ ಇತರೆಲ್ಲ ಮನುಷ್ಯರಿಗೆ ಅದನ್ನು ತಲುಪಿಸುವಂತೆ ಆಜ್ಞಾಪಿಸಿದನು.

3. ಸಾಮಾನ್ಯ ಜನರು ನೈಜ ಪ್ರವಾದಿಗಳನ್ನು ಗುರುತಿಸಬೇಕಾದುದು ಅವರ ಮೇಲಿರುವ ಹೊಣೆಗಾರಿಕೆಯಾಗಿದೆ. ಒಬ್ಬ ವ್ಯಕ್ತಿ ವಾಸ್ತವದಲ್ಲಿ ಅಲ್ಲಾಹನ ಸತ್ಯ ಪ್ರವಾದಿಯೆಂದು ಮನವರಿಕೆಯಾದ ಕೂಡಲೇ ಅವರ ಮೇಲೆ ವಿಶ್ವಾಸವಿಡಬೇಕು. ಅವರ ಆಜ್ಞೆಗಳನ್ನು ಪಾಲಿಸಬೇಕು. ಅವರು ನಡೆದ ಜೀವನ ಕ್ರಮದಂತೆ ನಡೆಯಬೇಕು.

ಈಗ ಮೊಟ್ಟ ಮೊದಲು ನಾವು ಪ್ರವಾದಿತ್ವದ ವಾಸ್ತವಿಕತೆ ಏನು ಮತ್ತು ಪ್ರವಾದಿಗಳನ್ನು ಗುರುತಿಸುವ ಬಗೆ ಹೇಗೆ ಎಂಬುದನ್ನು ತಿಳಿಸುವೆವು.

## ಪ್ರವಾದಿತ್ವದ ವಾಸ್ತವಿಕತೆ

ಮನುಷ್ಯನಿಗೆ ಯಾವ್ಯಾವ ವಸ್ತುಗಳ ಅವಶ್ಯಕತೆ ಇದೆಯೋ ಅಲ್ಲಾಹನು ಅವೆಲ್ಲವುಗಳ ವ್ಯವಸ್ಥೆ ಸ್ವಯಂ ಮಾಡಿರುವನೆಂಬುದನ್ನು ನೀವು ನೋಡುತ್ತೀರಿ. ಒಂದು ಮಗು ಹುಟ್ಟುವಾಗ ಅದಕ್ಕೆ ಎಷ್ಟೆಲ್ಲಾ ವಸ್ತುಗಳನ್ನು ಕೊಟ್ಟು ಭೂಮಿಗೆ ಕಳುಹಿಸಲಾಗುತ್ತದೆ ಎಂಬುದನ್ನು ನೋಡಿರಿ. ನೋಡಲು ಕಣ್ಣು, ಕೇಳಲು ಕಿವಿ, ಮೂಸಲು ಮತ್ತು ಉಸಿರಾಡಲು ಮೂಗು, ಅನುಭವಿಸಲು ಇಡೀ ದೇಹದ ಚರ್ಮದಲ್ಲಿ ಸ್ಪರ್ಶಜ್ಞಾನ, ನಡೆದಾಡಲು ಕಾಲು, ಕೆಲಸ ಮಾಡಲು ಕೈ, ಯೋಚಿಸಲು ಮೆದುಳು ಮತ್ತು

ಇಂತಹದೇ ಅಸಂಖ್ಯ ಇತರ ವಸ್ತುಗಳನ್ನು ಅದರ ಎಲ್ಲ ಅವಶ್ಯಕತೆ ಗಳನ್ನು ಪರಿಗಣಿಸಿ ಮೊದಲೇ ಅದರ ಸಣ್ಣ ದೇಹದಲ್ಲಿ ಒಟ್ಟುಗೂಡಿಸಿ ಇಡಲಾಗಿದೆ. ಆ ಬಳಿಕ ಅದು ಭೂಮಿಗೆ ಕಾಲಿಡುತ್ತಲೇ ಅದಕ್ಕೆ ಜೀವನ ಸಾಗಿಸಲು ಬೇಕಾದ ಲೆಕ್ಕವಿಲ್ಲದಷ್ಟು ವಸ್ತುಗಳು ನೀಡಲ್ಪಡುತ್ತವೆ. ಗಾಳಿ, ಬೆಳಕು, ಉಷ್ಣತೆ, ನೀರು, ನೆಲ, ತಾಯಿಯ ಎದೆಯಲ್ಲಿ ಮೊದಲೇ ಸಿದ್ಧವಾಗಿರುವ ಹಾಲು, ತಂದೆ, ತಾಯಿ, ಬಂಧು – ಬಳಗ ಮಾತ್ರವಲ್ಲ ಇತರರ ಮನಸ್ಸಿನಲ್ಲೂ ಅದರ ಬಗ್ಗೆ ಪ್ರೇಮ ಮತ್ತು ಅನುಕಂಪ ವನ್ನು ಉಂಟು ಮಾಡಲಾಗಿದೆ. ಅದರಿಂದಲೇ ಅದನ್ನು ಸಾಕಿ ಸಲಹಲಾಗುತ್ತದೆ.

ತರುವಾಯ ಆ ಮಗು ಬೆಳೆಯುತ್ತಾ ಹೋದಂತೆಲ್ಲ ಅದರ ಅವಶ್ಯಕತೆಗಳನ್ನು ಪೂರೈಸಲು ಎಲ್ಲ ರೀತಿಯ ವಸ್ತುಗಳು ಸಿಗುತ್ತಲೇ ಹೋಗುತ್ತವೆ. ಭೂಮಿ– ಆಕಾಶ ಗಳ ಎಲ್ಲ ಶಕ್ತಿಗಳೂ ಸೇರಿ ಅದನ್ನು ಬೆಳೆಸುತ್ತದೋ ಎಂದು ಭಾಸವಾಗುತ್ತದೆ.

ಇನ್ನಷ್ಟು ಮುಂದುವರಿಯೋಣ. ಲೋಕದಲ್ಲಿ ಕೆಲಸ ಮಾಡಲು ಎಷ್ಟು ಸಾಮರ್ಥ್ಯಗಳ ಅಗತ್ಯ ಮನುಷ್ಯನಿಗಿದೆಯೋ ಅವೆಲ್ಲವನ್ನೂ ಆತನಿಗೆ ನೀಡಲಾಗಿದೆ. ದೈಹಿಕ ಶಕ್ತಿ, ಬುದ್ಧಿಶಕ್ತಿ, ಗ್ರಹಣ ಶಕ್ತಿ ಮತ್ತು ಇಂತಹುದೇ ಅನೇಕ ಸಾಮರ್ಥ್ಯಗಳನ್ನು ಹೆಚ್ಚು ಕಡಿಮೆ ಎಲ್ಲ ಮನುಷ್ಯರಿಗೂ ನೀಡಲಾಗಿದೆ. ಆದರೆ ಇಲ್ಲಿ ಅಲ್ಲಾಹನ ವ್ಯವಸ್ಥೆಯು ಬಲು ವಿಚಿತ್ರವಾಗಿದೆ. ಎಲ್ಲ ಸಾಮರ್ಥ್ಯಗಳನ್ನು ಎಲ್ಲ ಮನುಷ್ಯರಿಗೂ ಸಮಾನವಾಗಿ ನೀಡಲಾಗಿಲ್ಲ. ಹಾಗೆ ನೀಡಿರುತ್ತಿದ್ದರೆ ಯಾರೂ ಯಾರನ್ನೂ ಅವಲಂಬಿಸಿರುತ್ತಿರಲಿಲ್ಲ. ಯಾರೂ ಯಾರನ್ನೂ ಲೆಕ್ಕಿಸುತ್ತಿರಲಿಲ್ಲ.

ಆದ್ದರಿಂದ ಅಲ್ಲಾಹನು ಎಲ್ಲ ಮನುಷ್ಯರ ಒಟ್ಟು ಅವಶ್ಯಕತೆಗಳನ್ನು ಪರಿಗಣಿಸಿ ಎಲ್ಲ ಸಾಮರ್ಥ್ಯಗಳನ್ನೂ ಮನುಷ್ಯರಲ್ಲೇ ಸೃಷ್ಟಿಸಿರುವನು. ಆದರೆ ಕೆಲವರಿಗೆ ಕೆಲವು ಸಾಮರ್ಥ್ಯಗಳನ್ನು ಅಧಿಕ ನೀಡಿದನು. ಇನ್ನು ಕೆಲವರಿಗೆ ಬೇರೆ ಕೆಲವು ಸಾಮರ್ಥ್ಯಗಳನ್ನು ಅಧಿಕ ನೀಡಿದನು. ಕೆಲವರು ದೈಹಿಕ ಶ್ರಮದ ಶಕ್ತಿಯನ್ನು ಇತರರಿಗಿಂತ ಹೆಚ್ಚು ಪಡೆದಿರುವುದನ್ನು ನಾವು ಕಾಣುತ್ತೇವೆ. ಕೆಲವರಲ್ಲಿ ಒಂದು ವಿಶಿಷ್ಟ ವಿದ್ಯೆ ಅಥವಾ ವೃತ್ತಿಯ ಸಾಮರ್ಥ್ಯವು ಹುಟ್ಟಿನಿಂದಲೇ ಇರುತ್ತದೆ. ಇತರರಲ್ಲಿ ಅದು ಇರುವುದಿಲ್ಲ. ಇನ್ನು ಕೆಲವರಲ್ಲಿ ಬುದ್ಧಿಶಕ್ತಿ ಮತ್ತು ಜಾಣ್ಮೆ ಇತರರಿಗಿಂತ ಅಧಿಕವಾಗಿರುತ್ತದೆ. ಕೆಲವರು ಹುಟ್ಟು ಸೇನಾನಿಗಳಾಗಿರುತ್ತಾರೆ. ಕೆಲವರಲ್ಲಿ ಆಡಳಿತದ ವಿಶಿಷ್ಟ ಸಾಮರ್ಥ್ಯವಿರುತ್ತದೆ. ಕೆಲವರು ಭಾಷಣದ ಅಸಾಮಾನ್ಯ ಸಾಮರ್ಥ್ಯದೊಂದಿಗೆ ಜನಿಸುತ್ತಾರೆ. ಕೆಲವರಲ್ಲಿ ಬರವಣಿಗೆಯ ಸಹಜ ಸಾಮರ್ಥ್ಯವಿರುತ್ತದೆ. ಕೆಲವರು ಗಣಿತದ ಬಗ್ಗೆ ಅಗಾಧ ಪಾಂಡಿತ್ಯವಿರುವ ಮಸ್ತಿಷ್ಕವನ್ನು ಹೊಂದಿರುತ್ತಾರೆ. ಗಣಿತದ ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಅವರು ಲೀಲಾಜಾಲವಾಗಿ ಬಗೆಹರಿಸುತ್ತಾರೆ. ಇತರರ ಬುದ್ಧಿಯು ಆ ಮಟ್ಟಕ್ಕೆ ಹೋಗಿರುವುದೇ ಇಲ್ಲ. ಇನ್ನೊಬ್ಬನು ಚಿತ್ರ ವಿಚಿತ್ರ ವಸ್ತುಗಳನ್ನು ಕಂಡು ಹುಡುಕುತ್ತಾನೆ.

ಅವನ ಸಂಶೋಧನೆಗಳನ್ನು ಕಂಡು ಲೋಕವೇ ಬೆರಗಾಗುತ್ತದೆ. ಮತ್ತೊಬ್ಬ ವ್ಯಕ್ತಿ ಅತ್ಯುನ್ನತ ಮಟ್ಟದ ಕಾನೂನು ತಜ್ಞನಾಗಿರುತ್ತಾನೆ. ಈ ತನಕ ಯಾರಿಂದಲೂ ತಿಳಿಯಲು ಸಾಧ್ಯವಾಗದ ಕಾನೂನಿನ ಅಂಶಗಳನ್ನು ಅವನು ಕ್ಷಣ ಮಾತ್ರದಲ್ಲಿ ಕಂಡುಕೊಳ್ಳುತ್ತಾನೆ. ಇದೆಲ್ಲವೂ ಅಲ್ಲಾಹನ ಕೊಡುಗೆ. ಯಾರೂ ಈ ಸಾಮರ್ಥ್ಯಗಳನ್ನು ಸ್ವಯಂ ತನ್ನಲ್ಲಿ ಸೃಷ್ಟಿಸಲಾರ. ಶಿಕ್ಷಣ ತರಬೇತಿಗಳಿಂದಲೂ ಈ ಸಾಮರ್ಥ್ಯಗಳು ಹುಟ್ಟುವುದಿಲ್ಲ. ನಿಜವಾಗಿ ಇವು ಹುಟ್ಟು ಸಾಮರ್ಥ್ಯಗಳು. ಅಲ್ಲಾಹನು ತನ್ನ ಯುಕ್ತಿಗನುಸಾರ ತಾನಿಚ್ಛಿಸಿದವರಿಗೆ ಈ ಸಾಮರ್ಥ್ಯಗಳನ್ನು ದಯಪಾಲಿಸುತ್ತಾನೆ.

ಅಲ್ಲಾಹನ ಈ ಕೊಡುಗೆಯ ಬಗ್ಗೆ ಚಿಂತಿಸಿದರೆ ತಿಳಿಯುವುದೇನೆಂದರೆ, ಮನುಷ್ಯ ನಾಗರಿಕತೆಗೆ ಯಾವ ಸಾಮರ್ಥ್ಯಗಳ ಅಗತ್ಯ ಹೆಚ್ಚಿರುತ್ತದೋ ಅದನ್ನು ಹೆಚ್ಚು ಮನುಷ್ಯ ರಲ್ಲಿ ಉಂಟುಮಾಡಲಾಗುತ್ತದೆ. ಯಾವ ಸಾಮರ್ಥ್ಯದ ಅಗತ್ಯ ಎಷ್ಟು ಕಡಿಮೆಯಿದೆಯೋ ಅದನ್ನು ಅಷ್ಟೇ ಕಡಿಮೆ ಜನರಲ್ಲಿ ಸೃಷ್ಟಿಸಲಾಗುತ್ತದೆ. ಸೈನಿಕರು ಬಹಳ ಮಂದಿ ಹುಟ್ಟು ತ್ತಾರೆ. ರೈತರು, ಬಡಗಿಗಳು, ಕಮ್ಮಾರರು ಮತ್ತಿತರ ಕೆಲಸಗಳಿಗಾಗಿ ಜನರು ಲೆಕ್ಕವಿಲ್ಲ ದಷ್ಟು ಹುಟ್ಟುತ್ತಾರೆ. ಆದರೆ ವೈಜ್ಞಾನಿಕ ಮತ್ತು ಬೌದ್ಧಿಕ ಶಕ್ತಿ ಸಾಮರ್ಥ್ಯವಿರುವವರು, ರಾಜಕಾರಣ ಮತ್ತು ದಂಡನಾಯಕತ್ವದ ಸಾಮರ್ಥ್ಯವಿರುವವರು ಬಹಳ ವಿರಳವಾಗಿ ಹುಟ್ಟುತ್ತಾರೆ. ಯಾವುದಾದರೂ ಒಂದು ವಿಶಿಷ್ಟ ಕಲೆಯಲ್ಲಿ ಅಸಾಮಾನ್ಯ ಸಾಮರ್ಥ್ಯವಿರು ವವರಂತೂ ಬಹಳ ಕಡಿಮೆ ಇರುತ್ತಾರೆ. ಏಕೆಂದರೆ ಅವರ ಕಾರ್ಯದಿಂದ ಶತಮಾನಗಳ ವರೆಗೆ ಮನುಷ್ಯರಿಗೆ ಅಂತಹ ವ್ಯಕ್ತಿಗಳ ಅಗತ್ಯ ಬೀಳುವುದಿಲ್ಲ.

ಲೋಕದಲ್ಲಿ ಮನುಷ್ಯ ಜೀವನವನ್ನು ಸಫಲಗೊಳಿಸಲು ಮನುಷ್ಯರಲ್ಲಿ ಕೇವಲ ಇಂಜಿನಿಯರ್‌ಗಳು, ಗಣಿತಶಾಸ್ತ್ರಜ್ಞರು, ವಿಜ್ಞಾನಿಗಳು, ಕಾನೂನು ತಜ್ಞರು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಮತ್ತಿತರ ವೃತ್ತಿಗಳಲ್ಲಿ ಪರಿಣತಿ ಹೊಂದಿದವರು ಮಾತ್ರ ಹುಟ್ಟಿದರೆ ಸಾಕೇ ಎಂದು ಈಗ ಯೋಚಿಸಬೇಕಾಗಿದೆ. ಈ ಎಲ್ಲ ಅವಶ್ಯಕತೆಗಳಿಗಿಂತಲೂ ಮಿಗಿ ಲಾದ ಒಂದು ಅಗತ್ಯವಿದೆ. ಅದು ಮನುಷ್ಯರಿಗೆ ಅಲ್ಲಾಹನ ದಾರಿ ತೋರಿಸಿಕೊಡುವು ದಾಗಿದೆ. ಇತರರಂತೂ ಈ ಲೋಕದಲ್ಲಿ ಮನುಷ್ಯನಿಗಾಗಿ ಯಾವ ಯಾವ ವಸ್ತುಗಳಿವೆ ಮತ್ತು ಅವುಗಳನ್ನು ಹೇಗೆ ಬಳಸಬಹುದು ಎಂಬುದನ್ನು ಮಾತ್ರ ತಿಳಿಸುತ್ತಾರೆ. ಆದರೆ ಸ್ವಯಂ ಮನುಷ್ಯನು ಯಾವುದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾನೆ, ಅವನಿಗೆ ಲೋಕದಲ್ಲಿ ಈ ಎಲ್ಲ ವಸ್ತುಗಳನ್ನು ಕೊಟ್ಟವನು ಯಾರು, ಮಾನವನು ಅವುಗಳನ್ನು ಸರಿಯಾಗಿ ಬಳಸಿ ಲೋಕದಲ್ಲಿ ಖಚಿತವೂ ಶಾಶ್ವತವೂ ಆದ ಯಶಸ್ಸನ್ನು ಗಳಿಸಬೇಕೆನ್ನಲು ಹಾಗೆ ಕೊಟ್ಟ ವನ ಇಚ್ಛೆಯಾದರೂ ಏನು ಎಂಬುದನ್ನು ತಿಳಿಸುವವರು ಬೇಡವೇ? ಇದು ಮಾನವನ ನೈಜ ಮತ್ತು ಅತಿ ದೊಡ್ಡ ಬೇಡಿಕೆಯಾಗಿದೆ. ಯಾವ ದೇವನು ಮನುಷ್ಯನ ಅತ್ಯಂತ ಸಣ್ಣ ಅಗತ್ಯಗಳನ್ನು ಪೂರೈಸುವ ವ್ಯವಸ್ಥೆ ಮಾಡಿರುವನೋ ಅವನು ಇಷ್ಟು ಮಹತ್ವದ

ಅಗತ್ಯವನ್ನು ಪೂರ್ಣಗೊಳಿಸುವಲ್ಲಿ ಅಶ್ರದ್ಧನಾಗಿರುವನೆಂಬುದನ್ನು ಬುದ್ಧಿಯು ಸಮ್ಮತಿಸುವುದಿಲ್ಲ. ಹಾಗೆ ಆಗಲು ಸಾಧ್ಯವೇ ಇಲ್ಲ. ಅಲ್ಲಾಹನು ಒಂದೊಂದು ವಿದ್ಯೆ ಮತ್ತು ಒಂದೊಂದು ಕಲೆಯ ವಿಶಿಷ್ಟ ಸಾಮರ್ಥ್ಯವಿರುವ ಮನುಷ್ಯರನ್ನು ಸೃಷ್ಟಿಸಿರುವಂತೆಯೇ ಸೃಷ್ಟಿಕರ್ತನನ್ನು ಗುರುತಿಸುವ ವಿಶಿಷ್ಟ ಸಾಮರ್ಥ್ಯವಿರುವ ಮನುಷ್ಯರನ್ನೂ ಸೃಷ್ಟಿಸಿರುವನು. ಅವರಿಗೆ ಅವನು ತನ್ನ ಕಡೆಯಿಂದ ಧರ್ಮ, ನೀತಿ ಮತ್ತು ಧರ್ಮಶಾಸ್ತ್ರದ ಜ್ಞಾನವನ್ನು ದಯಪಾಲಿಸಿದನು ಮತ್ತು ಇತರ ಮನುಷ್ಯರಿಗೆ ಈ ವಿಷಯಗಳ ಬೋಧನೆ ನೀಡುವ ಕಾರ್ಯಕ್ಕೆ ಅವರನ್ನು ನೇಮಿಸಿದನು. ಇವರನ್ನೇ ನಮ್ಮ ಭಾಷೆಯಲ್ಲಿ ನಬಿ ಅಥವಾ ರಸೂಲ್ (ಪ್ರವಾದಿಗಳು ಅಥವಾ ದೇವ ಸಂದೇಶ ವಾಹಕರು) ಎನ್ನಲಾಗುತ್ತದೆ.

## ಪ್ರವಾದಿಯ ಪರಿಚಯ

ಇತರ ಜ್ಞಾನ ಮತ್ತು ಕಲೆಗಳ ತಜ್ಞರಾದ ಜನರು ಒಂದು ವಿಶಿಷ್ಟ ರೀತಿಯ ಬುದ್ಧಿಮತ್ತೆ ಹಾಗೂ ವಿಶಿಷ್ಟ ಪ್ರಕೃತಿಯೊಂದಿಗೆ ಸೃಷ್ಟಿಯಾಗುವಂತೆಯೇ ಪ್ರವಾದಿಗಳೂ ಒಂದು ವಿಶಿಷ್ಟ ರೀತಿಯ ಪ್ರಕೃತಿಯೊಂದಿಗೆ ಆಗಮಿಸುತ್ತಾರೆ.

ಒಬ್ಬ ಹುಟ್ಟು ಕವಿಯ ವಾಣಿಯನ್ನು ಕೇಳುತ್ತಲೇ, ಅವನೋರ್ವ ಹುಟ್ಟು ಕವಿ ಎಂದೂ ಅವನಿಗೆ ಕಾವ್ಯದ ವಿಶಿಷ್ಟ ಸಾಮರ್ಥ್ಯವು ಹುಟ್ಟಿನಿಂದಲೇ ಬಂದಿದೆ ಎಂದೂ ತಿಳಿದು ಬರುತ್ತದೆ. ಏಕೆಂದರೆ ಇತರರು ಎಷ್ಟೇ ಪ್ರಯತ್ನಿಸಿದರೂ ಅಂತಹ ಕಾವ್ಯ ರಚನೆಗೆ ಸಮರ್ಥರಾಗುವುದಿಲ್ಲ. ಇದೇ ರೀತಿ ಓರ್ವ ಹುಟ್ಟು ವಾಗ್ಮಿ, ಓರ್ವ ಹುಟ್ಟು ಸಾಹಿತಿ, ಓರ್ವ ಹುಟ್ಟು ಸಂಶೋಧಕ, ಓರ್ವ ಹುಟ್ಟು ನಾಯಕ ಇವರೆಲ್ಲರನ್ನೂ ಅವರ ವಿಶಿಷ್ಟ ಸಾಧನೆಗಳಿಂದ ತಿಳಿದುಕೊಳ್ಳಬಹುದಾಗಿದೆ. ಏಕೆಂದರೆ ಈ ಪೈಕಿ ಪ್ರತಿಯೊಬ್ಬರೂ ತಮ್ಮ ಕಾರ್ಯದಲ್ಲಿ ಅಸಾಮಾನ್ಯ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾರೆ. ಅದು ಇತರರಿಂದ ಸಾಧ್ಯವೇ ಇಲ್ಲ. ಪ್ರವಾದಿಯ ಸ್ಥಿತಿಯೂ ಇದುವೇ. ಅವರ ಬುದ್ಧಿಗೆ ಹೊಳೆಯುವಂತಹ ವಿಷಯಗಳನ್ನು ಇತರ ಮನುಷ್ಯರು ಕನಸು ಮನಸ್ಸಿನಲ್ಲೂ ಎಣಿಸಿರುವುದಿಲ್ಲ. ಅವರು ಮುಂದಿಡುವಂತಹ ವಿಷಯಗಳನ್ನು ಇತರ ಯಾವ ಮನುಷ್ಯನೂ ಮುಂದಿಡಲು ಸಾಧ್ಯವಿಲ್ಲ. ವರ್ಷಗಟ್ಟಲೆಯ ಆಲೋಚನೆ, ಚಿಂತನೆಯ ಬಳಿಕ ಇತರರು ಕಂಡುಕೊಳ್ಳುವ ಅತ್ಯಂತ ಸಂಕೀರ್ಣ ವಿಷಯಗಳ ಕಡೆಗೆ ಅವರ ದೃಷ್ಟಿ ತನ್ನಿಂತಾನೇ ಹರಿಯುತ್ತದೆ. ಅವರು ನಮ್ಮ ಬುದ್ಧಿಗೆ ಎಟಕುವ ಮಾತನ್ನೇ ಆಡುತ್ತಾರೆ. ಅದು ಹಾಗೆಯೇ ಆಗಿರಬೇಕೆಂದು ನಮ್ಮ ಮನಸ್ಸು ಸಾಕ್ಷ್ಯ ವಹಿಸುತ್ತದೆ. ಲೌಕಿಕ ಅನುಭವಗಳು ಮತ್ತು ವಿಶ್ವದ ಸಾಕ್ಷ್ಯಗಳಿಂದ ಅವರ ಒಂದೊಂದು ಮಾತೂ ಸತ್ಯವೆಂದು ಸಾಬೀತಾಗುತ್ತದೆ. ಆದರೆ ನಾವು ಅಂತಹ ಮಾತು ಆಡಬೇಕೆಂದು ಬಯಸಿದರೆ ಆಡಲಾರೆವು. ಮಾತ್ರವಲ್ಲ ಪ್ರವಾದಿಯ ಪ್ರಕೃತಿಯು ಅತ್ಯಂತ ಪರಿಶುದ್ಧವಾಗಿರುತ್ತದೆ. ಅವರು ಎಲ್ಲ ವಿಷಯಗಳಲ್ಲಿ ಸತ್ಯ, ನ್ಯಾಯ ಮತ್ತು ಸಭ್ಯತೆಯ

ಮಾರ್ಗವನ್ನೇ ಅನುಸರಿಸುತ್ತಾರೆ. ತಪ್ಪಾದ ಯಾವ ಮಾತೂ ಅವರ ಬಾಯಿಯಿಂದ ಬರುವುದಿಲ್ಲ. ಅವರೆಂದೂ ಕೆಟ್ಟ ಕೆಲಸ ಮಾಡುವುದಿಲ್ಲ. ಸದಾ ಒಳಿತು ಮತ್ತು ಸತ್ಯದ ಶಿಕ್ಷಣ ನೀಡುತ್ತಿರುತ್ತಾರೆ ಹಾಗೂ ಇತರರಿಗೆ ಬೋಧಿಸುವುದನ್ನು ಸ್ವಯಂ ಪಾಲಿಸಿ ತೋರಿಸುತ್ತಾರೆ. ಅವರು ಹೇಳಿದುದಕ್ಕೆ ವಿರುದ್ಧವಾಗಿ ನಡೆದ ಒಂದೇ ಒಂದು ಉದಾಹರಣೆ ಅವರ ಜೀವಮಾನದಲ್ಲಿ ಸಿಗಲಾರದು. ಅವರ ಮಾತು-ಕೃತಿಗಳಲ್ಲಿ ಯಾವುದೇ ಸ್ವಾರ್ಥ ಇರಲಾರದು. ಅವರು ಇತರರ ಒಳಿತಿಗಾಗಿ ಸ್ವಯಂ ನಷ್ಟ ಅನುಭವಿಸುತ್ತಾರೆ. ಆದರೆ ತಮ್ಮ ಹಿತಕ್ಕಾಗಿ ಯಾರಿಗೂ ನಷ್ಟವನ್ನುಂಟುಮಾಡುವುದಿಲ್ಲ. ಅವರ ಸಂಪೂರ್ಣ ಜೀವನವು ಸತ್ಯ, ಸಭ್ಯತೆ, ಪರಿಶುದ್ಧತೆ, ಉನ್ನತ ವಿಚಾರ ಮತ್ತು ಅತ್ಯುನ್ನತ ಮಟ್ಟದ ಮಾನವೀಯತೆಯ ಮಾದರಿಯಾಗಿರುತ್ತದೆ. ಅಲ್ಲಿ ಹುಡುಕಿದರೂ ಯಾವುದೇ ಕುಂದುಕೊರತೆ ಕಾಣಸಿಗುವುದಿಲ್ಲ. ಈ ವಿಷಯಗಳನ್ನು ನೋಡಿಯೇ ಈ ವ್ಯಕ್ತಿ ಅಲ್ಲಾಹನ ಪ್ರವಾದಿಯಾಗಿದ್ದಾರೆ ಎಂದು ಸ್ಪಷ್ಟವಾಗಿ ಅರಿತುಕೊಳ್ಳಬಹುದು.

## ಪ್ರವಾದಿಯ ಅನುಸರಣೆ

ಒಬ್ಬ ವ್ಯಕ್ತಿ ಅಲ್ಲಾಹನ ಪ್ರವಾದಿಯಾಗಿದ್ದಾರೆ ಎಂದು ಸ್ಪಷ್ಟವಾಗಿ ತಿಳಿದು ಬಂದ ಬಳಿಕ ಅವರ ಮಾತನ್ನು ಒಪ್ಪುವುದು, ಅವರಿಗೆ ವಿಧೇಯರಾಗುವುದು ಮತ್ತು ಅವರ ಜೀವನ ಕ್ರಮವನ್ನು ಅನುಸರಿಸುವುದು ಅತ್ಯಗತ್ಯವಾಗಿದೆ. ಒಬ್ಬರನ್ನು ಪ್ರವಾದಿಯೆಂದು ಒಪ್ಪಿಯೂ ಅವರ ಮಾತನ್ನು ಪಾಲಿಸದೇ ಇರುವುದು ಬುದ್ಧಿಗೆ ತೀರಾ ವಿರುದ್ಧವಾಗಿದೆ. ಪ್ರವಾದಿಯನ್ನು ಅಂಗೀಕರಿಸುವುದೆಂದರೆ ಅವರು ಹೇಳುವುದೆಲ್ಲವೂ ಅಲ್ಲಾಹನ ವತಿಯಿಂದ ಹೇಳುತ್ತಾರೆ ಮತ್ತು ಅವರು ಮಾಡುವುದೆಲ್ಲವೂ ಅಲ್ಲಾಹನ ಇಚ್ಛೆಯ ಪ್ರಕಾರ ಮಾಡುತ್ತಾರೆ ಎಂದು ನೀವು ಒಪ್ಪಿಕೊಂಡಿದ್ದೀರಿ ಎಂದರ್ಥ. ಆದ್ದರಿಂದ ನೀವೀಗ ಅವರ ವಿರುದ್ಧ ಏನಾದರೂ ಹೇಳಿದರೆ ಅಥವಾ ಮಾಡಿದರೆ ಅದು ವಾಸ್ತವದಲ್ಲಿ ಅಲ್ಲಾಹನ ವಿರುದ್ಧವಾಗುತ್ತದೆ. ಅಲ್ಲಾಹನಿಗೆ ವಿರುದ್ಧವಾಗುವ ಮಾತು ಎಂದೂ ಸತ್ಯವಾಗಲಾರದು. ಆದ್ದರಿಂದ ಯಾರನ್ನಾದರೂ ಪ್ರವಾದಿಯೆಂದು ಒಪ್ಪಿಕೊಂಡ ಬಳಿಕ ಅವರ ಪ್ರತಿಯೊಂದು ಮಾತನ್ನೂ ಚಾಚೂ ತಪ್ಪದೆ ಅನುಸರಿಸ ಬೇಕಾದುದು ಹಾಗೂ ಅವರ ಪ್ರತಿಯೊಂದು ಆಜ್ಞೆಯನ್ನು ಶಿರಸಾ ಪಾಲಿಸಬೇಕಾದುದು ಅನಿವಾರ್ಯವಾಗುತ್ತದೆ. ಆ ಆಜ್ಞೆಯ ಯುಕ್ತಿಯಾಗಲೀ ಪ್ರಯೋಜನವಾಗಲೀ ನಿಮಗೆ ತಿಳಿದು ಬರಲಿ, ಬಾರದೇ ಇರಲಿ; ಒಂದು ಮಾತು ಪ್ರವಾದಿಯ ಕಡೆಯಿಂದಾಗಿದೆ ಎಂಬುದೇ ಆ ಮಾತು ಸತ್ಯವಾಗಿದೆ ಮತ್ತು ಎಲ್ಲ ಔಚಿತ್ಯಗಳು, ಯುಕ್ತಿಗಳು ಅದರಲ್ಲಿ ಅಡಗಿವೆ ಎಂಬುದರ ಪ್ರಮಾಣವಾಗಿದೆ. ಒಂದು ಮಾತಿನ ಔಚಿತ್ಯವು ನಿಮಗೆ ತಿಳಿಯದೆ ಹೋದರೆ ಆ ಮಾತಿನಲ್ಲೇನೋ ಕೆಡುಕಿದೆ ಎಂದು ಅದರರ್ಥವಲ್ಲ. ಬದಲಾಗಿ ನಿಮ್ಮ ತಿಳುವಳಿಕೆಯಲ್ಲೇನೋ ಕೊರತೆ ಇದೆ ಎಂದೇ ಅದರ ಅರ್ಥ.

ಒಬ್ಬ ವ್ಯಕ್ತಿ ಯಾವುದಾದರೊಂದು ಕಲೆಯ ತಜ್ಞನಲ್ಲದಿದ್ದರೆ ಅದರ ಅತ್ಯಂತ ಸೂಕ್ಷ್ಮ ವಿಷಯಗಳು ಅವನ ತಿಳುವಳಿಕೆಗೆ ಬರಲಾರವು. ಆದರೆ ತನ್ನ ತಿಳುವಳಿಕೆಗೆ ಬರುವುದಿಲ್ಲ ಎಂಬ ಕಾರಣಕ್ಕಾಗಿ ಆ ಕಲೆಯ ತಜ್ಞನೊಬ್ಬನ ಸಲಹೆಯನ್ನು ನಿರಾಕರಿಸುವುದು ಮೂರ್ಖತನವೆನಿಸುವುದು. ಲೋಕದ ಎಲ್ಲ ಕೆಲಸಗಳಲ್ಲಿ ಇಂತಹ ತಜ್ಞರ ಅಗತ್ಯ ಬೀಳುತ್ತದೆ ಮತ್ತು ಆ ತಜ್ಞರ ಬಳಿ ಹೋದ ಬಳಿಕ ಅವರ ಮೇಲೆ ಪೂರ್ಣ ಭರವಸೆ ಇಡಲಾಗುತ್ತದೆ ಹಾಗೂ ಅವರ ಕಾರ್ಯದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡಲಾಗುವುದಿಲ್ಲ. ಏಕೆಂದರೆ ಎಲ್ಲ ಜನರು ಎಲ್ಲ ಕೆಲಸಗಳ ತಜ್ಞರಾಗಿರುವುದಿಲ್ಲ; ಹಾಗೂ ಲೋಕದ ಎಲ್ಲ ವಿಷಯಗಳನ್ನು ಯಾರೂ ತಿಳಿದಿರುವುದಿಲ್ಲ. ನಾವು ಮಾಡಬೇಕಾದುದು ಕೇವಲ ಇಷ್ಟೇ. ನಮ್ಮ ಎಲ್ಲ ಬುದ್ಧಿ-ಜಾಣ್ಮೆಗಳನ್ನು ಉಪಯೋಗಿಸಿ ಓರ್ವ ಅತ್ಯುತ್ತಮ ತಜ್ಞನನ್ನು ಕಂಡು ಹುಡುಕಬೇಕು. ಒಮ್ಮೆ ಒಬ್ಬನ ಬಗ್ಗೆ ಆತ ಆ ವಿದ್ಯೆಯ ಅತ್ಯುತ್ತಮ ತಜ್ಞನೆಂದು ತಿಳಿದು ಬಂದ ಬಳಿಕ ಅವನ ಮೇಲೆ ಪೂರ್ಣ ಭರವಸೆ ಇಡಬೇಕು. ಆ ಬಳಿಕ ಅವನ ಕಾರ್ಯಗಳಲ್ಲಿ ಹಸ್ತಕ್ಷೇಪ ನಡೆಸುವುದು ಮತ್ತು ಪ್ರತಿಯೊಂದು ವಿಷಯದಲ್ಲೂ ಮೊದಲು ನಮಗೆ ಅದನ್ನು ಮನವರಿಕೆ ಮಾಡಿಸಿ, ಇಲ್ಲದಿದ್ದರೆ ನಾವು ಒಪ್ಪುವುದಿಲ್ಲ ಎಂದು ಹೇಳುವುದು ಬುದ್ಧಿವಂತಿಕೆಯಾಗಿರದೆ ಮೂರ್ಖತನವೆನಿಸುವುದು. ಒಬ್ಬ ವಕೀಲನ ಬಳಿ ನಿಮ್ಮ ಮೊಕದ್ದಮೆ ಯನ್ನು ವಹಿಸಿಕೊಟ್ಟ ಬಳಿಕ ನೀವಿಂತಹ ಕೆಲಸ ಮಾಡಿದರೆ ಆತ ನಿಮ್ಮನ್ನು ತನ್ನ ಕಛೇರಿಯಿಂದ ಹೊರ ಹಾಕಿಯಾನು. ಒಬ್ಬ ವೈದ್ಯನ ಬಳಿ ಆತನ ಪ್ರತಿಯೊಂದು ಆದೇಶಕ್ಕೂ ಪ್ರಮಾಣಗಳನ್ನು ಕೇಳತೊಡಗಿದರೆ ಆತ ನಿಮ್ಮ ಚಿಕಿತ್ಸೆಯನ್ನೇ ಬಿಟ್ಟು ಬಿಡುವನು. ಧರ್ಮದ ವಿಷಯವೂ ಅಷ್ಟೇ. ನಿಮಗೆ ದೇವನ ಬಗ್ಗೆ ಜ್ಞಾನ ಗಳಿಸುವ ಅಗತ್ಯವಿದೆ. ದೇವನ ಇಚ್ಛೆಗೆ ಅನುಸಾರ ಜೀವನ ಸಾಗಿಸುವ ವಿಧಾನ ಯಾವುದೆಂದು ನೀವು ತಿಳಿಯ ಬಯಸುತ್ತೀರಿ. ನಿಮ್ಮ ಬಳಿ ಸ್ವಯಂ ಈ ವಿಷಯಗಳನ್ನು ತಿಳಿಯುವ ಯಾವ ಮೂಲವೂ ಇಲ್ಲ. ಈಗ ದೇವನ ಸತ್ಯಪ್ರವಾದಿಗಳು ಯಾರೆಂಬುದನ್ನು ಹುಡುಕುವುದು ನಿಮ್ಮ ಕರ್ತವ್ಯ. ಈ ಹುಡುಕಾಟದಲ್ಲಿ ನೀವು ಅತ್ಯಧಿಕ ಬುದ್ಧಿವಂತಿಕೆಯನ್ನು ಬಳಸಬೇಕು. ಏಕೆಂದರೆ ಒಬ್ಬ ತಪ್ಪು ವ್ಯಕ್ತಿಯನ್ನು ನೀವು ಪ್ರವಾದಿಯೆಂದು ಭಾವಿಸಿದರೆ ಅವನು ನಿಮ್ಮನ್ನು ಕೆಟ್ಟಮಾರ್ಗದಲ್ಲಿ ಒಯ್ಯುವನು. ಆದರೆ ಪರಿಪೂರ್ಣ, ಶೋಧನೆಯ ಬಳಿಕ ಒಬ್ಬ ವ್ಯಕ್ತಿಯು ಅಲ್ಲಾಹನ ಪ್ರವಾದಿಯೆಂಬುದು ಖಚಿತವಾದರೆ ಅವರ ಮೇಲೆ ಪೂರ್ಣ ವಿಶ್ವಾಸವಿರಿಸಿ ಅವರ ಪ್ರತಿಯೊಂದು ಆಜ್ಞೆಯನ್ನು ಅನುಸರಿಸಲೇ ಬೇಕು.

## ಪ್ರವಾದಿಗಳ ಮೇಲೆ ವಿಶ್ವಾಸವಿಡುವುದರ ಅಗತ್ಯ

ಅಲ್ಲಾಹನ ವತಿಯಿಂದ ಅವನ ಪ್ರವಾದಿಗಳು ತೋರಿಸಿದ ಮಾರ್ಗವೇ ಇಸ್ಲಾಮಿನ ಸತ್ಯ ಹಾಗೂ ನೇರ ಮಾರ್ಗವೆಂಬುದು ನಿಮಗೆ ತಿಳಿದು ಬಂದ ಬಳಿಕ ಪ್ರವಾದಿಯ ಮೇಲೆ ವಿಶ್ವಾಸವಿಡುವುದು ಮತ್ತು ಅವರನ್ನನುಸರಿಸುವುದು ಎಲ್ಲ

ಮನುಷ್ಯರ ಪಾಲಿಗೂ ಅಗತ್ಯವೆಂದೂ ಯಾವ ವ್ಯಕ್ತಿ ಪ್ರವಾದಿಯ ಮಾರ್ಗವನ್ನು ತೊರೆದು ಸ್ವಯಂ ತನ್ನ ಬುದ್ಧಿಯಿಂದ ಒಂದು ಕ್ರಮವನ್ನು ರಚಿಸುತ್ತಾನೋ ಅವನು ಖಂಡಿತ ದಾರಿಗೆಟ್ಟವನೆಂದೂ ನಿಮಗೆ ಸ್ವಯಂ ವೇದ್ಯವಾಗುತ್ತದೆ.

ಈ ವಿಷಯದಲ್ಲಿ ಜನರು ಚಿತ್ರ ವಿಚಿತ್ರ ತಪ್ಪುಗಳನ್ನೆಸಗುತ್ತಾರೆ. ಕೆಲವರು ಪ್ರವಾದಿಯನ್ನು ಸತ್ಯಸಂಧರೆಂದು ಒಪ್ಪುತ್ತಾರೆ. ಆದರೆ ಅವರ ಮೇಲೆ ನಂಬಿಕೆ ಇಡುವುದಿಲ್ಲ. ಅವರನ್ನು ಅನುಸರಿಸುವುದೂ ಇಲ್ಲ. ಇವರು ಕೇವಲ ಸತ್ಯನಿಷೇಧಿಗಳಲ್ಲ, ಮೂರ್ಖರೂ ಆಗಿದ್ದಾರೆ. ಏಕೆಂದರೆ ಪ್ರವಾದಿಯನ್ನು ಸತ್ಯ ಪ್ರವಾದಿಯೆಂದು ಒಪ್ಪಿಕೊಂಡ ಬಳಿಕ ಅವರನ್ನು ಅನುಸರಿಸದೇ ಇರುವುದರ ಅರ್ಥ ಮನುಷ್ಯನು ತಿಳಿದೂ ತಿಳಿದೂ ಸುಳ್ಳನ್ನು ಅನುಸರಿಸುತ್ತಿದ್ದಾನೆ ಎಂದಾಗಿದೆ. ಇದಕ್ಕಿಂತ ದೊಡ್ಡ ಮೂರ್ಖತನ ಬೇರೆ ಇರಲಾರದು ಎಂಬುದು ಸ್ಪಷ್ಟ.

ನಮಗೆ ಪ್ರವಾದಿಯ ಅನುಸರಣೆಯ ಅಗತ್ಯವಿಲ್ಲ. ನಾವು ಸ್ವಯಂ ನಮ್ಮ ಬುದ್ಧಿಯಿಂದ ಸತ್ಯದ ಮಾರ್ಗವನ್ನು ಕಂಡುಕೊಳ್ಳುವೆವು ಎಂದು ಕೆಲವರು ಹೇಳುತ್ತಾರೆ. ಇದು ಕೂಡಾ ದೊಡ್ಡ ತಪ್ಪು. ನೀವು ಗಣಿತಶಾಸ್ತ್ರ ಓದಿದ್ದರೆ ಒಂದು ಮಾತು ನಿಮಗೆ ಚೆನ್ನಾಗಿ ತಿಳಿದಿರಬಹುದು– ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿನ ತನಕ ಸರಳ ರೇಖೆಯು ಕೇವಲ ಒಂದೇ ಆಗಿರುವುದು ಸಾಧ್ಯ. ಅದರ ಹೊರತು ಎಷ್ಟು ರೇಖೆಗಳನ್ನು ಎಳೆದರೂ ಅವೆಲ್ಲವೂ ವಕ್ರವಾಗಿರುವುವು ಅಥವಾ ಇನ್ನೊಂದು ಬಿಂದುವಿಗೆ ತಲುಪಲಾರವು. ಸತ್ಯದ ಮಾರ್ಗದ ಸ್ಥಿತಿಯೂ ಇದುವೇ ಆಗಿದೆ. ಇದನ್ನೇ ಇಸ್ಲಾಮಿನ ಭಾಷೆಯಲ್ಲಿ 'ಸಿರಾತುಲ್ ಮುಸ್ತಕೀಮ್' ಅರ್ಥಾತ್ ಸನ್ಮಾರ್ಗ ಎನ್ನುತ್ತಾರೆ. ಈ ಮಾರ್ಗವು ಮನುಷ್ಯನಿಂದ ತೊಡಗಿ ದೇವನ ತನಕ ಸಾಗುತ್ತದೆ. ಗಣಿತಶಾಸ್ತ್ರದ ಇದೇ ಸೂತ್ರದ ಪ್ರಕಾರ ಇದು ಕೂಡಾ ಒಂದೇ ಮಾರ್ಗ ಆಗಿರಲು ಸಾಧ್ಯ. ಇದರ ಹೊರತು ಎಷ್ಟು ಮಾರ್ಗಗಳಿವೆಯೋ ಅವೆಲ್ಲವೂ ಒಂದೋ ವಕ್ರವಾಗಿರುವುವು ಇಲ್ಲವೇ ದೇವನ ತನಕ ತಲುಪಲಾರವು.

ಈಗ ಯೋಚಿಸಿ ನೋಡಿ. ನೇರ ಮಾರ್ಗವೇನಿದೆಯೋ ಅದನ್ನು ಪ್ರವಾದಿಯವರು ತೋರಿಸಿಕೊಟ್ಟಾಗಿದೆ. ಅದರ ಹೊರತು ಬೇರಾವ ಮಾರ್ಗವೂ ಸನ್ಮಾರ್ಗ ಖಂಡಿತ ಅಲ್ಲ. ಈ ಮಾರ್ಗವನ್ನು ಬಿಟ್ಟು ಯಾವ ವ್ಯಕ್ತಿ ಸ್ವಯಂ ಒಂದು ಮಾರ್ಗವನ್ನು ಕಂಡು ಹುಡುಕುತ್ತಾನೋ ಅವನು ಎರಡರಲ್ಲಿ ಒಂದು ಸ್ಥಿತಿಯನ್ನು ಅನಿವಾರ್ಯವಾಗಿ ಎದುರಿಸುತ್ತಾನೆ. ಒಂದೋ ಅವನಿಗೆ ದೇವನ ಬಳಿ ತಲುಪುವ ಮಾರ್ಗವೇ ಸಿಗಲಾರದು ಅಥವಾ ಒಂದು ವೇಳೆ ಸಿಕ್ಕಿದರೂ ಅದು ಸರಳ ಮಾರ್ಗವಾಗಿರದೆ ಬಹಳ ಕ್ಲಿಷ್ಟ ಮಾರ್ಗವಾಗಿರುವುದು. ಅದು ಸರಳ ರೇಖೆಯಾಗಿರದೆ ವಕ್ರ ರೇಖೆಯಾಗಿರುವುದು. ಪ್ರಥಮ ಸ್ಥಿತಿಯಲ್ಲಂತೂ ಅವನ ವಿನಾಶವು ಸ್ಪಷ್ಟವಾಗಿರುವುದು. ಎರಡನೆಯ ಸ್ಥಿತಿಯು

ಮೂರ್ಖತನವೆಂಬುದರಲ್ಲಿ ಸಂಶಯವೇ ಇಲ್ಲ. ಒಂದು ಬುದ್ಧಿ ಇಲ್ಲದ ಪ್ರಾಣಿ ಕೂಡಾ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಬೇಕಾದರೆ ವಕ್ರರೇಖೆಯನ್ನು ಬಿಟ್ಟು ಸರಳ ರೇಖೆಯನ್ನೇ ಅನುಸರಿಸುತ್ತದೆ. ಹೀಗಿರುತ್ತಾ ದೇವನ ಒಬ್ಬ ಸಜ್ಜನ ದಾಸನು ನೇರ ಮಾರ್ಗವನ್ನು ತೋರಿಸುತ್ತಿರುವಾಗ, "ಇಲ್ಲ. ನಾನು ನೀವು ತೋರಿಸಿದ ಮಾರ್ಗದಲ್ಲಿ ನಡೆಯಲಾರೆ. ನನ್ನ ಮಾರ್ಗವನ್ನು ನಾನೇ ಹುಡುಕಿಕೊಂಡು ನನ್ನ ಗುರಿಯನ್ನು ತಲುಪುವೆನು" ಎಂದು ಹೇಳುವವನ ಬಗ್ಗೆ ನೀವೇನನ್ನುತ್ತೀರಿ!

ಇದು ಮೇಲ್ನೋಟಕ್ಕೆ ಪ್ರತಿಯೊಬ್ಬ ಮನುಷ್ಯನಿಗೆ ತಿಳಿದು ಬರುವಂತಹ ವಿಷಯ. ಆದರೆ ನೀವು ಈ ಬಗ್ಗೆ ಇನ್ನಷ್ಟು ಚಿಂತನೆ ನಡೆಸಿದರೆ ಪ್ರವಾದಿಯ ಮೇಲೆ ವಿಶ್ವಾಸವಿರಿಸಲು ನಿರಾಕರಿಸುವ ವ್ಯಕ್ತಿಗೆ ದೇವನ ಬಳಿ ತಲುಪುವ ಯಾವ ಮಾರ್ಗವೂ ಸಿಗುವುದು ಸಾಧ್ಯವಿಲ್ಲವೆಂಬುದು ತಿಳಿದು ಬರುವುದು. ಅವನಿಗೆ ವಕ್ರಮಾರ್ಗವೂ ಸಿಗಲಾರದು. ನೇರ ಮಾರ್ಗವೂ ಸಿಗಲಾರದು. ಕಾರಣವೇನೆಂದರೆ ಯಾವ ವ್ಯಕ್ತಿಯು ಒಬ್ಬ ಸತ್ಯವಂತ ಮನುಷ್ಯನ ಮಾತನ್ನು ಒಪ್ಪಲು ನಿರಾಕರಿಸುತ್ತಾನೋ ಅವನ ಬುದ್ಧಿಯಲ್ಲೇ ಏನೋ ಕುಂದಿರಬೇಕು. ಆದ್ದರಿಂದಲೇ ಅವನು ಸತ್ಯದಿಂದ ವಿಮುಖನಾಗುತ್ತಾನೆ. ಅವನ ತಿಳುವಳಿಕೆಯಲ್ಲೇ ಕೊರತೆ ಇರಬೇಕು. ಅವನ ಮನಸ್ಸಿನಲ್ಲಿ ಅಹಂಭಾವ ಇರಬೇಕು ಅಥವಾ ಒಳಿತು ಮತ್ತು ಸತ್ಯದ ಮಾತುಗಳನ್ನು ಒಪ್ಪಲು ಸಿದ್ಧವೇ ಆಗದಷ್ಟು ಅವನ ಪ್ರಕೃತಿಯು ವಕ್ರವಾಗಿರಬೇಕು. ಅವನು ಪೂರ್ವಜರ ಅಂಧಾನುಕರಣೆಯಲ್ಲಿ ಸಿಲುಕಿದ್ದು ಅವರ ತಪ್ಪು ರೀತಿ ರಿವಾಜುಗಳಿಗೆದುರಾಗಿ ಯಾವ ಮಾತನ್ನೂ ಒಪ್ಪಲು ಸಿದ್ಧನಿರಲಾರನು ಅಥವಾ ಅವನು ತನ್ನ ಸ್ವೇಚ್ಛೆಗಳ ಗುಲಾಮನಾಗಿದ್ದು ಪ್ರವಾದಿಯ ಬೋಧನೆಗಳನ್ನು ನಿರಾಕರಿಸುತ್ತಿರಬಹುದು. ಏಕೆಂದರೆ ಅವುಗಳನ್ನು ಒಪ್ಪಿಕೊಂಡ ಬಳಿಕ ಪಾಪ ಮತ್ತು ಧರ್ಮಬಾಹಿರ ಕಾರ್ಯಗಳಿಗೆ ಸ್ವಾತಂತ್ರ್ಯ ಉಳಿಯುವುದಿಲ್ಲ. ಈ ಪೈಕಿ ಯಾವ ಕಾರಣವೂ ಇಲ್ಲದೆ ಹೋದರೆ ಓರ್ವ ಸತ್ಯವಂತ, ನಿಷ್ಪಕ್ಷಪಾತಿ ಹಾಗೂ ಸಜ್ಜನ ವ್ಯಕ್ತಿ ಓರ್ವ ಸತ್ಯಪ್ರವಾದಿಯ ಬೋಧನೆಗಳನ್ನು ಒಪ್ಪಿಕೊಳ್ಳಲು ನಿರಾಕರಿಸುವುದು ಸಾಧ್ಯವೇ ಇಲ್ಲ.

ಎಲ್ಲಕ್ಕಿಂತಲೂ ಮಿಗಿಲಾಗಿ ಪ್ರವಾದಿಯು ಅಲ್ಲಾಹನ ಕಡೆಯಿಂದ ಕಳುಹಿಸಲ್ಪಟ್ಟಿರುತ್ತಾರೆ. ಅಲ್ಲಾಹನೇ ಅವರ ಮೇಲೆ ವಿಶ್ವಾಸವಿರಿಸಬೇಕೆಂದೂ ಅವರನ್ನು ಅನುಸರಿಸಬೇಕೆಂದೂ ಆಜ್ಞಾಪಿಸಿರುತ್ತಾನೆ. ಆದ್ದರಿಂದ ಯಾರು ಪ್ರವಾದಿಯ ಮೇಲೆ ವಿಶ್ವಾಸವಿರಿಸುವುದಿಲ್ಲವೋ ಅವನು ಅಲ್ಲಾಹನ ವಿರುದ್ಧ ವಿದ್ರೋಹವೆಸಗುತ್ತಾನೆ. ನೀವು ಯಾವ ರಾಷ್ಟ್ರದ ಪ್ರಜೆಯಾಗಿದ್ದರೂ ಸರಕಾರದ ವತಿಯಿಂದ ನೇಮಿಸಲ್ಪಡುವ ಆಡಳಿತಗಾರರನ್ನು ಅನುಸರಿಸಲೇ ಬೇಕಾಗುತ್ತದೆ. ಅವನನ್ನು ನೀವು ಆಡಳಿತಗಾರನೆಂದು ಒಪ್ಪಲು ನಿರಾಕರಿಸಿದರೆ ನೀವು ಸರಕಾರದ ವಿರುದ್ಧ ಬಂಡಾಯವೆದ್ದಂತಾಗುವುದು.

ಸರಕಾರವನ್ನು ಒಪ್ಪಿಕೊಂಡು ಅದು ನೇಮಿಸಿದ ಆಡಳಿತಗಾರರನ್ನು ಅಂಗೀಕರಿಸದಿರುವುದು ಪರಸ್ಪರ ವಿರೋಧಾಭಾಸದ ವಿಷಯವಾಗಿದೆ. ಅಲ್ಲಾಹನು ಮತ್ತು ಅವನು ಕಳುಹಿಸಿದ ಪ್ರವಾದಿಯ ಉದಾಹರಣೆಯು ಹೀಗೆಯೇ ಇದೆ. ಅಲ್ಲಾಹನು ಎಲ್ಲ ಮನುಷ್ಯರ ನೈಜ ಅಧಿಪತಿಯಾಗಿರುವನು. ಅವನು ಯಾರನ್ನು ಮನುಷ್ಯರ ಮಾರ್ಗದರ್ಶನಕ್ಕಾಗಿ ಕಳುಹಿಸಿರುವನೋ ಮತ್ತು ಯಾರನ್ನು ಅನುಸರಿಸುವ ಆಜ್ಞೆ ನೀಡಿರುವನೋ ಅವರನ್ನು ಪ್ರವಾದಿಯೆಂದು ಅಂಗೀಕರಿಸುವುದು ಮತ್ತು ಇತರ ಎಲ್ಲ ಅನುಸರಣೆಗಳನ್ನು ತೊರೆದು ಅವರ ಅನುಸರಣೆಯನ್ನು ಅಂಗೀಕರಿಸುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದರಿಂದ ವಿಮುಖನಾಗುವವನು ದೇವನನ್ನು ನಂಬುವವನಾಗಿದ್ದರೂ ನಿರಾಕರಿಸುವವನಾಗಿದ್ದರೂ ಸತ್ಯನಿಷೇಧಿಯೇ ಆಗಿರುವನು.

## ಪ್ರವಾದಿತ್ವದ ಸಂಕ್ಷಿಪ್ತ ಚರಿತ್ರೆ

ಮಾನವಕುಲದಲ್ಲಿ ಪ್ರವಾದಿತ್ವದ ಪರಂಪರೆ ಹೇಗೆ ಆರಂಭವಾಯಿತು ಮತ್ತು ಯಾವ ರೀತಿ ಪ್ರಗತಿ ಹೊಂದುತ್ತಾ ಓರ್ವ ಅಂತಿಮ ಮತ್ತು ಅತಿ ದೊಡ್ಡ ಪ್ರವಾದಿಯಲ್ಲಿ ಕೊನೆಗೊಂಡಿತು ಎಂಬುದನ್ನು ಈಗ ತಿಳಿಯೋಣ–

ಅಲ್ಲಾಹನು ಮೊಟ್ಟ ಮೊದಲು ಓರ್ವ ಮನುಷ್ಯನನ್ನು ಸೃಷ್ಟಿಸಿದನು ಎಂಬುದು ನಿಮಗೆ ತಿಳಿದಿದೆ. ಅದೇ ಮನುಷ್ಯನಿಂದ ಅದರ ಜೊತೆಯನ್ನು ಸೃಷ್ಟಿಸಿದನು. ತರುವಾಯ ಆ ದಂಪತಿಗಳ ವಂಶವನ್ನು ಬೆಳೆಸಿದನು. ಅದು ಅನೇಕ ಶತಮಾನಗಳ ತನಕ ವ್ಯಾಪಕವಾಗುತ್ತಾ ಇಡೀ ಭೂಮುಖದಲ್ಲಿ ಹರಡಿತು. ಲೋಕದಲ್ಲಿ ಸೃಷ್ಟಿಯಾದ ಮನುಷ್ಯರೆಲ್ಲರೂ ಅದೇ ದಂಪತಿಗಳ ಸಂತಾನವಾಗಿದ್ದಾರೆ. ಎಲ್ಲ ಜನಾಂಗಗಳ ಧಾರ್ಮಿಕ ಮತ್ತು ಐತಿಹಾಸಿಕ ವರದಿಗಳಂತೆ ಮಾನವಕುಲದ ಆರಂಭವು ಓರ್ವ ಮನುಷ್ಯನಿಂದ ಆಯಿತು ಎಂಬುದರ ಬಗ್ಗೆ ಒಮ್ಮತವಿದೆ. ಭೂಮಿಯ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಮನುಷ್ಯರು ಸೃಷ್ಟಿಸಲ್ಪಟ್ಟರು ಎಂದು ವೈಜ್ಞಾನಿಕ ಸಂಶೋಧನೆಗಳು ಕೂಡಾ ತಿಳಿಸುವುದಿಲ್ಲ. ಬದಲಾಗಿ ಹೆಚ್ಚಿನ ವಿಜ್ಞಾನಿಗಳ ಅಭಿಪ್ರಾಯದಂತೆ ಮೊದಲು ಒಬ್ಬನೇ ಮನುಷ್ಯನು ಹುಟ್ಟಿದನು. ಮನುಷ್ಯನ ಇಂದಿನ ಪೀಳಿಗೆಯು ಭೂಮಿಯ ಯಾವ ಭಾಗದಲ್ಲಿದ್ದರೂ ಅದು ಆ ಓರ್ವ ವ್ಯಕ್ತಿಯ ಸಂತತಿಯಾಗಿದೆ.

ಅರಬಿ, ಉರ್ದು, ಹಿಂದಿ ಭಾಷೆಗಳಲ್ಲಿ ಆ ಪ್ರಥಮ ಮನುಷ್ಯನನ್ನು ಆದಮ್ ಎನ್ನಲಾಗುತ್ತದೆ. ಇದರಿಂದಲೇ ಮನುಷ್ಯ ಎಂಬ ಅರ್ಥದ 'ಆದಮೀ' ಎಂಬ ಪದ ಹೊರಟಿದೆ. ಅಲ್ಲಾಹನು ಮೊಟ್ಟ ಮೊದಲ ಪ್ರವಾದಿಯಾಗಿ ಹ. ಆದಮ್‌ರನ್ನೇ(ಅ) ನೇಮಿಸಿದನು. ತಮ್ಮ ಸಂತತಿಗಳಿಗೆ ಇಸ್ಲಾಮಿನ ಶಿಕ್ಷಣ ನೀಡಬೇಕೆಂದು ಅವರಿಗೆ ಆಜ್ಞಾಪಿಸಿದನು. ಅಂದರೆ ಅವರಿಗೆ ನಿಮ್ಮ ಮತ್ತು ಅಖಿಲ ವಿಶ್ವದ ದೇವನು ಒಬ್ಬನೇ ಎಂದು ತಿಳಿಸಬೇಕು. ಅವನನ್ನೇ ನೀವು ಆರಾಧಿಸಬೇಕು. ಅವನ ಮುಂದೆಯೇ

ಶಿರಬಾಗಬೇಕು. ಅವನಿಂದಲೇ ಸಹಾಯ ಯಾಚಿಸಬೇಕು ಮತ್ತು ಅವನ ಇಷ್ಟದಂತೆಯೇ ಲೋಕದಲ್ಲಿ ಸತ್ಯ, ಒಳಿತು ಮತ್ತು ನ್ಯಾಯದ ಜೀವನ ಸಾಗಿಸಬೇಕೆಂದು ಅವರಿಗೆ ಆಜ್ಞಾಪಿಸಬೇಕು. ಹೀಗೆ ಮಾಡಿದರೆ ನಿಮಗೆ ಉತ್ತಮ ಪುರಸ್ಕಾರ ಲಭಿಸೀತು. ಅವನ ಅನುಸರಣೆಯಿಂದ ವಿಮುಖರಾದರೆ ನಿಮಗೆ ಕಠಿಣ ಶಿಕ್ಷೆ ಕಾದಿದೆ ಎಂದು ಅವರನ್ನು ಎಚ್ಚರಿಸಬೇಕು ಎಂಬುದಾಗಿ ಆ ಪ್ರಥಮ ಪ್ರವಾದಿಗೆ ಆಜ್ಞಾಪಿಸಲಾಗಿತ್ತು.

ಹ. ಆದಮ್‌ರ(ಅ) ಸಂತತಿಯಲ್ಲಿ ಉತ್ತಮರಾದವರು ತಮ್ಮ ತಂದೆ ತೋರಿಸಿದ ಮಾರ್ಗದಲ್ಲಿ ನಡೆದರು. ಆದರೆ ಅವರಲ್ಲಿ ಕೆಟ್ಟವರು ಆ ಮಾರ್ಗವನ್ನು ತೊರೆದರು. ಕ್ರಮೇಣ ಅವರಲ್ಲಿ ತರತರದ ಕೆಡುಕುಗಳು ಹುಟ್ಟಿಕೊಂಡವು. ಕೆಲವರು ಸೂರ್ಯ, ಚಂದ್ರ, ನಕ್ಷತ್ರಾದಿಗಳನ್ನು ಪೂಜಿಸತೊಡಗಿದರೆ; ಇನ್ನು ಕೆಲವರು ವೃಕ್ಷಗಳನ್ನು, ಪ್ರಾಣಿಗಳನ್ನು ಮತ್ತು ನದಿಗಳನ್ನು ಆರಾಧಿಸತೊಡಗಿದರು. ಕೆಲವರು ಗಾಳಿಗೆ, ನೀರಿಗೆ, ಅಗ್ನಿಗೆ, ರೋಗಕ್ಕೆ, ಆರೋಗ್ಯಕ್ಕೆ, ಮಹಿಮೆಗೆ, ಇತರ ಅನುಗ್ರಹಗಳಿಗೆ ಹಾಗೂ ಶಕ್ತಿಗಳಿಗೆ ಬೇರೆ ಬೇರೆ ದೇವರುಗಳು ಇದ್ದಾರೆ ಎಂದು ನಂಬಿದರು. ಎಲ್ಲರ ದಯೆಯನ್ನು ಬಯಸಿ ಎಲ್ಲರನ್ನೂ ಪೂಜಿಸತೊಡಗಿದರು. ಇದೇ ರೀತಿ ಬಹುದೇವತ್ವ ಮತ್ತು ವಿಗ್ರಹಾರಾಧನೆಯ ಅನೇಕ ರೂಪಗಳು ಜನ್ಮತಾಳಿದವು. ಇದರಿಂದ ಅನೇಕ ಮತಗಳು ಹುಟ್ಟಿಕೊಂಡವು. ಇದು ಆದಮರ(ಅ) ಸಂತತಿಯು ಲೋಕದ ವಿವಿಧ ಭಾಗಗಳಲ್ಲಿ ಪಸರಿಸಿ ಅನೇಕ ಜನಾಂಗಗಳಾಗಿ ಮಾರ್ಪಟ್ಟ ಕಾಲವಾಗಿತ್ತು. ಪ್ರತಿಯೊಂದು ಜನಾಂಗವೂ ತನ್ನದೊಂದು ಹೊಸ ಧರ್ಮವನ್ನು ರಚಿಸಿಕೊಂಡಿತು. ಪ್ರತಿಯೊಂದು ಧರ್ಮದ ಸಂಪ್ರದಾಯಗಳು ಬೇರೆ ಬೇರೆಯಾಗಿದ್ದುವು. ಅಲ್ಲಾಹನನ್ನು ಮರೆಯುವುದರ ಜೊತೆಗೆ ಆದಮ್(ಅ)ರು ಬೋಧಿಸಿದ ಕಾನೂನನ್ನೂ ಜನರು ಮರೆತಿದ್ದರು. ಜನರು ತಮ್ಮ ಸ್ವೇಚ್ಛೆಯ ಅನುಸರಣೆ ಆರಂಭಿಸಿದರು. ಎಲ್ಲ ರೀತಿಯ ದುಷ್ಟ ಸಂಪ್ರದಾಯಗಳು ಹುಟ್ಟಿಕೊಂಡವು. ತರತರದ ಅಜ್ಞಾನಜನ್ಯ ವಿಚಾರಗಳು ವ್ಯಾಪಿಸಿದುವು. ಒಳಿತು–ಕೆಡುಕುಗಳ ತಾರತಮ್ಯವೇ ಅಳಿದು ಹೋಯಿತು. ಅನೇಕ ಕೆಟ್ಟ ವಸ್ತುಗಳು ಉತ್ತಮವೆಂದು ಪರಿಗಣಿಸಲ್ಪಟ್ಟವು. ಅನೇಕ ಉತ್ತಮ ವಸ್ತುಗಳನ್ನು ಕೆಟ್ಟದೆಂದು ಭಾವಿಸಲಾಯಿತು.

ಆಗ ಅಲ್ಲಾಹನು ಪ್ರತಿಯೊಂದು ಜನಾಂಗಕ್ಕೂ ಓರ್ವ ಪ್ರವಾದಿಯನ್ನು ಕಳುಹಿಸಲು ಆರಂಭಿಸಿದನು. ಅವರು ಜನರಿಗೆ ಮೊದಲು ಆದಮ್(ಅ)ರು ನೀಡಿದ ಇಸ್ಲಾಮಿನ ಬೋಧನೆಯನ್ನೇ ನೀಡಲಾರಂಭಿಸಿದರು. ಆ ಪ್ರವಾದಿಗಳು ತಮ್ಮ ತಮ್ಮ ಜನಾಂಗಗಳಿಗೆ ಅವರು ಮರೆತ ಪಾಠವನ್ನು ಜ್ಞಾಪಿಸಿಕೊಟ್ಟರು. ಅವರಿಗೆ ಏಕದೇವಾರಾಧನೆಯನ್ನು ಕಲಿಸಿದರು. ಬಹುದೇವಾರಾಧನೆ ಮತ್ತು ವಿಗ್ರಹಾರಾಧನೆಯಿಂದ ಅವರನ್ನು ತಡೆದರು. ಅಜ್ಞಾನಜನ್ಯ ಸಂಪ್ರದಾಯಗಳನ್ನು ಮುರಿದರು. ಅಲ್ಲಾಹನ ಇಚ್ಛೆಯಂತೆ ಜೀವನ ಸಾಗಿಸುವ ಕ್ರಮವನ್ನು ಕಲಿಸಿಕೊಟ್ಟರು. ಅವರಿಗೆ ಸರಿಯಾದ ಕಾನೂನನ್ನು ತಿಳಿಸಿ ಅದರ ಅನುಸರಣೆಗೆ ಆಜ್ಞಾಪಿಸಿದರು. ಭಾರತ, ಚೀನಾ, ಇರಾಕ್, ಇರಾನ್,

ಈಜಿಪ್ಟ್, ಆಫ್ರಿಕ, ಯುರೋಪ್ ಮುಂತಾದ ಯಾವ ದೇಶದಲ್ಲೂ ಅಲ್ಲಾಹನ ಸತ್ಯ ಪ್ರವಾದಿಗಳು ಬರದೆ ಇರಲಿಲ್ಲ. ಅವರೆಲ್ಲರ ಧರ್ಮವು ಒಂದೇ ಆಗಿತ್ತು. ನಾವು ಯಾವುದನ್ನು ಇಸ್ಲಾಮ್ ಎಂದು ಕರೆಯುತ್ತೇವೋ ಅದುವೇ ಎಲ್ಲಾ ಪ್ರವಾದಿಗಳ ಧರ್ಮವಾಗಿತ್ತು.[1] ಅವರ ಬೋಧನೆಗಳ ರೀತಿ ಮತ್ತು ಜೀವನದ ಕಾನೂನುಗಳು ಸ್ವಲ್ಪ ಭಿನ್ನವಾಗಿದ್ದುವು. ಯಾವ ಜನಾಂಗದಲ್ಲಿ ಎಂತಹ ಅಜ್ಞಾನವು ವ್ಯಾಪಕವಾಗಿತ್ತೋ ಅದನ್ನೇ ದೂರೀಕರಿಸಲು ಅದರಲ್ಲಿ ಬಂದ ಪ್ರವಾದಿ ಒತ್ತು ನೀಡಿದರು. ಎಂತಹ ತಪ್ಪು ಕಲ್ಪನೆಗಳು ವ್ಯಾಪಕವಾಗಿದ್ದುವೋ ಅವುಗಳ ಸುಧಾರಣೆಗೇ ಹೆಚ್ಚಿನ ಮಹತ್ವ ನೀಡಲಾಯಿತು. ಸಂಸ್ಕೃತಿ, ನಾಗರಿಕತೆ, ಜ್ಞಾನ ಮತ್ತು ಬುದ್ಧಿಯ ದೃಷ್ಟಿಯಿಂದ ಜನಾಂಗ ಗಳು ಪ್ರಾಥಮಿಕ ಹಂತದಲ್ಲಿದ್ದಾಗ ಅವರಿಗೆ ಸರಳ ಬೋಧನೆಗಳು ಮತ್ತು ಸರಳ ಧರ್ಮಶಾಸ್ತ್ರವನ್ನು ನೀಡಲಾಯಿತು. ಅವುಗಳಲ್ಲಿ ಪ್ರಗತಿ ಆಗುತ್ತಾ ಹೋದಂತೆಲ್ಲಾ ಆ ಬೋಧನೆಗಳನ್ನೂ ಧರ್ಮ ಶಾಸ್ತ್ರವನ್ನೂ ವಿಶಾಲಗೊಳಿಸುತ್ತಾ ಸಾಗಲಾಯಿತು. ಆದರೆ ಈ ಭಿನ್ನತೆಗಳು ಕೇವಲ ಬಾಹ್ಯ ಸ್ವರೂಪದ್ದಾಗಿದ್ದುವು. ಎಲ್ಲ ಪ್ರವಾದಿಗಳ ಬೋಧನೆಗಳ ತಿರುಳು ಒಂದೇ ಆಗಿತ್ತು. ಅಂದರೆ ವಿಶ್ವಾಸದಲ್ಲಿ ಏಕದೇವತ್ವ, ಕರ್ಮದಲ್ಲಿ ಒಳಿತು ಮತ್ತು ಸದಾಚಾರ ಹಾಗೂ ಪರಲೋಕದ ಶಿಕ್ಷೆ-ಪುರಸ್ಕಾರಗಳ ಮೇಲೆ ವಿಶ್ವಾಸ.

ಪ್ರವಾದಿಗಳ ಜೊತೆಯೂ ಜನರು ವಿಚಿತ್ರವಾಗಿ ವರ್ತಿಸಿದರು. ಮೊದಲು ಅವರಿಗೆ ಕಿರುಕುಳ ನೀಡಿದರು. ಅವರ ಬೋಧನೆಗಳನ್ನು ನಿರಾಕರಿಸಿದರು. ಕೆಲವರನ್ನು ದೇಶಭ್ರಷ್ಟಗೊಳಿಸಿದರು. ಇನ್ನು ಕೆಲವರನ್ನು ಕೊಲೆಗೈದರು. ಕೆಲವರಿಗೆ ಜೀವನವಿಡೀ ಬೋಧಿಸಿದ ಬಳಿಕ ಕೇವಲ ಬೆರಳೆಣಿಕೆಯ ಅನುಯಾಯಿಗಳು ಲಭಿಸಿದರು. ಆದರೆ ಅಲ್ಲಾಹನ ಈ ಆಯ್ದ ದಾಸರು ನಿರಂತರ ತಮ್ಮ ಕಾರ್ಯವನ್ನು ಮುಂದುವರಿಸುತ್ತಲೇ ಸಾಗಿದರು. ಕೊನೆಗೆ ಅವರ ಉಪದೇಶಗಳು ಪ್ರಭಾವ ಬೀರಿದುವು. ದೊಡ್ಡ ದೊಡ್ಡ ಜನಾಂಗಗಳು ಅವರ ಅನುಯಾಯಿಗಳಾದರು. ಆ ಬಳಿಕ ಪಥಭ್ರಷ್ಟತೆಯು ಇನ್ನೊಂದು ರೂಪ ತಾಳಿತು. ಪ್ರವಾದಿಗಳ ನಿಧನಾನಂತರ ಅವರ ಅನುಯಾಯಿಗಳು ಅವರ ಬೋಧನೆಗಳನ್ನು ಬದಲಾಯಿಸಿ ಬಿಟ್ಟರು. ಅವರ ಗ್ರಂಥಗಳಲ್ಲಿ ತಮ್ಮ ಕಡೆಯಿಂದ ಎಲ್ಲ ರೀತಿಯ ವಿಚಾರಗಳನ್ನು ಸೇರಿಸಿದರು. ಹೊಸ ಹೊಸ ಆರಾಧನಾ ವಿಧಾನ ಗಳನ್ನು ಆವಿಷ್ಕರಿಸಿದರು. ಕೆಲವರಂತೂ ತಮ್ಮ ಪ್ರವಾದಿಗಳನ್ನೇ ಆರಾಧಿಸತೊಡಗಿದರು.

---

1. ಇಸ್ಲಾಮ್ ಪ್ರವಾದಿ ಮುಹಮ್ಮದ್(ಸ)ರಿಂದ ಆರಂಭಗೊಂಡಿತೆಂಬುದು ಸಾಮಾನ್ಯವಾಗಿ ಜನರಲ್ಲಿ ಹರಡಿರುವ ಒಂದು ತಪ್ಪುಕಲ್ಪನೆಯಾಗಿದೆ. ಪ್ರವಾದಿ ಮುಹಮ್ಮದ್(ಸ)ರನ್ನು ಇಸ್ಲಾಮ್ ಧರ್ಮದ ಸ್ಥಾಪಕರೆಂದು ಹೇಳುವ ಮಟ್ಟಿಗೂ ಈ ತಪ್ಪುಕಲ್ಪನೆ ಮುಂದುವರಿದಿದೆ. ಈ ತಪ್ಪುಕಲ್ಪನೆಯನ್ನು ಮೊದಲು ಇಸ್ಲಾಮಿನ ವಿದ್ಯಾರ್ಥಿಗಳ ಮನಸ್ಸಿನಿಂದ ನೀಗಿಸಬೇಕಾಗಿದೆ. ಎಲ್ಲ ಕಾಲಗಳಲ್ಲಿಯೂ ಇಸ್ಲಾಮ್ ಮಾನವಕುಲದ ಏಕೈಕ ನೈಜ ಧರ್ಮವಾಗಿತ್ತು. ಲೋಕದಲ್ಲಿ ಬಂದ ಎಲ್ಲ ಪ್ರವಾದಿಗಳು, ಎಲ್ಲ ಕಾಲಗಳಲ್ಲಿ ಮತ್ತು ಎಲ್ಲ ಪ್ರದೇಶಗಳಲ್ಲಿ ತಂದ ಧರ್ಮವು ವಾಸ್ತವದಲ್ಲಿ ಇದೇ ಇಸ್ಲಾಮ್ ಧರ್ಮವಾಗಿತ್ತು ಎಂಬುದನ್ನು ಇಸ್ಲಾಮಿನ ಪ್ರತಿಯೊಬ್ಬ ವಿದ್ಯಾರ್ಥಿಯೂ ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ.

ಕೆಲವರು ತಮ್ಮ ಪ್ರವಾದಿಯನ್ನು ದೇವನ ಅವತಾರ (ಅಂದರೆ ದೇವನೇ ಮನುಷ್ಯ ರೂಪದಲ್ಲಿ ಇಳಿದು ಬಂದನು) ಎಂದು ಸಾರಿದರು. ಕೆಲವರು ತಮ್ಮ ಪ್ರವಾದಿಯನ್ನು ದೇವಪುತ್ರನೆಂದರು. ಇನ್ನು ಕೆಲವರು ಪ್ರವಾದಿಯನ್ನು ದೇವತ್ವದಲ್ಲಿ ಪಾಲುದಾರರೆಂದು ಪರಿಗಣಿಸಿದರು. ಒಟ್ಟಿನಲ್ಲಿ ಮನುಷ್ಯರು ಪ್ರವಾದಿ ಗಳೊಂದಿಗೆ ಬಹುದೊಡ್ಡ ಅತಿಕ್ರಮ ಎಸಗಿದರು. ಯಾರು ಮೂರ್ತಿಗಳನ್ನು ಒಡೆಯಲು ಬಂದಿದ್ದರೋ ಅವರದೇ ಮೂರ್ತಿಗಳನ್ನು ಮಾಡಿ ಪೂಜಿಸತೊಡಗಿದರು. ಯಾವ ಧರ್ಮಶಾಸ್ತ್ರಗಳನ್ನು ಈ ಪ್ರವಾದಿಗಳು ತಮ್ಮ ಜನಾಂಗಗಳಿಗೆ ನೀಡಿದ್ದರೋ ಅವುಗಳನ್ನೂ ವಿಧವಿಧವಾಗಿ ವಿಕೃತಗೊಳಿಸಲಾಯಿತು. ಅವುಗಳಲ್ಲಿ ಎಲ್ಲ ರೀತಿಯ ಅಜ್ಞಾನಜನ್ಯ ಸಂಪ್ರದಾಯಗಳನ್ನು ಸೇರಿಸಲಾಯಿತು. ಅವುಗಳಲ್ಲಿ ಕಟ್ಟುಕಥೆಗಳನ್ನೂ ಸುಳ್ಳು ವರದಿಗಳನ್ನೂ ಸೇರಿಸಲಾಯಿತು. ಮನುಷ್ಯ ನಿರ್ಮಿತ ಕಾನೂನುಗಳನ್ನು ಅವುಗಳೊಂದಿಗೆ ಕಲಬೆರಕೆ ಮಾಡಲಾಯಿತು. ಈ ರೀತಿಯ ಕೆಲಸದಿಂದಾಗಿ ಕೆಲವು ಶತಮಾನಗಳ ಬಳಿಕ ಪ್ರವಾದಿಯ ನೈಜ ಬೋಧನೆ ಹಾಗೂ ಮೂಲ ಧರ್ಮಶಾಸ್ತ್ರ ಯಾವುದು ಮತ್ತು ಜನರು ಸೇರಿಸಿದ್ದು ಯಾವುದು ಎಂಬುದನ್ನು ತಿಳಿಯುವ ಮೂಲವೇ ಉಳಿಯದಾಯಿತು.[1] ಸ್ವಯಂ ಪ್ರವಾದಿಗಳ ಜೀವನ ಚರಿತ್ರೆ ಕೂಡಾ ಇದರ ವರದಿಗಳಲ್ಲಿ ಕಳೆದು ಹೋದುವು. ಅವರ ಬಗ್ಗೆ ಯಾವುದೇ ವಿಷಯವು ಈಗ ವಿಶ್ವಾಸಾರ್ಹವಾಗಿ ಉಳಿದಿಲ್ಲ. ಆದರೆ ಪ್ರವಾದಿಗಳ ಪ್ರಯತ್ನಗಳು ಸಂಪೂರ್ಣವಾಗಿ ವ್ಯರ್ಥವಾಗಲಿಲ್ಲ. ಎಲ್ಲ ಕಲಬೆರಕೆಗಳ ಹೊರತಾಗಿಯೂ ಸ್ವಲ್ಪಾಂಶ ಸತ್ಯವು ಪ್ರತಿ ಯೊಂದು ಜನಾಂಗದಲ್ಲೂ ಉಳಿದುಕೊಂಡಿದೆ. ದೇವನ ಮೇಲೆ ವಿಶ್ವಾಸ ಮತ್ತು ಪರಲೋಕ ಜೀವನದ ವಿಶ್ವಾಸ ಒಂದಲ್ಲ ಒಂದು ರೂಪದಲ್ಲಿ ಎಲ್ಲ ಜನಾಂಗಗಳಲ್ಲಿ ಕಂಡು ಬರುತ್ತದೆ. ಒಳಿತು, ಸತ್ಯ ಮತ್ತು ನೀತಿಗಳ ಕೆಲವು ಮೌಲ್ಯಗಳು ಸಾಮಾನ್ಯವಾಗಿ ಲೋಕದಲ್ಲಿ ಅಂಗೀಕರಿಸಲ್ಪಟ್ಟಿವೆ. ಎಲ್ಲ ಜನಾಂಗಗಳ ಪ್ರವಾದಿಗಳು ಪ್ರತ್ಯಪ್ರತ್ಯೇಕವಾಗಿ ತಂತಮ್ಮ ಜನಾಂಗವನ್ನು ಒಂದು ಸಾರ್ವಲೌಕಿಕ ಮತ್ತು ಸಾರ್ವಕಾಲಿಕ ಧರ್ಮದ ಬೋಧನೆಗಳನ್ನು ಜಗತ್ತಿನಲ್ಲಿ ಪ್ರಚಾರ ಪಡಿಸಲು ಅನುವು ಆಗುವಂತೆ ಸಿದ್ಧಗೊಳಿಸಿದರು.

ಈ ಮೇಲೆ ವಿವರಿಸಿದಂತೆ ಮೊದಲು ಪ್ರತಿಯೊಂದು ಜನಾಂಗಕ್ಕೆ ಬೇರೆ ಬೇರೆ ಪ್ರವಾದಿಗಳು ಬರುತ್ತಿದ್ದರು ಮತ್ತು ಅವರ ಬೋಧನೆಗಳು ತಮ್ಮ ಜನಾಂಗಕ್ಕೇ

1. ಗತ ಪ್ರವಾದಿಗಳ ಅನುಯಾಯಿಗಳು ಇದೇ ರೀತಿ ತಮ್ಮ ನೈಜ ಧರ್ಮವನ್ನು ಅರ್ಥಾತ್ ಇಸ್ಲಾಮನ್ನು ಬದಲಾಯಿಸಿ ಇದೀಗ ವಿಭಿನ್ನ ಹೆಸರುಗಳಿಂದ ಕರೆಯಲ್ಪಡುವ ಧರ್ಮಗಳನ್ನು ರಚಿಸಿ ಕೊಂಡಿದ್ದರು. ಉದಾಹರಣೆಗೆ, ಪ್ರವಾದಿ ಈಸಾ(ಅ)ರು ಬೋಧಿಸಿದ ಧರ್ಮವು ಇಸ್ಲಾಮ್ ಧರ್ಮವೇ ಆಗಿತ್ತು, ಆದರೆ ಅವರ ಕಾಲಾನಂತರ ಅವರ ಅನುಯಾಯಿಗಳು ಸ್ವಯಂ ಪ್ರವಾದಿ ಈಸಾ(ಅ)ರನ್ನು ಆರಾಧಿಸತೊಡಗಿದರು ಮತ್ತು ಅವರು ನೀಡಿದ ಬೋಧನೆಗಳೊಂದಿಗೆ ಇತರ ವಿಷಯಗಳನ್ನು ಬೆರೆಸಿ ಇಂದು ಕ್ರೈಸ್ತ ಧರ್ಮ ಎಂದು ಕರೆಯಲ್ಪಡುವ ಧರ್ಮವನ್ನು ಆವಿಷ್ಕರಿಸಿದರು ಎಂಬುದನ್ನು ಇಲ್ಲಿ ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು.

ಸೀಮಿತವಾಗಿರುತ್ತಿತ್ತು. ಇದಕ್ಕೆ ಕಾರಣವೇನೆಂದರೆ ಅಂದಿನ ಕಾಲದಲ್ಲಿ ಎಲ್ಲ ಜನಾಂಗಗಳು ಪರಸ್ಪರ ಭಿನ್ನವಾಗಿದ್ದು ಅವರ ಮಧ್ಯೆ ಹೆಚ್ಚಿನ ಸಂಪರ್ಕವಿರಲಿಲ್ಲ. ಪ್ರತಿ ಯೊಂದು ಜನಾಂಗವು ತನ್ನ ದೇಶದ ಗಡಿಯೊಳಗೆ ಸೀಮಿತವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಒಂದು ಸಾರ್ವತ್ರಿಕ ಬೋಧನೆ ಎಲ್ಲ ಜನಾಂಗಗಳಲ್ಲಿ ವ್ಯಾಪಿಸುವುದು ಬಹಳ ಕಷ್ಟವಾಗಿತ್ತು. ಮಾತ್ರವಲ್ಲದೆ ವಿಭಿನ್ನ ಜನಾಂಗಗಳ ಪರಿಸ್ಥಿತಿಗಳು ಪರಸ್ಪರ ತೀರಾ ಭಿನ್ನವಾಗಿದ್ದುವು. ಅಜ್ಞಾನವು ಬಹಳ ವ್ಯಾಪಕವಾಗಿತ್ತು. ಈ ಅಜ್ಞಾನದ ಕಾರಣದಿಂದ ಉಂಟಾದ ನಂಬಿಕೆ ಮತ್ತು ನಡವಳಿಕೆಗಳಿಂದ ಉಂಟಾಗಿದ್ದ ಕೆಡುಕುಗಳು ಎಲ್ಲ ಕಡೆ ಭಿನ್ನಭಿನ್ನವಾಗಿತ್ತು. ಆದ್ದರಿಂದ ದೇವಪ್ರವಾದಿಯು ಪ್ರತಿಯೊಂದು ಜನಾಂಗಕ್ಕೆ ಭಿನ್ನಭಿನ್ನ ಬೋಧನೆ ಮತ್ತು ಮಾರ್ಗದರ್ಶನ ನೀಡುವುದು ಅಗತ್ಯವಾಗಿತ್ತು. ಮೆಲ್ಲಮೆಲ್ಲನೆ ಅವರ ಕೆಟ್ಟ ವಿಚಾರಗಳನ್ನು ಅಳಿಸಿ ಸರಿಯಾದ ವಿಚಾರಗಳನ್ನು ಪ್ರಚಾರ ಪಡಿಸಬೇಕಾಗಿತ್ತು. ಅಜ್ಞಾನಜನ್ಯ ಸಂಪ್ರದಾಯಗಳನ್ನು ಒಂದೊಂದಾಗಿ ತ್ಯಜಿಸಿ ಉನ್ನತ ಮಟ್ಟದ ನಿಯಮಗಳ ಅನುಸರಣೆಯನ್ನು ಮಾಡುವಂತೆ ಕಲಿಸಬೇಕಾಗಿತ್ತು ಹಾಗೂ ಮಕ್ಕಳನ್ನು ತರಬೇತಿಗೊಳಿಸಿದಂತೆ ಅವರನ್ನು ತರಬೇತಿಗೊಳಿಸಬೇಕಾಗಿತ್ತು. ಈ ರೀತಿ ಜನಾಂಗಗಳ ಶಿಕ್ಷಣದಲ್ಲಿ ಎಷ್ಟು ಸಹಸ್ರ ವರ್ಷಗಳು ವ್ಯಯವಾದುವು ಎಂದು ಅಲ್ಲಾಹನೇ ಬಲ್ಲ. ಹೇಗಿದ್ದರೂ ಪ್ರಗತಿ ಹೊಂದುತ್ತಾ ಹೊಂದುತ್ತಾ ಕೊನೆಗೊಮ್ಮೆ ಮಾನವಕುಲವು ಬಾಲ್ಯಾವಸ್ಥೆಯನ್ನು ದಾಟಿ ಯೌವನಾವಸ್ಥೆಗೆ ತಲುಪಿತು. ವ್ಯಾಪಾರ ವಹಿವಾಟುಗಳು ಪ್ರಗತಿ ಹೊಂದಿದಂತೆಯೇ ಜನಾಂಗಗಳ ಪರಸ್ಪರ ಸಂಬಂಧಗಳು ಸ್ಥಾಪಿತವಾದುವು. ಚೀನಾ ಮತ್ತು ಜಪಾನ್‌ನಿಂದ ಹಿಡಿದು ಯುರೋಪ್ ಮತ್ತು ಆಫ್ರಿಕಾದ ವರೆಗಿನ ವಿದೂರ ರಾಷ್ಟ್ರಗಳವರೆಗೂ ನೌಕಾಯಾನ ಮತ್ತು ನೆಲಮಾರ್ಗದ ಯಾತ್ರೆಗಳ ಪರಂಪರೆಯು ಆರಂಭಗೊಂಡಿತು. ಹೆಚ್ಚಿನ ಜನಾಂಗಗಳಲ್ಲಿ ಬರವಣಿಗೆಯ ಕಲೆ ಹುಟ್ಟಿಕೊಂಡಿತು. ವಿಜ್ಞಾನ ತಂತ್ರಜ್ಞಾನಗಳ ಪ್ರಗತಿಯಾಗಿ ಜನಾಂಗಗಳ ಮಧ್ಯೆ ವಿಚಾರಗಳ ಮತ್ತು ವಿವಿಧ ವಿದ್ಯೆಗಳ ವಿನಿಮಯ ಆರಂಭವಾಯಿತು. ದೊಡ್ಡ ದೊಡ್ಡ ದಿಗ್ವಿಜಯಿಗಳು ಹುಟ್ಟಿಕೊಂಡರು. ಅವರು ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಸ್ಥಾಪಿಸಿ ಅನೇಕ ರಾಷ್ಟ್ರಗಳನ್ನು ಮತ್ತು ಅನೇಕ ಜನಾಂಗಗಳನ್ನು ಒಂದೇ ರಾಜಕೀಯ ವ್ಯವಸ್ಥೆಯಡಿಯಲ್ಲಿ ಒಟ್ಟು ಸೇರಿಸಿದರು. ಈ ರೀತಿ ಮಾನವ ಜನಾಂಗಗಳಲ್ಲಿ ಇದ್ದ ಭಿನ್ನತೆ ಮತ್ತು ಅಗಲಿಕೆ ಕ್ರಮೇಣ ಕಡಿಮೆಯಾಗುತ್ತಾ ಬಂದು ಇಸ್ಲಾಮ್ ಧರ್ಮದ ಒಂದೇ ಶಿಕ್ಷಣ ಮತ್ತು ಒಂದೇ ಧರ್ಮಶಾಸ್ತ್ರ ಇಡೀ ಲೋಕಕ್ಕಾಗಿ ಕಳುಹಿಸಲ್ಪಡುವುದು ಸಾಧ್ಯವಾಯಿತು. ಇಂದಿಗೆ ಒಂದೂವರೆ ಸಹಸ್ರ ವರ್ಷಗಳ ಹಿಂದೆ ಮನುಷ್ಯ ಸಮಾಜವು ಒಂದು ಸಾರ್ವಲೌಕಿಕ ಧರ್ಮವನ್ನು ಅಪೇಕ್ಷಿಸುವಷ್ಟು ಪ್ರಗತಿ ಹೊಂದಿತ್ತು. ಬೌದ್ಧ ಧರ್ಮವು ಒಂದು ಸಂಪೂರ್ಣ ಧರ್ಮವಾಗಿರಲಿಲ್ಲ. ಅದರಲ್ಲಿ ಕೆಲವು ನೈತಿಕ ಸಿದ್ಧಾಂತಗಳು ಮಾತ್ರ ಇದ್ದುವು. ಆದರೆ ಅದು ಭಾರತದಿಂದ ಹೊರಟು ಜಪಾನ್

ಮತ್ತು ಮಂಗೋಲಿಯಾದ ತನಕ, ಇನ್ನೊಂದೆಡೆ ಅಫಘಾನಿಸ್ತಾನ ಮತ್ತು ಬುಖಾರದ ತನಕ ವ್ಯಾಪಿಸಿತು. ಆ ಧರ್ಮದ ಪ್ರಚಾರಕರು ದೂರದೂರದ ದೇಶಗಳಿಗೆ ತಲುಪಿದರು. ಕೆಲವೇ ಶತಮಾನಗಳ ಬಳಿಕ ಕ್ರೈಸ್ತ ಧರ್ಮವೂ ಹುಟ್ಟಿಕೊಂಡಿತು. ಹ. ಈಸಾರವರು(ಅ) ಇಸ್ಲಾಮ್ ಧರ್ಮದ ಬೋಧನೆಯನ್ನೇ ನೀಡಿದ್ದರಾದರೂ ಅವರ ಕಾಲಾನಂತರ ಕ್ರೈಸ್ತ ಧರ್ಮದ ಹೆಸರಲ್ಲಿ ಒಂದು ಧರ್ಮವನ್ನು ಹುಟ್ಟು ಹಾಕಲಾಗಿತ್ತು. ಕ್ರೈಸ್ತರು ತಮ್ಮ ಈ ಧರ್ಮವನ್ನು ಇರಾನ್‌ನಿಂದ ಆಫ್ರಿಕಾದ ದೂರದೂರದ ರಾಷ್ಟ್ರಗಳ ವರೆಗೆ ಹರಡಿದರು. ಈ ವಿದ್ಯಮಾನಗಳು ತಿಳಿಸುವುದೇನೆಂದರೆ ಅಂದು ಲೋಕವು ಸ್ವಯಂ ಒಂದು ಸಾರ್ವಲೌಕಿಕ ಧರ್ಮವನ್ನು ಅಪೇಕ್ಷಿಸುತ್ತಿತ್ತು. ಅದಕ್ಕಾಗಿ ಅದು ಒಂದು ಪರಿಪೂರ್ಣ ಮತ್ತು ನೈಜ ಧರ್ಮ ಸಿಗದಿದ್ದಾಗ ಅಪಕ್ವ ಮತ್ತು ಅಪೂರ್ಣ ಧರ್ಮಗಳನ್ನೇ ಮಾನವ ಜನಾಂಗಗಳಲ್ಲಿ ಹರಡತೊಡಗಿತ್ತು.

## ಹ. ಮುಹಮ್ಮದ್‌ರ(ಸ) ಪ್ರವಾದಿತ್ವ

ಈ ಕಾಲದಲ್ಲೇ ಸಮಸ್ತ ಲೋಕಕ್ಕೆ ಮತ್ತು ಎಲ್ಲ ಮಾನವ ಜನಾಂಗಗಳಿಗೆ ಓರ್ವ ಪ್ರವಾದಿಯಾಗಿ ಹ. ಮುಹಮ್ಮದ್‌ರನ್ನು(ಸ) ಅರೇಬಿಯಾದ ನೆಲದಲ್ಲಿ ಹುಟ್ಟಿಸಲಾಯಿತು. ಅವರಿಗೆ ಇಸ್ಲಾಮಿನ ಪೂರ್ಣ ಶಿಕ್ಷಣ ಮತ್ತು ಸಮಗ್ರ ಕಾನೂನನ್ನು ನೀಡಿ ಜಗತ್ತಿನಲ್ಲಿ ಅದನ್ನು ವ್ಯಾಪಿಸಲು ಆಜ್ಞಾಪಿಸಲಾಯಿತು.

ಲೋಕದ ಭೂಪಟದ ಮೇಲೊಮ್ಮೆ ದೃಷ್ಟಿ ಹಾಯಿಸಿ ನೋಡಿ. ಇಡೀ ಲೋಕದ ಪ್ರವಾದಿತ್ವಕ್ಕೆ ಭೂಮುಖದ ಮೇಲೆ ಅರಬ್ ದೇಶಕ್ಕಿಂತ ಹೆಚ್ಚು ಸೂಕ್ತವಾದಂತಹ ಬೇರೊಂದು ಪ್ರದೇಶ ಇರಲಾರದೆಂಬುದು ನಿಮಗೆ ಒಂದೇ ನೋಟದಲ್ಲಿ ಮನವರಿಕೆ ಯಾಗುವುದು. ಈ ದೇಶವು ಏಷ್ಯಾ ಮತ್ತು ಆಫ್ರಿಕಾದ ನಡು ಮಧ್ಯದಲ್ಲಿದೆ. ಯುರೋಪ್ ಕೂಡಾ ಇಲ್ಲಿಂದ ಬಹಳ ಸಮೀಪವಿದೆ. ವಿಶೇಷವಾಗಿ ಅಂದಿನ ಕಾಲದಲ್ಲಿ ಯುರೋಪಿನ ಸುಸಂಸ್ಕೃತ ಜನಾಂಗಗಳು ಹೆಚ್ಚಾಗಿ ಯುರೋಪಿನ ದಕ್ಷಿಣ ಭಾಗದಲ್ಲಿ ನೆಲೆಸಿದ್ದುವು. ಈ ಪ್ರದೇಶವು ಅರಬ್ ದೇಶಕ್ಕೆ ಭಾರತದಷ್ಟೇ ನಿಕಟವಾಗಿತ್ತು.

ಆ ಕಾಲದ ಇತಿಹಾಸವನ್ನೊಮ್ಮೆ ಓದಿ ನೋಡಿದರೆ ಈ ಪ್ರವಾದಿತ್ವಕ್ಕೆ ಅಂದು ಅರಬ್ ಜನಾಂಗಕ್ಕಿಂತ ಹೆಚ್ಚು ಸೂಕ್ತವಾದ ಬೇರೊಂದು ಜನಾಂಗ ಇರಲಿಲ್ಲವೆಂಬುದು ನಮಗೆ ತಿಳಿದು ಬರುತ್ತದೆ. ಇತರ ದೊಡ್ಡ ದೊಡ್ಡ ಜನಾಂಗಗಳು ತಮ್ಮ ತಮ್ಮ ಶಕ್ತಿಯನ್ನು ಪ್ರದರ್ಶಿಸಿ ಸೋತು ಹೋಗಿದ್ದುವು. ಅರಬ್ ಜನಾಂಗದ ಸ್ಥಿತಿಯು ಹಾಗಿರಲಿಲ್ಲ. ನಾಗರಿಕತೆಯ ಪ್ರಗತಿಯೊಂದಿಗೆ ಇತರ ಜನಾಂಗಗಳ ಅಭ್ಯಾಸ ಕೆಟ್ಟು ಹೋಗಿತ್ತು. ಆದರೆ ಅರಬ್ ಜನಾಂಗದಲ್ಲಿ ಅಂದು ಅದನ್ನು ಸುಖಲೋಲುಪ, ಆರಾಮ ಪ್ರಿಯ ಮತ್ತು ಕೆಟ್ಟದಾಗಿ ಮಾರ್ಪಡಿಸುವ ಯಾವುದೇ ನಾಗರಿಕತೆ ಇರಲಿಲ್ಲ. ಆರನೆಯ ಶತಮಾನದ ಅರಬ್ ದೇಶವು ಅಂದಿನ ಕಾಲದ ನಾಗರಿಕ ಜನಾಂಗಗಳ

ದುಷ್ಪ್ರಭಾವಗಳಿಂದ ಸಂಪೂರ್ಣ ಮುಕ್ತವಾಗಿತ್ತು. ನಾಗರಿಕತೆಯ ಗಂಧಗಾಳಿಯೂ ಸೋಂಕದಂತಹ ಒಂದು ಜನಾಂಗದಲ್ಲಿ ಇರಬಹುದಾದಂತಹ ಎಲ್ಲ ಮಾನವೀಯ ಗುಣಗಳು ಅರಬ್ ಜನಾಂಗದಲ್ಲಿದ್ದುವು. ಅವರು ಶೂರರಾಗಿದ್ದರು, ನಿರ್ಭೀತರಾಗಿದ್ದರು. ಉದಾರಿಗಳಾಗಿದ್ದರು, ವಚನಪಾಲಕರಾಗಿದ್ದರು, ಸ್ವತಂತ್ರ ವಿಚಾರವುಳ್ಳವರಾಗಿದ್ದರು ಹಾಗೂ ಸ್ವಾತಂತ್ರ್ಯ ಪ್ರಿಯರಾಗಿದ್ದರು. ಯಾವುದೇ ಜನಾಂಗದ ಗುಲಾಮರಾಗಿರಲಿಲ್ಲ. ತಮ್ಮ ಮಾನಕ್ಕಾಗಿ ಪ್ರಾಣವನ್ನೇ ಅರ್ಪಿಸಲು ಸಿದ್ಧರಾಗುತ್ತಿದ್ದರು. ಸುಖಲೋಲುಪತೆಯ ಜೀವನ ಅವರಿಗೆ ಅಪರಿಚಿತವಾಗಿತ್ತು. ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಅವರಲ್ಲಿ ಅನೇಕ ಕೆಡುಕುಗಳು ಇದ್ದುವು ಎಂಬುದು ನಿಜ. ಆದರೆ ಈ ಕೆಡುಕುಗಳಿಗೆ ಕಾರಣ ಎರಡೂವರೆ ಸಹಸ್ರ ವರ್ಷಗಳಿಂದ ಆ ಜನಾಂಗದಲ್ಲಿ ಯಾವುದೇ ಪ್ರವಾದಿ ಬಂದಿರಲಿಲ್ಲ.[1] ಅವರ ನೈತಿಕ ಸುಧಾರಣೆ ಮಾಡಿ ಅವರಲ್ಲಿ ಒಂದು ಉತ್ತಮ ಸಂಸ್ಕೃತಿಯನ್ನು ಬೆಳೆಸುವಂತಹ ನಾಯಕರಾರೂ ಅವರಲ್ಲಿ ಉಂಟಾಗಲಿಲ್ಲ. ಶತಮಾನಗಳ ಕಾಲ ಮರುಭೂಮಿಯಲ್ಲಿ ಸ್ವತಂತ್ರ ಜೀವನ ಸಾಗಿಸಿರುವುದರಿಂದ ಅವರಲ್ಲಿ ಅಜ್ಞಾನವು ವ್ಯಾಪಕವಾಗಿತ್ತು. ಅವರು ತಮ್ಮ ಅಜ್ಞಾನದಲ್ಲಿ ಎಷ್ಟು ಕಠಿಣವಾಗಿ ಹೋಗಿದ್ದರೆಂದರೆ ಅವರನ್ನು ನಾಗರಿಕ ವ್ಯಕ್ತಿಗಳಾಗಿ ಮಾರ್ಪಡಿಸುವುದು ಯಾವುದೇ ಸಾಮಾನ್ಯ ಮನುಷ್ಯನ ಶಕ್ತಿಗೆ ಮೀರಿದ ಕೆಲಸವಾಗಿತ್ತು. ಆದರೆ ಇದರ ಜೊತೆಗೇ ಒಬ್ಬ ಬಲಿಷ್ಠ ವ್ಯಕ್ತಿ ಅವರ ಸುಧಾರಣೆ ಮಾಡಬಯಸಿದರೆ ಮತ್ತು ಅವನ ಶಿಕ್ಷಣದ ಪ್ರಭಾವದಿಂದ ಅವರೊಂದು ಉನ್ನತ ಧ್ಯೇಯವನ್ನು ಅಂಗೀಕರಿಸ ಹೊರಟರೆ ಇಡೀ ಜಗತ್ತನ್ನೇ ಜಯಿಸುವಷ್ಟು ಸಾಮರ್ಥ್ಯ ಅವರಲ್ಲಿತ್ತು. ವಿಶ್ವ ಪ್ರವಾದಿಯ ಶಿಕ್ಷಣವನ್ನು ಜಗದಗಲಕ್ಕೆ ವ್ಯಾಪಿಸಲು ಇಂತಹುದೇ ಒಂದು ಯುವ ಮತ್ತು ಶಕ್ತಿಶಾಲಿ ಜನಾಂಗದ ಅಗತ್ಯವಿತ್ತು.

ಇನ್ನು ಅರಬೀ ಭಾಷೆಯನ್ನೊಮ್ಮೆ ನೋಡಿ. ನೀವು ಈ ಭಾಷೆಯನ್ನು ಕಲಿತು ಅದರ ಸಾಹಿತ್ಯವನ್ನು ಓದಿದರೆ ಅತ್ಯುನ್ನತ ಮಟ್ಟದ ವಿಚಾರಗಳನ್ನು ವ್ಯಕ್ತಪಡಿಸಲು, ದೈವಿಕ ಜ್ಞಾನದ ಅತ್ಯಂತ ಸೂಕ್ಷ್ಮ ಮತ್ತು ಸಂಕೀರ್ಣ ವಿಷಯಗಳನ್ನು ತಿಳಿಸಲು ಹಾಗೂ ಮನಸ್ಸುಗಳಲ್ಲಿ ಪ್ರಭಾವ ಬೀರಲು ಇದಕ್ಕಿಂತ ಹೆಚ್ಚು ಸೂಕ್ತವಾದ ಭಾಷೆ ಖಂಡಿತ ಬೇರೊಂದಿಲ್ಲವೆಂದು ಮನಗಾಣುವಿರಿ. ಈ ಭಾಷೆಯ ಸಂಕ್ಷಿಪ್ತ ವಾಕ್ಯಗಳಲ್ಲಿ ದೊಡ್ಡ ದೊಡ್ಡ ವಿಷಯಗಳನ್ನು ತಿಳಿಸಬಹುದಾಗಿದೆ. ಮಾತ್ರವಲ್ಲದೇ ಅದರಲ್ಲಿ ಮನಸ್ಸಿನ ಮೇಲೆ ಬಾಣ ಮತ್ತು ಭರ್ಜಿಯಂತೆ ಪ್ರಭಾವ ಬೀರುವಂತಹ ಶಕ್ತಿ ಇದೆ. ಅದರ ಮಾಧುರ್ಯವು ಕಿವಿಗಳಿಗೆ ಇಂಪು ನೀಡುತ್ತದೆ. ಅದರಲ್ಲಿರುವ ಸಂಗೀತವು ಮನುಷ್ಯನನ್ನು ತನ್ಮಯಗೊಳಿಸುತ್ತದೆ. ಕುರ್‌ಆನಿನಂತಹ ಗ್ರಂಥಕ್ಕೆ ಇಂತಹುದೇ ಭಾಷೆಯ ಅಗತ್ಯವಿತ್ತು.

1. ಪ್ರವಾದಿ ಇಬ್ರಾಹೀಮ್(ಅ) ಮತ್ತು ಪ್ರವಾದಿ ಇಸ್ಮಾಈಲ್(ಅ)ರ ಕಾಲವು ಪ್ರವಾದಿ ಮುಹಮ್ಮದ್(ಸ)ರಿಗಿಂತ 2,500 ವರ್ಷಗಳಷ್ಟು ಹಿಂದಿನದಾಗಿತ್ತು. ಈ ದೀರ್ಘ ಅವಧಿಯಲ್ಲಿ ಅರಬ್ ಜನಾಂಗದಲ್ಲಿ ಯಾವುದೇ ಪ್ರವಾದಿ ಬಂದಿರಲಿಲ್ಲ.

ಆದ್ದರಿಂದ ಇಡೀ ವಿಶ್ವದ ಪ್ರವಾದಿತ್ವಕ್ಕಾಗಿ ಅರಬ್ ದೇಶವನ್ನು ಆರಿಸುವಲ್ಲಿ ಅಲ್ಲಾಹನ ಬಹುದೊಡ್ಡ ಯುಕ್ತಿಯು ಅಡಗಿದೆ. ಈ ಕಾರ್ಯಕ್ಕಾಗಿ ಆಯ್ಕೆ ಮಾಡಿರು ವಂತಹ ಪಾವನ ವ್ಯಕ್ತಿತ್ವವು ಎಷ್ಟು ಅಸಾಮಾನ್ಯವಾದುದು ಎಂಬುದನ್ನು ಈಗ ನೋಡೋಣ.

## ಮುಹಮ್ಮದ್‌ರ(ಸ) ಪ್ರವಾದಿತ್ವದ ಆಧಾರ

1.400 ವರ್ಷಗಳ ಹಿಂದಿನ ಇತಿಹಾಸವನ್ನೊಮ್ಮೆ ತಿರುವಿ ನೋಡಿ. ಅಂದು ಲೋಕದಲ್ಲಿ ರೇಡಿಯೋ–ಟೆಲಿವಿಷನ್‌ಗಳಾಗಲಿ, ತಂತಿ ಮತ್ತು ಟೆಲಿಫೋನ್‌ಗಳಾಗಲಿ ಇರಲಿಲ್ಲ. ರೈಲು ಮಾರ್ಗಗಳಿರಲಿಲ್ಲ. ಮುದ್ರಣಾಲಯಗಳಿರಲಿಲ್ಲ. ಪತ್ರಿಕೆಗಳಾಗಲಿ, ನಿಯತಕಾಲಿಕಗಳಾಗಲಿ ಪ್ರಕಟವಾಗುತ್ತಿರಲಿಲ್ಲ. ಗ್ರಂಥಗಳು ಮುದ್ರಿಸಲ್ಪಡುತ್ತಿರಲಿಲ್ಲ. ಇಂದು ಕಾಣುವಂತಹ ಪ್ರವಾಸ ಮತ್ತು ಪ್ರಯಾಣದ ಯಾವ ಸೌಲಭ್ಯವೂ ಅಂದು ಇರಲಿಲ್ಲ. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತಲುಪಲು ತಿಂಗಳುಗಟ್ಟಲೆ ಪ್ರಯಾಣ ಮಾಡಬೇಕಾಗಿತ್ತು. ಈ ಪರಿಸ್ಥಿತಿಯಲ್ಲಿ ಲೋಕದ ಮಧ್ಯೆ ಅರಬ್ ದೇಶವು ಎಲ್ಲರಿಗಿಂತ ಭಿನ್ನವಾಗಿ ಪ್ರತ್ಯೇಕವಾಗಿತ್ತು. ಅದರ ಸುತ್ತಮುತ್ತಲೂ ಇರಾನ್, ರೋಮ್ ಮತ್ತು ಈಜಿಪ್ಟ್ ದೇಶಗಳಿದ್ದು ಅವುಗಳಲ್ಲಿ ವಿದ್ಯೆ ಮತ್ತು ಕಲೆಯ ಅಲ್ಪಸ್ವಲ್ಪ ಚರ್ಚೆ ಇತ್ತು. ಆದರೆ ಅತಿ ವಿಶಾಲವಾದ ಮರಳುಗಾಡುಗಳು ಅರಬ್ ದೇಶವನ್ನು ಅವುಗಳಿಂದ ಪ್ರತ್ಯೇಕಿಸಿಬಿಟ್ಟಿತ್ತು. ಅರಬ್ ವ್ಯಾಪಾರಿಗಳು ಒಂಟೆಗಳನ್ನೇರಿ ತಿಂಗಳುಗಟ್ಟಲೆ ಪ್ರಯಾಣ ಬೆಳೆಸಿ ಈ ದೇಶಗಳಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಆದರೆ ಈ ಸಂಬಂಧವು ಕೇವಲ ಸರಕುಗಳ ಖರೀದಿ ಮತ್ತು ಮಾರಾಟಕ್ಕೆ ಸೀಮಿತವಾಗಿತ್ತು. ಅರಬ್ ದೇಶದಲ್ಲಿ ಯಾವುದೇ ಉನ್ನತ ಮಟ್ಟದ ನಾಗರಿಕತೆ ಇರಲಿಲ್ಲ. ಶಾಲೆಯಾಗಲಿ, ಗ್ರಂಥಾಲಯವಾಗಲಿ ಇರಲಿಲ್ಲ. ಜನರಲ್ಲಿ ವಿದ್ಯೆಯ ಬಗ್ಗೆ ಚರ್ಚೆ ಇರಲಿಲ್ಲ. ಇಡೀ ದೇಶದಲ್ಲಿ ಬೆರಳೆಣಿಕೆಯ ಜನರಿಗೆ ಮಾತ್ರ ಅಲ್ಪಸ್ವಲ್ಪ ಓದು ಬರಹ ತಿಳಿದಿತ್ತು. ಆದರೆ ಅದು ಅಂದಿನ ಕಾಲದ ವಿಜ್ಞಾನ ಮತ್ತು ಕಲೆಯ ಬಗ್ಗೆ ತಿಳುವಳಿಕೆ ಗಳಿಸುವಷ್ಟು ಪರ್ಯಾಪ್ತವಾಗಿರಲಿಲ್ಲ. ಅಲ್ಲಿ ಯಾವುದೇ ವ್ಯವಸ್ಥಿತ ಸರಕಾರ ಇರಲಿಲ್ಲ. ಯಾವುದೇ ಕಾನೂನು ಇರಲಿಲ್ಲ. ಪ್ರತಿಯೊಂದು ಗೋತ್ರವೂ ಸ್ವತಂತ್ರವಾಗಿತ್ತು. ಕೊಳ್ಳೆ ಹೊಡೆಯುವುದು ದಿನನಿತ್ಯದ ಪರಿಪಾಠವಾಗಿತ್ತು. ಆಗಾಗ ರಕ್ತರಂಜಿತ ಯುದ್ಧಗಳು ನಡೆಯುತ್ತಿದ್ದುವು. ಮನುಷ್ಯ ಪ್ರಾಣಕ್ಕೆ ಯಾವುದೇ ಬೆಲೆ ಇರಲಿಲ್ಲ. ಶಕ್ತಿವಂತನು ಯಾರನ್ನು ಬೇಕಾದರೂ ಹಿಡಿದು ಕೊಲ್ಲುತ್ತಿದ್ದ ಮತ್ತು ಅವನ ಸೊತ್ತನ್ನು ವಶಪಡಿಸಿಕೊಳ್ಳುತ್ತಿದ್ದ. ನೀತಿ ಮತ್ತು ಸಂಸ್ಕೃತಿಯ ಗಂಧಗಾಳಿಯೂ ಅವರಿಗೆ ಸೋಂಕಿರಲಿಲ್ಲ. ವ್ಯಭಿಚಾರ, ಮದ್ಯಪಾನ ಮತ್ತು ಜೂಜಾಟವು ವ್ಯಾಪಕವಾಗಿತ್ತು. ಜನರು ಪರಸ್ಪರರೆದುರು ನಿಸ್ಸಂಕೋಚವಾಗಿ ನಗ್ನರಾಗಿ ಬಿಡುತ್ತಿದ್ದರು. ಸ್ತ್ರೀಯರು ಕೂಡಾ ನಗ್ನರಾಗಿಯೇ ಕಅಬಾ ಭವನದ ಪ್ರದಕ್ಷಿಣೆ ಮಾಡುತ್ತಿದ್ದರು. ಸಮ್ಮತ – ನಿಷಿದ್ಧ ಎಂಬ ತಾರತಮ್ಯವೇ ಅವರಿಗಿರಲಿಲ್ಲ.

ಅರಬರಲ್ಲಿ ಸ್ವಾತಂತ್ರ್ಯವು ಎಷ್ಟರ ಮಟ್ಟಿಗೆ ಇತ್ತೆಂದರೆ ಯಾವುದೇ ವ್ಯಕ್ತಿ ಯಾವುದೇ ಕಾನೂನು ಕಟ್ಟಳೆ ಮತ್ತು ನಿಯಮಕ್ಕೆ ಬದ್ಧನಾಗಲು ಸಿದ್ಧನಿರಲಿಲ್ಲ. ಯಾರ ಆಜ್ಞೆಯನ್ನೂ ಅವರು ಸ್ವೀಕರಿಸಲು ಸಿದ್ಧರಿರಲಿಲ್ಲ. ಇದು ಸಾಲದೆಂಬಂತೆ ಅಜ್ಞಾನವು ಮುಗಿಲು ಮುಟ್ಟಿತ್ತು. ಇಡೀ ಜನಾಂಗವೇ ಕಲ್ಲಿನ ಮೂರ್ತಿಗಳನ್ನು ಪೂಜಿಸುತ್ತಿತ್ತು. ದಾರಿಯಲ್ಲಿ ಸಾಗುವಾಗ ಒಂದು ನಯವಾದ ಕಲ್ಲು ಕಂಡರೆ ಸಾಕು, ಅದನ್ನೇ ಎತ್ತಿ ಪೂಜಿಸತೊಡಗು ತ್ತಿದ್ದರು. ಅಂದರೆ ಯಾವ ಕೊರಳು ಯಾರ ಮುಂದೆಯೂ ಬಾಗುತ್ತಿರಲಿಲ್ಲವೋ ಅದು ಕಲ್ಲುಗಳ ಮುಂದೆ ಮಣಿಯುತ್ತಿತ್ತು. ಈ ಕಲ್ಲುಗಳು ಅವರ ಇಷ್ಟಾರ್ಥಗಳನ್ನು ಸಿದ್ಧಿಸಿ ಕೊಡುತ್ತವೆಂದು ಅವರು ನಂಬಿದ್ದರು.

ಇಂತಹ ಜನಾಂಗ ಮತ್ತು ಇಂತಹ ಪರಿಸ್ಥಿತಿಯಲ್ಲಿ ಓರ್ವ ವ್ಯಕ್ತಿ ಜನಿಸುತ್ತಾರೆ. ಬಾಲ್ಯದಲ್ಲೇ ತಂದೆ – ತಾಯಿ ಮತ್ತು ತಾತನ ಆಶ್ರಯ ತಪ್ಪಿ ಹೋಗುತ್ತದೆ. ಅವರೆಲ್ಲ ಆ ವ್ಯಕ್ತಿಯ ಬಾಲ್ಯದಲ್ಲೇ ನಿಧನರಾಗುತ್ತಾರೆ. ಆದ್ದರಿಂದ ಅಂದಿನ ಅಳಿದುಳಿದ ತರಬೇತಿಯು ಅವರಿಗೆ ಸಿಗದೇ ಹೋಗುತ್ತದೆ. ಸ್ವಲ್ಪ ದೊಡ್ಡವನಾಗುತ್ತಲೇ ಇತರ ಅರಬ್ ಬಾಲಕರೊಂದಿಗೆ ಆಡು ಮೇಯಿಸಲಾರಂಭಿಸುತ್ತಾರೆ. ಯುವಕನಾಗುತ್ತಲೇ ವ್ಯಾಪಾರಕ್ಕೆ ತೊಡಗುತ್ತಾರೆ. ಯಾವ ಅರಬರ ಸ್ಥಿತಿಯನ್ನು ನಾವು ಮೇಲೆ ಓದಿದೆವೋ ಅವರ ಜೊತೆಗೇ ರಾತ್ರೆ ಹಗಲಿನ ಒಡನಾಟ ಮತ್ತು ವ್ಯವಹಾರ. ವಿದ್ಯೆ ಕಲಿತೇ ಇಲ್ಲ. ಓದು ಬರಹವೂ ತಿಳಿದಿಲ್ಲ. ಆದರೆ ಇದೆಲ್ಲದರ ಹೊರತಾಗಿಯೂ ಅವರ ಅಭ್ಯಾಸಗಳು, ಅವರ ನೀತಿ, ಅವರ ನಡವಳಿಕೆ, ಅವರ ವಿಚಾರಗಳು ಎಲ್ಲವೂ ಇತರರಿಗಿಂತ ಭಿನ್ನವಾಗಿದ್ದುವು. ಅವರೆಂದೂ ಸುಳ್ಳಾಡುತ್ತಿರಲಿಲ್ಲ. ಯಾರೊಂದಿಗೂ ಜಗಳ ಕಾಯುತ್ತಿರಲಿಲ್ಲ. ಇತರ ಅರಬರಂತೆ ಅವರ ಮಾತು ಒರಟಾಗಿರದೆ, ಮಧುರವಾಗಿತ್ತು. ಅವರ ಮಾತು ಕೇಳಿ ಜನರು ಅವರಿಗೆ ಮಾರು ಹೋಗುತ್ತಿದ್ದರು. ಅವರು ಯಾರದೇ ಒಂದು ಚಿಕ್ಕಾಸು ಹಣವನ್ನೂ ಅಕ್ರಮವಾಗಿ ಪಡೆಯುತ್ತಿರಲಿಲ್ಲ. ಜನರು ತಮ್ಮ ಅತ್ಯಂತ ಬೆಲೆಬಾಳುವ ವಸ್ತುಗಳನ್ನು ಅವರ ಬಳಿ ಜೋಪಾನವಾಗಿಡಲು ಕೊಡುವಷ್ಟರ ಮಟ್ಟಿಗೆ ಅವರ ಪ್ರಾಮಾಣಿಕತೆ ಜನಜನಿತವಾಗಿತ್ತು. ಅವರು ಪ್ರತಿಯೊಬ್ಬರ ಸೊತ್ತನ್ನೂ ತಮ್ಮ ಪ್ರಾಣದಷ್ಟು ಜತನದಿಂದ ಕಾಪಾಡುತ್ತಿದ್ದರು. ಇಡೀ ಜನಾಂಗವೇ ಅವರ ಪ್ರಾಮಾಣಿಕತೆಯ ಮೇಲೆ ಭರವಸೆ ಇಡುತ್ತಿತ್ತು. ಆದ್ದರಿಂದಲೇ ಅವರನ್ನು 'ಅಲ್ ಅಮೀನ್' ಅರ್ಥಾತ್ ಪ್ರಾಮಾಣಿಕ ಎಂಬ ಬಿರುದಿನಿಂದ ಕರೆಯುತ್ತಿತ್ತು. ಅವರು ಅತ್ಯಧಿಕ ಲಜ್ಜೆ–ನಾಚಿಕೆ ಉಳ್ಳವರಾಗಿದ್ದರು. ಬಾಲ್ಯಾವಸ್ಥೆಯಿಂದಲೇ ಯಾರೂ ಅವರನ್ನು ನಗ್ನರಾಗಿ ಕಂಡಿರಲಿಲ್ಲ. ಅವರು ಅತ್ಯಂತ ಸಭ್ಯರೂ ಅಚ್ಚುಕಟ್ಟಿನವರೂ ಆಗಿದ್ದರು. ಅಸಭ್ಯ ಮತ್ತು ಮಲಿನರಾಗಿರುವ ಜನರೊಂದಿಗೆ ಬೆಳೆದಿದ್ದರೂ ಅವರಿಗೆ ಅವುಗಳ ಬಗ್ಗೆ ತಿರಸ್ಕಾರ ಭಾವನೆಯೇ ಇತ್ತು. ಅವರ ಎಲ್ಲ ಕೆಲಸಗಳೂ ಶುದ್ಧವೂ ಅಚ್ಚುಕಟ್ಟಿನಿಂದ ಕೂಡಿದುವೂ ಆಗಿದ್ದುವು. ಅವರ ವಿಚಾರಗಳೂ ಅತ್ಯಂತ

ಪರಿಶುದ್ಧವಾಗಿದ್ದುವು. ಕೊಲೆ–ಸುಲಿಗೆಗಳನ್ನು ಕಂಡು ಅವರು ಮರುಗುತ್ತಿದ್ದರು. ಯುದ್ಧಗಳ ವೇಳೆ ಅವರು ಶಾಂತಿ ಸಂಧಾನದ ಪ್ರಯತ್ನ ಮಾಡುತ್ತಿದ್ದರು. ಅವರ ಮನಸ್ಸು ಅತ್ಯಂತ ಮೃದುವಾಗಿತ್ತು. ಪ್ರತಿಯೊಬ್ಬನ ದುಃಖ–ದುಮ್ಮಾನಗಳಲ್ಲಿ ಭಾಗಿಯಾಗುತ್ತಿದ್ದರು. ಅನಾಥರಿಗೆ ಮತ್ತು ವಿಧವೆಯರಿಗೆ ಸಹಾಯ ಮಾಡುತ್ತಿದ್ದರು. ಹಸಿದವರಿಗೆ ಉಣಿಸುತ್ತಿದ್ದರು. ಯಾತ್ರಿಕರನ್ನು ಸತ್ಕರಿಸುತ್ತಿದ್ದರು. ಅವರಿಂದಾಗಿ ಎಂದೂ ಯಾರಿಗೂ ದುಃಖವಾಗಿರಲಿಲ್ಲ. ಅವರು ಸ್ವಯಂ ಇತರರಿಗಾಗಿ ದುಃಖ ಸಹಿಸುತ್ತಿದ್ದರು. ಅವರು ಅತ್ಯಂತ ಕುಶಾಗ್ರಮತಿಯಾಗಿದ್ದರು. ಮೂರ್ತಿ ಪೂಜಕರ ಜನಾಂಗದಲ್ಲಿದ್ದು ಕೂಡಾ ಎಂದೂ ಮೂರ್ತಿ ಪೂಜೆ ಮಾಡಿದವರಲ್ಲ. ವಿಗ್ರಹಾರಾಧನೆಯನ್ನು ಅವರು ದ್ವೇಷಿಸುತ್ತಿದ್ದರು. ಯಾವ ವಸ್ತುವೂ ಪೂಜಾರ್ಹವಲ್ಲವೆಂದು ಅವರ ಅಂತರಾತ್ಮವೇ ಸಾರಿ ಹೇಳುತ್ತಿತ್ತು. ದೇವನು ಕೇವಲ ಒಬ್ಬನೇ ಆಗಿರಲು ಸಾಧ್ಯ ಎಂದು ಅವರ ಮನಸ್ಸು ಸ್ವಯಂ ಸಾಕ್ಷ್ಯ ವಹಿಸುತ್ತಿತ್ತು. ಆ ಅಜ್ಞಾನೀ ಜನಾಂಗದ ಮಧ್ಯೆ ಈ ವ್ಯಕ್ತಿಯು ಕಲ್ಲಿನ ರಾಶಿಯಲ್ಲಿರುವ ವಜ್ರದಂತೆ ಮಿನುಗುತ್ತಿದ್ದರು ಅಥವಾ ಗಾಢಾಂಧಕಾರ ದಲ್ಲಿ ಅವರೊಂದು ಪ್ರಕಾಶಮಾನ ದೀಪವಾಗಿದ್ದರು.

40 ವರ್ಷಗಳ ತನಕ ಈ ರೀತಿ ಪಾವನ, ಪರಿಶುದ್ಧ ಮತ್ತು ಉನ್ನತ ಮಟ್ಟದ ಸಭ್ಯ ಜೀವನ ಸಾಗಿಸಿದ ಬಳಿಕ ಆ ವ್ಯಕ್ತಿಯು ತನ್ನ ಸುತ್ತಮುತ್ತಲಿರುವ ಅಂಧಕಾರವನ್ನು ಕಂಡು ಗಾಬರಿಗೊಳ್ಳುತ್ತಾರೆ. ಅಜ್ಞಾನ, ಅನೀತಿ, ದುರ್ನಡತೆ, ಅಶಿಸ್ತು, ಬಹುದೇವ ವಿಶ್ವಾಸ ಮತ್ತು ವಿಗ್ರಹಾರಾಧನೆಯ ಒಂದು ಭೀಕರ ಸಮುದ್ರವು ಅವರನ್ನು ಸುತ್ತುವರಿದಿತ್ತು. ಅದರಿಂದ ಅವರು ಹೊರಬರಲು ಬಯಸುತ್ತಿದ್ದರು. ಏಕೆಂದರೆ ಅಲ್ಲಿ ಯಾವ ವಸ್ತುವೂ ಅವರ ಪ್ರಕೃತಿಗೆ ಸರಿಹೊಂದುತ್ತಿರಲಿಲ್ಲ. ಕೊನೆಗೆ ಅವರು ಜನವಾಸದಿಂದ ದೂರದ ಒಂದು ಬೆಟ್ಟದ ಗವಿಯಲ್ಲಿ ಹೋಗಿ ಏಕಾಂತ ಮತ್ತು ಪ್ರಶಾಂತ ವಾತಾವರಣದಲ್ಲಿ ಅನೇಕ ದಿನಗಳನ್ನು ಕಳೆಯುತ್ತಿದ್ದರು. ಉಪವಾಸವಿದ್ದು ತಮ್ಮ ಆತ್ಮ, ಮನಸ್ಸು ಮತ್ತು ಮಸ್ತಿಷ್ಕವನ್ನು ಇನ್ನಷ್ಟು ಶುದ್ಧವೂ ಪಾವನವೂ ಆಗಿ ಮಾರ್ಪಡಿಸುತ್ತಿದ್ದರು. ಧ್ಯಾನ ಚಿಂತನೆಗಳಲ್ಲಿ ನಿರತರಾಗುತ್ತಿದ್ದರು. ತನ್ನ ಸುತ್ತ ಕವಿದಿರುವ ಅಂಧಕಾರವನ್ನು ದೂರೀಕರಿಸುವ ಜ್ಯೋತಿಯೊಂದನ್ನು ಶೋಧಿಸುತ್ತಿದ್ದರು. ಈ ಕೆಟ್ಟು ಹೋದ ಜಗತ್ತನ್ನು ಅಳಿಸಿ ಒಂದು ಹೊಸ ವಿಶ್ವವನ್ನು ಕಟ್ಟಿ ಬೆಳೆಸಬಯಸುತ್ತಿದ್ದರು.

ಹಠಾತ್ತನೆ ಈ ಸ್ಥಿತಿಯಲ್ಲಿ ಒಂದು ಮಹಾನ್ ಮಾರ್ಪಾಟು ಉಂಟಾಗುತ್ತದೆ. ಅವರ ಪ್ರಕೃತಿಯು ಅಪೇಕ್ಷಿಸುತ್ತಿದ್ದಂತಹ ಜ್ಯೋತಿಯು ಅವರ ಮನಸ್ಸಿನಲ್ಲಿ ಮೂಡಿ ಬರುತ್ತದೆ. ಇದ್ದಕ್ಕಿದ್ದಂತೆ ಅವರಲ್ಲಿ ಹಿಂದೆಂದೂ ಕಂಡು ಬರದಂತಹ ಶಕ್ತಿಯು ಅನುಭವವಾಗುತ್ತದೆ. ಅವರು ಗುಹೆಯ ಏಕಾಂತದಿಂದ ಹೊರಬರುತ್ತಾರೆ. ತಮ್ಮ ಜನಾಂಗದ ಬಳಿ ಹೋಗಿ, "ಈ ವಿಗ್ರಹಗಳು ಯಾವ ಕೆಲಸಕ್ಕೂ ಬರಲಾರವು. ಇವುಗಳನ್ನು ಬಿಟ್ಟು ಬಿಡಿ. ಈ ಭೂಮಿ, ಸೂರ್ಯ, ನಕ್ಷತ್ರಗಳು ಮತ್ತು ಈ ಭೂಮಿ–

ಆಕಾಶಗಳಲ್ಲಿರುವ ಎಲ್ಲ ಶಕ್ತಿಗಳು ಒಬ್ಬ ದೇವನ ಸೃಷ್ಟಿಗಳು. ಅವನೇ ನಿಮ್ಮ ಸೃಷ್ಟಿಕರ್ತನು, ಪರಿಪಾಲಕನು, ಅನ್ನದಾತನು, ಜೀವನ–ಮರಣಗಳನ್ನು ನೀಡುವವನು. ಎಲ್ಲವನ್ನೂ ತೊರೆದು ಆತನನ್ನೇ ಪೂಜಿಸಿರಿ. ಎಲ್ಲರನ್ನೂ ಬಿಟ್ಟು ಅವನಲ್ಲೇ ನಿಮ್ಮ ಅಗತ್ಯಗಳನ್ನು ಬೇಡಿರಿ. ನೀವು ಮಾಡುತ್ತಿರುವ ಈ ಕಳ್ಳತನ, ಲೂಟಿ, ಮದ್ಯಪಾನ, ಜೂಜಾಟ, ವ್ಯಭಿಚಾರ ಎಲ್ಲವೂ ಮಹಾ ಪಾಪಗಳಾಗಿವೆ; ಅವುಗಳನ್ನು ತೊರೆಯಿರಿ. ಅಲ್ಲಾಹನು ಅವುಗಳನ್ನು ಇಷ್ಟಪಡುವುದಿಲ್ಲ. ಸತ್ಯವನ್ನೇ ನುಡಿಯಿರಿ. ನ್ಯಾಯವನ್ನೇ ಪಾಲಿಸಿರಿ. ಯಾರ ಪ್ರಾಣವನ್ನೂ ಹರಣ ಮಾಡದಿರಿ. ಯಾರ ಸೊತ್ತನ್ನೂ ದೋಚ ಬೇಡಿರಿ, ಏನನ್ನು ಪಡೆಯುವುದಿದ್ದರೂ ನ್ಯಾಯದೊಂದಿಗೆ ಪಡೆಯಿರಿ. ಏನನ್ನು ಕೊಡುವುದಿದ್ದರೂ ನ್ಯಾಯದೊಂದಿಗೆ ಕೊಡಿರಿ. ನೀವೆಲ್ಲರೂ ಮನುಷ್ಯರು. ಮನುಷ್ಯ ರೆಲ್ಲರೂ ಪರಸ್ಪರ ಸಮಾನರು. ನಿಮ್ಮ ಹಿರಿಮೆ ಗೌರವಗಳಿರುವುದು ಕುಲಗೋತ್ರ ಗಳಿಂದಲ್ಲ, ಬಣ್ಣ ರೂಪಗಳಿಂದಲ್ಲ ಮತ್ತು ಸೊತ್ತು ಸಂಪತ್ತಿನಿಂದಲ್ಲ. ಅದು ದೇವ ಭಕ್ತಿ, ಒಳಿತು ಮತ್ತು ಚಾರಿತ್ರ್ಯದ ಪರಿಶುದ್ಧತೆಯಲ್ಲಿದೆ. ದೇವನನ್ನು ಭಯಪಟ್ಟು ಒಳಿತು ಮತ್ತು ಪರಿಶುದ್ಧತೆಯ ಮಾರ್ಗವನ್ನು ಅನುಸರಿಸಿದವನೇ ಉನ್ನತ ಮಟ್ಟದ ಮನುಷ್ಯನು. ಹಾಗಿಲ್ಲದವರಿಗೆ ಯಾವ ಗೌರವವೂ ಇಲ್ಲ. ಸತ್ತ ಬಳಿಕ ನಿಮಗೆಲ್ಲರಿಗೂ ನಿಮ್ಮ ಪ್ರಭುವಿನ ಬಳಿ ಹಾಜರಾಗಲಿಕ್ಕಿದೆ. ಆ ನೈಜ ನ್ಯಾಯಾಧೀಶನ ಮುಂದೆ ಯಾವ ಶಿಫಾರಸ್ಸೂ ಫಲಿಸದು. ಲಂಚ–ರುಷುವತ್ತು ನಡೆಯದು. ಕುಲಗೋತ್ರಗಳೂ ಯಾವ ಕೆಲಸಕ್ಕೂ ಬಾರದು. ಅಲ್ಲಿ ಕೇವಲ ಸತ್ಯವಿಶ್ವಾಸ ಮತ್ತು ಸತ್ಕರ್ಮಗಳಿಗೆ ಬೆಲೆಯಿರುವುದು. ಅದು ಯಾರ ಬಳಿ ಇರುವುದೋ ಅವರು ಸ್ವರ್ಗ ಪ್ರವೇಶಿಸುವರು. ಯಾರ ಬಳಿ ಅದಿರುವುದಿಲ್ಲವೋ ಆ ಹತಭಾಗಿಗಳು ನರಕಕ್ಕೆ ತಳ್ಳಲ್ಪಡುವರು."

ಆ ಅಜ್ಞಾನಿ ಜನಾಂಗವು ಈ ಸತ್ಯಸಂಧ ವ್ಯಕ್ತಿಯನ್ನು ಪೀಡಿಸಲಾರಂಭಿಸಿತು. ನಮ್ಮ ಪೂರ್ವಜರಿಂದಲೇ ನಡೆದು ಬಂದ ಆಚಾರ ಸಂಪ್ರದಾಯಗಳನ್ನು ಇವನೇಕೆ ದೂಷಿಸುತ್ತಾನೆ ಮತ್ತು ನಮ್ಮ ಪೂರ್ವಜರ ಸಂಪ್ರದಾಯಕ್ಕೆ ವಿರುದ್ಧವಾದುದನ್ನು ಯಾಕೆ ಬೋಧಿಸುತ್ತಾನೆ ಎಂಬುದೊಂದೇ ಈ ಪೀಡನೆಗೆ ಕಾರಣ. ಈ 'ಅಪರಾಧ'ಕ್ಕಾಗಿ ಅವರನ್ನು ಬಯ್ಯುತ್ತಾರೆ. ಅವರಿಗೆ ಕಲ್ಲು ಹೊಡೆಯುತ್ತಾರೆ. ಅವರ ಜೀವನವನ್ನೇ ದುಸ್ತರಗೊಳಿಸುತ್ತಾರೆ. ಅವರ ಕೊಲೆಗೆ ಸಂಚು ಹೂಡುತ್ತಾರೆ. ಒಂದೆರಡು ದಿನಗಳಲ್ಲ, ನಿರಂತರ ಹದಿಮೂರು ವರ್ಷಗಳ ತನಕ ಅತ್ಯಂತ ಕಠಿಣವಾಗಿ ಪೀಡಿಸುತ್ತಾರೆ. ಕೊನೆಗೆ ಅವರು ದೇಶ ತೊರೆಯಲು ನಿರ್ಬಂಧಿತರಾಗುತ್ತಾರೆ. ದೇಶದಿಂದ ಹೊರ ಹಾಕಿಯೂ ಅವರು ಸುಮ್ಮನಿರುವುದಿಲ್ಲ. ಅನೇಕ ವರ್ಷಗಳ ತನಕ ಅವರು ಆಶ್ರಯ ಪಡೆದಲ್ಲಿಗೂ ಹೋಗಿ ಅವರನ್ನು ಪೀಡಿಸುತ್ತಿರುತ್ತಾರೆ.

ಈ ಎಲ್ಲ ಸಂಕಷ್ಟಗಳನ್ನು ಆ ವ್ಯಕ್ತಿ ಏಕೆ ಅನುಭವಿಸಿದ್ದರು. ಅವರು ಆ ಜನಾಂಗಕ್ಕೆ ನೇರ ಮಾರ್ಗ ತೋರಿಸಬಯಸಿದ್ದರು ಎಂಬುದು ಮಾತ್ರ ಕಾರಣ. ಅವರ

ಜನಾಂಗವು ಅವರನ್ನು ತಮ್ಮ ಅರಸನನ್ನಾಗಿ ಮಾಡಲು ಸಿದ್ಧವಿತ್ತು. ಸಂಪತ್ತಿನ ರಾಶಿಯನ್ನೇ ಅವರ ಕಾಲ ಬುಡದಲ್ಲಿ ತಂದು ಹಾಕಲು ಸಿದ್ಧವಿತ್ತು. ಇವೆಲ್ಲವೂ ಅವರು ತಮ್ಮ ಸತ್ಯ ಪ್ರಚಾರವನ್ನು ನಿಲ್ಲಿಸಬೇಕು ಎಂಬುದಕ್ಕಾಗಿತ್ತು. ಆದರೆ ಅವರು ಅದೆಲ್ಲವನ್ನೂ ತಿರಸ್ಕರಿಸಿದರು. ತಮ್ಮ ಮಾತಿನ ಮೇಲೆ ಅಚಲರಾಗಿ ನಿಂತರು. ಯಾವ ಸ್ವಾರ್ಥವೂ ಇಲ್ಲದೆ ಕೇವಲ ಇತರರ ಒಳಿತಿಗಾಗಿ ಇಷ್ಟೆಲ್ಲ ಸಂಕಷ್ಟಗಳನ್ನು ಅನುಭವಿಸುವುದಕ್ಕಿಂತ ಮಿಗಿಲಾದ ಒಳ್ಳೆಯತನ ಮತ್ತು ಸತ್ಯಸಂಧತೆಯನ್ನು ಊಹಿಸಲು ಸಾಧ್ಯವೇ? ಯಾರ ಒಳಿತಿಗಾಗಿ ಅವರು ಈ ಪ್ರಯತ್ನಗಳನ್ನು ಮಾಡುತ್ತಿದ್ದರೋ, ಅವರು ಆ ವ್ಯಕ್ತಿಗೆ ಕಲ್ಲು ಹೊಡೆಯುತ್ತಿದ್ದರು. ಅದಕ್ಕೆ ಪ್ರತಿಯಾಗಿ ಅವರು ಈ ಜನರ ಒಳಿತಿಗಾಗಿ ಪ್ರಾರ್ಥಿಸುತ್ತಿದ್ದರು. ಮನುಷ್ಯರಂತಿರಲಿ ದೇವಚರರು ಕೂಡಾ ಅವರ ಒಳ್ಳೆಯತನಕ್ಕೆ ಮಾರು ಹೋಗದಿರಲಾರರು.

ಈ ವ್ಯಕ್ತಿಯು ಆ ಗುಹೆಯಿಂದ ಈ ಶಿಕ್ಷಣವನ್ನು ಹೊತ್ತು ಹೊರಬಂದಾಗ ಅವರಲ್ಲಿ ಎಷ್ಟು ದೊಡ್ಡ ಕ್ರಾಂತಿಯುಂಟಾಗಿತ್ತು ಎಂಬುದನ್ನೊಮ್ಮೆ ನೋಡಿ. ಅವರು ಜನರಿಗೆ ಕೇಳಿಸುತ್ತಿದ್ದಂತಹ ವಾಣಿಯು ಎಷ್ಟು ಅಮೋಘ ಮತ್ತು ಅತುಲ್ಯವಾಗಿತ್ತೆಂದರೆ ಅವರಿಗಿಂತ ಹಿಂದೆಯಾಗಲೀ ಅವರ ನಂತರವಾಗಲೀ ಯಾರಿಗೂ ಅಂತಹ ವಾಣಿಯನ್ನು ಮುಂದಿಡಲು ಸಾಧ್ಯವಾಗಿರಲಿಲ್ಲ. ಅರಬರಿಗೆ ತಮ್ಮ ಕಾವ್ಯ, ಭಾಷಣಕಲೆ ಮತ್ತು ಭಾಷಾ ಪಾಂಡಿತ್ಯದ ಬಗ್ಗೆ ಬಹಳ ಗರ್ವವಿತ್ತು. ಆ ವ್ಯಕ್ತಿಯು ಅರಬರಿಗೆ, 'ನೀವು ಇಂತಹ ಒಂದು ಅಧ್ಯಾಯವನ್ನಾದರೂ ರಚಿಸಿ ತನ್ನಿ' ಎಂದು ಪಂಥಾಹ್ವಾನ ನೀಡಿದರು. ಆದರೆ ಎಲ್ಲರ ಶಿರಗಳು ಅಸಹಾಯಕತೆಯೊಂದಿಗೆ ಬಾಗಿದವು. ಹೆಚ್ಚೇಕೆ, ಸ್ವಯಂ ಆ ವ್ಯಕ್ತಿಯ ಸಾಮಾನ್ಯ ಮಾತುಕತೆ ಮತ್ತು ಭಾಷಣದ ಭಾಷೆ ಕೂಡಾ ಆ ವಿಶಿಷ್ಟ ವಾಣಿಯಷ್ಟು ಉನ್ನತಮಟ್ಟದ್ದಾಗಿರಲಿಲ್ಲ. ಇಂದಿಗೂ ನಾವು ಅವರ ಇತರ ವಚನ ಮತ್ತು ಬೋಧನೆಗಳನ್ನೂ ಈ ವಾಣಿಯನ್ನೂ ತುಲನೆ ಮಾಡಿ ನೋಡಿದರೆ ಬಹಳ ಸ್ಪಷ್ಟವಾದ ವ್ಯತ್ಯಾಸ ಕಂಡು ಬರುತ್ತದೆ.

ಆ ನಿರಕ್ಷರಿಯಾದ ಮರುಭೂಮಿಯ ನಿವಾಸಿ ಹೇಳಲಾರಂಭಿಸಿದಂತಹ ಯುಕ್ತಿ ಮತ್ತು ಜಾಣ್ಮೆಯ ಮಾತುಗಳು ಅವರಿಗಿಂತ ಹಿಂದೆಯಾಗಲೀ ಅವರ ನಂತರವಾಗಲೀ ಯಾವ ಮನುಷ್ಯನಿಂದಲೂ ಹೇಳಲು ಸಾಧ್ಯವಾಗಲಿಲ್ಲ. ಸ್ವಯಂ ಆ ವ್ಯಕ್ತಿಯ ಬಾಯಿ ಯಿಂದಲೂ 40 ವರ್ಷ ಪ್ರಾಯಕ್ಕಿಂತ ಮುಂಚೆ ಯಾರೂ ಆಲಿಸಿರಲಿಲ್ಲ.

ಆ ನಿರಕ್ಷರಿಯಾದ ಮನುಷ್ಯನು ನೈತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಮಾನವ ಜೀವನದ ಎಲ್ಲ ಕ್ಷೇತ್ರಗಳ ಕುರಿತು ನೀಡಿದಂತಹ ಕಾನೂನುಗಳ ಯುಕ್ತಿಯನ್ನೂ ಮೇಲ್ಮೆಯನ್ನೂ ಅರಿಯಲು ದೊಡ್ಡ ದೊಡ್ಡ ವಿದ್ವಾಂಸರು ಮತ್ತು ಬುದ್ಧಿಜೀವಿಗಳು ಸಂಪೂರ್ಣ ಜೀವನದ ಅನುಭವ, ಚಿಂತನ ಮತ್ತು ಅಧ್ಯಯನದ

ಬಳಿಕವಷ್ಟೇ ಸಾಧ್ಯವಾಯಿತು. ಲೋಕದಲ್ಲಿ ವಿದ್ಯೆ ಮತ್ತು ವಿಜ್ಞಾನವು ಪ್ರಗತಿ ಹೊಂದಿದಂತೆಲ್ಲ ಅವುಗಳ ಯುಕ್ತಿಯು ಇನ್ನಷ್ಟು ಸ್ಪಷ್ಟವಾಗುತ್ತಾ ಸಾಗುತ್ತಿದೆ. ಹದಿನಾಲ್ಕು ಶತಮಾನಗಳಿಗಿಂತಲೂ ಅಧಿಕ ಕಾಲ ಕಳೆದು ಹೋಯಿತು. ಆದರೆ ಅವರು ರಚಿಸಿದ ಕಾನೂನುಗಳಲ್ಲಿ ಇಂದಿಗೂ ಯಾವುದೇ ಪರಿವರ್ತನೆಯ ಅಗತ್ಯ ಬೀಳಲಿಲ್ಲ. ಲೋಕದ ಕಾನೂನುಗಳು ಸಹಸ್ರಾರು ಸಲ ರಚಿಸಲ್ಪಟ್ಟು ಬದಲಾವಣೆ ಗೊಂಡುವು. ಪ್ರತಿಯೊಂದು ಪರೀಕ್ಷಾ ಘಟ್ಟದಲ್ಲೂ ಆ ಕಾನೂನು ವಿಫಲವಾಗಿದೆ ಮತ್ತು ಪ್ರತಿ ಬಾರಿ ಅದನ್ನು ತಿದ್ದುಪಡಿ ಮಾಡಬೇಕಾಗಿ ಬಂದಿದೆ. ಆದರೆ, ಆ ಮರುಭೂಮಿ ನಿವಾಸಿಯಾದ ನಿರಕ್ಷರಿಯಾದ ವ್ಯಕ್ತಿಯು ಯಾವುದೇ ಇತರ ಮನುಷ್ಯರ ನೆರವಿಲ್ಲದೆ ತಂದಂತಹ ಕಾನೂನಿನ ಒಂದಂಶವೂ ಬದಲಾವಣೆಗೆ ಒಳಗಾಗಲಿಲ್ಲ.

ಅವರು 23 ವರ್ಷಗಳ ಅವಧಿಯಲ್ಲಿ ತಮ್ಮ ಚಾರಿತ್ರ್ಯ, ಒಳಿತು, ಸಭ್ಯತೆ ಮತ್ತು ಉನ್ನತ ಬೋಧನೆಗಳ ಬಲದಿಂದ ತಮ್ಮ ಶತ್ರುಗಳನ್ನು ಮಿತ್ರರಾಗಿ ಮಾರ್ಪಡಿಸಿದರು. ತಮ್ಮ ವಿರೋಧಿಗಳನ್ನು ಸಂಗಾತಿಗಳಾಗಿ ಮಾಡಿಕೊಂಡರು. ಅವರ ವಿರುದ್ಧ ದೊಡ್ಡ ದೊಡ್ಡ ಶಕ್ತಿಗಳು ಎದ್ದುವು. ಆದರೆ ಕಟ್ಟ ಕಡೆಗೆ ಪರಾಜಿತಗೊಂಡು ಅವರಿಗೆ ಶರಣಾದುವು. ಅವರು ಜಯ ಗಳಿಸಿದಾಗ ಯಾವ ವೈರಿಯಿಂದಲೂ ಪ್ರತೀಕಾರ ಪಡೆಯಲಿಲ್ಲ. ಯಾರ ಮೇಲೂ ಅಕ್ರಮವೆಸಗಲಿಲ್ಲ. ತಮ್ಮ ಪ್ರೀತಿಯ ಚಿಕ್ಕಪ್ಪನನ್ನು ಕೊಂದ ವ್ಯಕ್ತಿಯನ್ನೂ ಅವರ ಮೃತ ಶರೀರದಿಂದ ಯಕೃತವನ್ನು ಕಿತ್ತು ಜಗಿದ ಮಹಿಳೆಯನ್ನೂ ವಿಜಯಿಯಾದ ಬಳಿಕ ಕ್ಷಮಿಸಿ ಬಿಟ್ಟರು. ಅವರನ್ನು ವಿಧವಿಧವಾಗಿ ಪೀಡಿಸಿ ದೇಶಭ್ರಷ್ಟಗೊಳಿಸಿದಂತಹ ವ್ಯಕ್ತಿಗಳನ್ನು ಜಯಿಸಿಯೂ ಅವರಿಗೆ ಕ್ಷಮಾದಾನ ನೀಡಿದರು. ಅವರೆಂದೂ ಯಾರನ್ನೂ ವಂಚಿಸಲಿಲ್ಲ. ಎಂದೂ ವಾಗ್ದಾನ ಮಾಡಿ ಮುರಿಯಲಿಲ್ಲ. ಯುದ್ಧದ ವೇಳೆಯೂ ಯಾರ ಮೇಲೂ ಅಕ್ರಮವೆಸಗಲಿಲ್ಲ. ಅವರ ಅತ್ಯಂತ ಕಠಿಣ ಶತ್ರು ಕೂಡಾ ಅವರ ಮೇಲೆ ಯಾವುದೇ ಪಾಪ ಅಥವಾ ಅಕ್ರಮದ ಆರೋಪ ಹೊರಿಸಲಿಲ್ಲ. ಈ ಒಳ್ಳೆಯತನವೇ ಕಟ್ಟಕಡೆಗೆ ಇಡೀ ಅರಬ್ ಜಗತ್ತಿನ ಮನಸೂರೆಗೊಂಡಿತು. ಅನಂತರ ಅವರು ತಮ್ಮ ಬೋಧನೆ ಮತ್ತು ಮಾರ್ಗದರ್ಶನಗಳ ಮೂಲಕ, ಯಾವ ಅರಬರ ಸ್ಥಿತಿಯನ್ನು ನೀವು ಈಗಾಗಲೇ ಓದಿರುವಿರೋ, ಅವರನ್ನು ಅಕ್ರಮ, ಅಜ್ಞಾನ ಮತ್ತು ಅಂಧಕಾರದಿಂದ ವಿಮೋಚಿಸಿ ಅತ್ಯುನ್ನತ ಮಟ್ಟದ ಸುಸಂಸ್ಕೃತ ಜನಾಂಗವಾಗಿ ಮಾರ್ಪಡಿಸಿದರು. ಯಾವುದೇ ನಿಯಮಕ್ಕೆ ಬದ್ಧರಾಗಲು ಸಿದ್ಧವಿಲ್ಲದ ಆ ಅರಬರನ್ನು ಜಗತ್ತಿನ ಚರಿತ್ರೆಯಲ್ಲೇ ಅಸದೃಶವಾದಂತಹ ಕಾನೂನು ಪಾಲಕರಾಗಿ ಮಾರ್ಪಡಿಸಿದರು. ಯಾವ ಅರಬರು ಯಾರನ್ನೂ ಅನುಸರಿಸಲು ಸಿದ್ಧರಾಗುತ್ತಿರಲಿಲ್ಲವೋ ಅಂತಹವರನ್ನು ಆ ವ್ಯಕ್ತಿಯು ಒಂದು ಮಹಾನ್ ಸಾಮ್ರಾಜ್ಯದ ಅಧೀನರಾಗಿ ಮಾರ್ಪಡಿಸಿದರು. ಯಾವ ಜನರಿಗೆ ನೈತಿಕತೆಯ ಗಂಧಗಾಳಿಯೂ ಸೋಂಕಿರಲಿಲ್ಲವೋ ಅವರನ್ನು ಚಾರಿತ್ರ್ಯದ ಎಂತಹ ಉನ್ನತಿಗೆ ಏರಿಸಿದರೆಂದರೆ

ಇಂದಿಗೂ ಅವರ ಚರಿತ್ರೆಯನ್ನೋದಿ ಜಗತ್ತು ದಿಗಿಲುಗೊಳ್ಳುತ್ತದೆ. ಯಾವ ಅರಬರು ಜಗತ್ತಿನ ಎಲ್ಲ ಜನಾಂಗಗಳಿಗಿಂತ ಹಿಂದುಳಿದವರಾಗಿದ್ದರೋ ಅವರನ್ನು ಆ ಏಕೈಕ ವ್ಯಕ್ತಿಯ ಪ್ರಭಾವವು 23 ವರ್ಷಗಳ ಅವಧಿಯಲ್ಲಿ ಜಗತ್ತಿನ ಮಹಾನ್ ಶಕ್ತಿಯಾಗಿ ಮಾರ್ಪಡಿಸಿತು. ಅವರು ಇರಾನ್, ರೋಮ್ ಮತ್ತು ಈಜಿಪ್ಟ್‌ನಂತಹ ಮಹಾ ಸಾಮ್ರಾಜ್ಯಗಳನ್ನು ಜಯಿಸಿದರು. ಜಗತ್ತಿಗೆ ನಾಗರಿಕತೆ, ಸಂಸ್ಕೃತಿ, ನೈತಿಕತೆ ಮತ್ತು ಮಾನವೀಯತೆಯ ಪಾಠ ಬೋಧಿಸಿದರು. ಇಸ್ಲಾಮಿನ ಬೋಧನೆ ಮತ್ತು ಧರ್ಮಶಾಸ್ತ್ರವನ್ನು ಹಿಡಿದು ಅವರು ಏಷ್ಯಾ, ಆಫ್ರಿಕಾ ಮತ್ತು ಯುರೋಪ್ ಖಂಡಗಳ ದೂರ ದೂರದ ಪ್ರದೇಶಗಳಿಗೆ ವ್ಯಾಪಿಸಿದರು.

ಈ ವರೆಗೆ ವಿವರಿಸಿದುದು ಕೇವಲ ಅರಬ್ ಜನಾಂಗದ ಮೇಲೆ ಆದಂತಹ ಪ್ರಭಾವದ ಕುರಿತಾಗಿತ್ತು. ಇದಕ್ಕಿಂತಲೂ ಹೆಚ್ಚು ವಿಸ್ಮಯಕಾರೀ ಪ್ರಭಾವವನ್ನು ಆ ನಿರಕ್ಷರಿ ವ್ಯಕ್ತಿಯ ಬೋಧನೆಯು ಇಡೀ ಜಗತ್ತಿನ ಮೇಲೆ ಬೀರಿದೆ. ಅವರು ಸಂಪೂರ್ಣ ಜಗತ್ತಿನ ಆಚಾರ–ವಿಚಾರ ಮತ್ತು ಕಾನೂನುಗಳಲ್ಲಿ ಕ್ರಾಂತಿಯುಂಟು ಮಾಡಿದರು. ಅವರನ್ನು ತಮ್ಮ ನಾಯಕನೆಂದು ಒಪ್ಪಿಕೊಂಡವರ ಮಾತಂತಿರಲಿ, ಅವರ ಅನುಸರಣೆಯನ್ನು ನಿರಾಕರಿಸಿದವರು, ಅವರನ್ನು ವಿರೋಧಿಸಿದವರು ಮತ್ತು ಅವರ ಶತ್ರುಗಳಾದವರು ಕೂಡಾ ಅದರಿಂದ ಪ್ರಭಾವಿತರಾಗದೇ ಉಳಿಯಲಿಲ್ಲ ಎಂಬುದು ಇನ್ನಷ್ಟು ಆಶ್ಚರ್ಯಕರ ವಿಷಯ. ಜಗತ್ತು ಏಕದೇವತ್ವದ ಪಾಠವನ್ನು ಸಂಪೂರ್ಣ ಮರೆತಿತ್ತು, ಆ ವ್ಯಕ್ತಿ ಈ ಪಾಠವನ್ನು ಮತ್ತೆ ನೆನಪಿಸಿದರು. ಅವರು ಏಕದೇವವಾದದ ಕಹಳೆಯನ್ನು ಎಷ್ಟು ಜೋರಾಗಿ ಊದಿದರೆಂದರೆ, ಇಂದು ಮೂರ್ತಿ ಪೂಜಕ ಮತ್ತು ಬಹುದೇವಾರಾಧಕ ಮತಗಳು ಕೂಡಾ ಏಕದೇವತ್ವವೇ ತಮ್ಮ ಮೂಲ ಧರ್ಮವೆಂದು ಸಾರಲು ನಿರ್ಬಂಧಿತವಾಗಿವೆ. ಅವರು ನೈತಿಕತೆಯ ಎಷ್ಟು ಬಲಿಷ್ಠ ಶಿಕ್ಷಣ ನೀಡಿದರೆಂದರೆ ಅವರು ನೀಡಿದ ಸಿದ್ಧಾಂತಗಳು ಜಗತ್ತಿನ ಎಲ್ಲಾ ನೈತಿಕ ಪದ್ಧತಿಗಳಲ್ಲಿ ಹರಡುತ್ತಲೇ ಸಾಗುತ್ತಿವೆ. ಅವರು ಕಾನೂನು, ರಾಜಕೀಯ, ಸಂಸ್ಕೃತಿ ಮತ್ತು ಸಮಾಜಶಾಸ್ತ್ರದ ಯಾವ ಸಿದ್ಧಾಂತಗಳನ್ನು ಬೋಧಿಸಿದ್ದರೋ ಅವೆಷ್ಟು ಪರಿಪಕ್ವ ಮತ್ತು ಪ್ರಾಮಾಣಿಕ ಸಿದ್ಧಾಂತಗಳಾಗಿದ್ದವೆಂದರೆ, ಅವರ ಶತ್ರುಗಳು ಕೂಡಾ ಇಂದಿಗೂ ತೆರೆಮರೆಯಲ್ಲಿ ಅವುಗಳನ್ನು ಅಳವಡಿಸುತ್ತಾ ಇದ್ದಾರೆ.

ಈ ಹಿಂದೆ ನಿಮಗೆ ತಿಳಿಸಲಾದಂತೆ ಈ ವ್ಯಕ್ತಿ ಒಂದು ಅಜ್ಞಾನಿ ಜನಾಂಗದ ಮಧ್ಯೆ ಒಂದು ಅತ್ಯಂತ ಅಂಧಕಾರಮಯ ದೇಶದಲ್ಲಿ ಹುಟ್ಟಿದರು. ನಲ್ವತ್ತು ವರ್ಷ ಪ್ರಾಯವಾಗುವ ತನಕ ಅವರು ಆಡು ಮೇಯಿಸುವುದು ಮತ್ತು ವ್ಯಾಪಾರ ಬಿಟ್ಟರೆ ಬೇರಾವ ಕೆಲಸವನ್ನೂ ಮಾಡಿರಲಿಲ್ಲ. ಯಾವುದೇ ರೀತಿಯ ಶಿಕ್ಷಣ–ತರಬೇತಿಯನ್ನು ಅವರು ಪಡೆದಿರಲಿಲ್ಲ. ನಲ್ವತ್ತು ವರ್ಷ ಪ್ರಾಯ ತುಂಬುತ್ತಲೇ ಅವರಲ್ಲಿ ಇದ್ದಕ್ಕಿದ್ದಂತೆ ಈ ಎಲ್ಲ ಸಾಮರ್ಥ್ಯಗಳೂ ಹೇಗೆ ಒಟ್ಟುಗೂಡಿದವು. ಇಂತಹ ಜ್ಞಾನ ಅವರಿಗೆ

ಲಭಿಸಿದುದು ಎಲ್ಲಿಂದ? ಅವರಲ್ಲಿ ಈ ಅದ್ಭುತ ಶಕ್ತಿ ಹೇಗೆ ಉಂಟಾಯಿತು? ಒಬ್ಬ ವ್ಯಕ್ತಿ ಒಂದೇ ಸಮಯದಲ್ಲಿ ಅಸದೃಶ ದಂಡನಾಯಕ, ಉನ್ನತ ಮಟ್ಟದ ನ್ಯಾಯಾಧೀಶ, ಅತ್ಯುತ್ತಮ ಕಾನೂನು ನಿರ್ಮಾತೃ, ಅತುಲ್ಯ ತತ್ವಜ್ಞಾನಿ, ಸರಿಸಾಟಿ ಯಿಲ್ಲದ ನೈತಿಕ ಮತ್ತು ನಾಗರಿಕ ಸುಧಾರಕ, ಅದ್ಭುತ ಮುತ್ಸದ್ದಿ, ಇಷ್ಟೆಲ್ಲ ಕೆಲಸಗಳ ಹೊರತಾಗಿಯೂ ಅವರು ರಾತ್ರಿಯ ದೊಡ್ಡ ಭಾಗವನ್ನು ತಮ್ಮ ಪ್ರಭುವಿನ ಆರಾಧನೆಯಲ್ಲಿ ಕಳೆಯುತ್ತಾರೆ. ತಮ್ಮ ಮಡದಿ ಮಕ್ಕಳ ಹಕ್ಕು ಬಾಧ್ಯತೆಗಳನ್ನೂ ಸಂದಾಯ ಮಾಡುತ್ತಾರೆ. ಬಡವರ ಮತ್ತು ಸಂಕಷ್ಟಕ್ಕೀಡಾದವರ ಸೇವೆಯನ್ನೂ ಮಾಡುತ್ತಾರೆ. ಒಂದು ದೊಡ್ಡ ದೇಶದ ಆಡಳಿತ ಕೈ ಸೇರಿದ ಬಳಿಕವೂ ಅವರು ಓರ್ವ ಫಕೀರನಂತಹ ಜೀವನ ಸಾಗಿಸುತ್ತಾರೆ. ಚಾಪೆಯಲ್ಲಿ ಮಲಗುತ್ತಾರೆ. ದೊರಗು ಬಟ್ಟೆಗಳನ್ನು ಧರಿಸುತ್ತಾರೆ. ಬಡವರಂತಹ ಆಹಾರವನ್ನು ಸೇವಿಸುತ್ತಾರೆ. ಅನೇಕ ಸಲ ಉಪವಾಸವೂ ಬೀಳಬೇಕಾಗುತ್ತದೆ.

ಇಂತಹ ಅದ್ಭುತ ಸಿದ್ಧಿಗಳ ಬಳಿಕ, ತಾನೋರ್ವ ಅತಿಮಾನವನೆಂದು ಅವರು ವಾದಿಸಿದ್ದರೂ ಅದನ್ನು ಯಾರೂ ನಿರಾಕರಿಸುವಂತಿರಲಿಲ್ಲ. ಆದರೆ ಅವರು ಹೇಳಿದ್ದೇನು ಗೊತ್ತೇ? ಇವೆಲ್ಲವೂ ನನ್ನ ಸಾಧನೆಗಳೆಂದು ಅವರು ಹೇಳಿಕೊಳ್ಳಲಿಲ್ಲ. ಅವರು ಹೇಳಿದರು, "ನನ್ನ ಬಳಿ ಇರುವುದೆಲ್ಲವೂ ಅಲ್ಲಾಹನ ಕೊಡುಗೆಗಳಾಗಿವೆ. ಮನುಷ್ಯರಿಂದ ರಚಿಸಿ ತರಲು ಸಾಧ್ಯವಾಗದಂತಹ ನಾನು ಮುಂದಿಡುತ್ತಿರುವ ಈ ವಾಣಿ ನನ್ನ ಸಾಧನೆಯೋ ನನ್ನ ಬುದ್ಧಿಯ ಆವಿಷ್ಕಾರವೋ ಅಲ್ಲ. ಇದು ದೇವವಾಣಿಯಾಗಿದ್ದು ಇದರ ಎಲ್ಲ ಸ್ತುತಿಯೂ ಅವನಿಗೇ ಸಲ್ಲುತ್ತದೆ. ನಾನು ಮಾಡುತ್ತಿರುವ ಯಾವ ಕಾರ್ಯವೂ ನನ್ನ ಸಾಮರ್ಥ್ಯದಿಂದ ಮಾಡುತ್ತಿರುವುದಲ್ಲ. ಇದೆಲ್ಲವೂ ಅಲ್ಲಾಹನ ಮಾರ್ಗದರ್ಶನದಂತೆ ಮಾಡುತ್ತಿರುವುದಾಗಿದೆ. ಅವನಿಂದ ಸೂಚನೆ ಸಿಕ್ಕಿದಂತೆಯೇ ನಾನು ಮಾಡುತ್ತೇನೆ. ಅವನ ಆಜ್ಞೆಯಂತೆಯೇ ಹೇಳುತ್ತೇನೆ." ಇಂತಹ ಸತ್ಯವಂತ ವ್ಯಕ್ತಿಯನ್ನು ಪ್ರವಾದಿಯೆಂದು ಅಂಗೀಕರಿಸದಿರುವುದಾದರೂ ಹೇಗೆ? ಅವರ ಸಾಧನೆಗಳಂತೂ ಮಾನವ ಇತಿಹಾಸದಲ್ಲೇ ಸರಿಸಾಟಿ ಇಲ್ಲದ್ದು. ಲೋಕದ ಆರಂಭದಿಂದ ಇಂದಿನ ತನಕ ಅವರಂತಹ ಒಬ್ಬ ಮನುಷ್ಯರೂ ಸಿಗುವುದಿಲ್ಲ. ಆದರೂ ಅವರು ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಪಡದಷ್ಟು ಸತ್ಯವಂತರಾಗಿದ್ದಾರೆ. ಅದರ ಹೊಗಳಿಕೆಗಳನ್ನು ಅವರು ಸ್ವೀಕರಿಸಲು ಸಿದ್ಧರಿಲ್ಲ. ಬದಲಾಗಿ ಇದೆಲ್ಲವನ್ನೂ ದಯಪಾಲಿಸಿದವನಿಗೇ ಅದನ್ನು ಮೀಸಲಿಡುತ್ತಾರೆ. ಆದರೂ ಅವರನ್ನು ಪ್ರವಾದಿಯೆಂದು ಒಪ್ಪದಿರಲು ನಮ್ಮ ಬಳಿ ಕಾರಣವಾದರೂ ಏನಿದೆ? ಅವರು ಸ್ವಯಂ ತಮ್ಮ ಸಾಮರ್ಥ್ಯಗಳ ಬಗ್ಗೆ ಅದೆಲ್ಲವೂ ಅಲ್ಲಾಹನ ಕೊಡುಗೆಯಾಗಿದೆ ಎನ್ನುವಾಗ ನಾವೇಕೆ, 'ಅಲ್ಲ, ಅದೆಲ್ಲವೂ ನಿನ್ನ ಬುದ್ಧಿಯ ಆವಿಷ್ಕಾರಗಳು' ಎನ್ನಬೇಕು? ಸುಳ್ಳುಗಾರನಂತೂ ಇತರರ ಸಾಧನೆಗಳನ್ನೂ ತನ್ನದೆನ್ನುತ್ತಾನೆ. ಈ ವ್ಯಕ್ತಿಯಂತೂ ಸುಲಭವಾಗಿ ತನ್ನದೆನ್ನಬಹುದಾದ ಸಾಧನೆಗಳನ್ನೂ ತನ್ನದೆನ್ನಲು ಸಿದ್ಧನಿಲ್ಲ. ಆ ಸಾಧನೆಗಳ ಮೂಲವನ್ನು

ತಿಳಿಯಬಲ್ಲವರು ಯಾರೂ ಇರಲಿಲ್ಲ. ಆದ್ದರಿಂದ ಆ ಸಾಧನೆಗಳಿಗಾಗಿ ಅವರು ತಾವು ಅತಿಮಾನವರೆಂದು ವಾದಿಸಿದ್ದರೂ ಯಾರೂ ಅಲ್ಲಗಳೆಯುವಂತಿರಲಿಲ್ಲ. ಅವರಿಗಿಂತ ಅಧಿಕ ಸತ್ಯವಂತ ಮನುಷ್ಯ ಬೇರೆ ಇರಲು ಸಾಧ್ಯವೇ?

ಈ ವ್ಯಕ್ತಿಯೇ ನಮ್ಮ ನಾಯಕ. ಸಕಲ ವಿಶ್ವದ ಪ್ರವಾದಿ ಮುಹಮ್ಮದ್(ಸ)ರ ಸತ್ಯವಂತಿಕೆಯೇ ಅವರ ಪ್ರವಾದಿತ್ವದ ಪುರಾವೆಯಾಗಿದೆ. ಅವರ ಅತ್ಯದ್ಭುತ ಸಾಧನೆಗಳು ಅವರ ಚಾರಿತ್ರ್ಯ, ಅವರ ಪಾವನ ಜೀವನದ ಘಟನೆಗಳು ಎಲ್ಲವೂ ಚರಿತ್ರೆಯ ಪುಟಗಳಲ್ಲಿ ಸುರಕ್ಷಿತವಿದೆ. ಯಾರು ಸತ್ಯ ಪ್ರಿಯತೆಯೊಂದಿಗೆ, ತೆರೆದ ಮನಸ್ಸಿನೊಂದಿಗೆ, ನ್ಯಾಯಪೂರ್ಣವಾಗಿ ಅವುಗಳನ್ನು ಓದುತ್ತಾನೋ ಅವನ ಮನಸ್ಸು ಅವರು ಖಂಡಿತ ಅಲ್ಲಾಹನ ಪ್ರವಾದಿಯಾಗಿರುವರೆಂದು ಸ್ವಯಂ ಸಾಕ್ಷ್ಯ ಹೇಳದಿರದು. ಅವರು ಜನರ ಮುಂದಿಟ್ಟಿದ್ದ ವಾಣಿಯು ಇಂದು ನೀವು ಓದುತ್ತಿರುವ ಕುರ್‌ಆನ್ ಆಗಿದೆ. ಈ ಅತುಲ್ಯ ಗ್ರಂಥವನ್ನು ತೆರೆದ ಮನಸ್ಸಿನೊಂದಿಗೆ ಗಮನವಿಟ್ಟು ಅರ್ಥ ಮಾಡಿಕೊಂಡು ಓದುವವನು ಇದು ಅಲ್ಲಾಹನ ಗ್ರಂಥವಾಗಿದೆ. ಯಾವ ಮನುಷ್ಯನೂ ಇಂತಹ ಗ್ರಂಥ ರಚಿಸುವುದು ಸಾಧ್ಯವಿಲ್ಲ ಎಂಬುದನ್ನು ಒಪ್ಪಲೇ ಬೇಕಾಗುತ್ತದೆ.

## ಪ್ರವಾದಿತ್ವ ಪರಿಸಮಾಪ್ತಿ

ಈ ಕಾಲದಲ್ಲಿ ಇಸ್ಲಾಮಿನ ಸತ್ಯ ಮತ್ತು ನೇರವಾದ ಮಾರ್ಗವನ್ನು ತಿಳಿಯಲು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಬೋಧನೆಗಳ ಹೊರತು ಅನ್ಯ ಮಾರ್ಗವಿಲ್ಲವೆಂಬುದನ್ನು ಈಗ ನೀವು ತಿಳಿದುಕೊಳ್ಳಬೇಕಾಗಿದೆ. ಪ್ರವಾದಿ ಮುಹಮ್ಮದ್(ಸ) ಸಂಪೂರ್ಣ ಮಾನವಕುಲಕ್ಕೆ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ. ಅವರೊಂದಿಗೆ ಪ್ರವಾದಿತ್ವ ಪರಂಪರೆಯನ್ನು ಕೊನೆಗೊಳಿಸಲಾಗಿದೆ. ಅಲ್ಲಾಹನು ಮನುಷ್ಯರಿಗೆ ಎಷ್ಟು ಮಾರ್ಗದರ್ಶನ ಮಾಡಬಯಸಿದ್ದನೋ ಅದನ್ನೂ ಅವನು ತನ್ನ ಅಂತಿಮ ಪ್ರವಾದಿಯ ಮೂಲಕ ಕಳುಹಿಸಿ ಕೊಟ್ಟಿರುವನು. ಇನ್ನು ಯಾವನು ಸತ್ಯವನ್ನು ಅರಸುತ್ತಾನೋ ಮತ್ತು ಅಲ್ಲಾಹನ ವಿಧೇಯ ದಾಸನಾಗಿ ಜೀವಿಸಬಯಸುತ್ತಾನೋ ಅವನು ಅಲ್ಲಾಹನ ಅಂತಿಮ ಪ್ರವಾದಿಯ ಮೇಲೆ ವಿಶ್ವಾಸವಿರಿಸಲೇ ಬೇಕಾದುದು ಹಾಗೂ ಅವರು ನೀಡಿದ ಬೋಧನೆಗಳನ್ನು ಅಂಗೀಕರಿಸಿ ಅವರು ತೋರಿಸಿದ ಜೀವನ ಕ್ರಮವನ್ನು ಅನುಸರಿಸಲೇ ಬೇಕಾದುದು ಕಡ್ಡಾಯ.

## ಪ್ರವಾದಿತ್ವ ಪರಿಸಮಾಪ್ತಿಯ ಪುರಾವೆಗಳು

ಪ್ರವಾದಿತ್ವದ ವಾಸ್ತವಿಕತೆಯನ್ನು ನಾವು ಈಗಾಗಲೇ ತಿಳಿಸಿದ್ದೇವೆ. ಅದನ್ನು ತಿಳಿದುಕೊಂಡು ಅದರ ಬಗ್ಗೆ ಚಿಂತನೆ ನಡೆಸಿದರೆ ಪ್ರವಾದಿಗಳು ದಿನನಿತ್ಯ ಹುಟ್ಟಿ ಬರುವುದಿಲ್ಲ ಮತ್ತು ಪ್ರತಿಯೊಂದು ಜನಾಂಗಕ್ಕೆ ಎಲ್ಲ ಕಾಲಗಳಲ್ಲಿಯೂ ಓರ್ವ ಪ್ರವಾದಿ

ಇರಬೇಕಾಗಿಲ್ಲ ಎಂಬುದು ನಿಮಗೆ ಮನವರಿಕೆಯಾಗುವುದು. ಪ್ರವಾದಿಯ ಜೀವನವು ನಿಜವಾಗಿ ಅವರ ಶಿಕ್ಷಣ ಮತ್ತು ಮಾರ್ಗದರ್ಶನದ ಜೀವನವಾಗಿದೆ. ಅವರ ಶಿಕ್ಷಣ ಮತ್ತು ಮಾರ್ಗದರ್ಶನ ಜೀವಂತವಿರುವ ತನಕ ಅವರು ಸ್ವಯಂ ಜೀವಂತವಿದ್ದಂತೆಯೇ. ಹಿಂದಿನ ಪ್ರವಾದಿಗಳೆಲ್ಲರೂ ಗತಿಸಿ ಹೋದರು. ಏಕೆಂದರೆ ಅವರು ನೀಡಿದ ಶಿಕ್ಷಣವನ್ನು ಜಗತ್ತು ಬದಲಾಯಿಸಿತು. ಅವರು ತಂದ ಗ್ರಂಥಗಳ ಪೈಕಿ ಯಾವುದೂ ತನ್ನ ಮೂಲರೂಪದಲ್ಲಿ ಇಂದು ಉಳಿದಿಲ್ಲ. ಸ್ವಯಂ ಆ ಪ್ರವಾದಿಗಳ ಅನುಯಾಯಿಗಳು ಕೂಡಾ ನಮ್ಮ ಬಳಿ ಪ್ರವಾದಿಗಳು ನೀಡಿದ ಗ್ರಂಥಗಳು ಮೂಲ ರೂಪದಲ್ಲಿ ಇವೆ ಎಂದು ವಾದಿಸಲಾರರು. ಅವರು ತಮ್ಮ ಪ್ರವಾದಿಗಳ ಜೀವನ ಚರಿತ್ರೆಯನ್ನು ಮರೆತುಬಿಟ್ಟರು. ಗತ ಪ್ರವಾದಿಗಳ ಪೈಕಿ ಯಾರದೇ ಸರಿ ಯಾದ ಮತ್ತು ನಂಬಲರ್ಹ ಜೀವನ ವೃತ್ತಾಂತವು ಇಂದು ಎಲ್ಲಿಯೂ ಲಭ್ಯವಿಲ್ಲ. ಅವರು ಯಾವಾಗ ಜನಿಸಿದರು, ಎಲ್ಲಿ ಜನಿಸಿದರು, ಅವರ ಸಾಧನೆಗಳೇನು, ಅವರು ಹೇಗೆ ಜೀವನ ಸಾಗಿಸಿದರು, ಯಾವುದನ್ನು ಅವರು ಉಪದೇಶಿಸಿದರು, ಯಾವುದರಿಂದ ಅವರು ತಡೆದರು ಎಂಬಿತ್ಯಾದಿಗಳನ್ನೂ ಖಚಿತವಾಗಿ ಹೇಳುವಂತಿಲ್ಲ. ಇದುವೇ ಅವರ ಮರಣವಾಗಿದೆ. ಆದರೆ ಮುಹಮ್ಮದರು(ಸ) ಜೀವಂತವಿದ್ದಾರೆ. ಏಕೆಂದರೆ ಅವರ ಶಿಕ್ಷಣ ಮತ್ತು ಮಾರ್ಗದರ್ಶನ ಜೀವಂತವಿದೆ. ಅವರು ನೀಡಿದ ಕುರ್‌ಆನ್ ತನ್ನ ಮೂಲ ಪದಗಳಲ್ಲೇ ಉಳಿದುಕೊಂಡಿದೆ. ಅದರಲ್ಲಿ ಒಂದು ಅಕ್ಷರ, ಒಂದು ಬಿಂದು ಅಥವಾ ಒಂದು ಗೆರೆಯ ವ್ಯತ್ಯಾಸವೂ ಆಗಿಲ್ಲ. ಅವರ ಜೀವನದ ಸ್ಥಿತಿಗಳು, ಅವರ ವಚನಗಳು ಮತ್ತು ಅವರ ಕೃತಿಗಳು ಎಲ್ಲವೂ ಸುರಕ್ಷಿತವಾಗಿವೆ. 14 ಶತಮಾನಗಳು ಕಳೆದ ಬಳಿಕವೂ ನಾವು ಸ್ವಯಂ ಅವರನ್ನು ನೋಡುತ್ತಿರುವಷ್ಟು ಸ್ಪಷ್ಟವಾಗಿ ಅವರ ಚಿತ್ರವು ಇತಿಹಾಸದಲ್ಲಿ ನಮಗೆ ಗೋಚರಿಸುತ್ತದೆ. ಲೋಕದ ಯಾವ ವ್ಯಕ್ತಿಯ ಚರಿತ್ರೆಯೂ ಪ್ರವಾದಿವರ್ಯರ ಚರಿತ್ರೆಯಷ್ಟು ಸುರಕ್ಷಿತವಾಗಿಲ್ಲ. ನಾವು ನಮ್ಮ ಜೀವನದ ಎಲ್ಲ ವ್ಯವಹಾರಗಳಲ್ಲಿ ಸದಾ ಅವರ ಜೀವನದಿಂದ ಪಾಠ ಹೊಂದಬಹುದಾಗಿದೆ. ಪ್ರವಾದಿ ಮುಹಮ್ಮದ್‌ರ(ಸ) ಬಳಿಕ ಯಾವುದೇ ಪ್ರವಾದಿಯ ಅಗತ್ಯವಿಲ್ಲವೆಂಬುದಕ್ಕೆ ಇದುವೇ ಅತಿ ದೊಡ್ಡ ಪುರಾವೆಯಾಗಿದೆ.

ಒಬ್ಬ ಪ್ರವಾದಿಯ ನಂತರ ಇನ್ನೊಬ್ಬ ಪ್ರವಾದಿ ಬರುವುದಕ್ಕೆ ಕೇವಲ ಮೂರು ಕಾರಣಗಳಿರಲು ಸಾಧ್ಯ:

1. ಹಿಂದಿನ ಪ್ರವಾದಿಯ ಶಿಕ್ಷಣ ಮತ್ತು ಮಾರ್ಗದರ್ಶನ ಸಂಪೂರ್ಣವಾಗಿ ಅಳಿದು ಹೋಗಿದ್ದು ಅದನ್ನು ಮತ್ತೆ ಪ್ರಸ್ತುತಪಡಿಸುವ ಅಗತ್ಯ ತಲೆದೋರಿರಬೇಕು.

2. ಹಿಂದಿನ ಪ್ರವಾದಿಯ ಶಿಕ್ಷಣವು ಸಂಪೂರ್ಣವಾಗಿರದೆ ಅದರಲ್ಲಿ ತಿದ್ದುಪಡಿ ಅಥವಾ ಸೇರ್ಪಡೆಯ ಅಗತ್ಯ ತಲೆದೋರಿರಬೇಕು.

3. ಹಿಂದಿನ ಪ್ರವಾದಿಯ ಶಿಕ್ಷಣವು ಒಂದು ಪ್ರತ್ಯೇಕ ಜನಾಂಗಕ್ಕೆ ಸೀಮಿತವಾಗಿದ್ದು ಇತರ ಜನಾಂಗಕ್ಕೆ ಅಥವಾ ಜನಾಂಗಗಳಿಗೆ ಪ್ರವಾದಿಯ ಅಗತ್ಯ ತಲೆದೋರಿರಬೇಕು.[1]

ಈ ಮೂರು ಕಾರಣಗಳೂ ಈಗ ಉಳಿದಿಲ್ಲ:

1. ಪ್ರವಾದಿ ಮುಹಮ್ಮದ್‌ರ(ಸ) ಶಿಕ್ಷಣ ಮತ್ತು ಮಾರ್ಗದರ್ಶನವು ಜೀವಂತವಿದೆ. ಅವರ ಧರ್ಮ ಯಾವುದು, ಅವರು ತಂದ ಮಾರ್ಗದರ್ಶನವೇನು? ಯಾವ ಜೀವನ ಕ್ರಮವನ್ನು ಅವರು ಜಾರಿಗೆ ತಂದರು, ಯಾವ ಕ್ರಮಗಳನ್ನು ಅವರು ಅಳಿಸಿ ಹಾಕುವ ಪ್ರಯತ್ನ ಮಾಡಿದರು ಎಂದು ಸದಾ ತಿಳಿಮಕೊಳ್ಳಲು ಸಾಧ್ಯವಾಗುವಂತಹ ಮೂಲಗಳು ಪೂರ್ಣ ಸುರಕ್ಷಿತವಾಗಿವೆ. ಅವರ ಶಿಕ್ಷಣ ಮತ್ತು ಮಾರ್ಗದರ್ಶನ ಅಳಿದೇ ಇಲ್ಲ ಎಂದಾದ ಮೇಲೆ ಅದನ್ನು ಪುನಃ ಪ್ರಸ್ತುತ ಪಡಿಸಲು ಒಬ್ಬ ಪ್ರವಾದಿ ಬರುವ ಅಗತ್ಯವೇ ಇಲ್ಲ.

2. ಪ್ರವಾದಿವರ್ಯರ ಮುಖಾಂತರ ಲೋಕಕ್ಕೆ ಇಸ್ಲಾಮ್ ಧರ್ಮದ ಸಮಗ್ರ ಬೋಧನೆ ನೀಡಲಾಗಿದೆ. ಈಗ ಅದರಲ್ಲಿ ಯಾವುದೇ ಕಡಿತ ಅಥವಾ ಸೇರ್ಪಡೆಯ ಅಗತ್ಯ ಉಳಿದಿಲ್ಲ. ಒಬ್ಬ ಪ್ರವಾದಿ ಬಂದು ಸರಿಪಡಿಸಬೇಕಾದ ಯಾವ ಕುಂದೂ ಅದರಲ್ಲಿ ಉಳಿದಿಲ್ಲದಿರುವಾಗ ಎರಡನೆಯ ಕಾರಣವೂ ನಿವಾರಣೆಯಾದಂತಾಯಿತು.

3. ಪ್ರವಾದಿವರ್ಯರು ಯಾವುದೇ ಒಂದು ಪ್ರತ್ಯೇಕ ಜನಾಂಗಕ್ಕೆ ಬಂದಿರದೆ ಇಡೀ ಲೋಕಕ್ಕೇ ಪ್ರವಾದಿಯಾಗಿ ಕಳುಹಿಸಲ್ಪಟ್ಟಿರುತ್ತಾರೆ. ಎಲ್ಲ ಮನುಷ್ಯರಿಗೂ ಅವರ ಬೋಧನೆಗಳು ಪರ್ಯಾಪ್ತವಾಗಿವೆ. ಆದ್ದರಿಂದ ಈಗ ಯಾವುದೇ ಪ್ರತ್ಯೇಕ ಜನಾಂಗಕ್ಕೆ ಒಬ್ಬ ಪ್ರವಾದಿ ಬರುವ ಅಗತ್ಯವಿಲ್ಲ. ಈ ರೀತಿ ಮೂರನೆಯ ಕಾರಣವೂ ನಿವಾರಣೆಯಾಯಿತು.

ಆದ್ದರಿಂದಲೇ ಪ್ರವಾದಿ ಮುಹಮ್ಮದ್(ಸ)ರನ್ನು 'ಖಾತಮುನ್ನಬಿಯ್ಯೀನ್' ಎನ್ನಲಾಗಿದೆ. ಅರ್ಥಾತ್ ಪ್ರವಾದಿತ್ವ ಪರಂಪರೆಯನ್ನು ಕೊನೆಗೊಳಿಸಿದವರು. ಈಗ ಜಗತ್ತಿಗೆ ಬೇರೊಬ್ಬ ಪ್ರವಾದಿಯ ಅಗತ್ಯವಿಲ್ಲ. ಈಗ ಬೇಕಾಗಿರುವುದು ಪ್ರವಾದಿ ವರ್ಯರ(ಸ) ಜೀವನ ಕ್ರಮದಂತೆ ಸ್ವಯಂ ಜೀವಿಸಿ ಇತರರನ್ನು ಅದೇ ರೀತಿ ನಡೆಸುವವರು. ಅವರ ಶಿಕ್ಷಣವನ್ನು ತಿಳಿದು ಅದರಂತೆ ನಡೆಯುವವರು ಮತ್ತು ಲೋಕದಲ್ಲಿ ಅವರು ತಂದ ಕಾನೂನಿನ ಆಡಳಿತ ಸ್ಥಾಪಿಸುವವರು ಮಾತ್ರ.

1. ಒಬ್ಬ ಪ್ರವಾದಿಯ ಉಪಸ್ಥಿತಿಯಲ್ಲೇ ಅವರ ನೆರವಿಗೆ ಇನ್ನೊಬ್ಬ ಪ್ರವಾದಿಯ ಅಗತ್ಯ ಬೀಳುವಂತಹ ನಾಲ್ಕನೆಯ ಕಾರಣವೂ ಇರಬಹುದು. ಆದರೆ ನಾವು ಇದನ್ನು ಏಕೆ ಪ್ರಸ್ತಾಪಿಸಲಿಲ್ಲವೆಂದರೆ ಪವಿತ್ರ ಕುರ್‌ಆನಿನಲ್ಲಿ ಅದರ ಕೇವಲ ಎರಡು ಉದಾಹರಣೆಗಳು ಉಲ್ಲೇಖಿಸಲ್ಪಟ್ಟಿವೆ. ಆದರೆ ಈ ವಿರಳ ಉದಾಹರಣೆಗಳಿಂದ ಅಲ್ಲಾಹನ ಬಳಿ ಹಾಗೆ ಪ್ರವಾದಿಗಳನ್ನು ಕಳುಹಿಸುವ ಸಾಮಾನ್ಯ ರೂಢಿಯಿದೆ ಎಂಬ ಇತ್ಯರ್ಥಕ್ಕೆ ಬರಲು ಸಾಧ್ಯವಿಲ್ಲ.

# ಸತ್ಯವಿಶ್ವಾಸದ ವಿವರಣೆ

ಮುಂದುವರಿಯುವುದಕ್ಕಿಂತ ಮುಂಚೆ ಇಲ್ಲಿ ಹಿಂದಿನ ಅಧ್ಯಾಯಗಳಲ್ಲಿ ತಿಳಿದು ಕೊಂಡ ವಿಷಯಗಳನ್ನೊಮ್ಮೆ ಅವಲೋಕಿಸುವುದಗತ್ಯ.

1. 'ಮುಸ್ಲಿಮ್' ಎಂಬುದರ ಅರ್ಥ ಅಲ್ಲಾಹನ ಅನುಸರಣೆ ಮತ್ತು ವಿಧೇಯತೆಯಾಗಿದ್ದರೂ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳು, ಅವನ ಇಚ್ಛೆಯಂತೆ ಜೀವನ ಸಾಗಿಸುವ ವಿಧಾನ ಹಾಗೂ ಪರಲೋಕದ ಶಿಕ್ಷೆ – ಪುರಸ್ಕಾರಗಳ ನೈಜ ಸ್ಥಿತಿ ಕೇವಲ ಅಲ್ಲಾಹನ ಪ್ರವಾದಿಯ ಮೂಲಕವೇ ತಿಳಿಯುವುದು ಸಾಧ್ಯವಾದುದರಿಂದ ಇಸ್ಲಾಮ್ ಧರ್ಮದ ಸರಿಯಾದ ವ್ಯಾಖ್ಯೆಯು "ಪ್ರವಾದಿಯ ಬೋಧನೆಗಳ ಮೇಲೆ ವಿಶ್ವಾಸ ವಿರಿಸುವುದು ಮತ್ತು ಅವರು ತೋರಿಸಿದ ಕ್ರಮದಲ್ಲಿ ಅಲ್ಲಾಹನ ದಾಸ್ಯ ಮಾಡುವುದು ಇಸ್ಲಾಮ್ ಆಗಿದೆ" ಎಂದಾಗುತ್ತದೆ. ಯಾರು ಪ್ರವಾದಿಯ ಮಾಧ್ಯಮವನ್ನು ಬಿಟ್ಟು ನೇರವಾಗಿ ಅಲ್ಲಾಹನ ಅನುಸರಣೆ ಮತ್ತು ವಿಧೇಯತೆ ಮಾಡುವೆನೆಂದು ವಾದಿಸುವನೋ ಅವನು ಮುಸ್ಲಿಮ್ ಆಗಲಾರ.

2. ಪ್ರಾಚೀನ ಕಾಲದಲ್ಲಿ ಬೇರೆ ಬೇರೆ ಜನಾಂಗಗಳಿಗೆ ಬೇರೆ ಬೇರೆ ಪ್ರವಾದಿಗಳು ಬರುತ್ತಿದ್ದರು. ಒಂದೇ ಜನಾಂಗಕ್ಕೂ ಒಬ್ಬರ ನಂತರ ಇನ್ನೊಬ್ಬರಂತೆ ಪ್ರವಾದಿಗಳು ಬರುತ್ತಿದ್ದರು. ಆಗ ಪ್ರತಿಯೊಂದು ಜನಾಂಗಕ್ಕೂ ಅವರ ಪ್ರವಾದಿ ಬೋಧಿಸಿದ ಧರ್ಮವು 'ಇಸ್ಲಾಮ್' ಆಗಿತ್ತು. ಇಸ್ಲಾಮಿನ ವಾಸ್ತವಿಕತೆಯು ಪ್ರತಿಯೊಂದು ದೇಶಕ್ಕೆ ಮತ್ತು ಪ್ರತಿಯೊಂದು ಕಾಲಕ್ಕೆ ಒಂದೇ ಆಗಿದ್ದರೂ ಧರ್ಮಶಾಸ್ತ್ರ ಮತ್ತು ಆರಾಧನಾ ವಿಧಿಗಳು ಸ್ವಲ್ಪ ಭಿನ್ನವಾಗಿದ್ದುವು. ಎಲ್ಲ ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವುದು ಅಗತ್ಯವಾಗಿದ್ದರೂ ಒಂದು ಜನಾಂಗವು ಇನ್ನೊಂದು ಜನಾಂಗದ ಪ್ರವಾದಿಯನ್ನು ಅನುಸರಿಸಬೇಕಾಗಿರಲಿಲ್ಲ.

3. ಹ. ಮುಹಮ್ಮದ್‌ರನ್ನು(ಸ) ಪ್ರವಾದಿಯಾಗಿ ಕಳುಹಿಸಿದಾಗ ಅವರ ಮೂಲಕ ಇಸ್ಲಾಮಿನ ಬೋಧನೆಗಳನ್ನು ಪರಿಪೂರ್ಣಗೊಳಿಸಲಾಯಿತು. ಇಡೀ ಜಗತ್ತಿಗೆ ಒಂದೇ ಧರ್ಮಶಾಸ್ತ್ರವನ್ನು ಕಳುಹಿಸಲಾಯಿತು. ಅವರ ಪ್ರವಾದಿತ್ವವು ಯಾವುದೇ ನಿರ್ದಿಷ್ಟ

ದೇಶ, ಜನಾಂಗ ಅಥವಾ ಕಾಲಕ್ಕೆ ಸೀಮಿತವಾಗಿರಲಿಲ್ಲ. ಅವರು ಎಲ್ಲ ಮನುಷ್ಯರಿಗೆ, ಎಲ್ಲ ಕಾಲಗಳಿಗೆ ಪ್ರವಾದಿಯಾಗಿದ್ದರು. ಈ ಹಿಂದೆ ಪ್ರವಾದಿಗಳ ಮೂಲಕ ಕಳುಹಿಸಲ್ಪಟ್ಟ ಇಸ್ಲಾಮಿನ ಧರ್ಮಶಾಸ್ತ್ರಗಳೆಲ್ಲವೂ ಹ. ಮುಹಮ್ಮದ್‌ರ(ಸ) ಆಗಮನದೊಂದಿಗೆ ರದ್ದುಗೊಳಿಸಲ್ಪಟ್ಟುವು. ಇನ್ನು ಅಂತಿಮ ದಿನದ ತನಕ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಯಾವ ಧರ್ಮಶಾಸ್ತ್ರವೂ ಅಲ್ಲಾಹನ ವತಿಯಿಂದ ಇಳಿಯಲಿಕ್ಕಿಲ್ಲ. ಆದ್ದರಿಂದ ಈಗ ಇಸ್ಲಾಮ್ ಎಂಬುದು ಕೇವಲ ಪ್ರವಾದಿ ಮುಹಮ್ಮದ್‌ರವರ(ಸ) ಅನುಸರಣೆಯ ಹೆಸರಾಗಿದೆ. ಅವರ ಪ್ರವಾದಿತ್ವವನ್ನು ಅಂಗೀಕರಿಸುವುದು, ಅವರು ವಿಶ್ವಾಸವಿರಿಸಬೇಕೆಂದು ಬೋಧಿಸಿದ ಎಲ್ಲ ವಿಷಯಗಳ ಮೇಲೆ ವಿಶ್ವಾಸವಿರಿಸುವುದು ಮತ್ತು ಅವರ ಎಲ್ಲ ಆಜ್ಞೆಗಳನ್ನು ಅಲ್ಲಾಹನ ಆಜ್ಞೆಗಳೆಂದು ಬಗೆದು ಅವುಗಳನ್ನು ಪಾಲಿಸುವುದು 'ಇಸ್ಲಾಮ್' ಆಗಿದೆ. ಇನ್ನು ನಾವು ವಿಶ್ವಾಸವಿರಿಸಬೇಕಾದ ಮತ್ತು ವಿಶ್ವಾಸವಿರಿಸದೆ ಹೋದರೆ ಸತ್ಯನಿಷೇಧಿಗಳಾಗಿಬಿಡುವಂತಹ ಯಾವನೇ ವ್ಯಕ್ತಿ ಅಲ್ಲಾಹನ ಕಡೆಯಿಂದ ಬರಲಿಕ್ಕಿಲ್ಲ.

ಈಗ, ಪ್ರವಾದಿ ಮುಹಮ್ಮದರು(ಸ) ಯಾವೆಲ್ಲ ವಿಷಯಗಳ ಮೇಲೆ ವಿಶ್ವಾಸವಿರಿಸಬೇಕೆಂದು ಬೋಧಿಸಿದ್ದಾರೆ ಮತ್ತು ಅವು ಎಷ್ಟು ಸತ್ಯವಾದ ವಿಷಯಗಳು ಹಾಗೂ ಅವುಗಳನ್ನು ಒಪ್ಪುವುದರಿಂದ ಮಾನವನ ಸ್ಥಾನಮಾನವು ಎಷ್ಟು ಉನ್ನತವಾಗುತ್ತದೆ ಎಂಬುದನ್ನು ನೋಡೋಣ–

## ಅಲ್ಲಾಹನ ಮೇಲೆ ವಿಶ್ವಾಸ

'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ) ಎಂಬುದು ಪ್ರವಾದಿ ಮುಹಮ್ಮದ್‌ರ(ಸ) ಅತ್ಯಂತ ಮಹತ್ವದ ಬೋಧನೆಯಾಗಿದೆ.

ಈ ವಚನವು 'ಇಸ್ಲಾಮ್' ಧರ್ಮದ ಮೂಲವಾಗಿದೆ. ಓರ್ವ ಮುಸ್ಲಿಮನನ್ನು ಸತ್ಯನಿಷೇಧಿಯಿಂದ, ಬಹುದೇವಾರಾಧಕನಿಂದ ಮತ್ತು ನಾಸ್ತಿಕನಿಂದ ಬೇರ್ಪಡಿಸುವ ವಿಷಯ ಇದುವೇ ಆಗಿದೆ. ಈ ವಚನದ ಅಂಗೀಕಾರ ಅಥವಾ ನಿರಾಕರಣೆಯಿಂದಲೇ ಮನುಷ್ಯರ ಮಧ್ಯೆ ದೊಡ್ಡ ಮಾರ್ಪಾಟು ಉಂಟಾಗುತ್ತದೆ. ಇದನ್ನು ಒಪ್ಪುವವರು ಒಂದು ವಿಭಾಗವಾದರೆ ಇದನ್ನು ಒಪ್ಪದವರು ಇನ್ನೊಂದು ವಿಭಾಗವಾಗುತ್ತಾರೆ. ಇದನ್ನು ಒಪ್ಪುವವರಿಗೆ ಇಹಲೋಕದಿಂದ ಪರಲೋಕದ ವರೆಗೆ ಪ್ರಗತಿ, ಯಶಸ್ಸು ಮತ್ತು ವಿಜಯವಿದೆ. ಒಪ್ಪದವರಿಗೆ ಪರಾಜಯ, ನಿಂದ್ಯತೆ ಮತ್ತು ಅವನತಿಯಿದೆ.

ವ್ಯಕ್ತಿ ಮತ್ತು ವ್ಯಕ್ತಿಯ ನಡುವೆ ಉಂಟಾಗುವ ಇಷ್ಟು ದೊಡ್ಡ ಅಂತರವು 'ಲಾಮ್' 'ಅಲಿಫ್' ಮತ್ತು 'ಹ' ಎಂಬ ಅಕ್ಷರಗಳಿಂದ ಉಂಟಾದ ಒಂದು ಸಣ್ಣ ವಾಕ್ಯವನ್ನು ನಾಲಗೆಯಿಂದ ಉಚ್ಚರಿಸಿದ ಕಾರಣದಿಂದಲ್ಲ. ನಾಲಗೆಯಿಂದ ನೀವು ಒಂದು ಲಕ್ಷ ಸಲ ಜ್ವರದ ಮದ್ದಿನ ಹೆಸರು ಹೇಳಿದರೂ ಅದನ್ನು ಸೇವಿಸದೆ ಇದ್ದರೆ ನಿಮ್ಮ ಜ್ವರ

ವಾಸಿಯಾಗದು. ಇದೇ ರೀತಿ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ನೀವು ನಾಲಗೆಯಿಂದ ಉಚ್ಚರಿಸಿದರೂ ಅದರ ಅರ್ಥ ತಿಳಿಯದೆ ಹೋದರೆ, ಅದನ್ನು ಹೇಳುವ ಮೂಲಕ ನೀವೆಷ್ಟು ದೊಡ್ಡ ವಿಷಯದ ಘೋಷಣೆ ಮಾಡಿರುವಿರಿ ಮತ್ತು ಈ ಘೋಷಣೆಯಿಂದ ನಿಮ್ಮ ಮೇಲೆ ಎಷ್ಟು ದೊಡ್ಡ ಜವಾಬ್ದಾರಿಕೆ ಬಿದ್ದಿದೆ ಎಂಬುದನ್ನು ತಿಳಿಯದೆ ಹೋದರೆ ಇಂತಹ ಘೋಷಣೆಯಿಂದ ಯಾವ ಪ್ರಯೋಜನವೂ ಇಲ್ಲ. ನಿಜವಾಗಿ ಅಂತರ ಉಂಟಾಗುವುದು 'ಲಾ ಇಲಾಹ ಇಲ್ಲಲ್ಲಾಹ್'ನ ಅರ್ಥ ನಿಮ್ಮ ಮನಸ್ಸಿಗೆ ಇಳಿದು ಅದರ ಮೇಲೆ ನಿಮಗೆ ದೃಢ ವಿಶ್ವಾಸ ಉಂಟಾದಾಗ, ಅದರ ವಿರುದ್ಧ ಇರುವ ಎಲ್ಲ ವಿಶ್ವಾಸ-ಶ್ರದ್ಧೆಗಳಿಂದ ನಿಮ್ಮ ಮನಸ್ಸು ಮುಕ್ತವಾದಾಗ ಮತ್ತು ನಿಮ್ಮ ಮನ-ಮಸ್ತಿಷ್ಕಗಳ ಮೇಲೆ ಅದರ ಪ್ರಭಾವವು ಕನಿಷ್ಠ ಬೆಂಕಿಯು ಸುಡುವ ವಸ್ತು ಮತ್ತು ವಿಷವು ಕೊಲ್ಲುವ ವಸ್ತು ಎಂಬಷ್ಟಾದರೂ ಆಳವಾಗಿ ಆದಾಗ ಮಾತ್ರ. ಅರ್ಥಾತ್ ಬೆಂಕಿಯು ಸುಡುತ್ತದೆಂಬ ವಿಶ್ವಾಸವು ನಿಮ್ಮನ್ನು ಬೆಂಕಿಗೆ ಕೈ ಹಾಕುವುದರಿಂದ ತಡೆದಂತೆ ಮತ್ತು ವಿಷವು ಕೊಲ್ಲುತ್ತದೆಂಬ ವಿಶ್ವಾಸವು ನಿಮ್ಮನ್ನು ಅದರ ಸೇವನೆಯಿಂದ ತಡೆದಂತೆ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನದ ಮೇಲಿನ ವಿಶ್ವಾಸವು ನಿಮ್ಮನ್ನು ಬಹುದೇವ ವಿಶ್ವಾಸ, ಸತ್ಯನಿಷೇಧ ಮತ್ತು ನಾಸ್ತಿಕತೆಯ ಅತಿ ಸಣ್ಣ ವಿಷಯದಿಂದಲೂ ಅದು ವೈಚಾರಿಕವಿರಲಿ ವ್ಯಾವಹಾರಿಕವಿರಲಿ- ನಿಮ್ಮನ್ನು ತಡೆಯಬೇಕು.

## 'ಲಾ ಇಲಾಹ ಇಲ್ಲಲ್ಲಾಹ್'- ಇದರ ಅರ್ಥ

ಮೊಟ್ಟ ಮೊದಲು 'ಇಲಾಹ್' ಎಂದರೇನೆಂದು ತಿಳಿದುಕೊಳ್ಳೋಣ. ಅರಬಿ ಭಾಷೆಯಲ್ಲಿ ಆರಾಧನೆಗೆ ಅರ್ಹನಾದವನನ್ನು 'ಇಲಾಹ್' ಎನ್ನಲಾಗುತ್ತದೆ. ಅರ್ಥಾತ್ ತನ್ನ ಮಹಿಮೆ, ಪ್ರತಾಪ ಮತ್ತು ಉನ್ನತಿಯ ಕಾರಣದಿಂದಾಗಿ ಎಲ್ಲರೂ ಆರಾಧನೆಯಲ್ಲಿ ತಲೆ ಬಾಗಿಸಬೇಕಾದ ಅಸ್ತಿತ್ವ. 'ಇಲಾಹ್' ಎಂಬ ಪದದಲ್ಲಿ ಅತ್ಯಧಿಕ ಶಕ್ತಿಶಾಲಿ ಎಂಬ ಅರ್ಥವೂ ಇದೆ. ಅದರ ಶಕ್ತಿಯನ್ನು ತಿಳಿಯುವಲ್ಲಿ ಮನುಷ್ಯನ ಬುದ್ಧಿಯು ಚಕಿತಗೊಳ್ಳುತ್ತದೆ. 'ಇಲಾಹ್' ಎಂಬ ಪದದಲ್ಲಿ ಯಾರನ್ನೂ ಆಶ್ರಯಿಸದ ಮತ್ತು ಎಲ್ಲರೂ ತಮ್ಮ ಜೀವನದ ವ್ಯವಹಾರಗಳಲ್ಲಿ ಆಶ್ರಿತರಾಗಬೇಕಾದ ಮತ್ತು ಸಹಾಯ ಯಾಚಿಸಲು ನಿರ್ಬಂಧಿತರಾಗಬೇಕಾದವನು ಎಂಬ ಅರ್ಥವೂ ಸೇರಿದೆ. 'ಇಲಾಹ್' ಎಂಬ ಪದದಲ್ಲಿ 'ಅಡಗಿರುವ' ಎಂಬ ಅರ್ಥವೂ ಸೇರಿದೆ. ಅರ್ಥಾತ್ ಯಾರ ಶಕ್ತಿಗಳು ಅತ್ಯಂತ ನಿಗೂಢವಾಗಿವೆಯೋ ಅವನಿಗೆ 'ಇಲಾಹ್' ಎನ್ನುತ್ತಾರೆ. ಫಾರ್ಸಿ ಭಾಷೆಯಲ್ಲಿ 'ಖುದಾ', ಹಿಂದಿಯಲ್ಲಿ 'ದೇವತಾ' ಮತ್ತು ಇಂಗ್ಲಿಷ್‌ನಲ್ಲಿ 'ಗಾಡ್'ನ ಅರ್ಥವೂ ಇದಕ್ಕೆ ಸಮಾನವಾಗಿವೆ. ಲೋಕದ ಇತರ ಭಾಷೆಗಳಲ್ಲಿಯೂ ಈ ಅರ್ಥದ ವಿಶಿಷ್ಟ ಪದಗಳು ಕಾಣಸಿಗುತ್ತವೆ. (ಕನ್ನಡದಲ್ಲಿ ದೇವರು ಎಂಬುದು ಇದರ ಸಮಾನಾರ್ಥ ಪದವಾಗಿದೆ -ಅನು)

'ಅಲ್ಲಾಹ್' ಎಂಬ ಪದವು ನಿಜವಾಗಿ ಏಕನೂ ಸರಿಸಮಾನರಿಲ್ಲದವನೂ ಆದ

ದೇವನ ನಾಮಪದವಾಗಿದೆ. 'ಲಾ ಇಲಾಹ ಇಲ್ಲಲ್ಲಾಹ್' ಎಂಬುದರ ಶಬ್ದಾರ್ಥವು 'ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ' ಎಂದಾಗಿದೆ. ತಾತ್ಪರ್ಯವೇನೆಂದರೆ ಸಮಸ್ತ ವಿಶ್ವದಲ್ಲಿ ಅಲ್ಲಾಹನ ಹೊರತು ಯಾರೂ ಪೂಜೆಗೆ ಅರ್ಹರಾದವರು ಇಲ್ಲ. ಅವನ ಹೊರತು ಯಾರೂ ಆರಾಧನೆ, ದಾಸ್ಯ ಮತ್ತು ಅನುಸರಣೆಗೆ ಯೋಗ್ಯರಿಲ್ಲ. ಅದೊಂದು ಅಸ್ತಿತ್ವ ಮಾತ್ರ ಇಡೀ ವಿಶ್ವದ ಒಡೆಯ ಮತ್ತು ಅಧಿಪತಿಯಾಗಿದೆ. ಎಲ್ಲರೂ ಅವನ ಆಶ್ರಿತರು. ಅವನಿಂದ ಸಹಾಯ ಯಾಚಿಸಲು ನಿರ್ಬಂಧಿತರು. ಅವನು ಪಂಚೇಂದ್ರಿಯ ಗಳಿಗೆ ನಿಲುಕದವನು. ಅವನ ಅಸ್ತಿತ್ವವನ್ನು ತಿಳಿಯುವಲ್ಲಿ ಬುದ್ಧಿಯು ಅಪರ್ಯಾಪ್ತವಾಗಿದೆ.

## 'ಲಾ ಇಲಾಹ ಇಲ್ಲಲ್ಲಾಹ್'ನ ವಾಸ್ತವಿಕತೆ

ಇದಿಷ್ಟು ಈ ಪದಗಳ ತಾತ್ಪರ್ಯವಾಯಿತು. ಈಗ ಅದರ ವಾಸ್ತವಿಕತೆಯನ್ನು ತಿಳಿಯಲು ಪ್ರಯತ್ನಿಸೋಣ:

ನಮಗೆ ತಿಳಿದಿರುವ ಮನುಷ್ಯನ ಅತ್ಯಂತ ಪ್ರಾಚೀನ ಇತಿಹಾಸ ಮತ್ತು ಮನುಷ್ಯನು ಅದರ ಕುರಿತು ಕಂಡುಕೊಂಡ ಕುರುಹುಗಳಿಂದ ನಮಗೆ ತಿಳಿದುಬರುವಂತೆ ಮನುಷ್ಯನು ಎಲ್ಲ ಕಾಲಗಳಲ್ಲಿಯೂ ಒಂದಲ್ಲ ಒಂದು ಅಸ್ತಿತ್ವವನ್ನು ದೇವರೆಂದು ಬಗೆದಿದ್ದನು ಮತ್ತು ಅದನ್ನು ಪೂಜಿಸಿದ್ದನು. ಈಗ ಲೋಕದಲ್ಲಿರುವ ಎಲ್ಲ ಜನಾಂಗ ಗಳೂ – ಅವು ಅತ್ಯಂತ ಅನಾಗರಿಕವಾಗಿರಲಿ ಅಥವಾ ನಾಗರಿಕವಾಗಿರಲಿ– ದೇವ ನನ್ನು ನಂಬುತ್ತವೆ ಮತ್ತು ಅವನನ್ನು ಆರಾಧಿಸುತ್ತವೆ. ಇದರಿಂದ ತಿಳಿಯುವುದೇನೆಂದರೆ ಮನುಷ್ಯನ ಪ್ರಕೃತಿಯಲ್ಲೇ ದೇವನ ವಿಚಾರವು ಅಂತರ್ಲೀನವಾಗಿದೆ. ಯಾರನ್ನಾದರೂ ದೇವನೆಂದು ಬಗೆದು ಅವನನ್ನು ಆರಾಧಿಸುವಂತೆ ಅವನನ್ನು ನಿರ್ಬಂಧಿಸುವ ಯಾವುದೋ ವಸ್ತು ಅವನೊಳಗಿದೆ.

ಇಲ್ಲಿ, ಆ ವಸ್ತು ಯಾವುದು ಎಂಬ ಪ್ರಶ್ನೆ ಏಳುತ್ತದೆ. ನೀವು ನಿಮ್ಮ ಅಸ್ತಿತ್ವ ಮತ್ತು ಇತರ ಎಲ್ಲ ಮನುಷ್ಯರ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿದರೆ ಈ ಪ್ರಶ್ನೆಯ ಉತ್ತರ ಸಿಗಬಹುದು.

ಮನುಷ್ಯನು ನಿಜವಾಗಿ ದಾಸನಾಗಿಯೇ ಸೃಷ್ಟಿಸಲ್ಪಟ್ಟಿದ್ದಾನೆ. ಅವನು ಪ್ರಾಕೃತಿಕವಾಗಿ ಪರಾವಲಂಬಿಯೂ ಬಲಹೀನನೂ ಆಗಿದ್ದಾನೆ. ಅವನ ಅಸ್ತಿತ್ವವನ್ನು ಉಳಿಸಲು ಬೇಕಾದ ಅನೇಕ ವಸ್ತುಗಳು ಅವನ ನಿಯಂತ್ರಣದಲ್ಲಿಲ್ಲ. ಅವು ತನ್ನಿಂತಾನೇ ಅವನಿಗೆ ದೊರಕುತ್ತವೆ ಮತ್ತು ಅವನಿಂದ ಕಸಿಯಲ್ಪಡುತ್ತವೆ. ಅವನಿಗೆ ಉಪಯುಕ್ತವಾದ ಅನೇಕ ವಸ್ತುಗಳಿವೆ. ಅವನು ಅವುಗಳನ್ನು ಗಳಿಸಬಯಸುತ್ತಾನೆ. ಕೆಲವೊಮ್ಮೆ ಅವು ಅವನಿಗೆ ಲಭಿಸುತ್ತವೆ. ಕೆಲವೊಮ್ಮೆ ಲಭಿಸುವುದಿಲ್ಲ. ಏಕೆಂದರೆ ಅವುಗಳನ್ನು ಗಳಿಸುವುದು ಪೂರ್ಣವಾಗಿ ಅವನ ನಿಯಂತ್ರಣದಲ್ಲಿಲ್ಲ. ಅನೇಕ ವಸ್ತುಗಳು ಅವನಿಗೆ ಹಾನಿಕಾರಕವಾಗಿವೆ. ಅವನ ಇಡೀ ಜೀವಮಾನದ ಶ್ರಮವನ್ನು ಕ್ಷಣ ಮಾತ್ರದಲ್ಲಿ ನಾಶ ಮಾಡಿಬಿಡುತ್ತವೆ.

ಅವನ ಆಶೆಗಳನ್ನು ಮಣ್ಣು ಗೂಡಿಸುತ್ತವೆ. ಅವನನ್ನು ರೋಗ ಮತ್ತು ವಿನಾಶದಲ್ಲಿ ಸಿಲುಕಿಸುತ್ತವೆ. ಅವನು ಅವುಗಳನ್ನು ನಿವಾರಿಸ ಬಯಸುತ್ತಾನೆ. ಕೆಲವೊಮ್ಮೆ ಅವು ನಿವಾರಣೆಯಾಗುತ್ತವೆ. ಕೆಲವೊಮ್ಮೆ ನಿವಾರಣೆಯಾಗುವುದಿಲ್ಲ. ಇದರಿಂದ ಅವನು ಅವು ಬರುವುದೂ ಬಾರದೆ ಇರುವುದೂ ಅವುಗಳು ನಿವಾರಣೆಯಾಗುವುದೂ ಆಗದೆ ಇರುವುದೂ ತನ್ನ ನಿಯಂತ್ರಣದಲ್ಲಿಲ್ಲವೆಂದು ತಿಳಿದುಕೊಳ್ಳುತ್ತಾನೆ.

ಅನೇಕ ವಸ್ತುಗಳ ಘನತೆ, ಮಹಿಮೆ ಮತ್ತು ಹಿರಿಮೆಯನ್ನು ಕಂಡು ಅವನು ತಲೆದೂಗುತ್ತಾನೆ. ಅವನು ಪರ್ವತಗಳನ್ನೂ ಸಮುದ್ರಗಳನ್ನೂ ನೋಡುತ್ತಾನೆ. ದೊಡ್ಡ ದೊಡ್ಡ ಭಯಾನಕ ಪ್ರಾಣಿಗಳನ್ನು ನೋಡುತ್ತಾನೆ. ಬಿರುಗಾಳಿ, ನೆರೆ ಮತ್ತು ಭೂಕಂಪನವನ್ನು ನೋಡುತ್ತಾನೆ. ಮೋಡಗಳ ಘರ್ಜನೆ, ಮೇಘಗಳ ಕರಾಳತೆ, ಸಿಡಿಲಿನ ಆರ್ಭಟ ಮತ್ತು ಮಿಂಚು ಹಾಗೂ ಧಾರಾಕಾರವಾಗಿ ಸುರಿಯುವ ಮಳೆಯ ದೃಶ್ಯಗಳನ್ನು ಕಣ್ಣಾರೆ ಕಾಣುತ್ತಾನೆ. ಸೂರ್ಯ, ಚಂದ್ರ, ನಕ್ಷತ್ರಗಳು ತಿರುಗುತ್ತಿರುವಂತೆ ಅವನಿಗೆ ಗೋಚರಿಸುತ್ತದೆ. ಈ ಎಲ್ಲ ವಸ್ತುಗಳೂ ಎಷ್ಟು ಶಕ್ತಿಶಾಲಿ ಹಾಗೂ ಮಹಾನ್ ಆಗಿವೆ ಮತ್ತು ಅವುಗಳ ಮುಂದೆ ಮಾನವನು ಎಷ್ಟು ಬಲಹೀನನೂ ಅಸಹಾಯಕನೂ ಆಗಿರುವನೆಂಬುದನ್ನು ಅವನು ನೋಡುತ್ತಾನೆ. ಈ ವಿಭಿನ್ನ ದೃಶ್ಯಗಳು ಮತ್ತು ತನ್ನ ವಿವಶತೆಯ ವಿಭಿನ್ನ ಸ್ಥಿತಿಗಳನ್ನು ಕಂಡು ಅವನ ಮನಸ್ಸಿನಲ್ಲಿ ತನ್ನಿಂತಾನೇ ದಾಸ್ಯ ಭಾವನೆ, ಆಶ್ರಿತ ಭಾವನೆ ಮತ್ತು ತನ್ನ ಬಲಹೀನತೆಯ ಭಾವನೆ ಮೂಡುತ್ತದೆ. ಈ ಭಾವನೆ ಮೂಡಿದಾಗ ತನ್ನಿಂತಾನೇ ದೇವತ್ವದ ಕಲ್ಪನೆಯೂ ಅವನಲ್ಲಿ ಮೂಡುತ್ತದೆ. ಇಷ್ಟೆಲ್ಲ ಶಕ್ತಿಗಳ ಒಡೆಯನ ಕುರಿತು ಅವನು ಯೋಚಿಸತೊಡಗುತ್ತಾನೆ. ಅವನ ಮಹಾನತೆಯ ಭಾವನೆಯು ಅವನ ಮುಂದೆ ಆರಾಧನೆಯಲ್ಲಿ ಶಿರಬಾಗುವಂತೆ ಅವನನ್ನು ನಿರ್ಬಂಧಿಸುತ್ತದೆ. ಅವನ ಶಕ್ತಿಯ ಭಾವನೆಯು ಅವನನ್ನು ಪೂಜಿಸುವಂತೆ ನಿರ್ಬಂಧಿಸುತ್ತದೆ. ಅವನಿಗೆ ಪ್ರಯೋಜನ ನೀಡುವ ಶಕ್ತಿಗಳ ಭಾವನೆ ಅವನ ಮುಂದೆ ಅಸಹಾಯಕತೆಯನ್ನು ಪ್ರದರ್ಶಿಸಲು ನಿರ್ಬಂಧಿಸುತ್ತದೆ. ನಷ್ಟ ಉಂಟು ಮಾಡಲು ಅವನಲ್ಲಿ ಇರುವ ಶಕ್ತಿಯ ಭಾವನೆಯು ಅವನಲ್ಲಿ ಅವನ ಭಯವನ್ನು ಹುಟ್ಟಿಸಿ ಅವನ ಕ್ರೋಧದಿಂದ ದೂರವಿರುವಂತೆ ಪ್ರೇರೇಪಿಸುತ್ತದೆ. ಅವನಿಗೆ ಯಾವ ವಸ್ತುಗಳು ಶಕ್ತಿ ಮತ್ತು ಮಹಾನತೆಯನ್ನು ಹೊಂದಿವೆಯೆಂದು ತೋರುತ್ತದೋ ಅಥವಾ ಯಾವುದಾದರೂ ರೀತಿಯಲ್ಲಿ ಅವನಿಗೆ ಲಾಭವನ್ನಾಗಲೀ ನಷ್ಟವನ್ನಾಗಲೀ ಉಂಟು ಮಾಡಬಲ್ಲವೆಂದು ತೋರುತ್ತದೋ ಅವುಗಳನ್ನೇ ಅಜ್ಞಾನದ ಪರಮಾವಧಿಯಿಂದಾಗಿ ಅವನು ದೇವರೆಂದು ಬಗೆಯುತ್ತಾನೆ. ಆದ್ದರಿಂದಲೇ ಅವನು ಪ್ರಾಣಿ, ನದಿ, ಪರ್ವತ, ಭೂಮಿ, ಅಗ್ನಿ, ಮಳೆ, ಗಾಳಿ ಸೂರ್ಯ, ಚಂದ್ರ ಮತ್ತು ನಕ್ಷತ್ರಾದಿಗಳನ್ನು ಪೂಜಿಸತೊಡಗುತ್ತಾನೆ.

ಈ ಅಜ್ಞಾನವು ಸ್ವಲ್ಪ ಕಡಿಮೆಯಾಗಿ ಜ್ಞಾನದ ಬೆಳಕು ಹರಿದಾಗ ಈ ಎಲ್ಲ ವಸ್ತುಗಳೂ ತನ್ನಂತೆಯೇ ಆಶ್ರಿತವೂ ಬಲಹೀನವೂ ಆಗಿದೆಯೆಂಬುದು ಅವನಿಗೆ

ತಿಳಿಯುತ್ತದೆ. ದೊಡ್ಡ ದೊಡ್ಡ ಪ್ರಾಣಿಗಳು ಕೂಡಾ ಒಂದು ಕ್ಷುಲ್ಲಕ ಸೊಳ್ಳೆಯಂತೆ ಸಾಯುತ್ತವೆ. ದೊಡ್ಡ ನದಿಗಳು ಕೂಡಾ ಬತ್ತಿ ಹೋಗುತ್ತವೆ. ಅವುಗಳಲ್ಲಿ ಏರಿಳಿತಗಳುಂಟಾಗುತ್ತವೆ. ಪರ್ವತಗಳನ್ನು ಸ್ವಯಂ ಮನುಷ್ಯನು ಸೀಳಿ ತುಂಡರಿಸುತ್ತಾನೆ. ಭೂಮಿಯಲ್ಲಿ ಬೆಳೆಯುವ ಬೆಳೆಗಳೂ ಅದರ ನಿಯಂತ್ರಣದಲ್ಲಿಲ್ಲ. ನೀರು ಸಕಾಲಕ್ಕೆ ದೊರೆಯದಿದ್ದರೆ ಅದು ಒಣಗಿ ಹೋಗುತ್ತದೆ. ನೀರು ಕೂಡಾ ಯಾವುದೇ ಶಕ್ತಿಯನ್ನು ಹೊಂದಿಲ್ಲ. ಅದು ಸುರಿಯಬೇಕಾದರೆ ಗಾಳಿಯ ನೆರವು ಬೇಕೇ ಬೇಕು. ಗಾಳಿ ಕೂಡಾ ಅದರ ನಿಯಂತ್ರಣದಲ್ಲಿಲ್ಲ. ಅದು ಉಪಯುಕ್ತವಾಗುವುದೂ ಹಾನಿಕರವಾಗುವುದೂ ಇತರ ಕಾರಣಗಳನ್ನು ಅವಲಂಬಿಸಿಕೊಂಡಿದೆ.

ಸೂರ್ಯ, ಚಂದ್ರ, ನಕ್ಷತ್ರಾದಿಗಳೂ ಯಾವುದೋ ನಿಯಮಕ್ಕೆ ಬದ್ಧವಾಗಿವೆ. ಆ ನಿಯಮಕ್ಕೆ ವಿರುದ್ಧ ಎಂದೂ ಅವು ಚಲಿಸಲಾರವು. ಆಗ ಅವನ ಮನಸ್ಸು ಸುಪ್ತ ಮತ್ತು ನಿಗೂಢ ಶಕ್ತಿಗಳತ್ತ ಹರಿಯುತ್ತದೆ. ಈ ಬಾಹ್ಯ ವಸ್ತುಗಳ ಹಿಂದೆ ಕೆಲವು ಸುಪ್ತ ಶಕ್ತಿಗಳಿವೆ. ಅವು ಅವುಗಳ ಮೇಲೆ ಆಡಳಿತ ನಡೆಸುತ್ತವೆ. ಎಲ್ಲವೂ ಅವುಗಳ ನಿಯಂತ್ರಣದಲ್ಲಿವೆ ಎಂಬುದನ್ನು ಅರಿಯುತ್ತಾನೆ. ಇಲ್ಲಿಂದಲೇ ದೇವತೆಗಳ ಕಲ್ಪನೆ ಉದ್ಭವಿಸುತ್ತದೆ. ಗಾಳಿ, ಬೆಳಕು, ನೀರು, ರೋಗ ಮತ್ತು ಆರೋಗ್ಯ ಮತ್ತಿತರ ಅನೇಕ ವಸ್ತುಗಳಿಗೆ ಬೇರೆ ಬೇರೆ ದೇವತೆಗಳನ್ನು ಕಲ್ಪಿಸಿಕೊಳ್ಳಲಾಗುತ್ತದೆ. ಅವುಗಳ ಕಾಲ್ಪನಿಕ ಚಿತ್ರಗಳನ್ನು ಮಾಡಿ ಅವುಗಳನ್ನು ಮನುಷ್ಯನು ಪೂಜಿಸತೊಡಗುತ್ತಾನೆ.

ತರುವಾಯ ಇನ್ನಷ್ಟು ಜ್ಞಾನದ ಬೆಳಕು ಹರಿದಾಗ ಲೋಕದ ವ್ಯವಸ್ಥೆಯು ಒಂದು ಬಲಿಷ್ಠ ನಿಯಮಕ್ಕೆ ಬದ್ಧವಾಗಿರುವುದನ್ನು ಮನುಷ್ಯನು ಕಾಣುತ್ತಾನೆ. ಗಾಳಿಯ ವೇಗ, ಮಳೆಯ ಆಗಮನ, ಗ್ರಹಗಳ ಚಲನೆ, ಬೆಳೆ ಮತ್ತು ಋತುಗಳ ಬದಲಾವಣೆಯಲ್ಲಿ ಎಷ್ಟೊಂದು ಕ್ರಮ ಬದ್ಧತೆಯಿದೆ? ಯಾವ ರೀತಿ ಅಸಂಖ್ಯ ಶಕ್ತಿಗಳು ಪರಸ್ಪರ ಸಹಕರಿಸಿ ಕೆಲಸ ಮಾಡುತ್ತವೆ? ಯಾವ ಸಮಯ ಯಾವ ಕೆಲಸಕ್ಕೆ ನಿರ್ದಿಷ್ಟ ವಾಗಿದೆಯೋ ಅದೇ ಸಮಯದಲ್ಲಿ ವಿಶ್ವದ ಎಲ್ಲ ಶಕ್ತಿಗಳು ಸೇರಿ ಪರಸ್ಪರ ಸಹಕರಿಸಿ ಕೆಲಸ ಮಾಡು ತ್ತಿರುವುದು ಎಷ್ಟೊಂದು ಬಲಿಷ್ಠವಾದ ನಿಯಮವಾಗಿದೆ? ವಿಶ್ವ ವ್ಯವಸ್ಥೆಯ ಈ ಸಮನ್ವಯವನ್ನು ಕಂಡು ಬಹುದೇವ ವಿಶ್ವಾಸಿಗಳು ಈ ಸಣ್ಣ ಸಣ್ಣ ದೇವತೆಗಳ ಮೇಲೆ ಅಧಿಕಾರ ಚಲಾಯಿಸುವ ಒಬ್ಬ ದೊಡ್ಡ ದೇವನಿದ್ದಾನೆ ಎಂಬುದನ್ನು ಒಪ್ಪಿಕೊಳ್ಳಲು ನಿರ್ಬಂಧಿತರಾಗುತ್ತಾರೆ. ಅನ್ಯಥಾ ಎಲ್ಲ ದೇವತೆಗಳೂ ಬೇರೆಯೇ ಮತ್ತು ಸ್ವೇಚ್ಛಾಧಿಪತಿಗಳೇ ಆಗಿರುತ್ತಿದ್ದರೆ ಲೋಕದ ವ್ಯವಸ್ಥೆಯೇ ಅಸ್ತವ್ಯಸ್ತವಾಗುತ್ತಿತ್ತು ಎಂಬುದು ಅವರಿಗೆ ವೇದ್ಯವಾಗುತ್ತದೆ. ಅವರು ಆ ದೊಡ್ಡ ದೇವನನ್ನು 'ಅಲ್ಲಾಹ್', 'ಪರಮೇಶ್ವರ' ಎಂಬಿತ್ಯಾದಿ ಹೆಸರುಗಳಿಂದ ಸ್ಮರಿಸುತ್ತಾರೆ. ಆದರೆ ಆರಾಧನೆಯಲ್ಲಿ ಅವನೊಂದಿಗೆ ಆ ಸಣ್ಣ ಸಣ್ಣ ದೇವರುಗಳನ್ನು ಸೇರಿಸಿಕೊಳ್ಳುತ್ತಾರೆ. ಅಲ್ಲಾಹನ ದೇವತ್ವವೂ ಲೌಕಿಕ ಆಧಿಪತ್ಯಗಳಂತೆಯೇ ಎಂದು ಅವರು ಭಾವಿಸುತ್ತಾರೆ. 'ಲೋಕದಲ್ಲಿ ಒಬ್ಬ ರಾಜನಿದ್ದರೆ

ಅವನಿಗೆ ಅನೇಕ ಮಂದಿ ಮಂತ್ರಿಗಳು, ಕಾರ್ಯದರ್ಶಿಗಳು, ಕಾರ್ಯನಿರ್ವಾಹಕರುಗಳು ಮತ್ತಿತರ ಅಧಿಕಾರಯುತ ಪದವಿಗಳನ್ನು ಹೊಂದಿದವರೂ ಇರುತ್ತಾರೆ. ಅದೇ ರೀತಿ ವಿಶ್ವಕ್ಕೆ ಒಬ್ಬ ದೊಡ್ಡ ದೇವನಿದ್ದಾನೆ. ಅವನ ಅಧೀನದಲ್ಲಿ ಅನೇಕ ಸಣ್ಣ ಸಣ್ಣ ದೇವರು ಗಳಿದ್ದಾರೆ. ಸಣ್ಣ ದೇವರುಗಳನ್ನು ಒಲಿಸಿಕೊಳ್ಳುವ ತನಕ ದೊಡ್ಡ ದೇವನ ಬಳಿ ತಲುಪಲು ಸಾಧ್ಯವಾಗದು. ಆದ್ದರಿಂದ ಅವುಗಳ ಆರಾಧನೆಯನ್ನೂ ಮಾಡಬೇಕು, ಅವರ ಮುಂದೆಯೂ ಕೈ ಚಾಚಬೇಕು. ಅವರ ಕ್ರೋಧವನ್ನೂ ಭಯಪಡಬೇಕು. ಅವರನ್ನು ದೊಡ್ಡ ದೇವನಲ್ಲಿಗೆ ತಲುಪುವ ಮಾಧ್ಯಮವಾಗಿಸಬೇಕು. ಹರಕೆ ಕಾಣಿಕೆಗಳ ಮೂಲಕ ಅವರನ್ನು ಒಲಿಸಿಕೊಳ್ಳಬೇಕು' ಎಂದು ಅವರು ಭಾವಿಸುತ್ತಾರೆ.

ತರುವಾಯ ಜ್ಞಾನದಲ್ಲಿ ಇನ್ನಷ್ಟು ಪ್ರಗತಿಯಾಗುತ್ತಾ ಹೋದಂತೆಲ್ಲಾ ದೇವರುಗಳ ಸಂಖ್ಯೆಯು ಕಡಿಮೆಯಾಗುತ್ತಾ ಹೋಗುತ್ತದೆ. ಅಜ್ಞಾನಿಗಳು ಎಷ್ಟು ದೇವರುಗಳನ್ನು ಕಲ್ಪಿಸಿಕೊಂಡಿರುವರೋ ಅವುಗಳ ಪೈಕಿ ಒಂದೊಂದರ ಕುರಿತು ಚಿಂತಿಸಿದರೆ ಅವು ದೇವರಲ್ಲ ನಮ್ಮಂತೆಯೇ ಸೃಷ್ಟಿಗಳು ಮಾತ್ರವಲ್ಲ, ನಮಗಿಂತಲೂ ಹೆಚ್ಚು ಅಸಹಾಯಕ ವಾದವುಗಳು ಎಂಬುದು ಮನುಷ್ಯನಿಗೆ ತಿಳಿಯುತ್ತಾ ಹೋಗುತ್ತದೆ. ಈ ರೀತಿ ಅವನು ಅವುಗಳನ್ನು ತೊರೆಯುತ್ತಾ ಹೋಗಿ ಕೊನೆಗೆ ಒಬ್ಬನೇ ದೇವನು ಉಳಿದುಕೊಳ್ಳುತ್ತಾನೆ. ಆದರೆ ಆ ಏಕದೇವನ ಬಗ್ಗೆಯೂ ಅವನ ಕಲ್ಪನೆಗಳಲ್ಲಿ ಅನೇಕ ಅಂಧ ವಿಶ್ವಾಸಗಳು ಉಳಿದುಕೊಂಡಿರುತ್ತವೆ. ದೇವನು ನಮ್ಮಂತೆಯೇ ಶರೀರ ಉಳ್ಳವನಾಗಿದ್ದು ಒಂದೆಡೆ ಕುಳಿತುಕೊಂಡು ಆಧಿಪತ್ಯ ನಡೆಸುತ್ತಾನೆಂದು ಕೆಲವರು ಬಗೆದರೆ, ಇನ್ನು ಕೆಲವರು ದೇವನಿಗೂ ಮಡದಿ ಮಕ್ಕಳಿದ್ದು ಮನುಷ್ಯನಂತೆಯೇ ಅವನಿಗೂ ಸಂತಾನ ಪರಂಪರೆ ಇರುತ್ತದೆ ಎಂದು ಭಾವಿಸುತ್ತಾರೆ. ಕೆಲವರು ದೇವನು ಮನುಷ್ಯನ ರೂಪ ತಾಳಿ ಭೂಮಿಗೆ ಇಳಿದು ಬರುತ್ತಾನೆ ಎಂದು ಕಲ್ಪಿಸಿಕೊಂಡರೆ ಮತ್ತೆ ಕೆಲವರು ದೇವನು ಈ ವಿಶ್ವದ ಕಾರ್ಯಾಗಾರವನ್ನು ಚಲಾಯಿಸಿ ಬಿಟ್ಟು ಸುಮ್ಮನಾಗಿದ್ದಾನೆ ಮತ್ತು ಈಗ ಎಲ್ಲಿಯೋ ವಿಶ್ರಾಂತಿ ಪಡೆಯುತ್ತಿದ್ದಾನೆ ಎಂದು ಭಾವಿಸುತ್ತಾರೆ. ಕೆಲವರು ದೇವನ ಬಳಿಗೆ ಮಹಾತ್ಮರ ಮತ್ತು ಆತ್ಮಗಳ ಶಿಫಾರಸ್ಸಿನೊಂದಿಗೆ ಹೋಗಬೇಕೆಂದೂ ಅವರನ್ನು ಮಾಧ್ಯಮವಾಗಿಸದಿದ್ದರೆ ಅಲ್ಲಿ ಯಾವ ಕೆಲಸವೂ ನಡೆಯದೆಂದೂ ಭಾವಿಸಿದರೆ ಇನ್ನು ಕೆಲವರು ತಮ್ಮಲ್ಲಿ ದೇವನಿಗೆ ಒಂದು ರೂಪವನ್ನು ಕಲ್ಪಿಸಿಕೊಂಡು ಆರಾಧನೆಗೆ ಆ ರೂಪವನ್ನು ಮುಂದಿಡುವುದು ಅಗತ್ಯವೆಂದು ಬಗೆಯುತ್ತಾರೆ. ಏಕದೇವತ್ವದ ವಿಶ್ವಾಸ ದೊಂದಿಗೆ ಈ ರೀತಿಯ ಅನೇಕ ತಪ್ಪುಕಲ್ಪನೆಗಳು ಮನುಷ್ಯನ ಮನಸ್ಸಿನಲ್ಲಿ ಉಳಿದು ಕೊಂಡಿರುತ್ತವೆ. ಇವುಗಳಿಂದಾಗಿ ಅವನು ಬಹುದೇವಾರಾಧನೆ ಮತ್ತು ಸತ್ಯನಿಷೇಧದಲ್ಲಿ ತೊಡಗುತ್ತಾನೆ. ಇವೆಲ್ಲವೂ ಅಜ್ಞಾನದ ಪರಿಣಾಮವೇ ಆಗಿದೆ.

'ಲಾ ಇಲಾಹ ಇಲ್ಲಲ್ಲಾಹ್'ನ ಸ್ಥಾನವು ಎಲ್ಲಕ್ಕಿಂತಲೂ ಉನ್ನತವಾಗಿದೆ. ಇದು ಸ್ವಯಂ ಅಲ್ಲಾಹನು ತನ್ನ ಪ್ರವಾದಿಗಳ ಮೂಲಕ ಎಲ್ಲ ಕಾಲಗಳಲ್ಲಿ ಮನುಷ್ಯನ ಬಳಿಗೆ

ಕಳುಹಿಸಿದ ಜ್ಞಾನವಾಗಿದೆ. ಇದೇ ಜ್ಞಾನವನ್ನು ನೀಡಿ ಪ್ರಥಮ ಮಾನವರಾದ ಆದಮ್‌ರನ್ನು(ಅ) ಭೂಮುಖದ ಮೇಲೆ ಇಳಿಸಲಾಗಿತ್ತು. ಇದೇ ಜ್ಞಾನವನ್ನು ಆದಮ್‌ರ(ಅ) ನಂತರ ಹ. ನೂಹ್, ಹ. ಇಬ್ರಾಹೀಮ್, ಹ. ಮೂಸಾ(ಅ) ಮತ್ತಿತರ ಪ್ರವಾದಿಗಳಿಗೆ ನೀಡಲಾಗಿತ್ತು. ಇದೇ ಜ್ಞಾನವನ್ನು ಕೊನೆಯದಾಗಿ ಹ. ಮುಹಮ್ಮದರು(ಸ) ತಂದರು. ಇದು ಅಪ್ಪಟ ಜ್ಞಾನವಾಗಿದ್ದು ಇದರಲ್ಲಿ ಅಜ್ಞಾನದ ಲವಲೇಶವೂ ಇಲ್ಲ. ನಾವು ಮೇಲೆ ವಿವರಿಸಿರುವ ವಿಗ್ರಹಾರಾಧನೆ ಮತ್ತು ಸತ್ಯನಿಷೇಧದ ವಿವಿಧ ರೂಪಗಳಲ್ಲಿ ಮನುಷ್ಯನು ತೊಡಗಲು ಕಾರಣ ಅವನು ಪ್ರವಾದಿಗಳ ಬೋಧನೆಗಳಿಂದ ವಿಮುಖನಾಗಿ ತನ್ನ ಇಂದ್ರಿಯಗಳನ್ನು ಮತ್ತು ತನ್ನ ಬುದ್ಧಿಯನ್ನು ಅವಲಂಬಿಸಿರುವುದೇ ಆಗಿದೆ. ಈ ಸಣ್ಣ ವಚನದಲ್ಲಿ ಎಷ್ಟು ದೊಡ್ಡ ವಾಸ್ತವಿಕತೆಯು ವಿವರಿಸಲ್ಪಟ್ಟಿದೆ ಎಂಬುದನ್ನು ನೋಡೋಣ–

1. ಮೊತ್ತ ಮೊದಲನೆಯ ವಿಷಯ ದೇವತ್ವದ ಕಲ್ಪನೆಯಾಗಿದೆ. ನಮ್ಮ ಬುದ್ಧಿಯು ಯಾವ ವಿಶಾಲ ವಿಶ್ವದ ಆದಿ ಮತ್ತು ಅಂತ್ಯದ ಕುರಿತು ಆಲೋಚಿಸಿ ದಣಿದು ಹೋಗುತ್ತದೋ, ಅಗಣಿತ ಕಾಲದಿಂದ ನಡೆದು ಬಂದು ಅಗಣಿತ ಕಾಲದ ತನಕ ಸಾಗುತ್ತಿರುವುದೋ ಯಾವ ವಿಶ್ವದಲ್ಲಿ ಲೆಕ್ಕ ಮಿತಿಯಿಲ್ಲದಷ್ಟು ಸೃಷ್ಟಿಗಳು ಉಂಟಾಗಿವೆ ಮತ್ತು ಉಂಟಾಗುತ್ತಲೇ ಇವೆಯೋ ಯಾವ ವಿಶ್ವದಲ್ಲಿ ನಡೆಯುವ ಅದ್ಭುತ ಘಟನೆಗಳನ್ನು ಕಂಡು ಬುದ್ಧಿಯು ವಿಸ್ಮಯಗೊಳ್ಳುತ್ತದೋ ಅಂತಹ ವಿಶ್ವದ ಆಡಳಿತವನ್ನು ಸೀಮಾತೀತ, ಅನಾದಿ, ಅನಂತ, ನಿರಪೇಕ್ಷ, ಸರ್ವಶಕ್ತ, ಯುಕ್ತಿಪೂರ್ಣ, ಸರ್ವಜ್ಞ ಅತ್ಯಂತ ಬಲಿಷ್ಠ, ಅಗಣಿತ ಶಕ್ತಿ ಸಾಮರ್ಥ್ಯಗಳ ಒಡೆಯ, ವಿಶ್ವದ ಸಮಸ್ತ ವಸ್ತುಗಳಿಗೆ ಜೀವದಾನ ಮಾಡುವವನು ಮತ್ತು ಪೋಷಣೆ ಮಾಡುವವನು, ಎಲ್ಲ ಕುಂದು ಕೊರತೆ ಮತ್ತು ಬಲಹೀನತೆಗಳಿಂದ ವಿಮುಕ್ತನು ಮತ್ತು ಬೇರೆ ಯಾರದೇ ಹಸ್ತಕ್ಷೇಪವಿಲ್ಲದೆ ತನ್ನ ಕಾರ್ಯಗಳನ್ನು ಮಾಡುವವನು ಮಾತ್ರ ನಡೆಸಬಲ್ಲನು.

2. ದೇವತ್ವದ ಎಲ್ಲ ಗುಣಗಳೂ ಒಂದೇ ಅಸ್ತಿತ್ವದಲ್ಲಿ ಒಟ್ಟುಗೂಡಿರಬೇಕಾದುದು ಅಗತ್ಯ. ಈ ಗುಣಗಳನ್ನು ಎರಡು ಅಸ್ತಿತ್ವಗಳು ಸಮಾನವಾಗಿ ಹೊಂದಿರುವುದು ಅಸಾಧ್ಯ. ಏಕೆಂದರೆ ಎಲ್ಲರ ಮೇಲೆ ಪ್ರಾಬಲ್ಯ ಇರುವ ಮತ್ತು ಎಲ್ಲರ ಮೇಲೆ ಆಧಿಪತ್ಯ ನಡೆಸುವ ಶಕ್ತಿಯು ಒಂದೇ ಆಗಿರಲು ಸಾಧ್ಯ. ಈ ಗುಣಗಳು ವಿಭಜನೆ ಗೊಂಡು ಅನೇಕ ದೇವರುಗಳಲ್ಲಿ ಹಂಚಿ ಹೋಗುವುದು ಕೂಡಾ ಸಾಧ್ಯವಿಲ್ಲ. ಏಕೆಂದರೆ ಒಬ್ಬನು ಅಧಿಪತಿ, ಇನ್ನೊಬ್ಬನು ಸರ್ವಜ್ಞ, ಮತ್ತೊಬ್ಬನು ಅನ್ನದಾತ ಎಂದಾದರೆ ಪ್ರತಿಯೊಬ್ಬ ದೇವನೂ ಇನ್ನೊಬ್ಬನ ಆಶ್ರಿತನಾಗಿರುವನು. ಒಬ್ಬನು ಇನ್ನೊಬ್ಬನೊಂದಿಗೆ ಸಹಕರಿಸದಿದ್ದರೆ ಇಡೀ ವಿಶ್ವವೇ ಕ್ಷಣ ಮಾತ್ರದಲ್ಲಿ ನಾಶಹೊಂದೀತು. ಈ ಗುಣಗಳು ಒಬ್ಬನಿಂದ ಇನ್ನೊಬ್ಬನಿಗೆ ವರ್ಗಾಯಿಸಲ್ಪಡಲೂ ಸಾಧ್ಯವಿಲ್ಲ. ಅಂದರೆ ಒಂದು ಗುಣವು ಒಮ್ಮೆ ಒಬ್ಬ ದೇವನಲ್ಲಿದ್ದು ಇನ್ನೊಮ್ಮೆ ಮತ್ತೊಬ್ಬ ದೇವನಲ್ಲಿರುವುದು ಸಾಧ್ಯವಿಲ್ಲ. ಏಕೆಂದರೆ

ಯಾವ ದೇವನು ಸ್ವಯಂ ಜೀವಂತವಿರಲು ಶಕ್ತನಲ್ಲವೋ ಅವನು ಇಡೀ ವಿಶ್ವಕ್ಕೆ ಜೀವದಾನ ಮಾಡಲಾರನು. ಯಾವ ದೇವನು ಸ್ವಯಂ ತನ್ನ ದೇವತ್ವವನ್ನು ರಕ್ಷಿಸಲಾರನೋ ಅವನು ಇಷ್ಟು ದೊಡ್ಡ ವಿಶ್ವದ ಮೇಲೆ ಆಡಳಿತ ನಡೆಸಲಾರನು. ನಿಮಗೆ ಜ್ಞಾನದ ಬೆಳಕು ಹೆಚ್ಚೆಚ್ಚು ಸಿಕ್ಕಿದಂತೆಲ್ಲಾ ದೇವತ್ವದ ಗುಣಗಳು ಒಂದೇ ಅಸ್ತಿತ್ವದಲ್ಲಿ ಒಟ್ಟುಗೂಡಿರಬೇಕಾದುದು ಅಗತ್ಯವೆಂಬ ದೃಢ ವಿಶ್ವಾಸ ನಿಮ್ಮಲ್ಲಿ ಮೂಡುತ್ತಾ ಹೋಗುವುದು.

3. ದೇವತ್ವದ ಈ ಸಮಗ್ರ ಮತ್ತು ಸರಿಯಾದ ಕಲ್ಪನೆಯನ್ನು ಗಮನದಲ್ಲಿಟ್ಟು ಇಡೀ ವಿಶ್ವವನ್ನೊಮ್ಮೆ ನೋಡಿರಿ. ಎಷ್ಟು ವಸ್ತುಗಳು ನಿಮಗೆ ಗೋಚರಿಸುತ್ತವೋ, ಎಷ್ಟು ವಸ್ತುಗಳನ್ನು ಯಾವುದಾದರೂ ಮಾಧ್ಯಮದ ಮೂಲಕ ನೀವು ಅನುಭವಿಸುವಿರೋ, ಎಷ್ಟು ವಸ್ತುಗಳ ಮೇಲೆ ನಿಮ್ಮ ಜ್ಞಾನದ ವ್ಯಾಪ್ತಿ ಇದೆಯೋ ಅವುಗಳ ಪೈಕಿ ಒಂದರಲ್ಲಿ ಕೂಡಾ ಆ ಗುಣಗಳು ಇಲ್ಲವೆಂಬುದು ನಿಮಗೆ ತಿಳಿದು ಬರುವುದು. ಜಗತ್ತಿನ ಎಲ್ಲ ವಸ್ತುಗಳೂ ಪರಾವಲಂಬಿಗಳಾಗಿವೆ, ಪ್ರಜೆಗಳಾಗಿವೆ. ಅವು ಉಂಟಾಗುತ್ತವೆ, ಅಳಿಯುತ್ತವೆ, ಸಾಯುತ್ತವೆ ಮತ್ತು ಬದುಕುತ್ತವೆ. ಯಾವುದಕ್ಕೂ ಒಂದೇ ಸ್ಥಿತಿ ಶಾಶ್ವತವಲ್ಲ. ಯಾವುದಕ್ಕೂ ತನ್ನ ಬಲದಿಂದ ಏನನ್ನೂ ಮಾಡುವ ಸಾಮರ್ಥ್ಯವಿಲ್ಲ. ಯಾವುದಕ್ಕೂ ಒಂದು ಉನ್ನತ ನಿಯಮವನ್ನು ಕೂದಲೆಳೆಯಷ್ಟೂ ಉಲ್ಲಂಘಿಸುವ ತ್ರಾಣವಿಲ್ಲ. ಅವುಗಳ ಪೈಕಿ ಯಾವುದೂ ದೇವರಲ್ಲವೆಂಬುದಕ್ಕೆ ಅವುಗಳ ಸ್ಥಿತಿಯೇ ಸ್ವಯಂ ಸಾಕ್ಷ್ಯವಹಿಸುತ್ತದೆ. ಯಾವುದರಲ್ಲೂ ದೇವತ್ವದ ಸಾಮಾನ್ಯ ಛಾಯೆಯೂ ಗೋಚರಿಸುವುದಿಲ್ಲ. ಯಾವುದಕ್ಕೂ ದೇವತ್ವದಲ್ಲಿ ಸ್ವಲ್ಪವೂ ಪ್ರವೇಶವಿಲ್ಲ. 'ಲಾ ಇಲಾಹ' ಎಂಬುದರ ಅರ್ಥ ಇದುವೇ ಆಗಿದೆ.

4. ವಿಶ್ವದ ಎಲ್ಲ ವಸ್ತುಗಳಿಂದಲೂ ದೇವತ್ವವನ್ನು ಕಸಿದುಕೊಂಡ ಬಳಿಕ ಎಲ್ಲರಿಗಿಂತಲೂ ಉನ್ನತವಾದ ಒಂದು ಅಸ್ತಿತ್ವವನ್ನು ಒಪ್ಪಲೇ ಬೇಕಾಗುತ್ತದೆ. ಅವನಲ್ಲಿಯೇ ದೇವತ್ವದ ಸಕಲ ಗುಣಗಳೂ ಅಡಗಿವೆ. ಅವನ ಹೊರತು ಅನ್ಯ ದೇವರಿಲ್ಲ. 'ಇಲ್ಲಲ್ಲಾಹ್' ಎಂಬುದರ ಅರ್ಥ ಇದುವೇ ಆಗಿದೆ.

ಇದುವೇ ಅತಿ ದೊಡ್ಡ ಜ್ಞಾನ. ನೀವು ಅನ್ವೇಷಣೆ ಮತ್ತು ಸಂಶೋಧನೆಗಳನ್ನು ನಡೆಸಿದಷ್ಟೂ ಇದುವೇ ಜ್ಞಾನದ ಆದಿಯೂ ಅಂತ್ಯವೂ ಆಗಿದೆಯೆಂಬುದು ನಿಮಗೆ ಸ್ಪಷ್ಟವಾಗುವುದು. ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ನರವಂಶ ಶಾಸ್ತ್ರ ಇತ್ಯಾದಿ ವಿಶ್ವದ ವಾಸ್ತವಿಕತೆಗಳನ್ನು ತಿಳಿಯುವ ಯಾವ ವಿದ್ಯೆಯಾದರೂ ಸರಿ. ಅವುಗಳ ಸಂಶೋಧನೆಯಲ್ಲಿ ನೀವೆಷ್ಟು ಪ್ರಗತಿ ಸಾಧಿಸುವಿರೋ, ಅಷ್ಟೇ ಅಧಿಕ ನಿಮಗೆ 'ಲಾ ಇಲಾಹ ಇಲ್ಲಲ್ಲಾಹ್'ನ ವಾಸ್ತವಿಕತೆಯು ಅನಾವರಣಗೊಳ್ಳುತ್ತಾ ಸಾಗುವುದು ಮತ್ತು ಅದರ ಮೇಲೆ ನಿಮ್ಮ

ವಿಶ್ವಾಸವು ಇನ್ನಷ್ಟು ವೃದ್ಧಿಸುವುದು. ಈ ಅಂತ್ಯದ ದೊಡ್ಡ ಸತ್ಯವನ್ನು ನಿರಾಕರಿಸಿದ ಬಳಿಕ ಎಲ್ಲ ವಸ್ತುಗಳೂ ನಿರರ್ಥಕವೆನಿಸುತ್ತದೆ ಎಂಬುದು ವೈಜ್ಞಾನಿಕ ಸಂಶೋಧನೆಯ ಪ್ರತಿಯೊಂದು ಹೆಜ್ಜೆಯಲ್ಲೂ ನಿಮಗೆ ಮನವರಿಕೆಯಾಗುವುದು.

## ಮನುಷ್ಯ ಜೀವನದ ಮೇಲೆ ಏಕದೇವ ವಿಶ್ವಾಸದ ಪ್ರಭಾವ

ಈಗ ನಾವು ಮನುಷ್ಯ ಜೀವನದ ಮೇಲೆ ಏಕದೇವ ವಿಶ್ವಾಸವು ಯಾವ ಪ್ರಭಾವ ಬೀರುತ್ತದೆ ಮತ್ತು ಅದನ್ನು ನಿರಾಕರಿಸುವವನು ಏಕೆ ಪರಾಜಿತನಾಗುತ್ತಾನೆಂಬುದನ್ನು ಈಗ ನೋಡೋಣ–

1. ಈ ವಚನದ ಮೇಲೆ ವಿಶ್ವಾಸವಿರಿಸುವವನು ಎಂದೂ ಸಂಕುಚಿತ ದೃಷ್ಟಿಕೋನದವನಾಗಿರುವುದಿಲ್ಲ. ಅವನು ಭೂಮಿ–ಆಕಾಶಗಳ ಸೃಷ್ಟಿಕರ್ತ, ಪೂರ್ವ–ಪಶ್ಚಿಮಗಳ ಒಡೆಯ ಮತ್ತು ಸಂಪೂರ್ಣ ವಿಶ್ವದ ಪಾಲಕ ಪ್ರಭುವನ್ನು ನಂಬುವವನಾಗಿರುತ್ತಾನೆ. ಈ ವಿಶ್ವಾಸದ ನಂತರ ಯಾವ ವಸ್ತುವೂ ಅವನಿಗೆ ಪರಕೀಯವಾಗಿ ಕಾಣುವುದಿಲ್ಲ. ಅವನು ತನ್ನಂತೆ ಇತರ ಎಲ್ಲ ವಸ್ತುಗಳನ್ನು ಒಬ್ಬ ಒಡೆಯನ ಸೊತ್ತು ಮತ್ತು ಓರ್ವ ಅಧಿಪತಿಯ ಪ್ರಜೆಯೆಂದು ಬಗೆಯುತ್ತಾನೆ. ಅವನ ಅನುಕಂಪ, ಪ್ರೇಮ ಮತ್ತು ಸೇವೆಯು ಯಾವ ಮೇರೆಗೂ ಸೀಮಿತವಾಗಿರುವುದಿಲ್ಲ. ಅವನ ದೃಷ್ಟಿಕೋನವು ಅಲ್ಲಾಹನ ಆಧಿಪತ್ಯದಷ್ಟೇ ಅಪಾರವಾಗಿ ಬಿಡುತ್ತದೆ. ಈ ಗುಣಗಳು ಅನೇಕ ಸಣ್ಣ ಸಣ್ಣ ದೇವರನ್ನು ನಂಬುವವನಲ್ಲಿ, ದೇವನನ್ನು ಮನುಷ್ಯನಂತಹ ಸೀಮಿತ ಮತ್ತು ಅಪೂರ್ಣ ಗುಣಗಳುಳ್ಳವನೆಂದು ಬಗೆಯುವವನಲ್ಲಿ ಅಥವಾ ದೇವನೇ ಇಲ್ಲವೆಂದು ನಂಬುವವನಲ್ಲಿ ಉಂಟಾಗಲಾರದು.

2. ಈ ವಚನವು ಮನುಷ್ಯನಲ್ಲಿ ಅಪಾರ ಮಟ್ಟದ ಸ್ವಂತಿಕೆ ಮತ್ತು ಆತ್ಮಾಭಿಮಾನವನ್ನು ಉಂಟುಮಾಡುತ್ತದೆ. ಅದನ್ನು ನಂಬುವವನು ಎಲ್ಲ ಶಕ್ತಿಗಳ ಒಡೆಯನು ಕೇವಲ ಒಬ್ಬ ದೇವನಾಗಿದ್ದಾನೆ ಎಂಬುದನ್ನೂ ಅರಿತಿರುತ್ತಾನೆ. ಅವನ ಹೊರತು ಯಾರೂ ಲಾಭ ಉಂಟು ಮಾಡುವವರಿಲ್ಲ, ಅವನ ಹೊರತು ಯಾರೂ ಜೀವನ ಮರಣಗಳನ್ನು ನೀಡುವವರಿಲ್ಲ, ಅವನ ಹೊರತು ಯಾರಿಗೂ ಅಧಿಕಾರ ಮತ್ತು ಪ್ರಭಾವವಿಲ್ಲ ಎಂಬುದನ್ನೂ ಅರಿತಿರುತ್ತಾನೆ. ಈ ಜ್ಞಾನ ಮತ್ತು ನಂಬಿಕೆಯು ಅವನನ್ನು ಅಲ್ಲಾಹನ ಹೊರತು ಇತರ ಎಲ್ಲ ಶಕ್ತಿಗಳಿಂದ ನಿರಪೇಕ್ಷ ಮತ್ತು ನಿರ್ಭಯನನ್ನಾಗಿ ಮಾಡುತ್ತದೆ. ಅವನ ಕೊರಳು ಯಾವುದೇ ಸೃಷ್ಟಿಯ ಮುಂದೆ ಬಾಗುವುದಿಲ್ಲ. ಅವನು ಇತರ ಯಾರ ಮುಂದೆಯೂ ಕೈಚಾಚುವುದಿಲ್ಲ. ಅವನ ಮನಸ್ಸಿನಲ್ಲಿ ಇನ್ನಾರ ಹಿರಿಮೆಯೂ ಆವರಿಸಿರುವುದಿಲ್ಲ. ಈ ಗುಣವು ಏಕದೇವ ವಿಶ್ವಾಸದ ಹೊರತು ಇನ್ನಾವ ವಿಶ್ವಾಸದಿಂದಲೂ ಹುಟ್ಟಲು ಸಾಧ್ಯವಿಲ್ಲ. ಮನುಷ್ಯನನ್ನು ಸೃಷ್ಟಿಗಳ ಮುಂದೆ ಬಾಗಿಸುವುದು, ಅವರನ್ನು ಲಾಭ ನಷ್ಟದ ಒಡೆಯರೆಂದು ಬಗೆಯುವಂತೆ ಮಾಡುವುದು, ಅವರಿಂದಲೇ ನಿರೀಕ್ಷೆಯನ್ನೂ ಭಯವನ್ನೂ ಇರಿಸುವುದು

ಬಹುದೇವ ವಿಶ್ವಾಸ, ಸತ್ಯನಿಷೇಧ ಮತ್ತು ನಾಸ್ತಿಕತೆಯ ವೈಶಿಷ್ಟ್ಯವಾಗಿದೆ.

3. ಸ್ವಂತಿಕೆಯ ಜೊತೆಗೆ ಈ ವಚನವು ಮನುಷ್ಯನಲ್ಲಿ ವಿನಯವನ್ನೂ ಉಂಟು ಮಾಡುತ್ತದೆ. ಅದನ್ನು ನಂಬುವವನು ಎಂದೂ ಅಹಂಕಾರ ಮತ್ತು ದರ್ಪ ತೋರುವವನಾಗಲಾರ. ತನ್ನ ಶಕ್ತಿ, ಸಂಪತ್ತು ಮತ್ತು ಸಾಮರ್ಥ್ಯಗಳ ದುರಹಂಕಾರವು ಅವನಲ್ಲಿ ಎಂದೂ ಉಂಟಾಗಲಾರದು. ಏಕೆಂದರೆ ಅವನ ಬಳಿ ಇರುವುದೆಲ್ಲವೂ ಅಲ್ಲಾಹನೇ ದಯಪಾಲಿಸಿದ್ದು ಎಂಬುದು ಅವನಿಗೆ ತಿಳಿದಿದೆ. ದೇವನು ಕೊಡಲು ಸಾಮರ್ಥ್ಯವಿದ್ದವನಂತೆಯೇ ಕಸಿದುಕೊಳ್ಳಲು ಸಾಮರ್ಥ್ಯ ಉಳ್ಳವನೂ ಆಗಿದ್ದಾನೆಂಬುದೂ ಅವನಿಗೆ ಚೆನ್ನಾಗಿ ತಿಳಿದಿರುತ್ತದೆ. ಇದಕ್ಕೆದುರಾಗಿ ನಾಸ್ತಿಕನೊಬ್ಬನಿಗೆ ಯಾವುದಾದರೂ ಲೌಕಿಕ ಸಾಮರ್ಥ್ಯ ಲಭ್ಯವಾದರೆ ಅವನು ಬೀಗುತ್ತಾನೆ. ಏಕೆಂದರೆ ಅವನು ತನ್ನ ಸಾಮರ್ಥ್ಯವನ್ನು ಕೇವಲ ತನ್ನ ಗಳಿಕೆಯೆಂದು ಬಗೆಯುತ್ತಾನೆ. ಇದೇ ರೀತಿ ಬಹುದೇವ ವಿಶ್ವಾಸ ಮತ್ತು ಸತ್ಯನಿಷೇಧದೊಂದಿಗೂ ದುರಹಂಕಾರ ಹುಟ್ಟುವುದು ಸಹಜವಾಗಿದೆ. ಏಕೆಂದರೆ, ಅವರು ದೇವನೊಂದಿಗೆ ಇತರರಿಗೆ ಇಲ್ಲದಂತಹ ಯಾವುದೋ ವಿಶೇಷ ಸಂಬಂಧ ತಮಗಿದೆ ಎಂದು ಬಗೆಯುತ್ತಾರೆ.

4. ಈ ವಚನದ ಮೇಲೆ ವಿಶ್ವಾಸವಿರಿಸುವವನು ಆತ್ಮಸಂಸ್ಕರಣೆ ಮತ್ತು ಸತ್ಕರ್ಮಗಳು ಮಾತ್ರ ಮೋಕ್ಷ ಮತ್ತು ವಿಜಯದ ಮಾರ್ಗಗಳಾಗಿವೆ ಎಂದು ಬಗೆಯುತ್ತಾನೆ. ಏಕೆಂದರೆ ಅವನು ನಿರಪೇಕ್ಷನೂ ಯಾರೊಂದಿಗೂ ಯಾವುದೇ ವಿಶಿಷ್ಟ ಸಂಬಂಧವಿಲ್ಲದವನೂ ನಿಷ್ಠುರವಾದ ನ್ಯಾಯವನ್ನು ಪಾಲಿಸುವವನೂ ಆಗಿರುವ ಅಲ್ಲಾಹನ ಮೇಲೆ ವಿಶ್ವಾಸವಿರಿಸುತ್ತಾನೆ. ಯಾರಿಗೂ ಅವನ ದೇವತ್ವದಲ್ಲಿ ಯಾವ ಪಾಲೂ ಇಲ್ಲವೆಂಬುದು ಅವನಿಗೆ ಚೆನ್ನಾಗಿ ತಿಳಿದಿದೆ. ತದ್ವಿರುದ್ಧವಾಗಿ ಬಹುದೇವ ವಿಶ್ವಾಸಿಗಳು ಮತ್ತು ಸತ್ಯನಿಷೇಧಿಗಳು ಸದಾ ಪೊಳ್ಳು ಭರವಸೆಗಳ ಜೀವನ ಸಾಗಿಸುತ್ತಾರೆ. ಅವರ ಪೈಕಿ ಕೆಲವರು, ಒಬ್ಬ ದೇವಪುತ್ರನಿದ್ದು ನಮ್ಮ ಮಟ್ಟಿಗೆ ಪ್ರಾಯಶ್ಚಿತ್ತವಾಗಿದ್ದಾರೆಂದು ಬಗೆದರೆ; ಇನ್ನು ಕೆಲವರು, ಅಲ್ಲಾಹನ ಆಪ್ತರಾಗಿರುವ ನಮಗೆ ಶಿಕ್ಷೆ ಸಿಗುವುದು ಸಾಧ್ಯವಲ್ಲವೆಂದು ಭಾವಿಸುತ್ತಾರೆ. ಮತ್ತೆ ಕೆಲವರು ತಮ್ಮ ಹಿರಿಯರ ಮುಖಾಂತರ ಅಲ್ಲಾಹನ ಮುಂದೆ ಶಿಫಾರಸ್ಸು ಮಾಡಿಸುವೆವೆಂಬ ಭರವಸೆಯಲ್ಲಿರುತ್ತಾರೆ. ಕೆಲವರು ತಮ್ಮ ಕಾಲ್ಪನಿಕ ದೇವರುಗಳಿಗೆ ಹರಕೆ ಕಾಣಿಕೆಗಳನ್ನು ನೀಡಿ, ಈಗ ಲೋಕದಲ್ಲಿ ತಮಗಿಷ್ಟ ಬಂದಂತೆ ವರ್ತಿಸುವ ಪರವಾನಿಗೆ ಲಭಿಸಿದೆ ಎಂದು ಭಾವಿಸುತ್ತಾರೆ. ಈ ರೀತಿಯ ಮಿಥ್ಯ ವಿಶ್ವಾಸಗಳು ಅವರನ್ನು ಸದಾ ಪಾಪ ಮತ್ತು ಅತ್ಯಾಚಾರಗಳಲ್ಲಿ ಸಿಲುಕಿಸುತ್ತವೆ ಮತ್ತು ಅವರು ಅವುಗಳ ಮೇಲೆ ಭರವಸೆಯಿಟ್ಟು ತಮ್ಮ ಆತ್ಮಸಂಸ್ಕರಣೆ ಮತ್ತು ಸತ್ಕರ್ಮಗಳ ಬಗ್ಗೆ ಯಾವಾಗಲೂ ಅಶ್ರದ್ಧರಾಗಿರುತ್ತಾರೆ. ನಾಸ್ತಿಕರಂತೂ ತಮ್ಮ ಮೇಲೆ ತಮ್ಮ ಸತ್ಕರ್ಮ ದುಷ್ಕರ್ಮಗಳ ವಿಚಾರಣೆ ನಡೆಸಬಲ್ಲ ಯಾವ ಶಕ್ತಿಯೂ ಇಲ್ಲವೆಂದು ಬಗೆಯುತ್ತಾರೆ. ಅವರ ಸ್ವೇಚ್ಛೆಗಳೇ ಅವರ ದೇವರಾಗಿದ್ದು ಅವರು ಅವುಗಳ ದಾಸರಾಗಿರುತ್ತಾರೆ.

5. ಈ ವಚನವನ್ನು ನಂಬುವವನು ಎಂದೂ ನಿರಾಶನೂ ಹತಾಶನೂ ಆಗುವುದಿಲ್ಲ. ಅವನು ಭೂಮಿ–ಆಕಾಶಗಳ ಎಲ್ಲ ಭಂಡಾರಗಳ ಒಡೆಯನಾದ ದೇವನ ಮೇಲೆ ವಿಶ್ವಾಸವಿರಿಸುತ್ತಾನೆ. ಅವನ ದಯೆ–ಕರುಣೆಗಳು ಅಪಾರವಾಗಿದ್ದು ಅವನ ಶಕ್ತಿ–ಸಾಮರ್ಥ್ಯಗಳು ನಿಸ್ಸೀಮವಾಗಿವೆ ಎಂದು ನಂಬುತ್ತಾನೆ. ಈ ವಿಶ್ವಾಸವು ಅವನ ಮನಸ್ಸಿಗೆ ಅಸಾಮಾನ್ಯ ಶಾಂತಿಯನ್ನು ನೀಡುತ್ತದೆ. ಅದು ಸದಾ ಸಂತೃಪ್ತವಾಗಿರುತ್ತದೆ. ಯಾವಾಗಲೂ ಆಶೆ–ನಿರೀಕ್ಷೆಗಳಿಂದ ತುಂಬಿ ತುಳುಕುತ್ತಿರುತ್ತದೆ. ಲೋಕದ ಎಲ್ಲ ದ್ವಾರಗಳೂ ಅವನಿಗೆ ಮುಚ್ಚಲ್ಪಟ್ಟರೆ, ಎಲ್ಲ ಮೂಲಗಳೂ ಕೈಕೊಟ್ಟರೆ, ಸಂಪತ್ತು ಸಂಬಂಧಗಳೆಲ್ಲವೂ ನಾಶವಾದರೆ ಆಗಲೂ ಒಬ್ಬ ದೇವನ ಆಸರೆಯು ಅವನನ್ನು ಬಿಟ್ಟಗಲುವುದಿಲ್ಲ. ಅವನ ಭರವಸೆಯ ಮೇಲೆಯೇ ಅವನು ಹೊಸ ಹೊಸ ಪ್ರಯತ್ನಗಳನ್ನು ಮಾಡುತ್ತಾ ಸಾಗುತ್ತಾನೆ. ಈ ಮನಃಶಾಂತಿಯೂ ಏಕದೇವ ವಿಶ್ವಾಸದ ಹೊರತು ಬೇರಾವ ವಿಶ್ವಾಸದಿಂದಲೂ ಲಭಿಸುವುದಿಲ್ಲ. ಬಹುದೇವ ವಿಶ್ವಾಸಿಗಳು, ಸತ್ಯನಿಷೇಧಿಗಳು ಮತ್ತು ನಾಸ್ತಿಕರು ಸಂಕುಚಿತ ಮನಸ್ಸಿನವರಾಗಿರುತ್ತಾರೆ. ಅವರ ಭರವಸೆಯು ಸೀಮಿತವಾದ ಶಕ್ತಿಗಳ ಮೇಲಿರುತ್ತದೆ. ಆದ್ದರಿಂದ ಸಂಕಷ್ಟಗಳಲ್ಲಿ ಬಹು ಬೇಗನೇ ನಿರಾಶೆಯು ಅವರನ್ನು ಕಾಡುತ್ತದೆ. ಇಂತಹ ಸಂದರ್ಭಗಳಲ್ಲಿ ಅವರು ಆತ್ಮಹತ್ಯೆಗಯ್ಯಲೂ ಹಿಂಜರಿಯುವುದಿಲ್ಲ.

6. ಈ ವಚನದ ಮೇಲೆ ವಿಶ್ವಾಸವು ಮನುಷ್ಯನಲ್ಲಿ ಸಂಕಲ್ಪ, ಧೈರ್ಯ, ಸಹನೆ ಮತ್ತು ಭರವಸೆಯ ಅಪಾರ ಶಕ್ತಿಯನ್ನುಂಟು ಮಾಡುತ್ತದೆ. ಅವನು ದೇವನ ಮೆಚ್ಚುಗೆ ಗಳಿಸಲಿಕ್ಕಾಗಿ ಲೋಕದಲ್ಲಿ ಯಾವುದಾದರೂ ದೊಡ್ಡ ಕೆಲಸ ಮಾಡಲು ಹೊರಟರೆ ನನ್ನ ನೆರವಿಗೆ ಭೂಮಿ–ಆಕಾಶಗಳ ಅಧಿಪತಿಯ ಶಕ್ತಿಯಿದೆ ಎಂಬ ದೃಢ ವಿಶ್ವಾಸ ಅವನ ಮನಸ್ಸಿನಲ್ಲಿರುತ್ತದೆ. ಈ ವಿಚಾರವು ಅವನಲ್ಲಿ ಪರ್ವತದಂತಹ ದೃಢತೆಯನ್ನುಂಟು ಮಾಡುತ್ತದೆ. ಲೋಕದ ಎಲ್ಲ ಸಂಕಷ್ಟಗಳು, ಅಡೆತಡೆಗಳು ಮತ್ತು ವಿರೋಧಿ ಶಕ್ತಿಗಳು ಸೇರಿಯೂ ಅವನ ಸಂಕಲ್ಪ ಶಕ್ತಿಯನ್ನು ಸೋಲಿಸಲಾರವು.

7. ಈ ವಚನವು ಮನುಷ್ಯನನ್ನು ಶೂರನಾಗಿ ಮಾಡುತ್ತದೆ. ಮನುಷ್ಯನನ್ನು ಲೋಕದಲ್ಲಿ ಎರಡು ವಸ್ತುಗಳು ಹೇಡಿಯಾಗಿ ಮಾಡುತ್ತವೆ. ಒಂದನೆಯದು ಪ್ರಾಣ, ಸೊತ್ತು ಮತ್ತು ಸಂತತಿಗಳ ಪ್ರೇಮ. ಎರಡನೆಯದು, ದೇವನ ಹೊರತು ಯಾರಾದರೂ ನನ್ನನ್ನು ಸಾಯಿಸಬಲ್ಲನು ಮತ್ತು ಮನುಷ್ಯನು ತನ್ನ ಪ್ರಯತ್ನಗಳಿಂದ ಮರಣವನ್ನು ಸರಿಸಬಲ್ಲನು ಎಂಬ ವಿಶ್ವಾಸ. 'ಲಾ ಇಲಾಹ ಇಲ್ಲಲ್ಲಾಹ್'ನ ವಿಶ್ವಾಸವು ಈ ಎರಡೂ ವಸ್ತುಗಳನ್ನು ಮನಸ್ಸಿನಿಂದ ತೆಗೆದು ಬಿಡುತ್ತದೆ. ಒಂದನೆಯದು ಹೇಗೆ ಹೊರಟು ಬಿಡುತ್ತದೆಂದರೆ, ಅದನ್ನು ನಂಬುವವನು ತನ್ನ ಪ್ರಾಣ–ಸೊತ್ತು ಮತ್ತು ಪ್ರತಿಯೊಂದು ವಸ್ತುವು ಅಲ್ಲಾಹನ ಒಡೆತನಕ್ಕೆ ಸೇರಿದ್ದೆಂದು ಭಾವಿಸಿ ಅವನ ಮೆಚ್ಚುಗೆಗಾಗಿ ಎಲ್ಲವನ್ನೂ ತ್ಯಾಗ ಮಾಡಲು ಸದಾ ಸಿದ್ಧನಿರುತ್ತಾನೆ. ಎರಡನೆಯ ವಸ್ತು ಏಕೆ

ಉಳಿಯುವುದಿಲ್ಲವೆಂದರೆ, 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುವವನು ಜೀವ ತೆಗೆಯುವ ಶಕ್ತಿಯು ಯಾವನೇ ಮನುಷ್ಯ, ಯಾವುದೇ ಪ್ರಾಣಿ, ಬಂದೂಕು, ಖಡ್ಗ, ಹಲಗೆ ಅಥವಾ ಕಲ್ಲಿಗೆ ಇಲ್ಲವೆಂದು ನಂಬುತ್ತಾನೆ. ಅದು ಪೂರ್ಣವಾಗಿ ಅಲ್ಲಾಹನ ಕೈಯಲ್ಲಿದೆ ಮತ್ತು ಅವನ ಮರಣಕ್ಕೆ ನಿಶ್ಚಿತಗೊಳಿಸಿದ ಸಮಯಕ್ಕಿಂತ ಮುಂಚೆ ಲೋಕದ ಎಲ್ಲ ಶಕ್ತಿಗಳು ಸೇರಿಯೂ ಅವನನ್ನು ಕೊಲ್ಲಲಾರವು ಎಂಬ ವಿಶ್ವಾಸ ಅವನಲ್ಲಿರುತ್ತದೆ. ಆದ್ದರಿಂದಲೇ ಅಲ್ಲಾಹನನ್ನು ನಂಬುವವನು ಲೋಕದಲ್ಲಿ ಅತ್ಯಧಿಕ ಪರಾಕ್ರಮಿಯಾಗಿರುತ್ತಾನೆ. ಅವನ ಮುಂದೆ ಖಡ್ಗ, ಬಂದೂಕು ಮತ್ತು ಸೇನೆಗಳೆಲ್ಲವೂ ವಿಫಲವಾಗುತ್ತವೆ. ಅವನು ಅಲ್ಲಾಹನ ಮಾರ್ಗದಲ್ಲಿ ಹೋರಾಡುವಾಗ ತನಗಿಂತ ಹತ್ತು ಪಟ್ಟು ಅಧಿಕ ಶಕ್ತಿಯನ್ನು ಹಿಮ್ಮೆಟ್ಟಿಸುತ್ತಾನೆ. ಬಹುದೇವ ವಿಶ್ವಾಸಿಗಳು, ಸತ್ಯನಿಷೇಧಿಗಳು ಮತ್ತು ನಾಸ್ತಿಕರಲ್ಲಿ ಈ ಶಕ್ತಿ ಬರುವುದಾದರೂ ಎಲ್ಲಿಂದ? ಅವರಿಗಂತೂ ಪ್ರಾಣವು ಎಲ್ಲಕ್ಕಿಂತಲೂ ಪ್ರಿಯವಾಗಿರುವುದು. ವೈರಿಯು ಮರಣವನ್ನು ತರಬಲ್ಲನೆಂದೂ ತಾವು ಓಡಿ ಹೋದರೆ, ಅದೂ ಓಡಿ ಹೋಗುವುದೆಂದೂ ಅವರು ಭಾವಿಸುತ್ತಾರೆ.

8. 'ಲಾ ಇಲಾಹ ಇಲ್ಲಲ್ಲಾಹ್'ನ ವಿಶ್ವಾಸವು ಮನುಷ್ಯನಲ್ಲಿ ತೃಪ್ತಿ ಮತ್ತು ನಿರಪೇಕ್ಷತೆಯನ್ನುಂಟು ಮಾಡುತ್ತದೆ. ಆಶೆ-ಲೋಭ, ಈರ್ಷ್ಯೆ ಮತ್ತು ಮತ್ಸರಗಳ ನೀಚ ಗುಣಗಳನ್ನು ಅವನ ಮನಸ್ಸಿನಿಂದ ಕಿತ್ತೆಸೆಯುತ್ತದೆ. ವಿಜಯ ಗಳಿಸಲು ಅನ್ಯಾಯ ಮತ್ತು ನೀಚ ಮಾರ್ಗಗಳನ್ನನುಸರಿಸುವ ಭಾವನೆ ಕೂಡಾ ಅವನ ಮನಸ್ಸಿನಲ್ಲಿ ಬರಲು ಬಿಡುವುದಿಲ್ಲ. ಅನ್ನವು ಅಲ್ಲಾಹನ ಕೈಯಲ್ಲಿದೆ. ಅವನು ತಾನಿಚ್ಛಿಸಿದವನಿಗೆ ಕಡಿಮೆ ನೀಡಿ ತಾನಿಚ್ಛಿಸಿದವನಿಗೆ ಧಾರಾಳ ನೀಡಬಲ್ಲನು ಎಂದು ಅವನು ನಂಬುತ್ತಾನೆ. ಗೌರವ, ಶಕ್ತಿ, ಕೀರ್ತಿ ಮತ್ತು ಅಧಿಕಾರವು ಅಲ್ಲಾಹನ ಕೈಯಲ್ಲಿದೆ. ಅವನು ತನ್ನ ಯುಕ್ತಿಗಳಿಗನುಸಾರ ಯಾರಿಗೆ ಎಷ್ಟು ಬೇಕಾದರೂ ನೀಡುತ್ತಾನೆ. ನಮ್ಮ ಕೆಲಸವಂತೂ ನಮಗೆ ಸಾಧ್ಯವಿದ್ದಷ್ಟು ಪ್ರಯತ್ನ ಮಾಡುವುದಾಗಿದೆ. ಜಯಾಪಜಯಗಳು ಅಲ್ಲಾಹನ ಕೈಯಲ್ಲಿವೆ. ಅವನು ನೀಡಬಯಸಿದರೆ, ಲೋಕದ ಯಾವ ಶಕ್ತಿಯೂ ತಡೆಯಲಾರದು. ಅವನು ನೀಡಬಯಸದಿದ್ದರೆ ಯಾವ ಶಕ್ತಿಯೂ ಕೊಡಿಸಲಾರದು. ಇದಕ್ಕೆದುರಾಗಿ ಬಹುದೇವವಿಶ್ವಾಸಿಗಳು, ಸತ್ಯನಿಷೇಧಿಗಳು ಮತ್ತು ನಾಸ್ತಿಕರು ತಮ್ಮ ಜಯಾಪಜಯಗಳು ತಮ್ಮ ಪ್ರಯತ್ನ ಮತ್ತು ಲೌಕಿಕ ಶಕ್ತಿಗಳ ನೆರವು ಅಥವಾ ವಿರೋಧವನ್ನು ಅವಲಂಬಿಸಿದೆ ಎಂದು ನಂಬುತ್ತಾರೆ. ಆದ್ದರಿಂದ ಅವರು ಆಶೆ-ಲೋಭಗಳಲ್ಲಿ ಸಿಲುಕಿರುತ್ತಾರೆ. ಜಯಗಳಿಸಲಿಕ್ಕಾಗಿ ಲಂಚ-ರುಷುವತ್ತು, ಭಟ್ಟಂಗಿತನ, ಸಂಚು ಮತ್ತು ಎಲ್ಲ ರೀತಿಯ ನೀಚ ಮಾರ್ಗಗಳನ್ನು ಅವಲಂಬಿಸುತ್ತಾರೆ. ಇತರರ ವಿಜಯಕ್ಕಾಗಿ ಈರ್ಷ್ಯೆ ಮತ್ತು ಮತ್ಸರದ ಅಗ್ನಿಯಲ್ಲಿ ಬೇಯುತ್ತಿರುತ್ತಾರೆ ಹಾಗೂ ಅವರನ್ನು ಸೋಲಿಸಲು ಯಾವ ನೀಚ ಮಾರ್ಗವನ್ನು ಅನುಸರಿಸಲೂ ಅವರು ಹೇಸುವುದಿಲ್ಲ.

9. ಎಲ್ಲಕ್ಕಿಂತಲೂ ಮಿಗಿಲಾಗಿ 'ಲಾ ಇಲಾಹ ಇಲ್ಲಲ್ಲಾಹ್'ನ ಮೇಲಿರುವ

ವಿಶ್ವಾಸವು ಮನುಷ್ಯನನ್ನು ಅಲ್ಲಾಹನ ಕಾನೂನಿಗೆ ಅಧೀನಗೊಳಿಸುತ್ತದೆ. ಈ ವಚನ ವನ್ನು ನಂಬುವವನು ಅಲ್ಲಾಹನು ಎಲ್ಲ ಪ್ರತ್ಯಕ್ಷ ಅಪ್ರತ್ಯಕ್ಷಗಳನ್ನು ಬಲ್ಲವನಾಗಿದ್ದಾನೆ, ನಮ್ಮ ಜೀವನಾಡಿಗಿಂತಲೂ ನಿಕಟವಾಗಿದ್ದಾನೆ. ನಾವು ರಾತ್ರಿಯ ಅಂಧಕಾರದಲ್ಲಿ ಮತ್ತು ಏಕಾಂತದಲ್ಲಿ ಪಾಪ ಮಾಡಿದರೂ ಅದನ್ನು ಅವನು ಅರಿಯುತ್ತಾನೆ. ನಮ್ಮ ಮನದಾಳ ದಲ್ಲಿ ಯಾವುದಾದರೂ ಕೆಟ್ಟ ಭಾವನೆ ಉಂಟಾದರೆ, ಅದರ ಅರಿವು ಅಲ್ಲಾಹನಿಗೆ ಇರುತ್ತದೆ. ನಾವು ಎಲ್ಲರಿಂದ ಅಡಗಿಸಿದರೂ ಅಲ್ಲಾಹನಿಂದ ಅಡಗಿಸಲಾರೆವು. ಎಲ್ಲರಿಂದ ಓಡಿ ಹೋದರೂ ಅಲ್ಲಾಹನ ಸಾಮ್ರಾಜ್ಯದಿಂದ ಓಡಿ ಹೋಗಲಾರೆವು. ಎಲ್ಲರಿಂದ ಪಾರಾದರೂ ಅಲ್ಲಾಹನ ಶಿಕ್ಷೆಯಿಂದ ಪಾರಾಗಲಾರೆವು ಎಂಬ ವಿಶ್ವಾಸ ಅವನಿಗಿರುತ್ತದೆ. ಈ ವಿಶ್ವಾಸವು ಎಷ್ಟು ದೃಢವಾಗುತ್ತದೋ ಅಷ್ಟೇ ಹೆಚ್ಚು ಮನುಷ್ಯನು ಅಲ್ಲಾಹನ ಕಾನೂನಿಗೆ ವಿಧೇಯನಾಗುವನು. ಅಲ್ಲಾಹನು ಯಾವುದನ್ನು ನಿಷಿದ್ಧಗೊಳಿಸಿರುವನೋ ಅದರ ಹತ್ತಿರವೂ ಅವನು ಸುಳಿಯಲಾರನು. ಯಾವುದನ್ನು ಅವನು ಆಜ್ಞಾಪಿಸಿರುವನೋ ಅದನ್ನವನು ಏಕಾಂತ ಮತ್ತು ಅಂಧಕಾರ ದಲ್ಲಿಯೂ ಮಾಡುವನು. ಏಕೆಂದರೆ, ಅವನನ್ನು ಯಾವ ಪರಿಸ್ಥಿತಿಯಲ್ಲೂ ಬಿಟ್ಟಗಲದಂತಹ ಒಂದು ಪೊಲೀಸ್ ಅವನ ಜೊತೆಗಿರುತ್ತದೆ. ಯಾವ ನ್ಯಾಯಾಲಯದ ವಾರಂಟ್‌ನಿಂದ ಅವನು ಎಲ್ಲಿಯೂ ಓಡಿ ಹೋಗಲಾರನೋ ಆ ನ್ಯಾಯಾಲಯದ ಭಯವು ಅವನನ್ನು ಆವರಿಸಿರುತ್ತದೆ. ಆದ್ದರಿಂದಲೇ ಮುಸ್ಲಿಮ್ ಆಗಲು ಪ್ರಥಮ ಶರತ್ತು 'ಲಾ ಇಲಾಹ ಇಲ್ಲಲ್ಲಾಹ್'ನ ಮೇಲೆ ವಿಶ್ವಾಸವಿರಿಸುವುದಾಗಿದೆ. ಮುಸ್ಲಿಮ್ ಎಂದರೆ ಅಲ್ಲಾಹನ ವಿಧೇಯ ದಾಸನೆಂದು ನಿಮಗೆ ಮೊದಲೇ ತಿಳಿಸಲಾಗಿದೆ. ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲವೆಂದು ನಂಬುವ ತನಕ ಒಬ್ಬ ವ್ಯಕ್ತಿಯು ಅಲ್ಲಾಹನ ವಿಧೇಯ ದಾಸನಾಗುವುದು ಸಾಧ್ಯವೇ ಇಲ್ಲ.

ಪ್ರವಾದಿ ಮುಹಮ್ಮದ್‌ರ(ಸ) ಬೋಧನೆಗಳಲ್ಲಿ ಈ ಏಕದೇವ ವಿಶ್ವಾಸವು ಅತ್ಯಂತ ಪ್ರಮುಖ ಮತ್ತು ಮೂಲಭೂತವಾಗಿದೆ. ಇದು ಇಸ್ಲಾಮಿನ ಕೇಂದ್ರ ಬಿಂದುವಾಗಿದೆ, ಅದರ ಮೂಲವಾಗಿದೆ, ಅದರ ಉಗಮವಾಗಿದೆ. ಇದರ ಹೊರತು ಇಸ್ಲಾಮಿನ ಎಷ್ಟು ವಿಶ್ವಾಸ ಶ್ರದ್ಧೆಗಳು ಮತ್ತು ಆಜ್ಞಾ ವಿಧಿಗಳಿವೆಯೋ ಅವೆಲ್ಲವೂ ಈ ಬುನಾದಿಯ ಮೇಲೆಯೇ ನಿಂತಿವೆ. ಅವುಗಳಿಗೆಲ್ಲಾ, ಈ ಕೇಂದ್ರದಿಂದಲೇ ಶಕ್ತಿ ಒದಗುತ್ತದೆ. ಅದನ್ನು ಸರಿಸಿಬಿಟ್ಟರೆ ಇಸ್ಲಾಮ್ ಎಂಬ ವಸ್ತುವೇ ಇರಲಾರದು.

## ದೇವಚರರ ಮೇಲೆ ವಿಶ್ವಾಸ

ಅಲ್ಲಾಹನ ಮೇಲೆ ವಿಶ್ವಾಸವಿರಿಸಿದ ಬಳಿಕ, ವಿಶ್ವಾಸವಿರಿಸಬೇಕೆಂದು ಪ್ರವಾದಿ ವರ್ಯರು(ಸ) ಆದೇಶಿಸಿದ ಎರಡನೆಯ ವಿಷಯವು ದೇವಚರರ ಅಸ್ತಿತ್ವವಾಗಿದೆ. ಈ ವಿಶ್ವಾಸದ ಅತಿ ದೊಡ್ಡ ಪ್ರಯೋಜನವೇನೆಂದರೆ ಇದರಿಂದ ಏಕದೇವ ವಿಶ್ವಾಸವು

ಬಹುದೇವ ವಿಶ್ವಾಸದ ಎಲ್ಲ ಅಪಾಯಗಳಿಂದ ಮುಕ್ತವಾಗುತ್ತದೆ.

ಬಹುದೇವಾರಾಧಕರು ಅಲ್ಲಾಹನ ದೇವತ್ವದಲ್ಲಿ ಎರಡು ವಿಧದ ಸೃಷ್ಟಿಗಳನ್ನು ಸಹಭಾಗಿಗಳಾಗಿ ಮಾಡಿದ್ದಾರೆಂಬುದನ್ನು ಈ ಹಿಂದೆ ತಿಳಿಸಲಾಗಿದೆ. ಒಂದು ವಿಧವು ಶಾರೀರಿಕ ಅಸ್ತಿತ್ವ ಹೊಂದಿದ, ಕಣ್ಣಿಗೆ ಕಾಣುವ ಸೃಷ್ಟಿಗಳಾಗಿವೆ. ಉದಾ: ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ, ನೀರು, ಮಹಾ ಪುರುಷರು ಇತ್ಯಾದಿ. ಎರಡನೆಯ ವಿಧದ ಸೃಷ್ಟಿಗಳಿಗೆ ಶಾರೀರಿಕ ಅಸ್ತಿತ್ವವಿಲ್ಲ. ಅವರು ಅಗೋಚರವಾಗಿ ವಿಶ್ವದ ವ್ಯವಸ್ಥೆಯಲ್ಲಿ ಕಾರ್ಯನಿರತರಾಗಿರುವವರು. ಉದಾ: ಗಾಳಿ ಬೀಸುವ, ನೀರು ಹರಿಸುವ ಮತ್ತು ಬೆಳಕು ಹಾಯಿಸುವ ಶಕ್ತಿಗಳು. ಈ ಪೈಕಿ ಮೊದಲನೆಯ ವಿಧದ ಸೃಷ್ಟಿಯು ಮನುಷ್ಯನ ಕಣ್ಣ ಮುಂದಿದೆ. ಆದ್ದರಿಂದ ಕೇವಲ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ಪದಗಳಿಂದಲೇ ಅವುಗಳ ನಿರಾಕರಣೆಯಾಗಿ ಬಿಡುತ್ತದೆ. ಆದರೆ ಎರಡನೆಯ ವಿಧದ ಸೃಷ್ಟಿಗಳು ಗುಪ್ತವೂ ನಿಗೂಢವೂ ಆಗಿವೆ. ಬಹುದೇವ ವಿಶ್ವಾಸಿಗಳು ಹೆಚ್ಚಾಗಿ ಅವುಗಳನ್ನೇ ಆರಾಧಿಸುತ್ತಾರೆ. ಅವುಗಳನ್ನೇ ದೇವತೆಗಳು, ದೇವರು ಮತ್ತು ದೇವನ ಸಂತಾನವೆಂದು ಭಾವಿಸುತ್ತಾರೆ. ಅವುಗಳ ಕಾಲ್ಪನಿಕ ಮೂರ್ತಿಗಳನ್ನು ರಚಿಸಿ ಅವುಗಳ ಮುಂದೆ ಹರಕೆ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಆದ್ದರಿಂದ ಏಕದೇವತ್ವವನ್ನು ಬಹುದೇವ ವಿಶ್ವಾಸದ ಈ ಎರಡನೆಯ ವಿಧದಿಂದ ಮುಕ್ತಗೊಳಿಸಲಿಕ್ಕಾಗಿ ಒಂದು ಪ್ರತ್ಯೇಕ ವಿಶ್ವಾಸವನ್ನೇ ವಿವರಿಸಲಾಗಿದೆ.

ದೇವತೆಗಳು, ದೇವರು ಮತ್ತು ದೇವರ ಸಂತಾನವೆಂದು ಜನರು ಬಗೆಯುವ ಈ ಅಗೋಚರ ಪ್ರಕಾಶ ಸೃಷ್ಟಿಗಳು ನಿಜವಾಗಿ ದೇವಚರರಾಗಿದ್ದು, ಅವರಿಗೆ ದೇವತ್ವ ದಲ್ಲಿ ಯಾವ ಪಾಲೂ ಇಲ್ಲ. ಅವರೆಲ್ಲ ದೇವನ ಆಜ್ಞಾಪಾಲಕರಾಗಿದ್ದಾರೆ. ಕೂದಲೆಳೆ ಯಷ್ಟೂ ಅವರು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವುದಿಲ್ಲ. ಅಲ್ಲಾಹನು ಅವರ ಮೂಲಕ ಲೋಕದ ವ್ಯವಸ್ಥೆಯನ್ನು ನಡೆಸುತ್ತಾನೆ. ಅವರು ಚಾಚೂ ತಪ್ಪದೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾರೆ. ಅವರಿಗೆ ತಮ್ಮಿಷ್ಟದಂತೆ ಏನು ಮಾಡುವ ಅಧಿಕಾರವೂ ಇಲ್ಲ. ಅವರು ತಮ್ಮ ಬಲದಿಂದ ಅಲ್ಲಾಹನ ಮುಂದೆ ಯಾವುದೇ ಸಲಹೆಯನ್ನು ಇಡಲಾರರು. ಅಲ್ಲಾಹನ ಮುಂದೆ ಯಾರ ಬಗ್ಗೆಯೂ ಶಿಫಾರಸ್ಸು ಮಾಡುವ ತ್ರಾಣ ಅವರಿಗಿಲ್ಲ. ಅವರನ್ನು ಪೂಜಿಸುವುದು ಮತ್ತು ಅವರಿಂದ ಸಹಾಯ ಯಾಚಿಸುವುದು ಮಾನವನ ಗೌರವಕ್ಕೆ ಕುಂದಾಗಿದೆ. ಏಕೆಂದರೆ, ಸೃಷ್ಟಿಯ ಪ್ರಥಮ ದಿನವೇ ಅಲ್ಲಾಹನು ಅವರಿಂದ ಆದಮ್‌ರ(ಅ) ಮುಂದೆ ಸಾಷ್ಟಾಂಗ ಮಾಡಿಸಿದನು ಮತ್ತು ಮಾನವನಿಗೆ ಅವರಿಗಿಂತ ಅಧಿಕ ಜ್ಞಾನವನ್ನು ದಯಪಾಲಿಸಿದನು. ಅವರನ್ನು ಬಿಟ್ಟು ಮಾನವರನ್ನು ಭೂಮಿಯಲ್ಲಿ ತನ್ನ ಪ್ರತಿನಿಧಿಯಾಗಿ ಮಾಡಿದನು. ಯಾವ ಮನುಷ್ಯನು ಅವರ ಸಾಷ್ಟಾಂಗ–ವಂದನೆಗೆ ಅರ್ಹನಾಗಿರುವನೋ ಅವನು ಅವರ ಮುಂದೆ ಸಾಷ್ಟಾಂಗ ವೆರಗುವುದು ಹಾಗೂ ಅವರಿಂದ ಯಾಚಿಸುವುದಕ್ಕಿಂತ ಹೆಚ್ಚಿನ ನಿಂದ್ಯತೆ ಇನ್ನಾವುದಿದೆ?

ಪ್ರವಾದಿವರ್ಯರು(ಸ) ಒಂದೆಡೆ ದೇವಚರರನ್ನು ಆರಾಧಿಸುವುದರಿಂದ ನಮ್ಮನ್ನು ತಡೆದರು. ಇನ್ನೊಂದೆಡೆ ದೇವಚರರು ಅಲ್ಲಾಹನ ಆಪ್ತ ಸೃಷ್ಟಿಗಳು. ಅವರು ಪಾಪಗಳಿಂದ ಪೂರ್ಣ ಮುಕ್ತರು. ಅವರು ಪ್ರಕೃತಿದತ್ತವಾಗಿಯೇ ಅಲ್ಲಾಹನ ಆಜ್ಞೋಲ್ಲಂಘನೆ ಮಾಡಲಾರದವರು. ಅವರು ಸದಾ ಅಲ್ಲಾಹನ ಆರಾಧನೆಯಲ್ಲಿ ನಿರತರಾಗಿರುತ್ತಾರೆ ಎಂದು ತಿಳಿಸಿದರು. ಈ ದೇವಚರರ ಪೈಕಿಯೇ ಒಬ್ಬರಾದ ಜಿಬ್ರೀಲ್‌ರ(ಅ) ಮೂಲಕ ಅಲ್ಲಾಹನು ತನ್ನ ಪ್ರವಾದಿಗಳಿಗೆ ದಿವ್ಯವಾಣಿಯನ್ನು ಬೋಧಿಸುತ್ತಾನೆ. ಪ್ರವಾದಿಯವರ(ಸ) ಬಳಿ ಪವಿತ್ರ ಕುರ್‌ಆನಿನ ಸೂಕ್ತಗಳನ್ನು ಜಿಬ್ರೀಲ್‌ರ(ಅ) ಮುಖಾಂತರವೇ ಕಳುಹಿಸಲಾಗಿತ್ತು. ಸದಾ ನಮ್ಮೊಂದಿಗಿದ್ದು ನಮ್ಮ ಎಲ್ಲಾ ಸತ್ಕಾರ್ಯ-ದುಷ್ಕಾರ್ಯಗಳನ್ನು ವೀಕ್ಷಿಸುತ್ತಿರುವ ದೇವಚರರೂ ಇವರಲ್ಲಿ ಸೇರಿದ್ದಾರೆ. ಅವರು ನಮ್ಮ ಎಲ್ಲ ಉತ್ತಮ ಮತ್ತು ಕೆಟ್ಟ ವಿಷಯಗಳನ್ನು ಸದಾ ಆಲಿಸುತ್ತಿರುತ್ತಾರೆ ಮತ್ತು ದಾಖಲಿಸುತ್ತಿರುತ್ತಾರೆ. ಅವರ ಬಳಿ ಪ್ರತಿಯೊಬ್ಬ ವ್ಯಕ್ತಿಯ ಜೀವನದ ದಾಖಲೆ ಸುರಕ್ಷಿತವಿರುತ್ತದೆ. ನಾವು ಸತ್ತು ನಮ್ಮ ಪ್ರಭುವಿನ ಬಳಿ ಹಾಜರಾದಾಗ ಅವರು ನಮ್ಮ ಜೀವನ ವೃತ್ತಾಂತವನ್ನು ಅಲ್ಲಾಹನಿಗೆ ಸಮರ್ಪಿಸುವರು. ನಾವು ಜೀವನ ಪರ್ಯಂತ ವ್ಯಕ್ತವಾಗಿಯೂ ಗುಪ್ತವಾಗಿಯೂ ಮಾಡಿದ ಎಲ್ಲ ಪುಣ್ಯ ಮತ್ತು ಪಾಪಗಳು ಅದರಲ್ಲಿರುವುದು.

ದೇವಚರರ ವಾಸ್ತವಿಕತೆಯನ್ನು ನಮಗೆ ತಿಳಿಸಲಾಗಿಲ್ಲ. ಕೇವಲ ಅವರ ಗುಣಗಳನ್ನು ತಿಳಿಸಲಾಗಿದೆ. ಅವರ ಅಸ್ತಿತ್ವದ ಮೇಲೆ ವಿಶ್ವಾಸವಿರಿಸಲು ಆದೇಶಿಸಲಾಗಿದೆ. ಅವರು ಹೇಗಿದ್ದಾರೆ, ಹೇಗಿಲ್ಲ ಎಂಬುದನ್ನು ತಿಳಿಯುವ ಯಾವ ಮೂಲವೂ ನಮ್ಮ ಬಳಿಯಿಲ್ಲ. ಆದ್ದರಿಂದ ನಮ್ಮ ಬುದ್ಧಿಯಿಂದ ಅವರ ಬಗ್ಗೆ ಯಾವುದೇ ವಿಷಯವನ್ನು ಕಲ್ಪಿಸಿಕೊಳ್ಳುವುದು ಅಜ್ಞಾನವಾಗಿದೆ. ಅವರ ಅಸ್ತಿತ್ವವನ್ನು ನಿರಾಕರಿಸುವುದು ಸತ್ಯನಿಷೇಧವಾಗಿದೆ. ಏಕೆಂದರೆ ನಿರಾಕರಿಸಲು ಯಾರ ಬಳಿಯೂ ಯಾವುದೇ ಪುರಾವೆ ಇಲ್ಲ. ಮಾತ್ರವಲ್ಲ ಅವರನ್ನು ನಿರಾಕರಿಸುವುದೆಂದರೆ ಅವರ ಬಗ್ಗೆ ತಿಳಿಸಿದ ಪ್ರವಾದಿಯನ್ನು ಸುಳ್ಳಾಗಿಸಿದಂತಾಗುತ್ತದೆ. ಅವರ ಅಸ್ತಿತ್ವದ ಮೇಲೆ ನಾವು ವಿಶ್ವಾಸವಿರಿಸಿರುವುದೇ ಅಲ್ಲಾಹನ ಸತ್ಯ ಪ್ರವಾದಿಯು ಅವರ ಬಗ್ಗೆ ತಿಳಿಸಿರುವುದರಿಂದಾಗಿದೆ.

## ಅಲ್ಲಾಹನ ಗ್ರಂಥಗಳ ಮೇಲೆ ವಿಶ್ವಾಸ

ಪ್ರವಾದಿವರ್ಯರ(ಸ) ಮುಖಾಂತರ ವಿಶ್ವಾಸವಿರಿಸಬೇಕೆಂದು ನಮಗೆ ಆಜ್ಞಾಪಿಸಲಾಗಿರುವ ಮೂರನೆಯ ವಿಷಯ ಅಲ್ಲಾಹನು ತನ್ನ ಪ್ರವಾದಿಗಳಿಗೆ ಅವತೀರ್ಣಗೊಳಿಸಿದ ಗ್ರಂಥಗಳಾಗಿವೆ.

ಅಲ್ಲಾಹನು ಹ. ಮುಹಮ್ಮದ್‌ರಿಗೆ(ಸ) ಪವಿತ್ರ ಕುರ್‌ಆನ್ ಅವತೀರ್ಣಗೊಳಿಸಿದಂತೆ ಗತ ಪ್ರವಾದಿಗಳ ಮೇಲೂ ಗ್ರಂಥಗಳನ್ನು ಅವತೀರ್ಣಗೊಳಿಸಿದ್ದನು. ಅವುಗಳ ಪೈಕಿ ಕೆಲವು ಗ್ರಂಥಗಳ ಹೆಸರುಗಳನ್ನು ನಮಗೆ ತಿಳಿಸಲಾಗಿದೆ. ಉದಾ: ಇಬ್ರಾಹೀಮ್‌ರಿಗೆ(ಅ)

ಅವತೀರ್ಣಗೊಳಿಸಿದ ಸುಹುಫ್, ಮೂಸಾರಿಗೆ(ಅ) ಅವತೀರ್ಣ ಗೊಂಡ ತೌರಾತ್, ದಾವೂದ್‌ರಿಗೆ(ಅ) ಅವತೀರ್ಣಗೊಂಡ ಝುಬೂರ್, ಈಸಾರಿಗೆ(ಅ) ಅವತೀರ್ಣಗೊಂಡ ಇಂಜೀಲ್. ಇವುಗಳ ಹೊರತು ಪ್ರವಾದಿಗಳಿಗೆ ನೀಡಲ್ಪಟ್ಟ ಇತರ ಗ್ರಂಥಗಳ ಹೆಸರನ್ನು ನಮಗೆ ತಿಳಿಸಲಾಗಿಲ್ಲ. ಆದ್ದರಿಂದ ಇತರ ಯಾವುದೇ ಧಾರ್ಮಿಕ ಗ್ರಂಥದ ಬಗ್ಗೆ ಅವು ಅಲ್ಲಾಹನ ಕಡೆಯಿಂದಾಗಿವೆಯೋ ಅಲ್ಲವೋ ಎಂದು ದೃಢವಾಗಿ ಹೇಳುವಂತಿಲ್ಲ. ಆದರೆ ಅಲ್ಲಾಹನ ವತಿಯಿಂದ ಅವತೀರ್ಣಗೊಂಡ ಎಲ್ಲ ಗ್ರಂಥಗಳ ಮೇಲೆಯೂ ಅವು ಸತ್ಯಪೂರ್ಣವಾಗಿವೆಯೆಂದು ನಾವು ವಿಶ್ವಾಸವಿರಿಸುತ್ತೇವೆ.

ನಮಗೆ ತಿಳಿಸಲಾಗಿರುವ ಗ್ರಂಥಗಳ ಪೈಕಿ 'ಸುಹುಫ್ ಇಬ್ರಾಹೀಮ್' ಎಂಬ ಗ್ರಂಥ ಈಗ ಲೋಕದಲ್ಲಿಲ್ಲ. ತೌರಾತ್, ಝುಬೂರ್ ಮತ್ತು ಇಂಜೀಲ್‌ಗಳಂತೂ ಯಹೂದ್ಯರ ಮತ್ತು ಕ್ರೈಸ್ತರ ಬಳಿ ಇವೆ. ಆದರೆ ಆ ಗ್ರಂಥಗಳನ್ನು ಜನರು ಬದಲಾಯಿಸಿರುವರೆಂದೂ ಅವುಗಳಲ್ಲಿ ಅನೇಕ ವಿಷಯಗಳನ್ನು ತಮ್ಮ ಕಡೆಯಿಂದ ಸೇರಿಸಿರುವರೆಂದೂ ಪವಿತ್ರ ಕುರ್‌ಆನಿನಲ್ಲಿ ನಮಗೆ ತಿಳಿಸಲಾಗಿದೆ. ಸ್ವಯಂ ಯಹೂದ್ಯರು ಮತ್ತು ಕ್ರೈಸ್ತರು ತಮ್ಮ ಬಳಿ ಮೂಲ ಗ್ರಂಥಗಳಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಅವರ ಬಳಿ ಇರುವುದು ಕೇವಲ ಅವುಗಳ ಅನುವಾದಗಳಾಗಿವೆ. ಅವುಗಳಲ್ಲಿ ಅನೇಕ ಶತಮಾನಗಳಿಂದ ಮಾರ್ಪಾಟುಗಳಾಗುತ್ತಾ ಬಂದಿವೆ. ಈಗಲೂ ಆಗುತ್ತಿವೆ. ಆ ಗ್ರಂಥಗಳನ್ನು ಓದುವಾಗಲೂ ಅವುಗಳಲ್ಲಿನ ಅನೇಕ ವಿಷಯಗಳು ಅಲ್ಲಾಹನ ಕಡೆಯಿಂದ ಆಗಿರಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಆದ್ದರಿಂದ ಈಗಿರುವ ಗ್ರಂಥಗಳನ್ನು ಪೂರ್ಣವಾಗಿ ಅಲ್ಲಾಹನ ಗ್ರಂಥಗಳೆನ್ನಲಾಗದು. ಅವುಗಳಲ್ಲಿ ಅಲ್ಲಾಹನ ವಾಣಿ ಮತ್ತು ಮನುಷ್ಯರ ಮಾತು ಬೆರೆತುಕೊಂಡಿದ್ದು ಅವುಗಳ ಪೈಕಿ ಅಲ್ಲಾಹನ ವಾಣಿ ಯಾವುದು ಮತ್ತು ಮನುಷ್ಯರ ಮಾತು ಯಾವುದು ಎಂಬುದನ್ನು ಪ್ರತ್ಯೇಕಿಸಿ ತಿಳಿಯುವ ಯಾವ ಮೂಲವೂ ನಮ್ಮ ಬಳಿಯಿಲ್ಲ. ಆದ್ದರಿಂದ ಹಿಂದಿನ ಗ್ರಂಥಗಳ ಮೇಲೆ ವಿಶ್ವಾಸವಿರಿಸಲು ಆಜ್ಞಾಪಿಸಿರುವುದರ ತಾತ್ಪರ್ಯ ವೇನೆಂದರೆ ಅಲ್ಲಾಹನು ಕುರ್‌ಆನಿಗಿಂತ ಮುಂಚೆ ಲೋಕದ ಎಲ್ಲ ಜನಾಂಗಗಳ ಬಳಿ ತನ್ನ ಪ್ರವಾದಿಗಳ ಮೂಲಕ ತನ್ನ ಆಜ್ಞೆಗಳನ್ನು ಕಳುಹಿಸಿದ್ದನು. ಕುರ್‌ಆನ್ ಯಾವ ಅಲ್ಲಾಹನ ಬಳಿಯಿಂದ ಬಂದಿದೆಯೋ ಹಿಂದಿನ ಎಲ್ಲ ಗ್ರಂಥಗಳೂ ಅದೇ ಅಲ್ಲಾಹನ ಬಳಿಯಿಂದಲೇ ಬಂದಿದ್ದುವು. ಪವಿತ್ರ ಕುರ್‌ಆನ್ ಯಾವುದೇ ಹೊಸ ಮತ್ತು ಅಪೂರ್ವ ಗ್ರಂಥವೇನಲ್ಲ. ಅದು ಹಿಂದಿನ ಜನರು ತಮಗೆ ಲಭಿಸಿದ ಬಳಿಕ ಕಳಕೊಂಡಂತಹ, ವಿಕೃತ ಗೊಂಡಂತಹ ಅಥವಾ ಮನುಷ್ಯರ ಮಾತಿನೊಂದಿಗೆ ಕಲಬೆರಕೆಗೊಂಡಂತಹ ಶಿಕ್ಷಣವನ್ನೇ ನವೀಕರಿಸಲು ಕಳುಹಿಸಲ್ಪಟ್ಟ ಗ್ರಂಥವಾಗಿದೆ.

ಪವಿತ್ರ ಕುರ್‌ಆನ್ ಅಲ್ಲಾಹನ ಅಂತಿಮ ಗ್ರಂಥವಾಗಿದೆ. ಅದರ ಮತ್ತು ಹಿಂದಿನ

ಗ್ರಂಥಗಳ ಮಧ್ಯೆ ಅನೇಕ ವ್ಯತ್ಯಾಸಗಳಿವೆ:

1. ಈ ಹಿಂದೆ ಬಂದ ಗ್ರಂಥಗಳ ಪೈಕಿ ಅನೇಕ ಗ್ರಂಥಗಳ ಮೂಲ ಪ್ರತಿಗಳು ಈಗ ಲೋಕದಲ್ಲಿ ಲಭ್ಯವಿಲ್ಲ. ಈಗ ಉಳಿದಿರುವುದು ಅವುಗಳ ಅನುವಾದ ಕೃತಿಗಳು ಮಾತ್ರ. ಆದರೆ ಕುರ್‌ಆನ್ ಯಾವ ಪದಗಳಲ್ಲಿ ಅವತೀರ್ಣಗೊಂಡಿತ್ತೋ ಆ ಮೂಲ ಪದಗಳಲ್ಲೇ ಉಳಿದುಕೊಂಡಿದ್ದು ಅದರ ಒಂದಕ್ಷರ ಅಥವಾ ಒಂದು ಚುಕ್ಕಿ ಕೂಡಾ ಮಾರ್ಪಾಟು ಹೊಂದಿಲ್ಲ.

2. ಹಿಂದಿನ ಗ್ರಂಥಗಳಲ್ಲಿ ಜನರು ದೇವವಾಣಿಯೊಂದಿಗೆ ತಮ್ಮ ಮಾತನ್ನೂ ಸೇರಿಸಿ ಬಿಟ್ಟಿದ್ದಾರೆ. ಒಂದೇ ಗ್ರಂಥದಲ್ಲಿ ದೇವವಾಣಿಯೂ ಇದೆ. ರಾಷ್ಟ್ರೀಯ ಚರಿತ್ರೆಯೂ ಇದೆ, ಮಹಾತ್ಮರ ಜೀವನ ಚರಿತ್ರೆಯೂ ಇದೆ, ವ್ಯಾಖ್ಯಾನವೂ ಇದೆ, ಕರ್ಮಶಾಸ್ತ್ರಜ್ಞರು ವಿವರಿಸಿದ ವಿಧಿಗಳೂ ಇವೆ. ಇವುಗಳೆಲ್ಲಾ ಪರಸ್ಪರ ಹೇಗೆ ಸೇರಿಕೊಂಡಿವೆಯೆಂದರೆ ದೇವವಾಣಿಯನ್ನು ಅವುಗಳಿಂದ ಬೇರ್ಪಡಿಸಿ ತಿಳಿಯುವುದು ಸಾಧ್ಯವೇ ಇಲ್ಲ. ಆದರೆ ಕುರ್‌ಆನಿನಲ್ಲಿರುವುದು ಕೇವಲ ದೇವವಾಣಿಯಾಗಿದೆ. ಅದರಲ್ಲಿ ಇತರ ಯಾರ ಮಾತೂ ಲವಲೇಶವೂ ಸೇರಿಕೊಂಡಿಲ್ಲ. ವ್ಯಾಖ್ಯಾನ, ಪ್ರವಾದಿ ವಚನಗಳು, ಪ್ರವಾದಿ ಜೀವನ ಚರಿತ್ರೆ, ಪ್ರವಾದಿಯ ಸಂಗಾತಿಗಳ ಜೀವನ ಚರಿತ್ರೆ, ಇಸ್ಲಾಮೀ ಇತಿಹಾಸ ಇತ್ಯಾದಿಗಳ ಬಗ್ಗೆ ಮುಸ್ಲಿಮರು ಬರೆದಿರುವುದೆಲ್ಲವೂ ಪವಿತ್ರ ಕುರ್‌ಆನ್‌ನಿಂದ ಭಿನ್ನವಾಗಿ ಬೇರೆಯೇ ಗ್ರಂಥಗಳಲ್ಲಿವೆ. ಈ ಪೈಕಿ ಯಾವುದೇ ವಿಷಯದ ಒಂದು ಪದ ಕೂಡಾ ಕುರ್‌ಆನಿನಲ್ಲಿ ಸೇರಿಕೊಂಡಿಲ್ಲ.

3. ಜಗತ್ತಿನ ವಿಭಿನ್ನ ಜನಾಂಗಗಳ ಬಳಿ ಎಷ್ಟು ಧಾರ್ಮಿಕ ಗ್ರಂಥಗಳಿವೆಯೋ ಅವುಗಳ ಪೈಕಿ ಯಾವುದಾದರೂ ಒಂದರ ಬಗ್ಗೆಯೂ ಅದು ಯಾವ ಪ್ರವಾದಿಯದ್ದೆಂದು ಹೇಳಲಾಗುತ್ತಿದೆಯೋ ವಾಸ್ತವದಲ್ಲಿ ಆ ಪ್ರವಾದಿಯ ಗ್ರಂಥವೇ ಆಗಿದೆ ಎಂದು ಹೇಳಲು ಯಾವುದೇ ಐತಿಹಾಸಿಕ ಪುರಾವೆ ನಮ್ಮ ಬಳಿ ಇಲ್ಲ. ಅನೇಕ ಧಾರ್ಮಿಕ ಗ್ರಂಥಗಳ ಬಗ್ಗೆ ಅವು ಯಾವಾಗ, ಯಾವ ಪ್ರವಾದಿಯ ಮೇಲೆ ಅವತೀರ್ಣ ಗೊಂಡಿತ್ತೆಂಬುದೇ ತಿಳಿದಿಲ್ಲ. ಆದರೆ ಯಾವ ವ್ಯಕ್ತಿಯೂ ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್‌ರ(ಸ) ಮುಖಾಂತರ ಲಭಿಸಿದ ಗ್ರಂಥವಲ್ಲವೆಂದು ಹೇಳಲು ಸಾಧ್ಯವೇ ಇಲ್ಲದಂತಹ ಪ್ರಬಲವಾದ ಐತಿಹಾಸಿಕ ಪುರಾವೆಗಳಿವೆ. ಅದರ ವಚನಗಳ ಕುರಿತೂ ಅವು ಯಾವಾಗ ಎಲ್ಲಿ ಅವತೀರ್ಣಗೊಂಡಿವೆ ಎಂಬುದು ಕೂಡಾ ನಮಗೆ ತಿಳಿದಿದೆ.

4. ಹಿಂದಿನ ಗ್ರಂಥಗಳು ಯಾವ ಭಾಷೆಗಳಲ್ಲಿ ಅವತೀರ್ಣಗೊಂಡಿದ್ದುವೋ ಆ ಭಾಷೆಗಳು ಹಲವು ಕಾಲದಿಂದ ಜೀವಂತವಾಗಿ ಉಳಿದಿಲ್ಲ. ಈಗ ಲೋಕದಲ್ಲಿ ಎಲ್ಲಿಯೂ ಆ ಭಾಷೆ ಮಾತನಾಡುವವರು ಉಳಿದಿಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳ ಬಲ್ಲವರೂ ಬಹಳ ಕಡಿಮೆ ಮಂದಿಯಿದ್ದಾರೆ. ಇಂತಹ ಗ್ರಂಥಗಳು ಒಂದು ವೇಳೆ

ತಮ್ಮ ಮೂಲ ರೂಪದಲ್ಲಿ ಉಳಿದಿದ್ದರೂ ಅವುಗಳನ್ನು ಸರಿಯಾಗಿ ಅರ್ಥ ಮಾಡಿ ಕೊಳ್ಳುವುದು ಮತ್ತು ಪಾಲಿಸುವುದು ಸಾಧ್ಯವಿಲ್ಲ. ಆದರೆ ಕುರ್‌ಆನ್ ಯಾವ ಭಾಷೆ ಯಲ್ಲಿ ಅವತೀರ್ಣಗೊಂಡಿದೆಯೋ ಅದೊಂದು ಜೀವಂತ ಭಾಷೆಯಾಗಿದ್ದು ಲೋಕದ ಕೋಟಿಗಟ್ಟಲೆ ವ್ಯಕ್ತಿಗಳು ಅದನ್ನು ಮಾತನಾಡುತ್ತಾರೆ ಮತ್ತು ಕೋಟಿಗಟ್ಟಲೆ ವ್ಯಕ್ತಿಗಳು ಆ ಭಾಷೆ ಬಲ್ಲವರಾಗಿದ್ದಾರೆ. ಅದರ ಶಿಕ್ಷಣದ ಪರಂಪರೆಯು ಜಗತ್ತಿನ ಎಲ್ಲೆಡೆ ಜಾರಿಯಲ್ಲಿದೆ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಕಲಿಯಬಲ್ಲನು. ಯಾರಿಗೆ ಅದನ್ನು ಕಲಿಯುವಷ್ಟು ಬಿಡುವಿಲ್ಲವೋ ಅವನಿಗೆ ಪವಿತ್ರ ಕುರ್‌ಆನನ್ನು ಅರ್ಥ ಮಾಡಿ ಕೊಡಲು ಸಮರ್ಥರಾಗಿರುವಂತಹ ವ್ಯಕ್ತಿಗಳು ಎಲ್ಲ ಕಡೆಯೂ ಸಿಕ್ಕಿಯಾರು.

5. ಲೋಕದ ವಿಭಿನ್ನ ಜನಾಂಗಗಳ ಬಳಿ ಇರುವ ಧಾರ್ಮಿಕ ಗ್ರಂಥಗಳ ಪೈಕಿ ಪ್ರತಿಯೊಂದು ಗ್ರಂಥದಲ್ಲಿ ಒಂದು ವಿಶಿಷ್ಟ ಜನಾಂಗವನ್ನು ಅಭಿಸಂಬೋಧಿಸಲಾಗಿದೆ. ಪ್ರತಿಯೊಂದು ಗ್ರಂಥವೂ ಒಂದು ವಿಶಿಷ್ಟ ಕಾಲ ಮತ್ತು ಪರಿಸ್ಥಿತಿಗೆ ಅನುಗುಣವಾಗಿರುವುದು ಕಂಡುಬರುತ್ತದೆ. ಈಗ ಅವುಗಳ ಅಗತ್ಯವೂ ಇಲ್ಲ, ಅವುಗಳಂತೆ ನಡೆಯುವ ಹಾಗೆಯೂ ಇಲ್ಲ. ಇದರಿಂದ ತಿಳಿಯುವುದೇನೆಂದರೆ ಈ ಎಲ್ಲ ಗ್ರಂಥಗಳು ಬೇರೆ ಬೇರೆ ಜನಾಂಗಗಳಿಗಾಗಿದ್ದು ಅವುಗಳ ಪೈಕಿ ಯಾವುದೂ ಸಮಸ್ತ ಲೋಕಕ್ಕೆ ಆಗಿರ ಲಿಲ್ಲ. ಯಾವ ಜನಾಂಗಗಳಿಗೆ ಈ ಗ್ರಂಥಗಳು ನೀಡಲ್ಪಟ್ಟಿದ್ದುವೋ ಅವುಗಳಿಗೂ ಅದು ಶಾಶ್ವತ ಮಾರ್ಗದರ್ಶನವಾಗಿರದೆ ಒಂದು ಪ್ರತ್ಯೇಕ ಕಾಲಕ್ಕೆ ಮಾತ್ರ ಮಾರ್ಗದರ್ಶನವಾಗಿತ್ತು. ಈಗ ಕುರ್‌ಆನನ್ನು ನೋಡಿ. ಆ ಗ್ರಂಥದಲ್ಲಿ ಎಲ್ಲ ಕಡೆಯೂ ಎಲ್ಲ ಮಾನವರನ್ನು ಅಭಿಸಂಬೋಧಿಸಲಾಗಿದೆ. ಅದರ ಯಾವುದಾದರೊಂದು ವಾಕ್ಯವೂ ಯಾವುದೇ ಜನಾಂಗಕ್ಕೆ ಸೀಮಿತವಾಗಿಲ್ಲ. ಮಾತ್ರವಲ್ಲ ಆ ಗ್ರಂಥದಲ್ಲಿ ನೀಡಲ್ಪಟ್ಟಿರುವ ಎಲ್ಲ ಆಜ್ಞೆಗಳ ಮೇಲೆ ಎಲ್ಲ ಕಾಲಗಳಲ್ಲಿ ಮತ್ತು ಎಲ್ಲ ಪ್ರದೇಶಗಳಲ್ಲಿ ನಡೆಯಬಹುದಾಗಿದೆ. ಇದರಿಂದ, ಪವಿತ್ರ ಕುರ್‌ಆನ್ ಇಡೀ ಲೋಕಕ್ಕೆ ಎಲ್ಲ ಕಾಲಗಳಿಗಾಗಿದೆಯೆಂದು ಸಾಬೀತಾಗುತ್ತದೆ.

6. ಹಿಂದಿನ ಗ್ರಂಥಗಳ ಪೈಕಿ ಪ್ರತಿಯೊಂದರಲ್ಲೂ ಒಳಿತು ಮತ್ತು ಸತ್ಯದ ಬಗ್ಗೆ ಹೇಳಲಾಗಿದೆ. ನೀತಿ ಮತ್ತು ಸತ್ಯಸಂಧತೆಯ ತತ್ವವನ್ನು ಕಲಿಸಲಾಗಿದೆ. ದೇವನ ಮೆಚ್ಚುಗೆಗೆ ಅನುಸಾರವಾಗಿ ಜೀವನ ಸಾಗಿಸುವ ಕ್ರಮವನ್ನು ಕಲಿಸಿಕೊಡಲಾಗಿದೆ. ಆದರೆ ಯಾವುದಾದರೂ ಒಂದು ಗ್ರಂಥದಲ್ಲಿ ಈ ಎಲ್ಲ ಅಂಶಗಳನ್ನು ಒಂದೆಡೆ ಒಟ್ಟು ಗೂಡಿಸಲಾಗಿಲ್ಲ. ಯಾವ ವಿಷಯವನ್ನೂ ಬಿಟ್ಟು ಬಿಡಲಾಗಿಲ್ಲವೆನ್ನಬಹುದಾದ ಒಂದೇ ಒಂದು ಗ್ರಂಥವೂ ಇಲ್ಲ. ಈ ಗುಣವು ಕೇವಲ ಪವಿತ್ರ ಕುರ್‌ಆನಿನಲ್ಲಿದೆ. ಎಷ್ಟು ಒಳಿತುಗಳು ಹಿಂದಿನ ಗ್ರಂಥಗಳಲ್ಲಿದ್ದುವೋ ಅವೆಲ್ಲವನ್ನೂ ಇದರಲ್ಲಿ ಒಟ್ಟುಗೂಡಿಸಲಾಗಿದೆ. ಹಿಂದಿನ ಗ್ರಂಥಗಳಲ್ಲಿ ಬಿಟ್ಟು ಹೋಗಿದ್ದ ಒಳಿತುಗಳನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ.

ಎಲ್ಲ ಧಾರ್ಮಿಕ ಗ್ರಂಥಗಳಲ್ಲೂ ಮನುಷ್ಯನ ಹಸ್ತಕ್ಷೇಪದಿಂದಾಗಿ ವಾಸ್ತವಿಕತೆಗೆ

ವಿರುದ್ಧವಾದ, ಬುದ್ಧಿಗೆ ವಿರುದ್ಧವಾದ, ಅಕ್ರಮ ಅನ್ಯಾಯಗಳ ಮೇಲೆ ಆಧಾರಿತವಾದ ಮನುಷ್ಯನ ವಿಶ್ವಾಸ ಮತ್ತು ಕರ್ಮಗಳನ್ನು ಕೆಡಿಸುವಂತಹ ಅನೇಕ ವಿಷಯಗಳು ಸೇರಿಕೊಂಡಿವೆ. ಅಷ್ಟೇ ಅಲ್ಲ, ಅನೇಕ ಗ್ರಂಥಗಳಲ್ಲಿ ಅಶ್ಲೀಲ ಮತ್ತು ಅನೈತಿಕ ವಿಷಯಗಳೂ ಕಂಡು ಬರುತ್ತವೆ. ಕುರ್‌ಆನ್ ಈ ಎಲ್ಲ ನ್ಯೂನತೆಗಳಿಂದಲೂ ಮುಕ್ತ ವಾಗಿದೆ. ಅದರಲ್ಲಿರುವ ಯಾವುದೇ ವಿಷಯವು ಬುದ್ಧಿಗೆ ವಿರುದ್ಧವಾಗಿಲ್ಲ ಅಥವಾ ಪ್ರಮಾಣ ಮತ್ತು ಅನುಭವಗಳಿಂದ ಸಾಬೀತುಗೊಳಿಸಲು ಸಾಧ್ಯವಿಲ್ಲದ ಯಾವ ವಿಷಯವೂ ಅದರಲ್ಲಿಲ್ಲ. ಅದರ ಯಾವ ವಿಧಿಯಲ್ಲೂ ಅನ್ಯಾಯವಿಲ್ಲ. ಅದರಲ್ಲಿ ಮನುಷ್ಯನನ್ನು ದುರ್ಮಾರ್ಗಕ್ಕೆ ಎಳೆಯುವಂತಹ ಯಾವ ವಿಷಯವೂ ಇಲ್ಲ. ಅಶ್ಲೀಲತೆ ಮತ್ತು ಅನೈತಿಕತೆಯ ಗಂಧಗಾಳಿಯೂ ಅದರಲ್ಲಿಲ್ಲ. ಆದಿಯಿಂದ ಅಂತ್ಯದ ತನಕ ಇಡೀ ಕುರ್‌ಆನಿನಲ್ಲಿ ಉನ್ನತ ಮಟ್ಟದ ಯುಕ್ತಿ ಮತ್ತು ಜಾಣ್ಮೆ ಹಾಗೂ ನ್ಯಾಯ ಮತ್ತು ನೀತಿಯ ಶಿಕ್ಷಣವಿದೆ. ನೇರ ಮಾರ್ಗದ ಮಾರ್ಗದರ್ಶನವಿದೆ ಮತ್ತು ಅದು ಅತ್ಯುತ್ತಮ ಕಾನೂನು ನಿಯಮಗಳಿಂದ ತುಂಬಿದೆ.

ಈ ವಿಶೇಷತೆಗಳಿಂದಾಗಿಯೇ ಲೋಕದ ಎಲ್ಲ ಜನಾಂಗಗಳು ಪವಿತ್ರ ಕುರ್‌ಆನಿನ ಮೇಲೆ ವಿಶ್ವಾಸವಿರಿಸಬೇಕೆಂದೂ ಎಲ್ಲ ಗ್ರಂಥಗಳನ್ನೂ ತೊರೆದು ಅದೊಂದನ್ನೇ ಅನುಸರಿಸಬೇಕೆಂದೂ ಆದೇಶಿಸಲಾಗಿದೆ. ಏಕೆಂದರೆ ಮನುಷ್ಯನಿಗೆ ಅಲ್ಲಾಹನ ಇಚ್ಛೆ ಯಂತೆ ಜೀವನ ಸಾಗಿಸಲು ಬೇಕಾದ ಎಲ್ಲ ಮಾರ್ಗದರ್ಶನವೂ ಈ ಗ್ರಂಥದಲ್ಲಿ ಪೂರ್ಣವಾಗಿ ವಿವರಿಸಲ್ಪಟ್ಟಿದೆ. ಈ ಗ್ರಂಥ ಬಂದ ಮೇಲೆ ಬೇರಾವ ಗ್ರಂಥದ ಅಗತ್ಯವೂ ಉಳಿಯುವುದಿಲ್ಲ.

ಕುರ್‌ಆನ್ ಮತ್ತು ಇತರ ಗ್ರಂಥಗಳ ವ್ಯತ್ಯಾಸವೇನೆಂದು ತಿಳಿದುಕೊಂಡ ನಂತರ ಇತರ ಗ್ರಂಥಗಳ ಮೇಲೆ ವಿಶ್ವಾಸವಿರಿಸುವುದರ ಮತ್ತು ಪವಿತ್ರ ಕುರ್‌ಆನಿನ ಮೇಲೆ ವಿಶ್ವಾಸವಿರಿಸುವುದರ ಅಂತರವೇನೆಂಬುದು ನಿಮಗೆ ಸ್ವತಃ ತಿಳಿದು ಬರುವುದು. ಹಿಂದಿನ ಗ್ರಂಥಗಳ ಮೇಲೆ ವಿಶ್ವಾಸವಿರಿಸುವುದರ ತಾತ್ಪರ್ಯವೇನೆಂದರೆ ಆ ಎಲ್ಲ ಗ್ರಂಥಗಳೂ ಅಲ್ಲಾಹನ ವತಿಯಿಂದಲೇ ಆಗಿದ್ದು ಸತ್ಯಪೂರ್ಣವಾಗಿದ್ದುವು. ಕುರ್‌ಆನ್ ಯಾವ ಉದ್ದೇಶವನ್ನು ಪೂರ್ತಿಗೊಳಿಸಲು ಬಂದಿದೆಯೋ ಅದೇ ಉದ್ದೇಶಕ್ಕಾಗಿ ಆ ಎಲ್ಲ ಗ್ರಂಥಗಳು ಬಂದಿದ್ದುವು ಎಂಬುದನ್ನು ದೃಢೀಕರಿಸುವುದಾಗಿದೆ. ಕುರ್‌ಆನಿನ ಮೇಲೆ ವಿಶ್ವಾಸವಿರಿಸುವುದರ ತಾತ್ಪರ್ಯ, ಇದು ಅಪ್ಪಟ ಅಲ್ಲಾಹನ ವಾಣಿಯಾಗಿದೆ. ಸಾದ್ಯಂತ ಸತ್ಯವಾಗಿದೆ. ಇದರ ಪ್ರತಿಯೊಂದು ಪದವೂ ಸುರಕ್ಷಿತವಾಗಿದೆ. ಇದರ ಪ್ರತಿಯೊಂದು ಮಾತೂ ಸತ್ಯವಾಗಿದೆ. ಇದರ ಪ್ರತಿಯೊಂದು ಆಜ್ಞೆಯ ಪಾಲನೆಯೂ ಕಡ್ಡಾಯವಾಗಿದೆ ಮತ್ತು ಅದಕ್ಕೆ ವಿರುದ್ಧವಾಗಿರುವ ಪ್ರತಿಯೊಂದು ಮಾತೂ ತಿರಸ್ಕಾರ ಯೋಗ್ಯವಾಗಿದೆ ಎಂದಾಗಿದೆ.

## ಅಲ್ಲಾಹನ ಪ್ರವಾದಿಗಳ ಮೇಲೆ ವಿಶ್ವಾಸ

ಗ್ರಂಥಗಳ ನಂತರ ಅಲ್ಲಾಹನ ಎಲ್ಲ ಪ್ರವಾದಿಗಳ ಮೇಲೂ ವಿಶ್ವಾಸವಿರಿಸಬೇಕು ಎಂದು ನಮಗೆ ಆದೇಶಿಸಲಾಗಿದೆ. ಅಲ್ಲಾಹನ ಪ್ರವಾದಿಗಳು ಲೋಕದ ಎಲ್ಲ ಜನಾಂಗ ಗಳಲ್ಲಿ ಬಂದಿದ್ದರು ಮತ್ತು ಅವರೆಲ್ಲರೂ ಅಂತಿಮ ಪ್ರವಾದಿ ಮುಹಮ್ಮದ್‌ರು(ಸ) ನೀಡಿದ್ದ ಇಸ್ಲಾಮಿನ ಶಿಕ್ಷಣವನ್ನೇ ನೀಡಿದ್ದರು ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ತಿಳಿಸಲಾಗಿದೆ. ಈ ರೀತಿ ಅಲ್ಲಾಹನ ಎಲ್ಲ ಪ್ರವಾದಿಗಳು ಒಂದೇ ವರ್ಗಕ್ಕೆ ಸೇರಿದ ಜನರಾಗಿದ್ದರು. ಅವರ ಪೈಕಿ ಒಬ್ಬರನ್ನು ನಿರಾಕರಿಸಿದರೂ ಎಲ್ಲ ಪ್ರವಾದಿಗಳನ್ನು ನಿರಾಕರಿಸಿದಂತೆ ಮತ್ತು ಅವರ ಪೈಕಿ ಒಬ್ಬರ ಮೇಲೆ ವಿಶ್ವಾಸವಿರಿಸಿದರೆ ಉಳಿದೆಲ್ಲ ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವುದು ಅವನ ಮೇಲೆ ತನ್ನಿಂತಾನೇ ಕಡ್ಡಾಯವಾಗುತ್ತದೆ. ಹತ್ತು ಮಂದಿ ಒಂದೇ ವಿಷಯವನ್ನು ಹೇಳುತ್ತಾರೆ ಎಂದಿಟ್ಟುಕೊಳ್ಳೋಣ. ಅವರ ಪೈಕಿ ಒಬ್ಬರನ್ನು ಸತ್ಯವಂತನೆಂದು ಒಪ್ಪಿಕೊಂಡರೆ ಉಳಿದ ಒಂಭತ್ತು ಮಂದಿಯನ್ನೂ ಸತ್ಯವಂತರೆಂದು ಒಪ್ಪಿಕೊಂಡಂತೆಯೇ ಆಗಿದೆ. ಒಂದು ವೇಳೆ ನೀವು ಒಬ್ಬನನ್ನು ಸುಳ್ಳುಗಾರನೆಂದು ಸಾರಿದರೆ ಅದರರ್ಥ ನೀವು ಅವನ ಮಾತನ್ನೇ ಸುಳ್ಳೆಂದು ಸಾರಿದಂತಾಗುತ್ತದೆ. ಇದರಿಂದ ಉಳಿದ ಒಂಭತ್ತು ಮಂದಿಯನ್ನೂ ಸುಳ್ಳುಗಾರರೆಂದು ಸಾರಿದಂತಾಗುತ್ತದೆ. ಆದ್ದರಿಂದಲೇ ಇಸ್ಲಾಮಿನಲ್ಲಿ ಎಲ್ಲ ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವುದು ಕಡ್ಡಾಯವಾಗಿದೆ. ಎಲ್ಲ ಪ್ರವಾದಿಗಳನ್ನು ನಂಬಿ ಒಬ್ಬ ಪ್ರವಾದಿಯನ್ನು ನಿರಾಕರಿಸಿದರೂ ಅವನು ಸತ್ಯನಿಷೇಧಿ ಎನಿಸಿಕೊಳ್ಳುವನು.

ಪ್ರವಾದಿವಚನಗಳಿಂದ ತಿಳಿದು ಬರುವಂತೆ ಲೋಕದ ವಿಭಿನ್ನ ಜನಾಂಗಗಳಲ್ಲಿ ಕಳುಹಿಸಲ್ಪಟ್ಟ ಪ್ರವಾದಿಗಳ ಒಟ್ಟು ಸಂಖ್ಯೆ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರವಾಗಿದೆ. ಜಗತ್ತಿನಲ್ಲಿ ಮಾನವ ಜೀವನದ ಇತಿಹಾಸವನ್ನು ನೋಡಿದರೆ ಅದರಲ್ಲಿ ಎಷ್ಟು ಜನಾಂಗಗಳು ಕಳೆದು ಹೋಗಿವೆಯೋ ಅವುಗಳನ್ನು ದೃಷ್ಟಿಯಲ್ಲಿರಿಸಿದರೆ ಆ ಸಂಖ್ಯೆಯು ಸ್ವಲ್ಪವೂ ಹೆಚ್ಚೆನಿಸುವುದಿಲ್ಲ. ಈ ಒಂದೂಕಾಲು ಲಕ್ಷ ಪ್ರವಾದಿಗಳ ಪೈಕಿ ಯಾರ ಹೆಸರನ್ನು ಪವಿತ್ರ ಕುರ್‌ಆನಿನಲ್ಲಿ ತಿಳಿಸಲಾಗಿದೆಯೋ ಅವರ ಮೇಲೆ ನಿರ್ದಿಷ್ಟ ವಾಗಿ ವಿಶ್ವಾಸವಿರಿಸುವುದು ಅಗತ್ಯವಾಗಿದೆ. ಉಳಿದ ಎಲ್ಲ ಪ್ರವಾದಿಗಳ ಬಗ್ಗೆ ಅವರು ದೇವನ ವತಿಯಿಂದ ಅವನ ದಾಸರ ಮಾರ್ಗದರ್ಶಕರಾಗಿ ಕಳುಹಿಸಲ್ಪಟ್ಟಿದ್ದು ಎಲ್ಲರೂ ಸತ್ಯವಂತರಾಗಿದ್ದರೆಂದು ವಿಶ್ವಾಸವಿರಿಸಲು ನಮಗೆ ಆದೇಶಿಸಲಾಗಿದೆ. ಭಾರತ, ಚೀನಾ, ಇರಾಕ್, ಈಜಿಪ್ಟ್, ಆಫ್ರಿಕಾ, ಯುರೋಪ್ ಮತ್ತು ಲೋಕದ ಇತರ ದೇಶಗಳಲ್ಲಿ ಬಂದ ಪ್ರವಾದಿಗಳೆಲ್ಲರ ಮೇಲೆಯೂ ನಾವು ವಿಶ್ವಾಸವಿರಿಸುತ್ತೇವೆ. ಆದರೆ ಒಬ್ಬ ವಿಶಿಷ್ಟ ವ್ಯಕ್ತಿಯ ಬಗ್ಗೆ ಅವರು ಪ್ರವಾದಿಯಾಗಿದ್ದರು ಅಥವಾ ಆಗಿರಲಿಲ್ಲ ಎಂದು ನಾವು ಖಚಿತವಾಗಿ ಹೇಳುವಂತಿಲ್ಲ. ಏಕೆಂದರೆ ನಮಗೆ ಆ ಬಗ್ಗೆ ಏನೂ ತಿಳಿಸಲಾಗಿಲ್ಲ.

ಆದರೆ ವಿಭಿನ್ನ ಧರ್ಮಗಳ ಅನುಯಾಯಿಗಳು ಯಾರನ್ನೆಲ್ಲ ತಮ್ಮ ನಾಯಕರೆಂದು ಪರಿಗಣಿಸುತ್ತಾರೋ ಅವರ ವಿರುದ್ಧ ಏನೂ ಹೇಳಬಾರದೆಂದು ನಮಗೆ ಆಜ್ಞಾಪಿಸಲಾಗಿದೆ. ವಾಸ್ತವದಲ್ಲಿ ಅವರು ಪ್ರವಾದಿಯೇ ಆಗಿದ್ದು ನಂತರದ ಅವರ ಅನುಯಾಯಿಗಳು ಹ. ಮೂಸಾ ಮತ್ತು ಹ. ಈಸಾರ(ಅ) ಅನುಯಾಯಿಗಳು ತಮ್ಮ ಧರ್ಮವನ್ನು ವಿಕೃತಗೊಳಿಸಿದಂತೆ ಅವರ ಧರ್ಮವನ್ನೂ ವಿಕೃತಗೊಳಿಸಿರಬಹುದು. ಆದ್ದರಿಂದ ನಾವು ಏನಾದರೂ ಅಭಿಪ್ರಾಯ ಪ್ರಕಟಿಸುವುದಿದ್ದರೆ ಅವರ ಧರ್ಮ ಮತ್ತು ಅವರ ಸಂಪ್ರದಾಯಗಳ ಬಗೆಗೇ ಹೊರತು ಅವರ ನಾಯಕರ ಬಗೆಗಲ್ಲ. ನಮಗೆ ತಿಳುವಳಿಕೆ ಇಲ್ಲದ ಯಾವುದಾದರೂ ಪ್ರವಾದಿಯ ಕುರಿತು ಯಾವುದೇ ರೀತಿಯ ಅನುಚಿತ ಮಾತು ಆಡದಂತೆ ಜಾಗ್ರತೆ ವಹಿಸುವ ಸಲುವಾಗಿಯೇ ನಾವು ಈ ರೀತಿ ಆ ನಾಯಕರ ಕುರಿತು ಮೌನ ವಹಿಸುತ್ತೇವೆ.

ಹಿಂದಿನ ಪ್ರವಾದಿಗಳಲ್ಲಿ ಮತ್ತು ಪ್ರವಾದಿ ಮುಹಮ್ಮದ್(ಸ)ರಲ್ಲಿ ಅಲ್ಲಾಹನ ವತಿಯಿಂದ ಕಳುಹಿಸಲ್ಪಟ್ಟ ಸತ್ಯಪ್ರವಾದಿಗಳೆಂಬ ನೆಲೆಯಲ್ಲಿ ಮತ್ತು ಇಸ್ಲಾಮಿನ ನೇರ ಮಾರ್ಗವನ್ನು ಮನುಷ್ಯರಿಗೆ ತೋರಿಸಲು ಬಂದವರೆಂಬ ನೆಲೆಯಲ್ಲಿ ಯಾವ ಅಂತರವೂ ಇಲ್ಲ. ನಮಗೆ ಎಲ್ಲ ಪ್ರವಾದಿಗಳ ಮೇಲೂ ವಿಶ್ವಾಸವಿರಿಸಲು ಆಜ್ಞಾಪಿಸಲಾಗಿದೆ. ಆದರೆ ಈ ಎಲ್ಲ ನೆಲೆಗಳಲ್ಲಿ ಸಮಾನರಾಗಿರುವುದರ ಹೊರತಾಗಿಯೂ ಮೂರು ವಿಷಯಗಳಲ್ಲಿ ಪ್ರವಾದಿ ಮುಹಮ್ಮದ್(ಸ) ಮತ್ತು ಇತರ ಪ್ರವಾದಿಗಳ ಮಧ್ಯೆ ವ್ಯತ್ಯಾಸ ಇದೆ–

1. ಗತ ಪ್ರವಾದಿಗಳೆಲ್ಲರೂ ನಿರ್ದಿಷ್ಟ ಜನಾಂಗ ಮತ್ತು ಕಾಲಕ್ಕಾಗಿ ಬಂದಿದ್ದರು. ಆದರೆ ಪ್ರವಾದಿ ಮುಹಮ್ಮದ್(ಸ) ಎಲ್ಲ ಮನುಷ್ಯರಿಗೆ ಎಲ್ಲ ಕಾಲಗಳಿಗೆ ಪ್ರವಾದಿಯಾಗಿ ಕಳುಹಿಸಲ್ಪಟ್ಟಿರುವರು. ಇದನ್ನು ನಾವು ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ತಿಳಿಸಿದ್ದೇವೆ.

2. ಹಿಂದಿನ ಪ್ರವಾದಿಗಳ ಬೋಧನೆಗಳೆಲ್ಲವೂ ಲೋಕದಿಂದ ಅಳಿದು ಹೋಗಿವೆ ಅಥವಾ ಅವುಗಳ ಪೈಕಿ ಸ್ವಲ್ಪಾಂಶ ಉಳಿದಿದ್ದರೂ ಅವು ತಮ್ಮ ಮೂಲ ರೂಪದಲ್ಲಿ ಸುರಕ್ಷಿತವಾಗಿಲ್ಲ. ಅದೇ ರೀತಿ ಅವರ ಸರಿಯಾದ ಜೀವನ ಚರಿತ್ರೆಯೂ ಇಂದು ಲೋಕದಲ್ಲೆಲ್ಲೂ ಲಭ್ಯವಿಲ್ಲ ಬದಲಾಗಿ ಅವುಗಳೊಂದಿಗೆ ಅನೇಕ ಕಟ್ಟುಕಥೆಗಳೂ ಸೇರಿಕೊಂಡಿವೆ. ಆದ್ದರಿಂದ ಅವರನ್ನು ಈಗ ಯಾರಾದರೂ ಅನುಸರಿಸ ಬಯಸಿದರೂ ಅನುಸರಿಸಲು ಸಾಧ್ಯವಿಲ್ಲ. ಇದಕ್ಕೆ ವಿರುದ್ಧವಾಗಿ ಪ್ರವಾದಿ ಮುಹಮ್ಮದ್(ಸ)ರ ಶಿಕ್ಷಣ, ಅವರ ಜೀವನ ಚರಿತ್ರೆ, ಅವರ ವಚನಗಳು, ಅವರ ಜೀವನದ ಮಾದರಿ, ಅವರ ನೀತಿ ಮತ್ತು ನಡವಳಿಕೆಗಳು, ಅಭ್ಯಾಸಗಳು– ಒಟ್ಟಿನಲ್ಲಿ ಎಲ್ಲವೂ ಇಂದು ಲೋಕದಲ್ಲಿ ಸುರಕ್ಷಿತವಾಗಿ ಇವೆ. ಆದ್ದರಿಂದ ವಾಸ್ತವದಲ್ಲಿ ಎಲ್ಲ ಪ್ರವಾದಿಗಳ ಪೈಕಿ ಕೇವಲ ಪ್ರವಾದಿ

ಮುಹಮ್ಮದ್(ಸ)ರವರೇ ಒಬ್ಬ ಜೀವಂತ ಪ್ರವಾದಿಯಾಗಿದ್ದಾರೆ ಮತ್ತು ಅವರ ಅನುಸರಣೆ ಮಾತ್ರ ಸಾಧ್ಯವಾಗಿದೆ.

3. ಹಿಂದಿನ ಪ್ರವಾದಿಗಳ ಮೂಲಕ ಇಸ್ಲಾಮಿನ ಯಾವ ಶಿಕ್ಷಣವನ್ನು ನೀಡಲಾಗಿತ್ತೋ ಅದು ಪರಿಪೂರ್ಣವಾಗಿರಲಿಲ್ಲ. ಪ್ರತಿಯೊಬ್ಬ ಪ್ರವಾದಿಯ ಬಳಿಕ ಇನ್ನೊಬ್ಬ ಪ್ರವಾದಿ ಬಂದು ಅವರ ಆಜ್ಞೆಗಳನ್ನು, ಕಾನೂನುಗಳನ್ನು ಮತ್ತು ಮಾರ್ಗದರ್ಶನವನ್ನು ತಿದ್ದು ಪಡಿ ಮಾಡುತ್ತಿದ್ದರು ಅಥವಾ ಅವುಗಳಿಗೆ ಸೇರ್ಪಡೆ ಮಾಡುತ್ತಿದ್ದರು. ಅವುಗಳ ಸುಧಾರಣೆ ಮತ್ತು ಪ್ರಗತಿಯ ಪರಂಪರೆಯು ನಿರಂತರ ಜಾರಿಯಲ್ಲಿತ್ತು. ಆದ್ದರಿಂದಲೇ ಅವರ ಬೋಧನೆಗಳನ್ನು ಅವರ ಕಾಲಾನಂತರ ಅಲ್ಲಾಹನು ಸುರಕ್ಷಿತವಾಗಿಡಲಿಲ್ಲ.

ಏಕೆಂದರೆ ಪ್ರತಿಯೊಂದು ಪರಿಪೂರ್ಣ ಶಿಕ್ಷಣದ ಬಳಿಕ ಹಿಂದಿನ ಅಪೂರ್ಣ ಶಿಕ್ಷಣದ ಅಗತ್ಯ ಬಾಕಿ ಉಳಿಯುವುದಿಲ್ಲ. ಕೊನೆಯದಾಗಿ ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ಎಲ್ಲ ನೆಲೆಗಳಲ್ಲಿಯೂ ಪರಿಪೂರ್ಣವಾದಂತಹ ಇಸ್ಲಾಮಿನ ಶಿಕ್ಷಣವನ್ನು ನೀಡಲಾಯಿತು. ಆ ಬಳಿಕ ಎಲ್ಲ ಪ್ರವಾದಿಗಳ ಧರ್ಮಶಾಸ್ತ್ರಗಳೂ ತನ್ನಿಂತಾನೇ ರದ್ದುಗೊಂಡುವು. ಏಕೆಂದರೆ ಪರಿಪೂರ್ಣವನ್ನು ಬಿಟ್ಟು ಅಪೂರ್ಣವಾದುದನ್ನು ಅನುಸರಿಸುವುದು ವಿವೇಕವಲ್ಲ. ಹಾಗೆಯೇ ಪ್ರವಾದಿ ಮುಹಮ್ಮದ್(ಸ)ರನ್ನು ಅನುಸರಿಸಿದವನು ಎಲ್ಲ ಪ್ರವಾದಿಗಳನ್ನು ಅನುಸರಿಸಿದಂತೆಯೇ. ಏಕೆಂದರೆ ಎಲ್ಲ ಪ್ರವಾದಿಗಳ ಶಿಕ್ಷಣದಲ್ಲಿದ್ದ ಉತ್ತಮ ಅಂಶಗಳು ಪ್ರವಾದಿವರ್ಯರ ಶಿಕ್ಷಣದಲ್ಲಿವೆ. ಪ್ರವಾದಿ ಮುಹಮ್ಮದ್‌ರನ್ನು(ಸ) ಬಿಟ್ಟು ಹಿಂದಿನ ಯಾವುದಾದರೂ ಪ್ರವಾದಿಯ ಅನುಸರಣೆ ಮಾಡುವವನು ಅನೇಕ ಉತ್ತಮ ಅಂಶಗಳಿಂದ ವಂಚಿತನಾಗುವನು. ಏಕೆಂದರೆ ಪ್ರವಾದಿವರ್ಯರ(ಸ) ಮೂಲಕ ಲಭಿಸಿದ ಅನೇಕ ಉತ್ತಮ ಅಂಶಗಳು ಹಿಂದಿನ ಶಿಕ್ಷಣದಲ್ಲಿ ಇರಲಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಪ್ರವಾದಿ ಮುಹಮ್ಮದ್‌ರನ್ನು(ಸ) ಅನುಸರಿಸಬೇಕಾದುದು ಲೋಕದ ಎಲ್ಲ ಮನುಷ್ಯರ ಮೇಲೆ ಕಡ್ಡಾಯವಾಗಿದೆ. ಒಬ್ಬ ವ್ಯಕ್ತಿ ಮುಸ್ಲಿಮ್ ಆಗಲು ಮೂರು ನೆಲೆಗಳಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ವಿಶ್ವಾಸವಿರಿಸಬೇಕು:

1. ಅವರು ಅಲ್ಲಾಹನ ಸತ್ಯಪ್ರವಾದಿಯಾಗಿದ್ದಾರೆ.

2. ಅವರ ಶಿಕ್ಷಣ ಸಂಪೂರ್ಣವಾಗಿದೆ. ಅದರಲ್ಲಿ ಯಾವುದೇ ಕುಂದು ಕೊರತೆ ಇಲ್ಲ ಮತ್ತು ಅದು ಎಲ್ಲ ತಪ್ಪುಗಳಿಂದ ಮುಕ್ತವಾಗಿದೆ.

3. ಅವರು ಅಲ್ಲಾಹನ ಅಂತಿಮ ಪ್ರವಾದಿಯಾಗಿರುವರು. ಅವರ ಬಳಿಕ ಅಂತಿಮ ದಿವಸದ ವರೆಗೆ ಯಾವ ಪ್ರವಾದಿಯೂ ಯಾವುದೇ ಜನಾಂಗದಲ್ಲಿ ಬರಲಿಕ್ಕಿಲ್ಲ. ಅವರ ನಂತರ ವಿಶ್ವಾಸವಿರಿಸುವುದು ಕಡ್ಡಾಯವಾದ ಮತ್ತು ನಿರಾಕರಿಸಿದರೆ ಸತ್ಯನಿಷೇಧಿ ಆಗಿ ಬಿಡುವಂತಹ ಯಾವ ವ್ಯಕ್ತಿಯೂ ಬರಲಿಕ್ಕಿಲ್ಲ.

## ಪರಲೋಕದ ಮೇಲೆ ವಿಶ್ವಾಸ

ವಿಶ್ವಾಸವಿರಿಸಬೇಕೆಂದು ಪ್ರವಾದಿ ಮುಹಮ್ಮದ್(ಸ) ಅವರು ನಮಗೆ ಆದೇಶಿಸಿದ ವಿಷಯಗಳ ಪೈಕಿ ಐದನೆಯದು ಪರಲೋಕವಾಗಿದೆ. ಪರಲೋಕದ ಬಗ್ಗೆ ಈ ಕೆಳಗಿನ ವಿಷಯಗಳ ಮೇಲೆ ವಿಶ್ವಾಸವಿರಿಸುವುದು ಅಗತ್ಯವಾಗಿದೆ:

1. ಒಂದು ದಿನ ಇಡೀ ವಿಶ್ವವು ಅದರ ಎಲ್ಲ ಸೃಷ್ಟಿಗಳ ಸಮೇತ ನಾಶಗೊಳಿಸಲ್ಪಡುವುದು. ಆ ದಿನದ ಹೆಸರೇ ಕಿಯಾಮತ್ ಅಥವಾ ಪ್ರಳಯ.

2. ಆ ಬಳಿಕ ಅಲ್ಲಾಹನು ಎಲ್ಲ ಮನುಷ್ಯರಿಗೂ ಪುನಃ ಜೀವ ನೀಡುವನು. ಎಲ್ಲರೂ ಅವನ ಮುಂದೆ ಹಾಜರಾಗುವರು. ಇದಕ್ಕೆ 'ಹಶ್ರ್' ಎನ್ನುತ್ತಾರೆ.

3. ಅಂದು ಎಲ್ಲ ಮನುಷ್ಯರೂ ಇಹಲೋಕ ಜೀವನದಲ್ಲಿ ಮಾಡಿದ ಎಲ್ಲ ಕರ್ಮಗಳ ಸಂಪೂರ್ಣ ದಾಖಲೆ ಪತ್ರವನ್ನು ಅಲ್ಲಾಹನ ನ್ಯಾಯಾಲಯದ ಮುಂದೆ ಪ್ರಸ್ತುತಪಡಿಸಲಾಗುವುದು.

4. ಅಲ್ಲಾಹನು ಪ್ರತಿಯೊಬ್ಬ ವ್ಯಕ್ತಿಯ ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ತೂಗಿ ನೋಡುವನು. ಯಾರ ಒಳಿತು ಅವನ ಕೆಡುಕಿಗಿಂತ ಹೆಚ್ಚು ಭಾರವಾಗಿರುವುದೋ ಅವನನ್ನು ಕ್ಷಮಿಸಿ ಬಿಡಲಾಗುವುದು ಮತ್ತು ಯಾರ ಕೆಡುಕು ಅವನ ಒಳಿತಿಗಿಂತ ಹೆಚ್ಚು ಭಾರವಾಗಿರುವುದೋ ಅವನನ್ನು ಶಿಕ್ಷಿಸಲಾಗುವುದು.

5. ಕ್ಷಮಿಸಲ್ಪಟ್ಟವರು ಸ್ವರ್ಗದಲ್ಲಿ ಪ್ರವೇಶಿಸಲ್ಪಡುವರು ಮತ್ತು ಶಿಕ್ಷೆಗೊಳಗಾದವರು ನರಕಕ್ಕೆ ಹೋಗುವರು.

## ಪರಲೋಕ ವಿಶ್ವಾಸದ ಅಗತ್ಯ

ಪ್ರವಾದಿ ಮುಹಮ್ಮದ್(ಸ)ರಂತೆಯೇ ಗತ ಪ್ರವಾದಿಗಳೆಲ್ಲರೂ ಪರಲೋಕದ ಈ ವಿಶ್ವಾಸವನ್ನು ಜನರ ಮುಂದೆ ಇರಿಸುತ್ತಾ ಬಂದಿದ್ದಾರೆ. ಎಲ್ಲ ಕಾಲಗಳಲ್ಲಿಯೂ ಇದು ಮುಸ್ಲಿಮ್ ಆಗಲಿಕ್ಕೆ ಇರುವ ಒಂದು ಅನಿವಾರ್ಯ ಬೇಡಿಕೆಯಾಗಿತ್ತು. ಪರಲೋಕವನ್ನು ನಿರಾಕರಿಸುವ ಅಥವಾ ಅದರ ಬಗ್ಗೆ ಸಂಶಯ ತಾಳಿರುವ ವ್ಯಕ್ತಿಯನ್ನು ಎಲ್ಲ ಪ್ರವಾದಿಗಳೂ ಸತ್ಯನಿಷೇಧಿಗಳೆಂದೇ ಪರಿಗಣಿಸಿದ್ದರು. ಏಕೆಂದರೆ ಈ ವಿಶ್ವಾಸದ ಹೊರತು ಅಲ್ಲಾಹನ, ಅವನ ಗ್ರಂಥಗಳ, ಮತ್ತವನ ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವುದೆಲ್ಲವೂ ನಿರರ್ಥಕವಾಗುತ್ತದೆ ಮತ್ತು ಮನುಷ್ಯನ ಸಂಪೂರ್ಣ ಜೀವನವು ಕೆಟ್ಟು ಹೋಗುತ್ತದೆ. ಸ್ವಲ್ಪ ಯೋಚಿಸಿದರೆ ಈ ವಿಷಯವು ಬಹಳ ಸುಲಭವಾಗಿ ಅರ್ಥವಾಗುತ್ತದೆ. ನಿಮಗೆ ಯಾವುದಾದರೂ ಕೆಲಸವನ್ನು ಮಾಡಲು ಹೇಳಿದಾಗ ಎಲ್ಲಕ್ಕಿಂತಲೂ ಮೊದಲು ನಿಮ್ಮ ಮನಸ್ಸಿನಲ್ಲಿ ಉದಿಸುವ ಪ್ರಶ್ನೆ ಈ ಕೆಲಸ ಮಾಡಿದರೆ ಆಗುವ ಪ್ರಯೋಜನ ಏನು ಮತ್ತು ಮಾಡದಿದ್ದರೆ ಆಗುವ ನಷ್ಟವೇನು

ಎಂಬುದಾಗಿದೆ. ಈ ಪ್ರಶ್ನೆ ಏಕೆ ಉದ್ಭವಿಸುತ್ತದೆ? ಏಕೆಂದರೆ ಯಾವುದೇ ಉದ್ದೇಶವಿಲ್ಲದ ಪ್ರತಿಯೊಂದು ಕೆಲಸವನ್ನು ಮಾನವ ಪ್ರಕೃತಿಯು ನಿರರ್ಥಕವೆಂದು ಬಗೆಯುತ್ತದೆ. ಪ್ರಯೋಜನವಿಲ್ಲದ ಯಾವುದೇ ಕೆಲಸವನ್ನು ಮಾಡಲು ನೀವು ಮುಂದಾಗಲಾರಿರಿ. ಯಾವುದೇ ನಷ್ಟವಿದೆಯೆಂದು ಖಚಿತವಾಗದೆ ಯಾವ ವಸ್ತುವನ್ನು ತೊರೆಯಲೂ ನೀವು ಸಿದ್ಧರಾಗಲಾರಿರಿ. ಸಂಶಯದ ಸ್ಥಿತಿಯು ಇದುವೇ ಆಗಿದೆ. ಯಾವ ಕೆಲಸದ ಪ್ರಯೋಜನವು ಸಂಶಯಾಸ್ಪದವಾಗಿದೆಯೋ ಅದನ್ನೆಂದೂ ನೀವು ಮನಸಾರೆ ಮಾಡ ಲಾರಿರಿ. ಅದೇ ರೀತಿ ಯಾವ ವಸ್ತುವು ಹಾನಿಕರವೆಂಬುದು ಸಂಶಯಾಸ್ಪದವೋ ಅದರಿಂದ ದೂರವಿರಲೂ ನೀವು ಯಾವುದೇ ವಿಶೇಷ ಪ್ರಯತ್ನ ಮಾಡಲಾರಿರಿ.

ಮಕ್ಕಳನ್ನು ನೋಡಿ. ಅವರು ಬೆಂಕಿಗೆ ಯಾಕೆ ಕೈ ಹಾಕುತ್ತಾರೆ? ಬೆಂಕಿಯು ಸುಟ್ಟು ಬಿಡುತ್ತದೆ ಎಂಬುದು ಅವರಿಗೆ ದೃಢವಾಗಿ ತಿಳಿಯದಿರುವುದರಿಂದಲ್ಲವೇ? ಅವರು ಕಲಿಯುವುದಕ್ಕೆ ಏಕೆ ಹಿಂಜರಿಯುತ್ತಾರೆ? ಕಲಿಯುವುದರಿಂದ ಯಾವ ಪ್ರಯೋಜನವಿದೆ ಎಂದು ಅವರ ಹಿರಿಯರು ಅವರಿಗೆ ಮನದಟ್ಟು ಮಾಡಲು ಪ್ರಯತ್ನಿಸುತ್ತಾರೋ ಅದು ಅವರ ಮನಸ್ಸಿಗೆ ನಾಟಿರುವುದಿಲ್ಲ. ಈಗ ಯೋಚಿಸಿ ನೋಡಿ. ಯಾವ ವ್ಯಕ್ತಿಯು ಪರಲೋಕದ ಮೇಲೆ ವಿಶ್ವಾಸವಿರಿಸುವುದಿಲ್ಲವೋ ಅವನು ಅಲ್ಲಾಹನನ್ನು ನಂಬುವುದನ್ನು ಮತ್ತು ಅವನ ಇಚ್ಛೆಯಂತೆ ಜೀವಿಸುವುದನ್ನು ನಿರರ್ಥಕವೆಂದು ಬಗೆಯುತ್ತಾನೆ. ಅವನ ಅಭಿಪ್ರಾಯದಂತೆ ಅಲ್ಲಾಹನ ಅನುಸರಣೆಯಿಂದ ಯಾವ ಪ್ರಯೋಜನವೂ ಇಲ್ಲ ಮತ್ತು ಅವನ ಅವಿಧೇಯತೆಯಿಂದ ಯಾವ ನಷ್ಟವೂ ಇಲ್ಲ. ಹಾಗಿರುವಾಗ ಅಲ್ಲಾಹನು ತನ್ನ ಪ್ರವಾದಿಗಳ ಮತ್ತು ಗ್ರಂಥಗಳ ಮೂಲಕ ನೀಡಿರುವ ಆಜ್ಞೆಗಳನ್ನು ಅವನು ಅನುಸರಿಸುವುದಾದರೂ ಹೇಗೆ? ಒಂದು ವೇಳೆ ಅವನು ಅಲ್ಲಾಹನನ್ನು ನಂಬಿದರೂ ಈ ರೀತಿಯ ನಂಬಿಕೆ ನಿರರ್ಥಕವಾಗಿದೆ. ಏಕೆಂದರೆ ಅವನು ಅಲ್ಲಾಹನ ಆಜ್ಞೆಗಳನ್ನು ಪಾಲಿಸಲಾರನು ಮತ್ತು ಅವನ ಇಚ್ಛೆಯಂತೆ ಜೀವಿಸಲಾರನು.

ಆದರೆ ಈ ವಿಷಯವು ಇಲ್ಲಿಗೆ ಮುಗಿಯುವುದಿಲ್ಲ. ಇನ್ನಷ್ಟು ಯೋಚಿಸಿದರೆ ಪರಲೋಕದ ನಿರಾಕರಣೆ ಅಥವಾ ವಿಶ್ವಾಸ ಮನುಷ್ಯ ಜೀವನದ ಮೇಲೆ ನಿರ್ಣಾಯಕ ವಾದ ಪ್ರಭಾವವನ್ನು ಬೀರುವುದೆಂದು ನಿಮಗೆ ತಿಳಿದು ಬರುವುದು. ನಾವು ಈಗಾಗಲೇ ವಿವರಿಸಿದಂತೆ ಮನುಷ್ಯನು ಪ್ರತಿಯೊಂದು ಕಾರ್ಯವನ್ನು ಅದರ ಲಾಭ-ನಷ್ಟಗಳನ್ನು ನೋಡಿಯೇ ಮಾಡುತ್ತಾನೆ ಅಥವಾ ಮಾಡದಿರುತ್ತಾನೆ. ಒಬ್ಬ ವ್ಯಕ್ತಿಯ ದೃಷ್ಟಿಯು ಕೇವಲ ಈ ಲೋಕದ ಲಾಭ-ನಷ್ಟಗಳ ಮೇಲಿದ್ದರೆ ಅವನು ಈ ಲೋಕದಲ್ಲಿ ಯಾವುದೇ ಪ್ರಯೋಜನ ಸಿಗುವ ಸಾಧ್ಯತೆ ಇಲ್ಲದ ಪುಣ್ಯ ಕಾರ್ಯಗಳನ್ನು ಖಂಡಿತ ಮಾಡಲಾರನು. ಅದೇ ರೀತಿ ಈ ಲೋಕದಲ್ಲಿ ಯಾವುದೇ ನಷ್ಟದ ಭಯವಿಲ್ಲದಂತಹ

ಪಾಪ ಕಾರ್ಯದಿಂದ ದೂರವಿರಲಾರನು. ಇನ್ನೊಬ್ಬ ವ್ಯಕ್ತಿಯ ದೃಷ್ಟಿಯು ಕರ್ಮಗಳ ಅಂತಿಮ ಪರಿಣಾಮದ ಮೇಲಿದ್ದರೆ ಅವನು ಲೌಕಿಕ ಲಾಭ-ನಷ್ಟಗಳನ್ನು ಕೇವಲ ತಾತ್ಕಾಲಿಕ ವಿಷಯವೆಂದು ಪರಿಗಣಿಸುವನು. ಪರಲೋಕದ ಶಾಶ್ವತ ಲಾಭ ನಷ್ಟಗಳನ್ನು ಪರಿಗಣಿಸಿ ಒಳಿತನ್ನು ಕೈಗೊಳ್ಳುವನು ಮತ್ತು ಕೆಡುಕನ್ನು ತೊರೆಯುವನು. ಆ ಒಳಿತಿನಿಂದ ಈ ಲೋಕದಲ್ಲಿ ಎಷ್ಟೇ ದೊಡ್ಡ ನಷ್ಟವಾದರೂ ಸರಿಯೇ ಮತ್ತು ಆ ಕೆಡುಕಿನಿಂದ ಈ ಲೋಕದಲ್ಲಿ ಎಷ್ಟೇ ದೊಡ್ಡ ಲಾಭವಿದ್ದರೂ ಸರಿಯೇ. ಈಗ ನೋಡಿ, ಇವರಿಬ್ಬರ ಮಧ್ಯೆ ಎಷ್ಟು ದೊಡ್ಡ ಅಂತರವುಂಟಾಯಿತು. ಒಬ್ಬನ ಬಳಿ ಈ ಲೋಕದಲ್ಲಿ ಉತ್ತಮ ಪರಿಣಾಮವನ್ನುಂಟು ಮಾಡಬಲ್ಲಂತಹ ಕೆಲಸ ಮಾತ್ರ ಒಳ್ಳೆಯ ಕೆಲಸವಾಗಿದೆ. ಉದಾಹರಣೆಗೆ ಸ್ವಲ್ಪ ಹಣ ಸಿಗುವುದು, ಒಂದಿಷ್ಟು ಭೂಮಿ ಸಿಗುವುದು ಅಥವಾ ಯಾವುದಾದರೊಂದು ಹುದ್ದೆ ಸಿಗುವುದು, ಹೆಸರು ಮತ್ತು ಪ್ರಚಾರ ಸಿಗುವುದು, ಕೆಲವು ವ್ಯಕ್ತಿಗಳು ಬೆನ್ನು ತಟ್ಟುವುದು, ಸ್ವಲ್ಪ ಸುಖ-ಸಂತೋಷ ಸಿಗುವುದು, ಕೆಲವು ಇಚ್ಛೆಗಳು ಪೂರ್ಣಗೊಳ್ಳುವುದು, ಸ್ವಲ್ಪ ಆತ್ಮಾನಂದ ಸಿಗುವುದು ಇತ್ಯಾದಿ. ಅವರ ದೃಷ್ಟಿಯಲ್ಲಿ ಕೆಡುಕೆಂದರೆ ಈ ಲೋಕದಲ್ಲಿ ಕೆಟ್ಟ ಪರಿಣಾಮ ಉಂಟು ಮಾಡುವ ಅಥವಾ ಉಂಟು ಮಾಡಬಲ್ಲಂತಹ ವಿಷಯಗಳು ಮಾತ್ರ, ಉದಾ: ಪ್ರಾಣ ಮತ್ತು ಸೊತ್ತಿನ ನಷ್ಟ, ಆರೋಗ್ಯದ ನಷ್ಟ, ಅಪಕೀರ್ತಿ, ಸರಕಾರದ ಶಿಕ್ಷೆ, ಯಾವುದೇ ರೀತಿಯ ಸಂಕಷ್ಟ, ದುಃಖ-ದುಮ್ಮಾನ.

ಇದಕ್ಕೆ ವಿರುದ್ಧವಾಗಿ ಇನ್ನೊಬ್ಬ ವ್ಯಕ್ತಿಯು ಯಾವ ಕಾರ್ಯದಿಂದ ಅಲ್ಲಾಹನು ಸಂತುಷ್ಟನಾಗುತ್ತಾನೋ ಅದನ್ನು ಒಳಿತೆಂದು ಪರಿಗಣಿಸುತ್ತಾನೆ. ಅಲ್ಲಾಹನು ಅಸಂತುಷ್ಟಗೊಳ್ಳುವ ಕಾರ್ಯವನ್ನು ಕೆಡುಕೆಂದು ಪರಿಗಣಿಸುತ್ತಾನೆ. ಒಳಿತು ಒಂದು ವೇಳೆ ಲೋಕದಲ್ಲಿ ಯಾವ ಲಾಭವನ್ನು ಉಂಟು ಮಾಡದಿದ್ದರೂ, ಅಷ್ಟೇ ಅಲ್ಲ ಅದರಿಂದ ನಷ್ಟವೇ ಆದರೂ ಅವನು ಅದನ್ನು ಒಳಿತೆಂದೇ ಪರಿಗಣಿಸುವನು ಮತ್ತು ಅಂತಿಮವಾಗಿ ಅಲ್ಲಾಹನು ಅವನಿಗೆ ಶಾಶ್ವತವಾಗಿ ಉಳಿಯುವಂತಹ ಲಾಭ ವನ್ನು ದಯಪಾಲಿಸುವನೆಂದು ಅವನು ದೃಢವಾಗಿ ನಂಬುವನು. ಅದೇ ರೀತಿ ಕೆಡುಕಿ ನಿಂದ ಯಾವುದೇ ರೀತಿಯ ನಷ್ಟವಾಗದಿದ್ದರೂ ಮುಂದೆ ನಷ್ಟವಾಗುವ ಭಯವಿಲ್ಲದಿದ್ದರೂ ಮಾತ್ರವಲ್ಲ, ಅದರಿಂದ ಲಾಭವೇ ಕಂಡುಬಂದರೂ ಅವನದನ್ನು ಕೆಡುಕೆಂದೇ ಪರಿ ಗಣಿಸುವನು. ಈ ಲೋಕದ ಸಂಕ್ಷಿಪ್ತ ಜೀವನದಲ್ಲಿ ಶಿಕ್ಷೆಯಿಂದ ಸುರಕ್ಷಿತವಾದರೂ ಮತ್ತು ಕೆಲವು ದಿನ ಅದರಿಂದ ಲಾಭ ಸಿಗುತ್ತಿದ್ದರೂ ಅಂತಿಮವಾಗಿ ತಾನು ಅಲ್ಲಾಹನ ಶಿಕ್ಷೆಯಿಂದ ರಕ್ಷಣೆ ಹೊಂದಲಾರೆ ಎಂದು ಅವನು ದೃಢವಾಗಿ ನಂಬುವನು.

ಈ ಎರಡು ವಿಭಿನ್ನ ವಿಚಾರಗಳ ಪ್ರಭಾವದಿಂದ ಮನುಷ್ಯನು ಎರಡು ವಿಭಿನ್ನ ಕ್ರಮಗಳನ್ನು ಅನುಸರಿಸುತ್ತಾನೆ. ಯಾರು ಪರಲೋಕದ ಮೇಲೆ ವಿಶ್ವಾಸವಿರಿಸುವುದಿಲ್ಲವೋ

ಅವನು ಇಸ್ಲಾಮಿನ ಮಾರ್ಗದಲ್ಲಿ ಒಂದು ಹೆಜ್ಜೆ ನಡೆಯುವುದು ಕೂಡಾ ಸಾಧ್ಯವಿಲ್ಲ. ಅಲ್ಲಾಹನ ಮಾರ್ಗದಲ್ಲಿ ಬಡವರಿಗೆ ಝಕಾತ್ ನೀಡಿರೆಂದು ಇಸ್ಲಾಮ್ ಹೇಳುತ್ತದೆ. ಆಗ ಅವನು, 'ಝಕಾತ್‌ನಿಂದ ನನ್ನ ಸೊತ್ತು ಕಡಿಮೆಯಾಗುತ್ತದೆ. ನಾನಂತೂ ನನ್ನ ಸೊತ್ತಿನ ಮೇಲೆ ಬಡ್ಡಿಯ ಮೂಲಕ ಇನ್ನಷ್ಟು ಸೊತ್ತನ್ನು ಗಳಿಸುವೆನು ಮತ್ತು ಬಡ್ಡಿಯ ಒಂದೊಂದು ಪೈಸೆಗೆ ಪ್ರತಿಯಾಗಿ ಬಡವರ ಮನೆಯ ಒಂದೊಂದು ವಸ್ತುವನ್ನು ಜಪ್ತಿ ಮಾಡುವೆನು' ಎಂದು ಅವನು ಉತ್ತರಿಸುತ್ತಾನೆ. ಸತ್ಯದಿಂದ ಎಷ್ಟೇ ನಷ್ಟವಾದರೂ ಸುಳ್ಳಿನಿಂದ ಎಷ್ಟೇ ಲಾಭ ಸಿಗುವುದಿದ್ದರೂ ಸದಾ ಸತ್ಯವನ್ನೇ ಹೇಳಿರಿ, ಎಂದೂ ಸುಳ್ಳಾಡದಿರಿ ಎಂದು ಇಸ್ಲಾಮ್ ಹೇಳುತ್ತದೆ. ಆಗ ಅವನು ನನಗೆ ನಷ್ಟವನ್ನುಂಟು ಮಾಡುವ ಮತ್ತು ಯಾವುದೇ ಲಾಭ ನೀಡದಂತಹ ಸತ್ಯ ನನಗೇಕೆ! ಯಾವ ಸುಳ್ಳಿನಿಂದ ನನಗೆ ಲಾಭವಿದೆಯೋ ಮತ್ತು ಅಪಕೀರ್ತಿಯ ಭಯವಿಲ್ಲವೋ ಅದರಿಂದ ನಾನೇಕೆ ದೂರವಿರಲಿ ಎಂದು ಉತ್ತರಿಸುತ್ತಾನೆ.

ಅವನೊಂದು ನಿರ್ಜನ ರಸ್ತೆಯಲ್ಲಿ ಸಾಗುತ್ತಿರುತ್ತಾನೆ. ಒಂದು ಬೆಲೆ ಬಾಳುವ ವಸ್ತು ಬಿದ್ದಿರುವುದು ಅವನಿಗೆ ಕಾಣಿಸುತ್ತದೆ. ಆಗ ಇಸ್ಲಾಮ್ ಹೇಳುತ್ತದೆ: ಇದು ನಿನ್ನ ಸೊತ್ತಲ್ಲ, ಇದನ್ನು ನೀನು ಖಂಡಿತ ತೆಗೆದುಕೊಳ್ಳಬಾರದು. ಅವನು ಅದಕ್ಕೆ ಉತ್ತರವಾಗಿ: ಪುಕ್ಕಟೆಯಾಗಿ ಸಿಗುವ ವಸ್ತುವನ್ನು ನಾನೇಕೆ ಬಿಟ್ಟು ಬಿಡಲಿ? ಇಲ್ಲಿ ಯಾರೂ ನೋಡುವವರಿಲ್ಲ. ಪೋಲೀಸರಿಗೆ ಸುದ್ದಿ ಮುಟ್ಟಿಸುವವರು, ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವವರು ಅಥವಾ ಜನರಲ್ಲಿ ನಿಂದೆಗೆ ಗುರಿಪಡಿಸುವಂತಹ ಯಾವ ವ್ಯಕ್ತಿಯೂ ಇಲ್ಲದಿರುವಾಗ ನಾನೇಕೆ ಈ ಪುಕ್ಕಟೆ ಲಾಭವನ್ನು ಬಿಟ್ಟು ಬಿಡಲಿ ಎಂದು ಹೇಳುತ್ತಾನೆ. ಒಬ್ಬ ವ್ಯಕ್ತಿ ಅವನ ಬಳಿ ರಹಸ್ಯವಾಗಿ ಒಂದು ವಸ್ತುವನ್ನು ಜೋಪಾನವಾಗಿಡಲು ಕೊಟ್ಟು ಸತ್ತು ಹೋಗುತ್ತಾನೆ. ಅವನ ಅಮಾನತ್‌ನಲ್ಲಿ ವಂಚನೆ ಮಾಡದಿರು, ಅವನ ಸೊತ್ತನ್ನು ಅವನ ಮಕ್ಕಳು ಮರಿಗಳಿಗೆ ತಲುಪಿಸಿ ಬಿಡು ಎಂದು ಇಸ್ಲಾಮ್ ಹೇಳುತ್ತದೆ. ಆಗ ಅವನು, "ಸತ್ತವನ ಸೊತ್ತು ತನ್ನ ಬಳಿ ಇದೆ ಎಂಬುದಕ್ಕೆ ಯಾವ ಸಾಕ್ಷ್ಯವೂ ಇಲ್ಲ. ಸ್ವಯಂ ಅವನ ಮಕ್ಕಳು ಮರಿಗಳಿಗೂ ಅದರ ಬಗ್ಗೆ ತಿಳಿದಿಲ್ಲ. ನಾನು ಸುಲಭವಾಗಿ ಅದನ್ನು ಕಬಳಿಸಬಹುದು. ಯಾರೂ ನನ್ನ ವಿರುದ್ಧ ಮೊಕದ್ದಮೆ ಹೂಡುವವರಿಲ್ಲ ಅಥವಾ ನನ್ನನ್ನು ಅಪಕೀರ್ತಿ ಗೊಳಪಡಿಸುವ ಭಯವಿಲ್ಲ. ಹೀಗಿರುವಾಗ ನಾನೇಕೆ ಅದನ್ನು ತಿನ್ನದಿರಲಿ?" ಎಂದು ಹೇಳುತ್ತಾನೆ.

ಒಟ್ಟಿನಲ್ಲಿ ಜೀವನದ ಮಾರ್ಗದಲ್ಲಿ ಪ್ರತಿಯೊಂದು ಹೆಜ್ಜೆಯಲ್ಲೂ ಇಸ್ಲಾಮ್ ಅವನನ್ನು ಒಂದು ಕ್ರಮದಲ್ಲಿ ನಡೆಯಲು ಆದೇಶಿಸುತ್ತದೆ ಮತ್ತು ಅವನು ಅದಕ್ಕೆ ವ್ಯತಿರಿಕ್ತವಾದ ಇನ್ನೊಂದು ಮಾರ್ಗವನ್ನು ಅನುಸರಿಸುತ್ತಾನೆ. ಏಕೆಂದರೆ ಇಸ್ಲಾಮಿನ ಬಳಿ ಪ್ರತಿಯೊಂದು ವಸ್ತುವಿನ ನೆಲೆ ಬೆಲೆ ಇರುವುದು ಪರಲೋಕದ ಶಾಶ್ವತ

ಪರಿಣಾಮದ ದೃಷ್ಟಿಯಿಂದಾಗಿದೆ. ಆದರೆ ವ್ಯಕ್ತಿಯು ಪ್ರತಿಯೊಂದು ವಿಷಯದಲ್ಲಿ ಕೆಲವೇ ದಿನದ ಲೌಕಿಕ ಜೀವನದಲ್ಲಿ ಅದರಿಂದುಂಟಾಗುವ ಪರಿಣಾಮದ ಮೇಲೆ ದೃಷ್ಟಿ ಬೀರುತ್ತಾನೆ.

ಪರಲೋಕದ ಮೇಲೆ ವಿಶ್ವಾಸವಿರಿಸದೆ ಮನುಷ್ಯನು ಏಕೆ ಮುಸ್ಲಿಮ್ ಆಗಲಾರನು ಎಂಬುದು ಈಗ ನಿಮಗೆ ತಿಳಿದಿರಬಹುದು. ಮುಸ್ಲಿಮ್ ಆಗುವುದಂತೂ ದೂರದ ಮಾತು, ಪರಲೋಕದ ನಿರಾಕರಣೆಯು ಮನುಷ್ಯನನ್ನು ಮಾನವೀಯತೆಯಿಂದ ಪಾಶವೀಯತೆ ಮತ್ತು ರಾಕ್ಷಸೀಯತೆಯ ಸ್ಥಾನಕ್ಕೂ ತಲುಪಿಸಿ ಬಿಡುತ್ತದೆ.

## ಪರಲೋಕ ವಿಶ್ವಾಸದ ಸತ್ಯತೆ

ಪರಲೋಕ ವಿಶ್ವಾಸದ ಅಗತ್ಯ ಮತ್ತು ಪ್ರಯೋಜನ ನಿಮಗೆ ಈಗಾಗಲೇ ತಿಳಿಯಿತು. ಈಗ ನಾವು ಪ್ರವಾದಿ ಮುಹಮ್ಮದ್‌ರು(ಸ) ವಿವರಿಸಿದ ಪರಲೋಕದ ಕುರಿತ ವಿಶ್ವಾಸವು ಬುದ್ಧಿಯ ಪ್ರಕಾರವೂ ಸರಿಯೇ ಆಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸುತ್ತೇವೆ. ಪರಲೋಕದ ಮೇಲೆ ನಮ್ಮ ವಿಶ್ವಾಸವು ಕೇವಲ ಪ್ರವಾದಿವರ್ಯರ(ಸ) ಮೇಲಿನ ಭರವಸೆಯ ಮೇಲಿದೆಯೇ ಹೊರತು ಅದು ಬುದ್ಧಿಯನ್ನು ಅವಲಂಬಿಸಿಲ್ಲ. ಆದರೂ ಚೆನ್ನಾಗಿ ವಿವೇಚಿಸಿದರೆ ನಮಗೆ ತಿಳಿದು ಬರುವುದೇನೆಂದರೆ ಪರಲೋಕದ ಬಗ್ಗೆ ಇರುವಂತಹ ಎಲ್ಲ ವಿಶ್ವಾಸಗಳ ಪೈಕಿ ಈ ವಿಶ್ವಾಸವೇ ಅತ್ಯಧಿಕ ವಿವೇಕಯುತವಾಗಿದೆ. ಪರಲೋಕದ ಬಗ್ಗೆ ಭೂಲೋಕದಲ್ಲಿ ಮೂರು ವಿಭಿನ್ನ ವಿಶ್ವಾಸಗಳು ಕಂಡು ಬರುತ್ತದೆ:

ಒಂದು ವಿಭಾಗವು ನಂಬಿರುವ ಪ್ರಕಾರ ಮನುಷ್ಯನು ಸತ್ತ ಬಳಿಕ ನಾಶವಾಗಿ ಬಿಡುತ್ತಾನೆ. ಆ ಬಳಿಕ ಯಾವುದೇ ಜೀವನವಿಲ್ಲ. ಇದು ತಾವು ವಿಜ್ಞಾನಿಗಳೆಂದು ಭಾವಿಸುವ ಕೆಲವು ನಾಸ್ತಿಕರ ವಿಚಾರವಾಗಿದೆ.

ಎರಡನೆಯ ವಿಭಾಗದ ಪ್ರಕಾರ ಮನುಷ್ಯನು ತನ್ನ ಕರ್ಮಗಳ ಪರಿಣಾಮವನ್ನು ಅನುಭವಿಸಲಿಕ್ಕಾಗಿ ಮತ್ತೆ ಮತ್ತೆ ಇದೇ ಲೋಕದಲ್ಲಿ ಜನ್ಮವೆತ್ತಿ ಬರುತ್ತಾನೆ. ಒಂದು ವೇಳೆ ಅವನ ಕರ್ಮಗಳು ಕೆಟ್ಟದಾಗಿದ್ದರೆ ಅವನು ಇನ್ನೊಂದು ಜೀವನದಲ್ಲಿ ನಾಯಿ – ಬೆಕ್ಕಿನಂತಹ ಯಾವುದಾದರೂ ಪ್ರಾಣಿಯಾಗಿ ಜನ್ಮ ತಾಳುತ್ತಾನೆ ಅಥವಾ ಯಾವುದಾದರೂ ವೃಕ್ಷವಾಗಿ ಹುಟ್ಟುತ್ತಾನೆ ಅಥವಾ ಯಾವುದಾದರೂ ನೀಚ ವರ್ಗದ ಮನುಷ್ಯನ ರೂಪ ತಾಳುತ್ತಾನೆ. ಒಂದು ವೇಳೆ ಅವನ ಕರ್ಮಗಳು ಉತ್ತಮವಾಗಿದ್ದರೆ ಅವನು ಇನ್ನಷ್ಟು ಉನ್ನತ ಸ್ಥಾನ ಪಡೆದು ಇಲ್ಲಿ ಹುಟ್ಟಿ ಬರುತ್ತಾನೆ. ಈ ವಿಶ್ವಾಸವು ಕೆಲವು ಪ್ರಾಕೃತ ಧರ್ಮಗಳಲ್ಲಿ ಕಂಡು ಬರುತ್ತದೆ.

ಮೂರನೆಯ ವಿಭಾಗವು ಪ್ರಳಯ, ಮತ್ತೆ ಪುನರುತ್ಥಾನ ಹಾಗೂ ಅಲ್ಲಾಹನ ನ್ಯಾಯಾಲಯದಲ್ಲಿ ಹಾಜರಾಗಿ ಶಿಕ್ಷೆ ಅಥವಾ ಪುರಸ್ಕಾರವನ್ನು ಪಡೆಯುವ ಬಗ್ಗೆ

ವಿಶ್ವಾಸವಿರಿಸುತ್ತದೆ. ಈ ವಿಶ್ವಾಸವು ಎಲ್ಲ ಪ್ರವಾದಿಗಳ ಒಮ್ಮತದ ವಿಶ್ವಾಸವಾಗಿದೆ.

ಈಗ ಮೊದಲನೆಯ ವಿಭಾಗದ ವಿಶ್ವಾಸದ ಬಗ್ಗೆ ಆಲೋಚಿಸೋಣ. ಸತ್ತ ಬಳಿಕ ಯಾರೂ ಜೀವಂತಗೊಳ್ಳುವುದನ್ನು ನಾವು ಕಂಡಿಲ್ಲ, ಸತ್ತವರೆಲ್ಲರೂ ಮಣ್ಣಲ್ಲಿ ಸೇರಿ ಹೋಗುವುದನ್ನು ನಾವು ಕಾಣುತ್ತೇವೆ. ಆದುದರಿಂದ ಮರಣದ ಬಳಿಕ ಯಾವುದೇ ಜೀವನವಿಲ್ಲ ಎಂದು ಅವರು ವಾದಿಸುತ್ತಾರೆ. ಆದರೆ ಸ್ವಲ್ಪ ಯೋಚಿಸಿ ನೋಡಿ. ಇದೂ ಒಂದು ಪುರಾವೆಯೇ? ಸತ್ತ ಬಳಿಕ ಯಾರೂ ಜೀವಂತಗೊಳ್ಳುವುದನ್ನು ನೀವು ನೋಡಿರದಿದ್ದರೆ 'ಸತ್ತ ಬಳಿಕ ಏನಾಗುತ್ತದೆಂದು ನಮಗೆ ಗೊತ್ತಿಲ್ಲ?' ಎಂದಿಷ್ಟೇ ಹೇಳಬಹುದು. ಆದರೆ ಇದಕ್ಕಿಂತ ಬಹಳ ಮುಂದುವರಿದು, 'ಸತ್ತ ಮೇಲೆ ಏನೂ ಇಲ್ಲವೆಂದು ನಮಗೆ ತಿಳಿದಿದೆ' ಎಂದು ನೀವು ವಾದಿಸುತ್ತೀರಿ. ಇದಕ್ಕೆ ನಿಮ್ಮ ಬಳಿ ಇರುವ ಪುರಾವೆಯಾದರೂ ಏನು? ಒಬ್ಬ ಹಳ್ಳಿಗನು ಒಂದು ವೇಳೆ ವಿಮಾನವನ್ನು ಕಂಡಿರದಿದ್ದರೆ 'ವಿಮಾನವೆಂದರೇನೆಂದು ನನಗೆ ಗೊತ್ತಿಲ್ಲ' ಎಂದಿಷ್ಟೇ ಅವನು ಹೇಳಬಹುದು. ಆದರೆ ಅವನು, 'ವಿಮಾನವೆಂಬ ಯಾವ ವಸ್ತುವೂ ಇಲ್ಲ ಎಂದು ನನಗೆ ತಿಳಿದಿದೆ' ಎಂದು ಹೇಳಿದರೆ ಪ್ರತಿಯೊಬ್ಬ ಬುದ್ಧಿವಂತನೂ ಅವನನ್ನು ಮೂರ್ಖನೆಂದೇ ಕರೆಯುವನು. ಏಕೆಂದರೆ ಒಂದು ವಸ್ತುವನ್ನು ಅವನು ನೋಡಿರದಿದ್ದರೆ ಅದರ ಅರ್ಥ ಆ ವಸ್ತುವೇ ಇಲ್ಲವೆಂದಲ್ಲ. ಒಬ್ಬ ವ್ಯಕ್ತಿಯೇಕೆ, ಇಡೀ ಜಗತ್ತಿನ ಎಲ್ಲ ಮನುಷ್ಯರೂ ಯಾವುದಾದರೂ ಒಂದು ವಸ್ತುವನ್ನು ನೋಡಿರದಿದ್ದರೆ ಆ ವಸ್ತು ಇಲ್ಲ ಅಥವಾ ಇರಲು ಸಾಧ್ಯವಿಲ್ಲ ಎಂದು ವಾದಿಸಲಾಗದು.

ಆ ಬಳಿಕ ಎರಡನೆಯ ವಿಶ್ವಾಸವನ್ನು ತೆಗೆದುಕೊಳ್ಳೋಣ. ಈ ವಿಶ್ವಾಸದ ಪ್ರಕಾರ ಒಬ್ಬ ವ್ಯಕ್ತಿಯು ಈಗ ಮನುಷ್ಯನಾಗಿರುವುದು ಅವನು ಹಿಂದಿನ ಜನ್ಮದಲ್ಲಿ ಯಾವುದಾದರೂ ಪ್ರಾಣಿಯಾಗಿದ್ದು ಉತ್ತಮ ಕರ್ಮಗಳನ್ನು ಮಾಡಿರಬೇಕು ಮತ್ತು ಈಗ ಪ್ರಾಣಿಯಾಗಿರುವ ಒಂದು ವಸ್ತುವು ಹಿಂದಿನ ಜನ್ಮದಲ್ಲಿ ಮನುಷ್ಯನಾಗಿದ್ದು ಕೆಟ್ಟ ಕೆಲಸಗಳನ್ನು ಮಾಡಿರಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ ಮನುಷ್ಯ, ಪ್ರಾಣಿ ಮತ್ತು ಮರಗಳೆಲ್ಲವೂ ಹಿಂದಿನ ಜನ್ಮದ ಕರ್ಮಗಳ ಫಲವಾಗಿದೆ.

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಮೊದಲಿದ್ದ ವಸ್ತು ಯಾವುದು? ಮೊದಲು ಮನುಷ್ಯನಿದ್ದನೆಂದಾದರೆ ಅದಕ್ಕಿಂತ ಹಿಂದೆ ಪ್ರಾಣಿ ಅಥವಾ ಮರ ಆಗಿರಲೇ ಬೇಕು. ಅನ್ಯಥಾ ಅವನಿಗೆ ಮನುಷ್ಯನ ಜನ್ಮ ಯಾವ ಉತ್ತಮ ಕರ್ಮಗಳಿಗಾಗಿ ಸಿಕ್ಕಿತೆಂದು ಕೇಳಲಾಗುವುದು. ಒಂದು ವೇಳೆ ಮೊದಲು ಪ್ರಾಣಿ ಅಥವಾ ವೃಕ್ಷ ಇತ್ತೆಂದಾದರೆ ಅದಕ್ಕಿಂತಲೂ ಮೊದಲು ಮನುಷ್ಯ ಇದ್ದನೆಂದು ಒಪ್ಪಲೇ ಬೇಕಾಗುತ್ತದೆ. ಅನ್ಯಥಾ ಪ್ರಾಣಿ ಅಥವಾ ವೃಕ್ಷದ ಜನ್ಮ ಅದಕ್ಕೆ ಯಾವ ಕೆಟ್ಟ ಕರ್ಮದ ಫಲವಾಗಿ ಸಿಕ್ಕಿತೆಂಬ ಪ್ರಶ್ನೆ ಏಳುತ್ತದೆ. ಒಟ್ಟಿನಲ್ಲಿ ಈ ವಿಶ್ವಾಸವನ್ನು ಹೊಂದಿದ ಜನರು ಲೋಕದಲ್ಲಿ ಜೀವನದ

ಆರಂಭವು ಯಾವ ಸೃಷ್ಟಿಯಿಂದ ಆಯಿತೆಂಬುದನ್ನು ನಿಷ್ಕರ್ಷಿಸಲಾರರು. ಏಕೆಂದರೆ ಪ್ರತಿಯೊಂದು ಜೀವನದ ಹಿಂದೆ ಇನ್ನೊಂದು ಜೀವನ ಇದ್ದಿರಲೇ ಬೇಕು. ಇಲ್ಲದಿದ್ದರೆ ನಂತರದ ಜೀವನವನ್ನು ಹಿಂದಿನ ಜನ್ಮದ ಪರಿಣಾಮವೆನ್ನಲಾಗದು. ಇದು ಬುದ್ಧಿಗೆ ತೀರಾ ವಿರುದ್ಧವಾದ ವಿಷಯವಾಗಿದೆ.

ಈಗ ಮೂರನೆಯ ವಿಭಾಗದ ವಿಶ್ವಾಸವನ್ನು ತೆಗೆದುಕೊಳ್ಳೋಣ. ಅದರಲ್ಲಿ ಪ್ರಥಮವಾಗಿ ಹೇಳಿರುವುದೇನೆಂದರೆ ಒಂದು ದಿನ ಜಗತ್ತಿನಲ್ಲಿ ಸಾರ್ವತ್ರಿಕ ಪ್ರಳಯ ವಾಗುವುದು. ಅಲ್ಲಾಹನು ವಿಶ್ವ ವ್ಯವಸ್ಥೆಯನ್ನು ಸಂಪೂರ್ಣ ನಾಶಗೊಳಿಸಿ ಹೊಸ ತಾಗಿ ನವೀನವಾದ, ಹೆಚ್ಚು ಉನ್ನತ ಮಟ್ಟದ ಶಾಶ್ವತ ವಿಶ್ವವೊಂದನ್ನು ರಚಿಸುವನು. ಈ ಮಾತು ಸರಿ ಎಂಬುದರಲ್ಲಿ ಸಂಶಯಕ್ಕೆ ಆಸ್ಪದವೇ ಇಲ್ಲ. ಈ ವಿಶ್ವ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆಸಿದರೆ ಇದು ಒಂದು ಶಾಶ್ವತ ವ್ಯವಸ್ಥೆಯಲ್ಲವೆಂಬುದಕ್ಕೆ ಪುರಾವೆಗಳು ಸಿಗುತ್ತಾ ಹೋಗುತ್ತವೆ. ಏಕೆಂದರೆ ಎಷ್ಟು ಶಕ್ತಿಗಳು ಇದರಲ್ಲಿ ಕಾರ್ಯವೆಸಗುತ್ತಿವೆಯೋ ಅವೆಲ್ಲಾ ಸೀಮಿತವಾಗಿದ್ದು ಒಂದು ದಿನ ಅವು ಕೊನೆಗೊಳ್ಳುತ್ತವೆಂಬುದು ಖಚಿತ. ಆದ್ದರಿಂದಲೇ ಒಂದು ದಿನ ಸೂರ್ಯನು ತಣ್ಣಗಾಗಿ ಪ್ರಕಾಶವನ್ನು ಕಳಕೊಳ್ಳುವನು ಮತ್ತು ಗ್ರಹಗಳು ಪರಸ್ಪರ ಢಿಕ್ಕಿ ಹೊಡೆಯುವುವು ಹಾಗೂ ಈ ಜಗತ್ತು ನಾಶವಾಗು ವುದು ಎಂಬುದರ ಬಗ್ಗೆ ಎಲ್ಲ ವಿಜ್ಞಾನಿಗಳೂ ಒಮ್ಮತಾಭಿಪ್ರಾಯ ತಾಳಿದ್ದಾರೆ.

ಇದರಲ್ಲಿ ವಿವರಿಸಲಾಗಿರುವ ಎರಡನೆಯ ವಿಷಯವು 'ಮನುಷ್ಯನಿಗೆ ಮತ್ತೊಮ್ಮೆ ಜೀವನ ನೀಡಲಾಗುವುದು' ಎಂಬುದಾಗಿದೆ. ಇದು ಸಾಧ್ಯವೇ? ಸಾಧ್ಯವಲ್ಲದಿದ್ದರೆ ಈಗ ನಮಗೆ ದೊರೆತಿರುವಂತಹ ಜೀವನವು ಹೇಗೆ ಸಾಧ್ಯವಾಯಿತು? ಯಾವ ದೇವನು ಈ ಲೋಕದಲ್ಲಿ ಮನುಷ್ಯನನ್ನು ಸೃಷ್ಟಿಸಿರುವನೋ ಅವನು ಇನ್ನೊಂದು ಲೋಕದಲ್ಲೂ ಮನುಷ್ಯನನ್ನು ಸೃಷ್ಟಿಸಲು ಶಕ್ತನೆಂಬುದು ವ್ಯಕ್ತ.

ಮೂರನೆಯ ವಿಷಯವೇನೆಂದರೆ, 'ಮನುಷ್ಯನು ಈ ಲೋಕದಲ್ಲಿ ಮಾಡಿದ ಎಲ್ಲ ಕರ್ಮಗಳ ದಾಖಲೆ ಸುರಕ್ಷಿತವಿದೆ. ಅದು ಪುನರುತ್ಥಾನ ದಿನ ಅಲ್ಲಾಹನ ಮುಂದೆ ಹಾಜರುಗೊಳಿಸಲ್ಪಡುವುದು.' ಇದು ಎಂತಹ ವಿಷಯವೆಂದರೆ ಇದರ ಪುರಾವೆಯು ಇಂದಿಗೂ ನಮಗೆ ಜಗತ್ತಿನಲ್ಲಿ ಸಿಗುತ್ತಿದೆ. ಮನುಷ್ಯನು ಬಾಯಿಯಿಂದ ಹೊರಡಿಸುವ ಶಬ್ದವು ಗಾಳಿಯಲ್ಲಿ ಒಂದಿಷ್ಟು ತರಂಗವುಂಟು ಮಾಡಿ ಅಳಿದು ಹೋಗುತ್ತದೆ ಎಂದು ಮೊದಲು ಭಾವಿಸಲಾಗಿತ್ತು. ಆದರೆ ಈಗ ಕಂಡುಕೊಂಡ ವಿಚಾರವೇನೆಂದರೆ ಶಬ್ದವು ತನ್ನ ಪರಿಸರದ ವಸ್ತುಗಳ ಮೇಲೆ ತನ್ನ ಅಚ್ಚನ್ನು ಬಿಟ್ಟು ಹೋಗುತ್ತದೆ. ಅದನ್ನು ಪುನಃ ಸೃಷ್ಟಿಸಬಹುದು. ಗ್ರಾಮೋಫೋನ್ ಮತ್ತು ಟೇಪ್ ರೆಕಾರ್ಡರಿನ ಧ್ವನಿ ಮುದ್ರಣವು ಇದೇ ತತ್ವವನ್ನು ಆಧರಿಸಿದೆ. ಇದರಿಂದ ತಿಳಿದು ಬರುವುದೇನೆಂದರೆ ನಮ್ಮ ಪ್ರತಿಯೊಂದು ಕರ್ಮದ ಸಂಬಂಧವೂ ಯಾವೆಲ್ಲ ವಸ್ತುಗಳೊಂದಿಗಿರುತ್ತದೋ

ಅವುಗಳ ಮೇಲೆಲ್ಲಾ ಅದರ ಚಿತ್ರವು ಮೂಡಿರುತ್ತದೆ. ಪರಿಸ್ಥಿತಿಯು ಹೀಗಿರುವಾಗ ನಮ್ಮ ಪೂರ್ಣ ಜೀವನ ವೃತ್ತಾಂತವು ಸುರಕ್ಷಿತವಾಗಿರುವುದು ಮತ್ತು ಪುನಃ ಪ್ರಸ್ತುತ ಪಡಿಸಲ್ಪಡುವುದು ಖಚಿತವೆನಿಸುತ್ತದೆ.

ನಾಲ್ಕನೆಯ ವಿಷಯವೇನೆಂದರೆ, 'ಅಲ್ಲಾಹನು ಪುನರುತ್ಥಾನ ದಿನ ನಮ್ಮ ವಿಚಾರಣೆ ನಡೆಸಿ ಸತ್ಕರ್ಮಕ್ಕೆ ಸತ್ಫಲವನ್ನೂ ದುಷ್ಕರ್ಮಕ್ಕೆ ಶಿಕ್ಷೆಯನ್ನೂ ನೀಡುವನು.' ಇದನ್ನು ಅಸಾಧ್ಯವೆನ್ನುವವರು ಯಾರು? ಇದರಲ್ಲಿ ಯಾವ ವಿಷಯ ಬುದ್ಧಿಗೆ ವಿರುದ್ಧವಾಗಿದೆ? ಒಂದು ದಿನ ಅಲ್ಲಾಹನಿಂದ ವಿಚಾರಣೆ ನಡೆದು ಸತ್ಯಪೂರ್ಣವಾದ ತೀರ್ಮಾನವಾಗಬೇಕೆಂಬುದೇ ಬುದ್ಧಿಯ ಬೇಡಿಕೆಯಾಗಿದೆ. ಒಬ್ಬ ವ್ಯಕ್ತಿ ಒಳಿತನ್ನು ಮಾಡಿಯೂ ಈ ಲೋಕದಲ್ಲಿ ಅದಕ್ಕೆ ಯಾವುದೇ ಪ್ರತಿಫಲ ದೊರೆಯದಿರುವುದನ್ನು ನಾವು ಕಾಣುತ್ತೇವೆ. ಅದೇ ರೀತಿ ಒಬ್ಬ ವ್ಯಕ್ತಿ ಕೆಡುಕು ಮಾಡಿಯೂ ಅದರಿಂದ ಅವನಿಗೇನೂ ನಷ್ಟವುಂಟಾಗುವುದಿಲ್ಲ. ಮಾತ್ರವಲ್ಲ ಒಬ್ಬ ವ್ಯಕ್ತಿಯು ಪುಣ್ಯದ ಕಾರ್ಯ ಮಾಡಿಯೂ ಅದರಿಂದ ಅವನಿಗೆ ನಷ್ಟವೇ ಉಂಟಾದಂತಹ ಸಹಸ್ರಾರು ನಿದರ್ಶನಗಳನ್ನು ನಾವು ಕಾಣುತ್ತೇವೆ. ಇನ್ನೊಬ್ಬನು ಪಾಪ ಕಾರ್ಯವೆಸಗಿಯೂ ಬಹಳ ಸುಖವಾಗಿ ಜೀವನ ನಡೆಸುತ್ತಿರುತ್ತಾನೆ. ಇಂತಹ ಘಟನೆಗಳನ್ನು ಕಂಡು ಒಂದಲ್ಲ ಒಂದೆಡೆ ಪುಣ್ಯ ವಂತನಿಗೆ ಪುರಸ್ಕಾರ ಮತ್ತು ಪಾಪಿಗೆ ಅವನ ಪಾಪದ ಶಿಕ್ಷೆ ದೊರೆಯಬೇಕೆಂದು ಬುದ್ಧಿಯು ಅಪೇಕ್ಷಿಸುತ್ತದೆ.

ಕೊನೆಯ ವಿಷಯ ಸ್ವರ್ಗ ಮತ್ತು ನರಕವಾಗಿದೆ. ಅವುಗಳ ಅಸ್ತಿತ್ವವೂ ಅಸಾಧ್ಯ ವೇನಲ್ಲ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಸೃಷ್ಟಿಸಿದ ದೇವನು ಸ್ವರ್ಗ-ನರಕಗಳನ್ನು ಸೃಷ್ಟಿಸಲಾರನೆನ್ನುವುದಕ್ಕೆ ಕಾರಣವಾದರೂ ಏನಿದೆ? ಅಲ್ಲಾಹನು ವಿಚಾರಣೆ ನಡೆಸಿ ಜನರಿಗೆ ಪುರಸ್ಕಾರವನ್ನೂ ಶಿಕ್ಷೆಯನ್ನೂ ಘೋಷಿಸಿದರೆ ಪುರಸ್ಕಾರ ಪಡೆದವನು ಗೌರವ ಮತ್ತು ಸುಖ ಸಂತೋಷಗಳೊಂದಿಗೆ ಜೀವಿಸುವಂತಾಗಲು ಒಂದು ತಾಣವನ್ನೂ ಶಿಕ್ಷೆಗೊಳಗಾದವನು ನಿಂದ್ಯತೆ, ನೋವು ಮತ್ತು ಕಷ್ಟ ಅನುಭವಿಸುವ ಒಂದು ತಾಣವನ್ನೂ ಪಡೆಯಬೇಕಾದುದು ಅಗತ್ಯ.

ಈ ವಿಷಯಗಳ ಬಗ್ಗೆ ನೀವು ಚಿಂತಿಸಿದಷ್ಟೂ ಮನುಷ್ಯನ ಅಂತಿಮ ಗತಿಯ ಬಗ್ಗೆ ಜಗತ್ತಿನಲ್ಲಿ ಇಂದು ವ್ಯಾಪಕವಾಗಿರುವ ವಿಶ್ವಾಸ ಶ್ರದ್ಧೆಗಳ ಪೈಕಿ ಅತ್ಯಧಿಕ ಮನ ಮುಟ್ಟುವ ವಿಶ್ವಾಸವು ಇದುವೇ ಆಗಿದೆ ಎಂದು ನಿಮ್ಮ ಬುದ್ಧಿಯು ಸ್ವಯಂ ಸಾಕ್ಷ್ಯ ವಹಿಸುವುದು. ಇದರಲ್ಲಿ ಯಾವುದೂ ಬುದ್ಧಿಗೆ ಎಟಕದ ಅಥವಾ ಅಸಾಧ್ಯವಾದ ವಿಷಯವಿಲ್ಲ.

ಮಾತ್ರವಲ್ಲ, ಇಂತಹ ಒಂದು ವಿಷಯವನ್ನು ಮುಹಮ್ಮದ್‌ರಂತಹ(ಸ) ಓರ್ವ ಸತ್ಯ ಪ್ರವಾದಿ ವಿವರಿಸಿರುವಾಗ ಹಾಗೂ ಅದರಲ್ಲಿ ನಮ್ಮ ಪಾಲಿಗೆ ಒಳಿತೇ ಇರುವಾಗ

ಯಾವುದೇ ಪುರಾವೆ ಇಲ್ಲದೆ ಸಂಶಯಗ್ರಸ್ತರಾಗುವುದಕ್ಕಿಂತ ಅದರ ಮೇಲೆ ಪೂರ್ಣವಾಗಿ ವಿಶ್ವಾಸವಿರಿಸುವುದು ವಿವೇಕಯುತವಾಗಿದೆ.

## ಪವಿತ್ರ ವಚನ

ಈ ಐದು ವಿಶ್ವಾಸಗಳ ಮೇಲೆ ಇಸ್ಲಾಮಿನ ಬುನಾದಿ ಸ್ಥಾಪಿಸಲ್ಪಟ್ಟಿದೆ.[1] ಈ ಐದೂ ವಿಶ್ವಾಸಗಳ ಸಾರಾಂಶವು ಈ ಒಂದು ವಚನದಲ್ಲಿ ಬಂದು ಬಿಡುತ್ತದೆ.

ನೀವು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳಿದಾಗ ಎಲ್ಲ ಮಿಥ್ಯ ಆರಾಧ್ಯರನ್ನು ಬಿಟ್ಟು ಒಬ್ಬ ಅಲ್ಲಾಹನ ದಾಸ್ಯ ಮತ್ತು ಆರಾಧನೆಯ ಕರಾರು ಮಾಡುತ್ತೀರಿ ಮತ್ತು 'ಮುಹಮ್ಮದುರ್ರಸೂಲುಲ್ಲಾಹ್' ಎಂದು ಹೇಳಿದಾಗ ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುತ್ತಾರೆಂಬುದನ್ನು ದೃಢೀಕರಿಸುತ್ತೀರಿ. ಪ್ರವಾದಿತ್ವದ ದೃಢೀಕರಣದಲ್ಲಿ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳು, ದೇವಚರರು, ದಿವ್ಯ ಗ್ರಂಥಗಳು, ಪ್ರವಾದಿಗಳು ಮತ್ತು ಪರಲೋಕದ ಬಗ್ಗೆ ಪ್ರವಾದಿವರ್ಯರು(ಸ) ಬೋಧಿಸಿದುದೆಲ್ಲವೂ ಸತ್ಯವೆಂದು ಅಲ್ಲಾಹನ ಆರಾಧನೆ ಮತ್ತು ವಿಧೇಯತೆಯ ಯಾವ ಕ್ರಮವನ್ನು ಪ್ರವಾದಿವರ್ಯರು(ಸ) ತೋರಿಸಿಕೊಟ್ಟಿದ್ದಾರೋ ಅದರ ಅನುಸರಣೆ ಕಡ್ಡಾಯವೆಂದೂ ದೃಢೀಕರಿಸುತ್ತೀರಿ.

---

1. ಇಲ್ಲಿ ಇಸ್ಲಾಮಿನ ಮೂಲ ವಿಶ್ವಾಸಗಳನ್ನು ಐದೆಂದು ಹೇಳಲಾಗಿದೆ. ಈ ಐದೂ ಬುನಾದಿಗಳನ್ನು ಪವಿತ್ರ ಕುರ್‌ಆನಿನ ಈ ಕೆಳಗಿನ ವಾಕ್ಯಗಳಿಂದ ಆಯ್ದುಕೊಳ್ಳಲಾಗಿದೆ.

"ಸಂದೇಶವಾಹಕರು ತನ್ನ ಪ್ರಭುವಿನ ವತಿಯಿಂದ ಅವತೀರ್ಣಗೊಂಡುದರ ಮೇಲೆ ವಿಶ್ವಾಸವಿರಿಸಿದ್ದಾರೆ ಮತ್ತು ಈ ಸಂದೇಶವಾಹಕರ ಮೇಲೆ ವಿಶ್ವಾಸವಿಡುವವರು ಸಹ ಈ ಬೋಧನೆಯನ್ನು ಹೃತ್ಪೂರ್ವಕ ಸ್ವೀಕರಿಸಿದ್ದಾರೆ. ಇವರೆಲ್ಲರೂ ಅಲ್ಲಾಹನಲ್ಲಿಯೂ ಅವನ ದೇವಚರರಲ್ಲಿಯೂ ಅವನ ದಿವ್ಯಗ್ರಂಥಗಳಲ್ಲಿಯೂ ಅವನ ಸಂದೇಶವಾಹಕರಲ್ಲಿಯೂ ವಿಶ್ವಾಸವಿರಿಸುತ್ತಾರೆ. 'ನಾವು ಅಲ್ಲಾಹನ ಸಂದೇಶವಾಹಕರ ನಡುವೆ ಯಾವತ್ತು ತಾರತಮ್ಯವನ್ನಿರಿಸುವುದಿಲ್ಲ. ನಾವು ಆಜ್ಞೆಯನ್ನು ಆಲಿಸಿದೆವು ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು. ನಮ್ಮ ಪ್ರಭೂ, ನಾವು ನಿನ್ನಿಂದ ಪಾಪ ವಿಮೋಚನೆಯನ್ನು ಬಯಸುತ್ತೇವೆ ಮತ್ತು ನಮಗೆ ನಿನ್ನ ಕಡೆಗೇ ಮರಳಲಿಕ್ಕಿದೆ' ಎಂದು ಅವರನ್ನುತ್ತಾರೆ." **(ಅಲ್ ಬಕರ: 285)**

"ಅಲ್ಲಾಹನನ್ನೂ ಅವನ ದೇವಚರರನ್ನೂ, ಅವನ ಗ್ರಂಥಗಳನ್ನೂ, ಅವನ ಸಂದೇಶವಾಹಕರನ್ನೂ, ನಿರ್ಣಾಯಕ ದಿನವನ್ನೂ ನಿರಾಕರಿಸಿದವನು ಪಥಭ್ರಷ್ಟನಾಗಿ ಅಲೆದಾಡುತ್ತ ಬಹುದೂರ ಹೋಗಿ ಬಿಟ್ಟನು." **(ಅನ್ನಿಸಾ: 136)**

ಇನ್ನು ಪ್ರವಾದಿವಚನಗಳಲ್ಲಿ 'ವಿಧಿಯ ಒಳಿತು-ಕೆಡುಕುಗಳ ಮೇಲೆ ವಿಶ್ವಾಸ'ವನ್ನು ಮೂಲ ವಿಶ್ವಾಸಗಳ ಸಾಲಿನಲ್ಲಿ ಸೇರಿಸಲಾಗಿದ್ದು ಆ ಪ್ರಕಾರ ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಐದಾಗಿರದೆ ಆರು ಎಂದು ಪರಿಗಣಿಸಲ್ಪಡುತ್ತದೆ ಎಂಬುದು ಸಂಶಯಾತೀತ. ಆದರೆ ವಾಸ್ತವದಲ್ಲಿ ಈಮಾನ್ ಬಿಲ್ ಕದ್ರ್ ಅಥವಾ ವಿಧಿಯ ಮೇಲಿನ ವಿಶ್ವಾಸವು ಅಲ್ಲಾಹನ ಮೇಲಿನ ವಿಶ್ವಾಸದ ಒಂದಂಗವಾಗಿದ್ದು ಪವಿತ್ರ ಕುರ್‌ಆನಿನಲ್ಲಿ ಈ ವಿಶ್ವಾಸವನ್ನು ಹಾಗೆಯೇ ವಿವರಿಸಲಾಗಿದೆ. ಆದ್ದರಿಂದಲೇ ನಾವು ಈ ವಿಶ್ವಾಸವನ್ನು ಏಕದೇವ ವಿಶ್ವಾಸದ ವಿವರಣೆಯಲ್ಲಿ ವಿವರಿಸಿದ್ದೇವೆ. ಇದೇ ರೀತಿ ಕೆಲವು ಪ್ರವಾದಿ ವಚನಗಳಲ್ಲಿ ಸ್ವರ್ಗ, ನರಕ, ಸಿರಾತ್, ಮೀಝಾನ್‌ಗಳನ್ನು ಬೇರೆ ಬೇರೆ ವಿಶ್ವಾಸದ ನೆಲೆಯಲ್ಲಿ ವಿವರಿಸಲಾಗಿದೆ. ಆದರೆ ವಾಸ್ತವದಲ್ಲಿ ಇವೆಲ್ಲವೂ ಪರಲೋಕ ವಿಶ್ವಾಸದ ಭಾಗಗಳಾಗಿವೆ.

# ಆರಾಧನೆಗಳು

ಹಿಂದಿನ ಅಧ್ಯಾಯದಲ್ಲಿ ಪ್ರವಾದಿ ಮುಹಮ್ಮದ್‌ರು(ಸ) ಐದು ವಿಷಯಗಳ ಮೇಲೆ ವಿಶ್ವಾಸವಿರಿಸಬೇಕೆಂದು ಕಲಿಸಿದ್ದಾರೆ ಎಂದು ತಿಳಿಸಲಾಗಿದೆ–

1. ಏಕದೇವನ ಮೇಲೆ. 2. ದೇವಚರರ ಮೇಲೆ. 3. ಅಲ್ಲಾಹನ ಗ್ರಂಥಗಳ ಮೇಲೆ– ಅದರಲ್ಲೂ ಮುಖ್ಯವಾಗಿ ಪವಿತ್ರ ಕುರ್‌ಆನಿನ ಮೇಲೆ. 4. ಅಲ್ಲಾಹನ ಪ್ರವಾದಿಗಳ ಮೇಲೆ– ಅದರಲ್ಲೂ ಮುಖ್ಯವಾಗಿ ಅಂತಿಮ ಪ್ರವಾದಿ ಹ. ಮುಹಮ್ಮದ್‌ರ(ಸ) ಮೇಲೆ. 5. ಪರಲೋಕ ಜೀವನದ ಮೇಲೆ.

ಇದು ಇಸ್ಲಾಮಿನ ಬುನಾದಿ. ಈ ಐದು ವಿಷಯಗಳ ಮೇಲೆ ವಿಶ್ವಾಸವಿರಿಸಿದಾಗ ನೀವು ಮುಸ್ಲಿಮರ ಕೂಟದಲ್ಲಿ ಸೇರುತ್ತೀರಿ. ಆದರೆ ನೀವಿನ್ನೂ ಪೂರ್ಣವಾಗಿ ಮುಸ್ಲಿಮ್ ಆಗಿಲ್ಲ. ಒಬ್ಬ ವ್ಯಕ್ತಿಯು ಪೂರ್ಣವಾಗಿ ಮುಸ್ಲಿಮ್ ಆಗುವುದು ಪ್ರವಾದಿವರ್ಯರು ಅಲ್ಲಾಹನ ವತಿಯಿಂದ ನೀಡಿದ ಆಜ್ಞೆಗಳನ್ನು ಅನುಸರಿಸಿದಾಗ ಮಾತ್ರ. ಏಕೆಂದರೆ ವಿಶ್ವಾಸವಿರಿಸುವುದರ ಜೊತೆಗೆ ಅನುಸರಣೆಯೂ ನಿಮ್ಮ ಮೇಲೆ ಕಡ್ಡಾಯವಾಗಿದೆ ಮತ್ತು ಆ ಅನುಸರಣೆಯ ಹೆಸರೇ ಇಸ್ಲಾಮ್ ಎಂದಾಗಿದೆ.

ಅಲ್ಲಾಹನೇ ನಿಮ್ಮ ದೇವನೆಂದು ನೀವು ಒಪ್ಪಿಕೊಂಡಿದ್ದೀರಿ. ಅವನು ನಿಮ್ಮ ಒಡೆಯನೂ ನೀವು ಅವನ ದಾಸರೂ ಆಗಿರುವಿರೆಂದೇ ಇದರ ಅರ್ಥ. ಅವನು ನಿಮ್ಮ ಆಜ್ಞಾಧಿಕಾರಿಯಾಗಿದ್ದು, ನೀವು ಅವನ ಆಜ್ಞಾಪಾಲಕರಾಗಿರುತ್ತೀರಿ. ಈಗ ನೀವು ಅವನನ್ನು ಒಡೆಯ ಮತ್ತು ಆಜ್ಞಾಧಿಕಾರಿ ಎಂದು ಒಪ್ಪಿಯೂ ಅವನಿಗೆ ಅವಿಧೇಯರಾದರೆ ನಿಮ್ಮ ವಿಶ್ವಾಸದ ಪ್ರಕಾರ ನೀವು ವಿದ್ರೋಹಿ ಮತ್ತು ಅಪರಾಧಿ ಎನಿಸುತ್ತೀರಿ. ಪವಿತ್ರ ಕುರ್‌ಆನ್ ಅಲ್ಲಾಹನ ಗ್ರಂಥವೆಂಬುದನ್ನು ನೀವು ಒಪ್ಪಿಕೊಂಡಿದ್ದೀರಿ. ಪವಿತ್ರ ಕುರ್‌ಆನಿನಲ್ಲಿ ಇರುವುದೆಲ್ಲವೂ ಅಲ್ಲಾಹನ ಆಜ್ಞೆಗಳಾಗಿವೆ. ಆದ್ದರಿಂದ ಅದರ ಪ್ರತಿಯೊಂದು ಮಾತನ್ನು ಒಪ್ಪುವುದು ಮತ್ತು ಪ್ರತಿಯೊಂದು ವಿಧಿಯನ್ನು ಪಾಲಿಸುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ. ಹ. ಮುಹಮ್ಮದರು(ಸ) ಅಲ್ಲಾಹನ ಪ್ರವಾದಿ ಯಾಗಿದ್ದಾರೆಂಬುದನ್ನು ನೀವು ಒಪ್ಪಿಕೊಂಡಿದ್ದೀರಿ. ವಾಸ್ತವದಲ್ಲಿ ಪ್ರವಾದಿವರ್ಯರು

ಯಾವುದನ್ನು ಆಜ್ಞಾಪಿಸುತ್ತಾರೆ ಮತ್ತು ಯಾವುದರಿಂದ ತಡೆಯುತ್ತಾರೆ, ಅದೆಲ್ಲವೂ ಅಲ್ಲಾಹನ ವತಿಯಿಂದಲೇ ಆಗಿದೆ ಎಂಬುದೇ ಈ ಒಪ್ಪಿಗೆಯ ತಾತ್ಪರ್ಯ. ಈ ಒಪ್ಪಿಗೆಯ ಬಳಿಕ ಪ್ರವಾದಿವರ್ಯರ ಅನುಸರಣೆಯು ನಿಮ್ಮ ಮೇಲೆ ಕಡ್ಡಾಯವಾಗುತ್ತದೆ. ಆದ್ದರಿಂದ ನಿಮ್ಮ ಕರ್ತವ್ಯ ನಿಮ್ಮ ವಿಶ್ವಾಸಕ್ಕೆ ಅನುಗುಣವಾಗಿ ಆದಾಗಲೇ ನೀವು ಪೂರ್ಣ ಮುಸ್ಲಿಮ್ ಆಗುತ್ತೀರಿ. ಅನ್ಯಥಾ ಎಷ್ಟರ ಮಟ್ಟಿಗೆ ನಿಮ್ಮ ವಿಶ್ವಾಸ ಮತ್ತು ಕರ್ಮಗಳಲ್ಲಿ ಅಂತರವಿರುವುದೋ ಅಷ್ಟರ ಮಟ್ಟಿಗೆ ನಿಮ್ಮ ವಿಶ್ವಾಸವು ಅಪೂರ್ಣವಾಗಿರುತ್ತದೆ.

ಪ್ರವಾದಿವರ್ಯರು(ಸ) ಅಲ್ಲಾಹನ ಇಚ್ಛೆಯ ಮೇರೆಗೆ ಜೀವನ ಸಾಗಿಸುವ ಯಾವ ವಿಧಾನವನ್ನು ನಮಗೆ ಕಲಿಸಿದ್ದಾರೆಂದೂ ಯಾವ ವಿಷಯಗಳನ್ನು ಮಾಡಲು ಆಜ್ಞಾಪಿಸಿದ್ದಾರೆಂದೂ ಯಾವುದರಿಂದ ತಡೆದಿದ್ದಾರೆಂದೂ ಈಗ ತಿಳಿಯೋಣ. ಈ ನಿಟ್ಟಿನಲ್ಲಿ ಮೊಟ್ಟ ಮೊದಲನೆಯ ವಿಷಯವು ನಮ್ಮ ಮೇಲೆ ಕಡ್ಡಾಯಗೊಳಿಸಲ್ಪಟ್ಟಿರುವಂತಹ ಇಬಾದತ್(ಆರಾಧನೆ)ಗಳಾಗಿವೆ.

**ಇಬಾದತ್‌ನ ತಾತ್ಪರ್ಯ:** ಇಬಾದತ್‌ನ ಅರ್ಥ ವಾಸ್ತವದಲ್ಲಿ ದಾಸ್ಯ ಎಂದಾಗಿದೆ. ನಾವು ದಾಸರಾಗಿದ್ದು ಅಲ್ಲಾಹನು ನಮ್ಮ ಆರಾಧ್ಯನಾಗಿದ್ದಾನೆ. ದಾಸನು ತನ್ನ ಆರಾಧ್ಯನ ಅನುಸರಣೆಯಲ್ಲಿ ಮಾಡುವುದೆಲ್ಲವೂ ಇಬಾದತ್ ಆಗಿದೆ. ಉದಾಹರಣೆಗೆ ನೀವು ಜನರೊಂದಿಗೆ ಮಾತನಾಡುತ್ತೀರಿ. ಈ ಮಾತುಕತೆಯ ಮಧ್ಯೆ ನೀವು ಸುಳ್ಳು, ಪರನಿಂದೆ ಮತ್ತು ಅಶ್ಲೀಲ ಮಾತುಗಳಿಂದ (ಅವುಗಳನ್ನು ಅಲ್ಲಾಹನು ನಿಷೇಧಿಸಿರುವನು ಎಂಬ ಕಾರಣಕ್ಕೆ) ದೂರವಿದ್ದರೆ ಮತ್ತು ಸದಾ ಸತ್ಯ, ನ್ಯಾಯ, ಪುಣ್ಯ ಮತ್ತು ಪರಿಶುದ್ಧ ಮಾತುಗಳನ್ನು (ಅವುಗಳನ್ನು ಅಲ್ಲಾಹನು ಮೆಚ್ಚುತ್ತಾನೆಂಬ ಕಾರಣಕ್ಕಾಗಿ) ಆಡಿದರೆ, ನಿಮ್ಮ ಈ ಎಲ್ಲ ಮಾತುಕತೆ ಇಬಾದತ್ ಎನಿಸುವುದು. ಅದೆಲ್ಲವೂ ಲೌಕಿಕ ವ್ಯವಹಾರದ ಮಾತುಕತೆಯಾಗಿದ್ದರೂ ಸರಿಯೆ. ನೀವು ಜನರೊಂದಿಗೆ ವ್ಯವಹಾರ ಮಾಡುತ್ತೀರಿ. ಪೇಟೆಯಲ್ಲಿ ವ್ಯಾಪಾರ ವಹಿವಾಟು ಮಾಡುತ್ತೀರಿ. ಮನೆಯಲ್ಲಿ ನಿಮ್ಮ ತಂದೆ, ತಾಯಿ ಗಳು ಮತ್ತು ಸೋದರ ಸೋದರಿಯರೊಂದಿಗೆ ಸಹಜೀವನ ನಡೆಸುತ್ತೀರಿ. ನಿಮ್ಮ ಸ್ನೇಹಿತರ ಮತ್ತು ನೆಂಟರಿಷ್ಟರ ಜತೆ ಬೆರೆಯುತ್ತೀರಿ– ಒಂದು ವೇಳೆ ಜೀವನದ ಈ ಎಲ್ಲ ವ್ಯವಹಾರಗಳಲ್ಲಿ ಅಲ್ಲಾಹನ ಆಜ್ಞೆಗಳನ್ನು ಮತ್ತು ಅವನ ಕಾನೂನನ್ನು ಪರಿಗಣಿಸುತ್ತಿದ್ದರೆ, ಪ್ರತಿಯೊಬ್ಬರ ಹಕ್ಕುಗಳನ್ನು ಅಲ್ಲಾಹನು ಅದನ್ನು ಆಜ್ಞಾಪಿಸಿದ್ದಾನೆ ಎಂದು ಭಾವಿಸಿ ಸಂದಾಯ ಮಾಡಿದರೆ ಮತ್ತು ಅಲ್ಲಾಹನು ತಡೆದಿದ್ದಾನೆಂದು ತಿಳಿದು ಯಾರ ಹಕ್ಕುಚ್ಯುತಿಯನ್ನೂ ಮಾಡದಿದ್ದರೆ ನಿಮ್ಮ ಈ ಸಂಪೂರ್ಣ ಜೀವನವು ಅಲ್ಲಾಹನ ಇಬಾದತ್‌ನಲ್ಲಿಯೇ ಸಾಗಿತೆಂದರ್ಥ. ನೀವು ಬಡವನಿಗೆ ನೆರವಾದರೆ, ಹಸಿದವನಿಗೆ ಉಣಿಸಿದರೆ, ರೋಗಿಯ ಸೇವೆ ಮಾಡಿದರೆ ಹಾಗೂ ಈ ಎಲ್ಲ ಕಾರ್ಯ ಗಳನ್ನು ನಿಮ್ಮ ಯಾವುದೇ ವ್ಯಕ್ತಿಗತ ಲಾಭಕ್ಕಾಗಿ ಅಥವಾ ಗೌರವ ಮತ್ತು ಕೀರ್ತಿಗಾಗಿ ಮಾಡದೆ ಕೇವಲ ಅಲ್ಲಾಹನ ಮೆಚ್ಚುಗೆಯನ್ನು ಗಳಿಸುವುದಕ್ಕಾಗಿ ಮಾಡಿದರೆ ಇವೆಲ್ಲವೂ

ಅಲ್ಲಾಹನ ಇಬಾದತ್ ಎನಿಸುವುದು. ನೀವು ವ್ಯಾಪಾರ, ಉದ್ದಿಮೆ ಅಥವಾ ನೌಕರಿಯನ್ನು ಅಲ್ಲಾಹನನ್ನು ಭಯಪಡುತ್ತಾ ಪೂರ್ಣಸತ್ಯ ಮತ್ತು ಪ್ರಾಮಾಣಿಕತೆಯೊಂದಿಗೆ ಮಾಡಿದರೆ, ಧರ್ಮಬದ್ಧವಾಗಿ ಸಂಪಾದಿಸಿ ನಿಷಿದ್ಧ ಸಂಪಾದನೆಯಿಂದ ದೂರವಿದ್ದರೆ, ನಿಮ್ಮ ಈ ಸಂಪಾದನೆಯು ಅಲ್ಲಾಹನ ಇಬಾದತ್ ಎಂದು ಪರಿಗಣಿಸಲ್ಪಡುವುದು. ವಸ್ತುತಃ ನೀವು ಉಪಜೀವನಕ್ಕಾಗಿಯೇ ಈ ಎಲ್ಲಾ ಕೆಲಸಗಳನ್ನು ಮಾಡಿರುತ್ತೀರಿ. ಒಟ್ಟಿನಲ್ಲಿ, ಲೌಕಿಕ ಜೀವನದಲ್ಲಿ ಸದಾ ಎಲ್ಲ ವಿಷಯಗಳಲ್ಲೂ ಅಲ್ಲಾಹನನ್ನು ಭಯಪಡುವುದು, ಅವನ ಮೆಚ್ಚುಗೆಯನ್ನೇ ದೃಷ್ಟಿಯಲ್ಲಿರಿಸುವುದು, ಅವನ ಕಾನೂನನ್ನು ಅನುಸರಿಸುವುದು ಅವನ ಅವಿಧೇಯತೆಯಿಂದ ಸಿಗಬಹುದಾದ ಎಲ್ಲಾ ಲಾಭಗಳನ್ನು ತೊರೆಯುವುದು ಮತ್ತು ಅವನ ವಿಧೇಯತೆಯಲ್ಲಿ ಬರಬಹುದಾದಂತಹ ಎಲ್ಲ ನಷ್ಟಗಳನ್ನು ಸಹಿಸುವುದು ಅಲ್ಲಾಹನ ಇಬಾದತ್ ಆಗಿದೆ. ಈ ರೀತಿಯ ಜೀವನವು ಸಾದ್ಯಂತ ಇಬಾದತ್ ಆಗಿದೆ. ಒಟ್ಟಿನಲ್ಲಿ ಇಂತಹ ಜೀವನದಲ್ಲಿ ತಿನ್ನುವುದು, ಕುಡಿಯುವುದು, ಮಲಗುವುದು, ಏಳುವುದು, ನಡೆದಾಡುವುದು, ಮಾತುಕತೆ ನಡೆಸುವುದು ಎಲ್ಲವೂ ಇಬಾದತ್‌ನಲ್ಲಿ ಸೇರಿದೆ.

ಇದು ಇಬಾದತ್‌ನ ನೈಜ ತಾತ್ಪರ್ಯ. ಒಬ್ಬ ಮುಸ್ಲಿಮನನ್ನು ಇಂತಹ ಇಬಾದತ್ ಮಾಡುವವನಾಗಿ ಮಾರ್ಪಡಿಸುವುದೇ ಇಸ್ಲಾಮಿನ ನೈಜ ಧ್ಯೇಯ. ಈ ಉದ್ದೇಶಕ್ಕಾಗಿ ಇಸ್ಲಾಮಿನಲ್ಲಿ ಕೆಲವು ಇಬಾದತ್‌ಗಳನ್ನು ಕಡ್ಡಾಯಗೊಳಿಸಲಾಗಿದೆ. ಅವು ಮನುಷ್ಯನನ್ನು ಈ ದೊಡ್ಡ ಇಬಾದತ್‌ಗೆ ಸಿದ್ಧಗೊಳಿಸುತ್ತವೆ. ಈ ವಿಶಿಷ್ಟ ಇಬಾದತ್‌ಗಳು ಆ ದೊಡ್ಡ ಇಬಾದತ್‌ಗಾಗಿರುವ ತರಬೇತಿ ಕಾರ್ಯಕ್ರಮದಂತಿದೆ. ಈ ತರಬೇತಿಯನ್ನು ಸರಿಯಾಗಿ ಗಳಿಸಿದವನು ಆ ನೈಜ ಇಬಾದತನ್ನು ಅಷ್ಟೇ ಉತ್ತಮವಾಗಿ ನಿರ್ವಹಿಸಬಲ್ಲನು. ಆದ್ದರಿಂದ ಈ ವಿಶಿಷ್ಟ ಇಬಾದತ್‌ಗಳನ್ನು ಕಡ್ಡಾಯ ವಿಧಿಗಳು ಎಂದು ಕರೆಯಲಾಗಿದೆ ಮತ್ತು ಅವುಗಳನ್ನು ಇಸ್ಲಾಮಿನ ಸ್ತಂಭಗಳು ಎಂದೂ ಕರೆಯಲಾಗಿದೆ. ಯಾವ ರೀತಿ ಒಂದು ಕಟ್ಟಡವು ಕೆಲವು ಸ್ತಂಭಗಳ ಮೇಲೆ ನಿಂತಿರುತ್ತದೋ ಅದೇ ರೀತಿ ಇಸ್ಲಾಮೀ ಜೀವನದ ಕಟ್ಟಡವು ಈ ಸ್ತಂಭಗಳ ಮೇಲೆ ನಿಂತಿರುತ್ತದೆ. ಅವುಗಳನ್ನು ಒಡೆದರೆ ಇಸ್ಲಾಮಿನ ಕಟ್ಟಡವನ್ನೇ ಬೀಳಿಸಿದಂತಾಗುವುದು.

## ನಮಾಝ್

ಈ ಕಡ್ಡಾಯ ಕರ್ತವ್ಯಗಳ ಪೈಕಿ ಮೊದಲನೆಯದು ನಮಾಝ್ ಆಗಿದೆ. ನಮಾಝ್ ಎಂದರೇನು? ಯಾವ ವಿಷಯಗಳ ಮೇಲೆ ನೀವು ವಿಶ್ವಾಸವಿರಿಸಿರುವಿರೋ ನಮಾಝ್ ದಿನಕ್ಕೆ ಐದು ಸಲ ಮಾತು ಮತ್ತು ಕೃತಿಯ ಮೂಲಕ ಆ ವಿಶ್ವಾಸದ ಪುನರಾವರ್ತನೆಯಾಗಿದೆ. ನೀವು ಬೆಳಿಗ್ಗೆ ಎದ್ದು ಮೊಟ್ಟಮೊದಲು ಶುದ್ಧವಾಗಿ ಅಲ್ಲಾಹನ ಮುಂದೆ ಹಾಜರಾಗುತ್ತೀರಿ. ಅವನ ಮುಂದೆ ನಿಂತು, ಕುಳಿತು, ಶಿರಬಾಗಿ,

ಸಾಷ್ಟಾಂಗವೆರಗಿ ನಿಮ್ಮ ದಾಸ್ಯದ ಕರಾರು ಮಾಡುತ್ತೀರಿ. ಅವನ ಸಹಾಯ ಯಾಚಿಸುತ್ತೀರಿ. ಅವನಿಂದ ಸನ್ಮಾರ್ಗದರ್ಶನವನ್ನು ಯಾಚಿಸುತ್ತೀರಿ. ಅವನಲ್ಲಿ ವಿಧೇಯತೆಯ ಪ್ರತಿಜ್ಞೆಯನ್ನು ನವೀಕರಿಸುತ್ತೀರಿ. ಅವನ ಸಂಪ್ರೀತಿಯನ್ನು ಬಯಸುವ ಮತ್ತು ಅವನ ಕ್ರೋಧದಿಂದ ಪಾರಾಗುವ ಬಯಕೆಯನ್ನು ಪದೇ ಪದೇ ಪುನರಾವರ್ತಿಸುತ್ತೀರಿ. ಅವನ ಗ್ರಂಥದ ಪಾಠವನ್ನು ಪುನರಾವರ್ತಿಸುತ್ತೀರಿ. ಅವನ ಪ್ರವಾದಿಯ ಸತ್ಯತೆಯ ಸಾಕ್ಷ್ಯ ವಹಿಸುತ್ತೀರಿ. ಅವನ ಮುಂದೆ ನಿಮ್ಮ ಕರ್ಮಗಳ ವಿಚಾರಣೆಗಾಗಿ ಹಾಜರಾಗುವ ದಿನವನ್ನು ಸ್ಮರಿಸುತ್ತೀರಿ. ಈ ರೀತಿ ನಿಮ್ಮ ದಿನವು ಆರಂಭ ವಾಗುತ್ತದೆ. ಕೆಲವು ಗಂಟೆಗಳ ಕಾಲ ನೀವು ನಿಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗುತ್ತೀರಿ. ಆಗ ಝೊಹರ್‌ನ ಅದಾನ್ ಕರೆಯು ನಿಮ್ಮನ್ನು ಪುನಃ ಹಾಜರಾಗಿ ಕೆಲವು ನಿಮಿಷಗಳ ಮಟ್ಟಿಗೆ ಆ ಪಾಠವನ್ನು ಪುನರಾವರ್ತಿಸುವಂತೆ ಆಹ್ವಾನಿಸಿದಾಗ, ಅದನ್ನು ಮರೆತು ಅಲ್ಲಾಹನಿಂದ ಅಲಕ್ಷ್ಯರಾಗಿ ಬಿಡದಂತೆ– ನೀವು ಎದ್ದು ಪುನಃ ನಿಮ್ಮ ವಿಶ್ವಾಸವನ್ನು ನವೀಕರಿಸಿ ಪುನಃ ನಿಮ್ಮ ಲೌಕಿಕ ಕೆಲಸ–ಕಾರ್ಯಗಳತ್ತ ಮರಳುತ್ತೀರಿ. ಕೆಲವೇ ಗಂಟೆಗಳ ಬಳಿಕ ಪುನಃ ಅಸರ್ ನಮಾಝ್‌ಗಾಗಿ ನಿಮ್ಮನ್ನು ಕರೆಯಲಾಗುತ್ತದೆ. ನೀವು ಮತ್ತೆ ನಿಮ್ಮ ವಿಶ್ವಾಸವನ್ನು ನವೀಕರಿಸುತ್ತೀರಿ. ಆ ಬಳಿಕ ಸೂರ್ಯಾಸ್ತಮಾನವಾಗಿ ರಾತ್ರಿ ಆರಂಭವಾಗುತ್ತದೆ. ರಾತ್ರಿಯಲ್ಲಿ ಆ ಪಾಠವನ್ನು ಮರೆತು ಪಥಭ್ರಷ್ಟರಾಗಿ ಬಿಡದಂತೆ ನೀವು ಯಾವ ಇಬಾದತ್‌ನೊಂದಿಗೆ ನಿಮ್ಮ ದಿನವನ್ನು ಆರಂಭಿಸಿದ್ದಿರೋ ಅದೇ ಇಬಾದತ್‌ನೊಂದಿಗೆ ನಿಮ್ಮ ರಾತ್ರಿಯನ್ನು ಆರಂಭಿಸುತ್ತೀರಿ. ಕೆಲವೇ ಗಂಟೆಗಳ ಬಳಿಕ ಪುನಃ ಇಶಾ ನಮಾಝ್‌ನ ವೇಳೆ ಯಾಗುತ್ತದೆ. ಇನ್ನು ಮಲಗುವ ಸಮಯವಾಗುವಾಗ ಕೊನೆಯ ಬಾರಿ ನಿಮಗೆ ಸತ್ಯವಿಶ್ವಾಸದ ಎಲ್ಲ ಪಾಠವನ್ನು ಮತ್ತೆ ಜ್ಞಾಪಿಸಿ ಕೊಡಲಾಗುತ್ತದೆ. ಏಕೆಂದರೆ ಅದು ಪ್ರಶಾಂತಿಯ ಕಾಲ. ಒಂದು ವೇಳೆ ದಿನದ ಬಿಡುವಿಲ್ಲದ ಕೆಲಸ–ಕಾರ್ಯಗಳಲ್ಲಿ ನಿಮಗೆ ಅದರ ಬಗ್ಗೆ ಸಂಪೂರ್ಣವಾಗಿ ಗಮನ ಹರಿಸುವ ಸಂದರ್ಭ ಸಿಕ್ಕಿರದಿದ್ದರೆ ಈಗ ಸಾವಕಾಶವಾಗಿ ಆ ಕಡೆ ಪೂರ್ಣ ಗಮನ ಹರಿಸುವಂತೆ ವ್ಯವಸ್ಥೆ ಮಾಡಲಾಗಿದೆ.

ಇದು ದಿನಂಪ್ರತಿ ಐದು ಬಾರಿ ನಿಮ್ಮ ಇಸ್ಲಾಮಿನ ಬುನಾದಿಯನ್ನು ಸುದೃಢ ಗೊಳಿಸುತ್ತಿರುತ್ತದೆ. ಇದು ನಾವು ಈಗಾಗಲೇ ವಿವರಿಸಿರುವಂತಹ ದೊಡ್ಡ ಇಬಾದತ್‌ಗಾಗಿ ನಿಮ್ಮನ್ನು ಪುನಃ ಪುನಃ ಸಿದ್ಧಗೊಳಿಸುತ್ತದೆ. ಯಾವ ವಿಶ್ವಾಸಗಳ ಮೇಲೆ ನಿಮ್ಮ ಆತ್ಮ ಸಂಸ್ಕರಣೆ, ಪ್ರಗತಿ, ನೈತಿಕ ಸುಧಾರಣೆ ಅವಲಂಬಿಸಿದೆಯೋ ಅವುಗಳನ್ನು ನವೀಕರಿಸುತ್ತಿ ರುತ್ತದೆ. ವುಝೂ ಮಾಡುವಾಗ ನೀವು ಪ್ರವಾದಿವರ್ಯರು(ಸ) ತೋರಿಸಿಕೊಟ್ಟ ಕ್ರಮವನ್ನು ಯಾಕೆ ಪಾಲಿಸುತ್ತೀರಿ. ನಮಾಝ್‌ನಲ್ಲಿ ಪ್ರವಾದಿ(ಸ) ಬೋಧಿಸಿದ ಎಲ್ಲ ವಿಷಯಗಳನ್ನು ಏಕೆ ಪಠಿಸುತ್ತೀರಿ ಎಂಬುದರ ಬಗ್ಗೆ ಚಿಂತಿಸಿ ನೋಡಿ. ಏಕೆಂದರೆ ನೀವು ಪ್ರವಾದಿ ಮುಹಮ್ಮದ್‌ರ(ಸ) ಅನುಸರಣೆಯನ್ನು ಕಡ್ಡಾಯವೆಂದು ಭಾವಿಸುತ್ತೀರಿ.

ಕುರ್‌ಆನನ್ನು ನೀವೇಕೆ ಉದ್ದೇಶಪೂರ್ವಕವಾಗಿ ತಪ್ಪಾಗಿ ಓದುವುದಿಲ್ಲ? ಏಕೆಂದರೆ ಅದು ದೇವವಾಣಿಯಾಗಿದೆಯೆಂಬ ದೃಢವಿಶ್ವಾಸ ನಿಮಗಿದೆ. ನಮಾಝ್‌ನಲ್ಲಿ ಯಾವುದನ್ನು ಮೌನವಾಗಿ ಪಠಿಸಬೇಕೋ ಅದನ್ನು ಪಠಿಸದಿದ್ದರೆ ಅಥವಾ ಅದರ ಸ್ಥಾನದಲ್ಲಿ ಇನ್ನೇನಾದರೂ ಪಠಿಸಿದರೆ ನಿಮಗೆ ಯಾರ ಭಯವಿದೆ? ಅದನ್ನು ಯಾರೂ ಆಲಿಸುವುದಿಲ್ಲ. ನೀವು ಮೌನವಾಗಿ ಪಠಿಸುವುದನ್ನು ಅಲ್ಲಾಹನು ಆಲಿಸುತ್ತಾನೆಂದೂ ಯಾವ ರಹಸ್ಯ ಕರ್ಮವೂ ಅವನಿಂದ ಮರೆಯಾಗಿಲ್ಲವೆಂದೂ ನೀವು ದೃಢವಾಗಿ ನಂಬುತ್ತೀರಿ. ಯಾರೂ ನೋಡುವವರಿಲ್ಲದ ಸ್ಥಳದಲ್ಲಿ ಯಾವ ವಸ್ತು ನಿಮ್ಮನ್ನು ನಮಾಝ್‌ಗಾಗಿ ಏಳುವಂತೆ ಮಾಡುತ್ತದೆ? ಅಲ್ಲಾಹನು ನಿಮ್ಮನ್ನು ನೋಡುತ್ತಿರುವನೆಂಬ ನಂಬಿಕೆಯಲ್ಲವೇ? ಅತ್ಯಂತ ಅಗತ್ಯದ ಕೆಲಸವನ್ನೂ ಬದಿಗೊತ್ತಿ ನಿಮ್ಮನ್ನು ನಮಾಝ್‌ಗೆ ಹೋಗುವಂತೆ ಮಾಡುವ ವಸ್ತು ಯಾವುದು? ನಮಾಝನ್ನು ಅಲ್ಲಾಹನು ನಿಮ್ಮ ಮೇಲೆ ಕಡ್ಡಾಯಗೊಳಿಸಿರುವನು ಎಂಬ ಪ್ರಜ್ಞೆಯಲ್ಲವೇ? ಚಳಿಗಾಲದ ಮುಂಜಾನೆ, ಸೆಕೆಗಾಲದ ಮಧ್ಯಾಹ್ನ ಮತ್ತು ನಿತ್ಯ ಸಂಜೆಯ ಮನೋರಂಜನೆಯ ಸಮಯಗಳಲ್ಲಿ ನಿಮ್ಮನ್ನು ನಮಾಝ್ ಮಾಡುವಂತೆ ಒತ್ತಾಯಿಸುವ ವಸ್ತು ಕರ್ತವ್ಯ ಪ್ರಜ್ಞೆಯಲ್ಲದೆ ಇನ್ನೇನು? ಇನ್ನು ನಮಾಝ್ ಮಾಡುವಾಗ ಉದ್ದೇಶ ಪೂರ್ವಕ ತಪ್ಪು ಮಾಡದಂತೆ ಯಾವ ಭಯ ನಿಮ್ಮನ್ನು ತಡೆಯುತ್ತದೆ? ಇದು ಅಲ್ಲಾಹನ ಭಯವಲ್ಲವೇ? ಅವನ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಹಾಜರಾಗಲಿಕ್ಕಿದೆಯೆಂಬ ವಿಶ್ವಾಸವಲ್ಲವೇ? ಪೂರ್ಣ ಮತ್ತು ನಿಷ್ಠಾವಂತ ಮುಸ್ಲಿಮನಾಗಿ ಮಾಡುವಲ್ಲಿ ನಮಾಝ್‌ಗಿಂತ ಉತ್ತಮ ತರಬೇತಿ ಇನ್ನಾವುದಾದರೂ ಇದೆಯೇ? ಓರ್ವ ಮುಸ್ಲಿಮನ ಮಟ್ಟಿಗೆ, ದಿನನಿತ್ಯ ಅನೇಕ ಸಲ ಅಲ್ಲಾಹನ ಸ್ಮರಣೆ, ಅವನ ಭಯ ಹಾಗೂ ಅವನು ಸರ್ವಜ್ಞನೂ ಸರ್ವವ್ಯಾಪಿಯೂ ಆಗಿರುವನೆಂಬ ನಂಬಿಕೆ ಮತ್ತು ದೇವ ನ್ಯಾಯಾಲಯದಲ್ಲಿ ಹಾಜರಾಗಲಿರುವ ವಿಶ್ವಾಸವನ್ನು ನವೀಕರಿಸುವುದು, ದಿನನಿತ್ಯ ಅನೇಕ ಸಲ ಕಡ್ಡಾಯವಾಗಿ ಪ್ರವಾದಿವರ್ಯರನ್ನು(ಸ) ಅನುಸರಿಸುವಂತೆ ಮಾಡುವುದು ಮತ್ತು ಬೆಳಗಿನಿಂದ ರಾತ್ರಿಯ ತನಕ ಪ್ರತಿ ಕೆಲವು ಗಂಟೆಗಳ ಬಳಿಕ ಅವನಿಗೆ ಕರ್ತವ್ಯ ನಿರ್ವಹಣೆಯ ಅಭ್ಯಾಸ ಮಾಡಿಸುವುದು- ಇದಕ್ಕಿಂತ ಉತ್ತಮ ತರಬೇತಿ ಇನ್ನಾವುದಿದೆ? ಇಂತಹ ವ್ಯಕ್ತಿಯು ನಮಾಝ್ ಮುಗಿಸಿ ತನ್ನ ಲೌಕಿಕ ಕಾರ್ಯಗಳಲ್ಲಿ ನಿರತನಾದಾಗಲೂ ಅಲ್ಲಾಹನನ್ನು ಭಯಪಡುವನು, ಅವನ ಕಾನೂನನ್ನು ಅನುಸರಿಸುವನು ಮತ್ತು ಅಲ್ಲಾಹನು ತನ್ನನ್ನು ನೋಡುತ್ತಿರುವನೆಂಬ ಪ್ರಜ್ಞೆಯೊಂದಿಗೆ ಪ್ರತಿಯೊಂದು ಪಾಪ ಕೃತ್ಯದಿಂದ ದೂರ ಉಳಿಯುವನು ಎಂದು ಖಂಡಿತ ನಿರೀಕ್ಷಿಸ ಬಹುದು. ಇಷ್ಟು ಉನ್ನತ ಮಟ್ಟದ ತರಬೇತಿಯ ಬಳಿಕವೂ ಅಲ್ಲಾಹನಿಂದ ನಿರ್ಭಯ ನಾಗಿದ್ದು ಅವನ ಆಜ್ಞೋಲ್ಲಂಘನೆಯನ್ನು ತೊರೆಯದಿದ್ದರೆ ಅದು ನಮಾಝ್‌ನ ದೋಷವಾಗಿರದೆ ಸ್ವಯಂ ಆ ವ್ಯಕ್ತಿಯ ಕೊರತೆಯಾಗಿದೆ.

ಅಲ್ಲಾಹನು ನಮಾಝನ್ನು ಸಂಘಟಿತವಾಗಿ ನಿರ್ವಹಿಸಲು ಆಜ್ಞಾಪಿಸಿರುವನು. ವಿಶೇಷವಾಗಿ ವಾರಕ್ಕೊಮ್ಮೆ ಜುಮಾ ನಮಾಝನ್ನು ಜಮಾಅತ್ ಸಹಿತ ನಿರ್ವಹಿಸುವುದು ಕಡ್ಡಾಯವಾಗಿದೆ. ಇದು ಮುಸ್ಲಿಮರಲ್ಲಿ ಏಕತೆ ಮತ್ತು ಸಮಾನತೆಯನ್ನು ಉಂಟುಮಾಡುವ ವಸ್ತುವಾಗಿದೆ. ಅದು ಅವರೆಲ್ಲರೂ ಸೇರಿ ಒಬ್ಬನೇ ದೇವನ ಆರಾಧನೆ ಮಾಡುವಾಗ, ಎಲ್ಲರೂ ಒಟ್ಟಾಗಿ ನಿಲ್ಲುವಾಗ, ಕುಳಿತುಕೊಳ್ಳುವಾಗ, ತನ್ನಿಂತಾನೇ ಅವರ ಮನಸ್ಸು ಪರಸ್ಪರ ಬೆರೆಯುತ್ತದೆ ಮತ್ತು ಅವರೆಲ್ಲರೂ ಪರಸ್ಪರ ಸೋದರರು ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಇದೇ ನಮಾಝ್ ಅವರನ್ನು ಒಬ್ಬ ನಾಯಕನ ಅನುಸರಣೆ ಮಾಡುವ ಗುಣವನ್ನು ಸೃಷ್ಟಿಸಿ ಅವರಲ್ಲಿ ಶಿಸ್ತುಬದ್ಧತೆಯನ್ನು ಉಂಟುಮಾಡುತ್ತದೆ. ಇದರಲ್ಲಿ ಅವರ ಮಧ್ಯೆ ಪರಸ್ಪರ ಅನುಕಂಪ ಉಂಟಾಗುತ್ತದೆ. ಸಮಾನತೆ ಮತ್ತು ಸಾಮರಸ್ಯ ಉಂಟಾಗುತ್ತದೆ. ಶ್ರೀಮಂತ-ಬಡವ, ದೊಡ್ಡವ-ಸಣ್ಣವ, ಉನ್ನತ ಹುದ್ದೆಯವ ಮತ್ತು ಸಾಮಾನ್ಯ ಪೇದೆ ಎಲ್ಲರೂ ಒಟ್ಟಾಗಿ ನಿಲ್ಲುತ್ತಾರೆ. ಯಾವುದೇ ಉಚ್ಚ-ನೀಚತೆಯಾಗಲೀ, ಭೇದಭಾವವಾಗಲೀ ಅವರ ಮಧ್ಯೆ ಇರುವುದಿಲ್ಲ.

ನಿಮ್ಮ ನಮಾಝ್‌ನಿಂದ ನಿಮಗೆ ದೊರಕುವ ಅಸಂಖ್ಯ ಲಾಭಗಳ ಪೈಕಿ ಇದು ಕೆಲವು ಮಾತ್ರ. ಅಲ್ಲಾಹನು ನಿಮ್ಮ ಪ್ರಯೋಜನಕ್ಕಾಗಿ ಅದನ್ನು ನಿಮ್ಮ ಮೇಲೆ ಕಡ್ಡಾಯಗೊಳಿಸಿದ್ದಾನೆ. ನೀವು ನಮಾಝ್ ಮಾಡದಿದ್ದರೆ ಅಲ್ಲಾಹನು ಕುಪಿತ ಗೊಳ್ಳುವುದು ಅವನಿಗೇನಾದರೂ ನಷ್ಟವುಂಟಾಗುತ್ತದೆ ಎಂಬ ಕಾರಣಕ್ಕಲ್ಲ. ಅದರಿಂದ ನೀವೇ ನಿಮ್ಮನ್ನು ನಷ್ಟಕ್ಕೊಳಪಡಿಸುತ್ತೀರಿ ಎಂಬ ಕಾರಣಕ್ಕಾಗಿದೆ. ನಮಾಝ್‌ನ ಮೂಲಕ ಅಲ್ಲಾಹನು ನಿಮಗೆ ಒಂದು ಬಲಿಷ್ಠ ಶಕ್ತಿಯನ್ನು ದಯಪಾಲಿಸ ಬಯಸಿದ್ದನು. ನೀವು ಅದನ್ನು ಪಡೆಯಲು ಹಿಂಜರಿಯುತ್ತೀರಿ. ನೀವು ಬಾಯಿಯಿಂದ ಅಲ್ಲಾಹನ ಪ್ರಭುತ್ವ ಮತ್ತು ಅವನ ಪ್ರವಾದಿಯ ಅನುಸರಣೆ ಹಾಗೂ ಪರಲೋಕ ವಿಚಾರಣೆಯ ವಿಶ್ವಾಸ ನಿಮಗಿದೆ ಎಂದು ಹೇಳುತ್ತೀರಿ. ಆದರೆ ಅಲ್ಲಾಹನು ಮತ್ತವನ ಪ್ರವಾದಿವರ್ಯರು(ಸ) ನಿಮ್ಮ ಮೇಲೆ ಕಡ್ಡಾಯಗೊಳಿಸಿರುವಂತಹ ಅತಿ ದೊಡ್ಡ ಕರ್ತವ್ಯವನ್ನು ನಿರ್ವಹಿಸದಿರುವುದು ಎಷ್ಟೊಂದು ನಾಚಿಕೆಗೇಡಿನ ವಿಷಯ. ನಿಮ್ಮ ಈ ವರ್ತನೆಯು ಎರಡರಲ್ಲೊಂದು ಕಾರಣಗಳ ಫಲವಾಗಿರಬಹುದು. ಒಂದನೆಯದಾಗಿ ನಿಮಗೆ ನಮಾಝ್ ಕಡ್ಡಾಯವಾಗಿದೆ ಎಂಬುದೇ ಸ್ವೀಕಾರಾರ್ಹವಲ್ಲದಿರಬಹುದು ಅಥವಾ ನೀವದನ್ನು ಕಡ್ಡಾಯವೆಂದು ಒಪ್ಪಿಯೂ ನಿರ್ವಹಿಸದೆ ಇರಬಹುದು. ಒಂದು ವೇಳೆ ನೀವು ಅದು ಕಡ್ಡಾಯವೆಂಬುದನ್ನೇ ನಿರಾಕರಿಸುತ್ತೀರೆಂದಾದರೆ ನೀವು ಕುರ್‌ಆನನ್ನೂ ಪ್ರವಾದಿವರ್ಯರನ್ನೂ(ಸ) ನಿರಾಕರಿಸಿದಂತೆಯೇ ಸರಿ ಮತ್ತು ಅವುಗಳ ಮೇಲೆ ವಿಶ್ವಾಸವಿದೆ ಎಂಬ ನಿಮ್ಮ ವಾದವು ಸುಳ್ಳಾಗುತ್ತದೆ. ಒಂದು ವೇಳೆ ನೀವದನ್ನು ಕಡ್ಡಾಯವೆಂದು ಭಾವಿಸಿಯೂ ನಿರ್ವಹಿಸದೇ ಇದ್ದರೆ ನೀವು ವಿಶ್ವಾಸಾರ್ಹ ವ್ಯಕ್ತಿಯಾಗಿಯೇ ಉಳಿಯುವುದಿಲ್ಲ. ಲೋಕದ ಯಾವ ವಿಷಯದ ಬಗ್ಗೆಯೂ ನಿಮ್ಮ ಮೇಲೆ ವಿಶ್ವಾಸವಿಡಲಾಗದು. ನೀವು

ಅಲ್ಲಾಹನ ಕರ್ತವ್ಯದಲ್ಲೇ ಚ್ಯುತಿಮಾಡಬಲ್ಲಿರೆಂದಾದರೆ ಮನುಷ್ಯರು ವಹಿಸಿದ ಕರ್ತವ್ಯದಲ್ಲಿ ಚ್ಯುತಿಮಾಡಲಾರಿರಿ ಎಂದು ನಿರೀಕ್ಷಿಸುವುದಾದರೂ ಹೇಗೆ?

## ಉಪವಾಸ ವ್ರತ

ಎರಡನೆಯ ಕಡ್ಡಾಯ ಕರ್ತವ್ಯವು ಉಪವಾಸ ವ್ರತವಾಗಿದೆ. ಉಪವಾಸ ವ್ರತವೆಂದರೇನು? ಯಾವ ಪಾಠವನ್ನು ದಿನನಿತ್ಯ ಐದು ಸಲದ ನಮಾಝ್‌ನ ಮೂಲಕ ನಿಮಗೆ ಜ್ಞಾಪಿಸಲಾಗುತ್ತದೋ ವರ್ಷಕ್ಕೊಮ್ಮೆ ಒಂದು ಇಡೀ ತಿಂಗಳು ಎಲ್ಲ ವೇಳೆಯೂ ಅದೇ ಪಾಠವನ್ನು ಜ್ಞಾಪಿಸಲಾಗುತ್ತದೆ. ರಮಝಾನ್ ತಿಂಗಳು ಬಂದಾಗ ಬೆಳಗ್ಗಿನಿಂದ ಸಂಜೆಯ ವರೆಗೆ ನೀವು ಅನ್ನಪಾನೀಯವನ್ನು ತೊರೆಯುತ್ತೀರಿ. ಸಹ್ರಿಯ ಸಮಯದಲ್ಲಿ ನೀವು ಅನ್ನಪಾನೀಯ ಸೇವಿಸುತ್ತಿರುವಾಗ ಅದಾನ್‌ನ ಕರೆ ಕೇಳಿಸುತ್ತದೆ. ಕೂಡಲೇ ನೀವು ಅವುಗಳನ್ನು ತೊರೆಯುತ್ತೀರಿ. ಇನ್ನು ಎಂತಹ ರುಚಿಕರ ಆಹಾರವೇ ಮುಂದೆ ಬರಲಿ, ನಿಮಗೆಷ್ಟೇ ಹಸಿವು ದಾಹವಿರಲಿ, ಸಂಜೆಯ ತನಕ ನೀವೇನನ್ನೂ ಸೇವಿಸುವುದಿಲ್ಲ. ಜನರ ಮುಂದೆ ಮಾತ್ರ ನೀವು ತಿನ್ನದಿರುವುದಲ್ಲ, ಏಕಾಂತದಲ್ಲಿ ನಿಮ್ಮನ್ನು ಯಾರೂ ನೋಡುವವರು ಇಲ್ಲದಿರುವಾಗಲೂ ನೀರಿನ ಒಂದು ಹನಿ ಅಥವಾ ಒಂದು ತುತ್ತು ಅನ್ನವನ್ನು ಸೇವಿಸುವುದು ಕೂಡಾ ನಿಮಗೆ ಅಸಾಧ್ಯವಾಗುತ್ತದೆ. ಈ ನಿಷೇಧವು ಒಂದು ನಿರ್ದಿಷ್ಟ ಸಮಯದ ವರೆಗಿರುತ್ತದೆ. ಆ ಸಮಯ ಬಂದ ಕೂಡಲೇ ಅಂದರೆ ಮಗ್‌ರಿಬ್‌ನ ಅದಾನ್ ಕೇಳಿಸಿದೊಡನೆಯೇ ನೀವು ಉಪವಾಸ ತೊರೆಯಲು ಧಾವಿಸುತ್ತೀರಿ. ಇನ್ನು ಇಡೀ ರಾತ್ರೆ ಯಾವುದೇ ಭಯವಿಲ್ಲದೆ ನೀವು ಅನ್ನಪಾನೀಯಗಳನ್ನು ಸೇವಿಸುತ್ತೀರಿ. ಇದು ಎಂತಹ ವಿಷಯ ಎಂಬುದನ್ನು ಆಲೋಚಿಸಿ ನೋಡಿ. ಇದರ ಬುಡದಲ್ಲಿರುವುದು ಅಲ್ಲಾಹನ ಭಯವಾಗಿದೆ. ಅವನು ಸರ್ವಜ್ಞನೂ ಸರ್ವವ್ಯಾಪಿಯೂ ಆಗಿರುವನೆಂಬ ದೃಢನಂಬಿಕೆಯಾಗಿದೆ. ಪರಲೋಕ ಜೀವನ ಮತ್ತು ಅಲ್ಲಾಹನ ನ್ಯಾಯಾಲಯದ ಮೇಲಿರುವ ವಿಶ್ವಾಸವಾಗಿದೆ. ಕುರ್‌ಆನ್ ಮತ್ತು ಪ್ರವಾದಿಯ ಅನುಸರಣೆಯಾಗಿದೆ. ಕರ್ತವ್ಯದ ಬಗೆಗಿನ ಬಲಿಷ್ಠ ಪ್ರಜ್ಞೆಯಾಗಿದೆ. ಸಹನೆ ಮತ್ತು ಸಂಕಷ್ಟಗಳನ್ನು ಎದುರಿಸುವ ಅಭ್ಯಾಸವಾಗಿದೆ. ಅಲ್ಲಾಹನ ಸಂಪ್ರೀತಿಗಾಗಿ ದೇಹೇಚ್ಛೆಗಳನ್ನು ನಿಗ್ರಹಿಸುವ ಶಕ್ತಿಯಾಗಿದೆ. ನೀವು ಮೂವತ್ತು ದಿನಗಳ ತನಕ ನಿರಂತರವಾಗಿ ತರಬೇತಿ ಹೊಂದಬೇಕು ಮತ್ತು ನೀವು ಪರಿಪೂರ್ಣವೂ, ಪರಿಪಕ್ವವೂ ಆದ ಮುಸ್ಲಿಮ್ ಆಗಿ ಮಾರ್ಪಡುವಂತಾಗಲು ಈ ಎಲ್ಲ ಗುಣಗಳನ್ನು ನಿಮ್ಮಲ್ಲಿ ಸೃಷ್ಟಿಸಲು ಪ್ರಯತ್ನಿಸಬೇಕು ಹಾಗೂ ಓರ್ವ ಮುಸ್ಲಿಮನಿಗೆ ತನ್ನ ಜೀವನಪರ್ಯಂತ ನಿರ್ವಹಿಸಲಿಕ್ಕಿರುವ ಇಬಾದತ್‌ಗೆ ಈ ಗುಣಗಳು ನಿಮ್ಮನ್ನು ಸಿದ್ಧಗೊಳಿಸುವಂತಾಗಬೇಕು ಎಂದು ಈ ರಮಝಾನ್ ತಿಂಗಳು ಪ್ರತಿವರ್ಷವೂ ಬರುತ್ತದೆ.

ಅಲ್ಲಾಹನು ಎಲ್ಲ ಮುಸ್ಲಿಮರ ಮೇಲೆ ಉಪವಾಸ ವ್ರತವನ್ನು ಒಂದೇ ತಿಂಗಳು

ಕಡ್ಡಾಯಗೊಳಿಸಿರುವನು. ಎಲ್ಲರೂ ಸೇರಿಯೇ ಉಪವಾಸ ವ್ರತ ಆಚರಿಸಬೇಕು. ಬೇರೆ ಬೇರೆಯಾಗಿ ಆಚರಿಸಬಾರದೆಂಬುದೇ ಇದರ ಉದ್ದೇಶ. ಇದರಿಂದ ಇನ್ನೂ ಅನೇಕ ಪ್ರಯೋಜನಗಳಿವೆ. ಇಡೀ ಮುಸ್ಲಿಮ್ ಸಮುದಾಯದಲ್ಲಿ ಈ ಒಂದು ತಿಂಗಳು ಪರಿಶುದ್ಧತೆಯ ತಿಂಗಳಾಗಿದೆ. ಇಡೀ ವಾತಾವರಣದಲ್ಲಿ ಸತ್ಯವಿಶ್ವಾಸ, ದೇವಭಯ, ದೇವಾಜ್ಞೆಗಳ ಅನುಸರಣೆ, ನೈತಿಕ ಪರಿಶುದ್ಧತೆ ಹಾಗೂ ಸತ್ಕರ್ಮಗಳು ವ್ಯಾಪಿಸಿರುತ್ತವೆ. ಒಟ್ಟಿನಲ್ಲಿ ಕೆಡುಕುಗಳು ಅಳಿದು ಒಳಿತುಗಳು ಹರಡಿರುತ್ತವೆ. ಸಜ್ಜನರು ಪುಣ್ಯ ಕಾರ್ಯಗಳಲ್ಲಿ ಪರಸ್ಪರ ಸಹಕರಿಸುತ್ತಾರೆ. ದುಷ್ಟರು ದುರಾಚಾರದ ಕಾರ್ಯ ಮಾಡಲು ನಾಚಿಕೆ ಪಡುತ್ತಾರೆ. ಶ್ರೀಮಂತರಲ್ಲಿ ಬಡವರಿಗೆ ನೆರವಾಗುವ ಭಾವನೆ ಮೂಡುತ್ತದೆ. ಅಲ್ಲಾಹನ ಮಾರ್ಗದಲ್ಲಿ ಧನವನ್ನು ವ್ಯಯಿಸಲಾಗುತ್ತದೆ. ಎಲ್ಲ ಮುಸ್ಲಿಮರು ಒಂದೇ ಸ್ಥಿತಿಯಲ್ಲಿರುತ್ತಾರೆ. ಈ ಸಮಾನ ಸ್ಥಿತಿಯು ಅವರಲ್ಲಿ ನಾವೆಲ್ಲರೂ ಒಂದು ಸಂಘಟನೆಗೆ ಸೇರಿದವರು ಎಂಬ ಭಾವನೆಯನ್ನು ಮೂಡಿಸುತ್ತದೆ. ಅವರಲ್ಲಿ ಸೋದರತೆ, ಅನುಕಂಪ ಮತ್ತು ಪರಸ್ಪರ ಐಕ್ಯ ಮೂಡಿಸಲು ಇದೊಂದು ಉಪಯುಕ್ತ ವಿಧಾನವಾಗಿದೆ.

ಇದೆಲ್ಲವೂ ನಮಗೆ ಲಭಿಸುವ ಪ್ರಯೋಜನಗಳು. ನಮ್ಮನ್ನು ಹಸಿವಿನಿಂದಿರಿಸುವುದರಿಂದ ಅಲ್ಲಾಹನಿಗೆ ಯಾವ ಲಾಭವೂ ಇಲ್ಲ. ಅವನು ನಮ್ಮ ಒಳಿತಿಗಾಗಿಯೇ ನಮ್ಮ ಮೇಲೆ ಈ ಉಪವಾಸ ವ್ರತವನ್ನು ಕಡ್ಡಾಯಗೊಳಿಸಿರುವನು. ಈ ಕಡ್ಡಾಯ ಕರ್ತವ್ಯವನ್ನು ಯಾರಾದರೂ ಸೂಕ್ತ ಕಾರಣವಿಲ್ಲದೆ ತೊರೆದರೆ, ಅವರು ತಮಗೇ ನಷ್ಟವನ್ನುಂಟು ಮಾಡಿಕೊಳ್ಳುತ್ತಾರೆ. ರಮಝಾನ್ ತಿಂಗಳಲ್ಲಿ ಬಹಿರಂಗವಾಗಿ ತಿನ್ನುವ, ಕುಡಿಯುವುದು ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಅವರು ಈ ಕೃತ್ಯದ ಮೂಲಕ, ನಾವು ಮುಸ್ಲಿಮರ ಸಂಘಟನೆಗೆ ಸೇರಿದವರಲ್ಲ, ನಮಗೆ ಇಸ್ಲಾಮಿನ ಆಜ್ಞೆಗಳ ಯಾವ ಪರಿವೆಯೂ ಇಲ್ಲ, ನಾವು ಅಲ್ಲಾಹನನ್ನು ನಂಬಿಯೂ ಅವನ ಅನುಸರಣೆಯಿಂದ ಬಹಿರಂಗವಾಗಿ ದೂರ ಉಳಿಯುವಷ್ಟು ನಾಚಿಕೆಗೆಟ್ಟವರಾಗಿದ್ದೇವೆ ಎಂಬುದನ್ನೂ ಘೋಷಿಸುತ್ತಾರೆ. ಯಾವ ಜನರಿಗೆ ತಮ್ಮ ಸಂಘಟನೆಯಿಂದ ದೂರ ಉಳಿಯುವುದು ಇಷ್ಟು ಸುಲಭದ ಮಾತಾಗಿದೆಯೋ ಅವರಿಗೆ ತಮ್ಮ ಸೃಷ್ಟಿಕರ್ತ ಮತ್ತು ಅನ್ನದಾತನ ವಿರುದ್ಧ ವಿದ್ರೋಹವೆಸಗುವುದರಲ್ಲಿ ಸ್ವಲ್ಪವೂ ಅಳುಕಿಲ್ಲವೋ ಯಾರು ತಮ್ಮ ಅತಿದೊಡ್ಡ ಧಾರ್ಮಿಕ ನಾಯಕರು ನಿಶ್ಚಯಿಸಿದ ಕಾನೂನನ್ನು ಬಹಿರಂಗವಾಗಿ ಉಲ್ಲಂಘಿಸುತ್ತಾರೋ ಅಂತಹವರಿಂದ ಯಾರಾದರೂ ನಿಷ್ಠೆ, ಉತ್ತಮ ನಡವಳಿಕೆ, ಪ್ರಾಮಾಣಿಕತೆ, ಕರ್ತವ್ಯ ಪ್ರಜ್ಞೆ ಮತ್ತು ಕಾನೂನು ಪಾಲನೆಯ ನಿರೀಕ್ಷೆಯನ್ನು ಇಡಲು ಸಾಧ್ಯವೇ?

## ಝಕಾತ್

ಮೂರನೆಯ ಕಡ್ಡಾಯ ಕರ್ತವ್ಯವು ಝಕಾತ್ ಆಗಿದೆ. ಪ್ರತಿಯೊಬ್ಬ ಧನಿಕ ಮುಸ್ಲಿಮನ ಮೇಲೆ ಅವನ ಬಳಿ ಕನಿಷ್ಠ ನಲವತ್ತು ರೂಪಾಯಿಗಳಿದ್ದು ಅದರ ಮೇಲೆ

ಒಂದು ವರ್ಷ ಕಳೆದಿದ್ದರೆ, ಅದರಿಂದ ಒಂದು ರೂಪಾಯಿಯನ್ನು[1] ಒಬ್ಬ ಬಡ ಸಂಬಂಧಿಕ, ಒಬ್ಬ ಅಪೇಕ್ಷಿತ ವ್ಯಕ್ತಿ, ಒಬ್ಬ ದರಿದ್ರ, ಒಬ್ಬ ನವ ಮುಸ್ಲಿಮ್, ಒಬ್ಬ ಪ್ರಯಾಣಿಕ ಅಥವಾ ಒಬ್ಬ ಸಾಲಗಾರನಿಗೆ ನೀಡುವುದನ್ನು ಅಲ್ಲಾಹನು ಕಡ್ಡಾಯಗೊಳಿಸಿರುತ್ತಾನೆ.

ಈ ರೀತಿ ಅಲ್ಲಾಹನು ಧನಿಕರ ಸೊತ್ತಿನಲ್ಲಿ ಕನಿಷ್ಠಪಕ್ಷ ಎರಡೂವರೆ ಶೇಕಡಾವನ್ನು ಬಡವರ ಪಾಲೆಂದು ನಿಶ್ಚಯಿಸಿರುವನು.[2] ಇದಕ್ಕಿಂತ ಹೆಚ್ಚಿನದನ್ನು ಯಾರಾದರೂ ನೀಡಿದರೆ ಇದು ಅವರ ಉದಾರತೆಯಾಗಿದ್ದು ಅವನಿಗೆ ಅದಕ್ಕೆ ಖಂಡಿತ ಅಧಿಕ ಪುಣ್ಯಫಲ ಸಿಗುವುದು.

ಶ್ರೀಮಂತರ ಸೊತ್ತಿನ ಈ ಅಂಶವು ಅಲ್ಲಾಹನಿಗೆ ತಲಪುವುದಿಲ್ಲ. ಅವನು ನಿಮ್ಮ ಯಾವ ವಸ್ತುವನ್ನೂ ಅಪೇಕ್ಷಿಸುವುದಿಲ್ಲ. ಆದರೆ ನೀವು ಸನ್ಮನಸ್ಸಿನಿಂದ ನನಗಾಗಿ ನಿಮ್ಮ ಬಡ ಸೋದರನಿಗೆ ಏನನ್ನಾದರೂ ನೀಡಿದರೆ ಅದು ನನಗೆ ನೀಡಿದಂತೆ. ಅವನ ವತಿಯಿಂದ ನಿಮಗೆ ನಾನು ಅದರ ಅನೇಕಪಟ್ಟು ಹೆಚ್ಚು ಪ್ರತಿಫಲವನ್ನು ನೀಡುವೆನು. ಆದರೆ ಅದನ್ನು ಕೊಟ್ಟು ನೀವು ಅದರ ಮೇಲೆ ಉಪಕಾರ ಭಾರವಿರಿಸಬಾರದು. ಅವರನ್ನು ನಿಂದಿಸಬಾರದು, ಅಪಮಾನಿಸಬಾರದು. ಅವರಿಂದ ಕೃತಜ್ಞತೆಯನ್ನೂ ಬಯಸಬಾರದು. ನಿಮ್ಮ ಈ ಕೊಡುಗೆಯ ಬಗ್ಗೆ ಜನರಲ್ಲಿ ಚರ್ಚೆಯಾಗಿ ಅವರು ನಿಮ್ಮನ್ನು ದೊಡ್ಡ ಕೊಡುಗೈ ದಾನಿಯೆಂದು ಹೊಗಳಬೇಕೆಂದು ಬಯಸಬಾರದು ಎಂದು ಅಲ್ಲಾಹನು ಹೇಳುತ್ತಾನೆ. ಈ ಎಲ್ಲ ದುಷ್ಟ ಭಾವನೆಗಳಿಂದ ನಿಮ್ಮ ಮನಸ್ಸನ್ನು ಮುಕ್ತವಾಗಿರಿಸಿ ಕೇವಲ ನನ್ನ ಸಂಪ್ರೀತಿಗಾಗಿ ನಿಮ್ಮ ಸೊತ್ತಿನಿಂದ ಬಡವರಿಗೆ ಪಾಲು ನೀಡಿದರೆ ನಾನು ನನ್ನ ಅಪಾರ ಸೊತ್ತಿನಿಂದ ನಿಮಗೆ ಎಂದೂ ಕೊನೆಗೊಳ್ಳದಂತಹ ಪಾಲನ್ನು ನೀಡುವೆನು ಎಂದೂ ಹೇಳುತ್ತಾನೆ.

ಅಲ್ಲಾಹನು ಝಕಾತನ್ನು ನಮ್ಮ ಮೇಲೆ ನಮಾಝ್ ಮತ್ತು ಉಪವಾಸ

---

1. ಝಕಾತ್ ಕೇವಲ ಹಣದ ಮೇಲೆ ಇರುವುದಲ್ಲ; ಚಿನ್ನ, ಬೆಳ್ಳಿ, ವ್ಯಾಪಾರ ಸರಕು ಮತ್ತು ಜಾನುವಾರುಗಳ ಮೇಲೆಯೂ ಇದೆ. ಈ ಎಲ್ಲ ವಸ್ತುಗಳ ಮೇಲೆ ಝಕಾತ್‌ನ ಪ್ರಮಾಣವೆಷ್ಟು ಎಂಬುದು ನಿಮಗೆ ಕರ್ಮಶಾಸ್ತ್ರದ ಗ್ರಂಥಗಳಿಂದ ತಿಳಿದುಕೊಳ್ಳಬಹುದಾಗಿದೆ. ಇಲ್ಲಿ ಝಕಾತ್‌ನ ಉದ್ದೇಶ ಮತ್ತು ಅದರ ಪ್ರಯೋಜನಗಳನ್ನು ಮಾತ್ರ ತಿಳಿಸುವುದು ನಮ್ಮ ಉದ್ದೇಶ. ಆದ್ದರಿಂದ ಇಲ್ಲಿ ಕೇವಲ ಉದಾಹರಣೆಯ ರೂಪದಲ್ಲಿ ರುಪಾಯಿಯ ಕುರಿತು ವಿವರಿಸಲಾಗಿದೆ.

2. ಇಲ್ಲಿ ಒಂದು ವಿಷಯವನ್ನು ನೆನಪಿಟ್ಟಿರಬೇಕು. ಪ್ರವಾದಿವರ್ಯರು(ಸ) ತಮ್ಮ ಕುಟುಂಬದವರಿಗೆ ಅಂದರೆ ಸಯ್ಯಿದ್ ಮತ್ತು ಹಾಶಿಮೀಗಳಿಗೆ ಝಕಾತನ್ನು ನಿಷೇಧಿಸಿರುತ್ತಾರೆ. ತಾತ್ಪರ್ಯವೇನೆಂದರೆ, ಬನೀ ಹಾಶಿಮ್ ಗೋತ್ರದವರು ಝಕಾತ್ ಕೊಡುವುದು ಕಡ್ಡಾಯ.ಆದರೆ ಅವರು ಝಕಾತ್ ಪಡೆಯುವುದು ಧರ್ಮಸಮ್ಮತವಲ್ಲ. ಯಾವನೇ ವ್ಯಕ್ತಿ ಒಬ್ಬ ಬಡವನಾದ ಸಯ್ಯಿದ್ ಅಥವಾ ಹಾಶಿಮೀಗೆ ನೆರವಾಗಬಯಸಿದರೆ ಅವರಿಗೆ ಉಡುಗೊರೆ ಅಥವಾ ಬಹುಮಾನದ ರೂಪದಲ್ಲಿ ಏನಾದರೂ ಕೊಡಬಹುದಲ್ಲದೆ ದಾನಧರ್ಮ ಮತ್ತು ಝಕಾತನ್ನು ಅವರಿಗೆ ಕೊಡುವಂತಿಲ್ಲ.

ವ್ರತದಂತೆಯೇ ಕಡ್ಡಾಯಗೊಳಿಸಿರುತ್ತಾನೆ. ಇದು ಇಸ್ಲಾಮಿನ ಒಂದು ದೊಡ್ಡ ಆಧಾರ ಸ್ತಂಭವಾಗಿದ್ದು ಅಲ್ಲಾಹನಿಗಾಗಿ ತ್ಯಾಗ ಬಲಿದಾನಗಳನ್ನು ನೀಡುವ ಗುಣವನ್ನು ಮುಸ್ಲಿಮರಲ್ಲಿ ಉಂಟು ಮಾಡುವುದೇ ಇದರ ಉದ್ದೇಶವಾಗಿದೆ. ಸ್ವಾರ್ಥ, ಸಂಕುಚಿತ ಮನಸ್ಸು ಮತ್ತು ಧನಪೂಜೆಯಂತಹ ಕೆಟ್ಟ ಗುಣಗಳಿಂದ ಇದು ಅವನನ್ನು ದೂರ ವಿರಿಸುತ್ತದೆ. ಧನಲಕ್ಷ್ಮಿಯನ್ನು ಪೂಜಿಸುವ, ಹಣಕ್ಕಾಗಿ ಪ್ರಾಣ ಬಿಡುವ ಧನಮೋಹಿ ಮತ್ತು ಲೋಭಿಯಾದ ವ್ಯಕ್ತಿಯು ಇಸ್ಲಾಮಿನ ಯಾವ ಕೆಲಸಕ್ಕೂ ಬರಲಾರನು. ಯಾರು ಅಲ್ಲಾಹನ ಆಜ್ಞೆಯ ಮೇರೆಗೆ ತನ್ನ ಕಠಿಣ ಶ್ರಮದಿಂದ ಸಂಪಾದಿಸಿದ ಸೊತ್ತನ್ನು ತನ್ನ ಯಾವುದೇ ಸ್ವಾರ್ಥವಿಲ್ಲದೆ ತ್ಯಾಗ ಮಾಡಬಲ್ಲನೋ ಅವನೇ ಇಸ್ಲಾಮಿನ ನೇರ ಮಾರ್ಗದಲ್ಲಿ ನಡೆಯಬಲ್ಲನು. ಝಕಾತ್ ಮುಸ್ಲಿಮನಿಗೆ ಈ ತ್ಯಾಗದ ಅಭ್ಯಾಸವನ್ನು ಮಾಡಿಸುತ್ತದೆ. ಅಗತ್ಯ ಬಿದ್ದಾಗ ತನ್ನ ಸೊತ್ತನ್ನು ಎದೆಗವಚಿ ಕುಳಿತಿರದೆ ಅಲ್ಲಾಹನ ಮಾರ್ಗದಲ್ಲಿ ಮನಬಿಚ್ಚಿ ಖರ್ಚುಮಾಡಲು ಅವನನ್ನು ಸಿದ್ಧಗೊಳಿಸುತ್ತದೆ.

ಝಕಾತ್‌ನ ಲೌಕಿಕ ಪ್ರಯೋಜನವೇನೆಂದರೆ ಅದು ಮುಸ್ಲಿಮರು ಪರಸ್ಪರ ನೆರವಾಗುವಂತೆ ಮಾಡುತ್ತದೆ. ಯಾವ ಮುಸ್ಲಿಮನೂ ಹೊಟ್ಟೆಗಿಲ್ಲದವನೂ ಮೈ ಮುಚ್ಚದವನೂ ನಿಂದ್ಯನೂ ನಿಕೃಷ್ಟನೂ ಆಗಿರಬಾರದು. ಧನಿಕರಾದವರು ಬಡವರಿಗೆ ನೆರವಾಗಬೇಕು ಮತ್ತು ಬಡವನು ಭಿಕ್ಷೆ ಬೇಡುತ್ತಾ ತಿರುಗಬಾರದು. ಯಾವ ವ್ಯಕ್ತಿಯೂ ತನ್ನ ಧನವನ್ನು ಕೇವಲ ತನ್ನ ಸುಖ ವೈಭೋಗಗಳಿಗೆ ಖರ್ಚು ಮಾಡದೆ ಆ ಸೊತ್ತಿನಲ್ಲಿ ಈ ಸಮುದಾಯದ ಅನಾಥರ, ವಿಧವೆಯರ ಮತ್ತು ಅಪೇಕ್ಷಿತರ ಹಕ್ಕು ಇದೆ ಎಂಬುದನ್ನು ಮನಗಾಣಬೇಕು. ಅದೇ ರೀತಿ ಆ ಸೊತ್ತಿನಲ್ಲಿ ಕೆಲಸ ಮಾಡುವ ಸಾಮರ್ಥ್ಯವಿದ್ದು ಬಂಡವಾಳದ ಕೊರತೆಯ ಕಾರಣದಿಂದಾಗಿ ಯಾವುದೇ ವ್ಯಾಪಾರ ಮಾಡಲು ಸಾಧ್ಯವಿಲ್ಲದವನ ಪಾಲೂ ಇದೆ. ಪ್ರಕೃತಿದತ್ತವಾದ ಬುದ್ಧಿ ಮತ್ತು ಸಾಮರ್ಥ್ಯವನ್ನು ಹೊಂದಿದ್ದು ಬಡತನದ ಕಾರಣದಿಂದಾಗಿ ವಿದ್ಯಾಭ್ಯಾಸ ಗಳಿಸಲು ಸಾಧ್ಯವಾಗದಂತಹ ಮಕ್ಕಳ ಪಾಲೂ ಆ ಸೊತ್ತಿನಲ್ಲಿದೆ. ಅನಾರೋಗ್ಯ ಅಥವಾ ಅಂಗವಿಕಲತೆಯಿಂದಾಗಿ ಕೆಲಸ ಮಾಡುವ ಸಾಮರ್ಥ್ಯವನ್ನೇ ಕಳೆದುಕೊಂಡಿರುವ ವ್ಯಕ್ತಿಯ ಪಾಲೂ ಆ ಸೊತ್ತಿನಲ್ಲಿದೆ. ಯಾವ ಧನಿಕನು ಈ ಪಾಲನ್ನು ಒಪ್ಪುವುದಿಲ್ಲವೋ ಅವನು ಅಕ್ರಮಿಯಾಗಿದ್ದಾನೆ. ನಿಮ್ಮ ಬಳಿ ಅಗಾಧವಾದ ಸಂಪತ್ತಿದ್ದು ನೀವು ಬಂಗಲೆಗಳಲ್ಲಿ ಸುಖ-ಭೋಗಗಳೊಂದಿಗೆ ವಾಸಿಸುತ್ತಾ, ಕಾರುಗಳಲ್ಲಿ ತಿರುಗಾಡುತ್ತಾ ಇರುವಾಗ ನಿಮ್ಮದೇ ಸಮುದಾಯದ ಸಹಸ್ರಾರು ಮಂದಿ ಒಪ್ಪೊತ್ತಿನ ಆಹಾರಕ್ಕೂ ಗತಿ ಇಲ್ಲದೆಯೂ, ಸಹಸ್ರಾರು ಮಂದಿ ನಿರುದ್ಯೋಗಿಗಳಾಗಿಯೂ ಅಲೆದಾಡುತ್ತಾ ಇರಲು ಬಿಟ್ಟು ಬಿಡುವುದು ಎಷ್ಟು ದೊಡ್ಡ ಅಕ್ರಮ. ಇಸ್ಲಾಮ್ ಇಂತಹ ಸ್ವಾರ್ಥದ ವೈರಿಯಾಗಿದೆ. ಸತ್ಯನಿಷೇಧಿಗಳಿಗಂತೂ ಅವರ ಸಂಸ್ಕೃತಿಯು ಹೆಚ್ಚೆಚ್ಚು ಹಣವನ್ನು ಕೂಡಿಟ್ಟು ಅದನ್ನು ಬಡ್ಡಿಗೆ ಕೊಟ್ಟು ನೆರೆಯವರ ದುಡಿಮೆಯಲ್ಲೂ ಒಂದು ಪಾಲನ್ನು

ಬಡ್ಡಿಯ ರೂಪದಲ್ಲಿ ಕಸಿದುಕೊಳ್ಳಲು ಕಲಿಸುತ್ತದೆ. ಆದರೆ ಸತ್ಯವಿಶ್ವಾಸಿಗಳಿಗೆ ಅವರ ಧರ್ಮವು ಕಲಿಸುವುದೇನೆಂದರೆ ಒಂದು ವೇಳೆ ಅಲ್ಲಾಹನು ನಿಮಗೆ ನಿಮ್ಮ ಅಗತ್ಯಕ್ಕಿಂತ ಹೆಚ್ಚು ಸಂಪತ್ತನ್ನು ನೀಡಿದ್ದರೆ ಅದನ್ನು ಕೂಡಿಡುವ ಬದಲಾಗಿ ನಿಮ್ಮ ಇತರ ಸೋದರರ ಅಗತ್ಯಗಳೂ ಪೂರ್ಣಗೊಳ್ಳುವಂತಾಗಲು ಮತ್ತು ಅವರು ನಿಮ್ಮಂತೆ ಕೆಲಸ ಮಾಡಲು ಮತ್ತು ಸಂಪಾದಿಸಲು ಸಮರ್ಥರಾಗಲು ಅವರಿಗೂ ನೀಡಿರಿ ಎಂದಾಗಿದೆ.

## ಹಜ್ಜ್

ನಾಲ್ಕನೆಯ ಕಡ್ಡಾಯ ಕರ್ತವ್ಯವು ಹಜ್ಜ್ ಆಗಿದೆ. ಇದು ಜೀವಮಾನದಲ್ಲಿ ಒಮ್ಮೆ ನಿರ್ವಹಿಸಬೇಕಾದಂತಹ ಕರ್ತವ್ಯ. ಅದೂ ಮಕ್ಕಾ ಪಟ್ಟಣಕ್ಕೆ ಹೋಗಿ ಬರುವ ವೆಚ್ಚವನ್ನು ಭರಿಸಲು ಸಾಧ್ಯವಿರುವಂತಹ ವ್ಯಕ್ತಿಗಳ ಮೇಲೆ ಮಾತ್ರ

ಈಗ ಮಕ್ಕಾ ಪಟ್ಟಣ ನೆಲೆಸಿರುವಲ್ಲಿ ಕೆಲವು ಸಾವಿರ ವರ್ಷಗಳ ಹಿಂದೆ ಪ್ರವಾದಿ ಇಬ್ರಾಹೀಮ್(ಅ)ರು ಅಲ್ಲಾಹನ ಆರಾಧನೆಗಾಗಿ ಒಂದು ಸಣ್ಣ ಭವನವನ್ನು ನಿರ್ಮಿಸಿದ್ದರು. ಅಲ್ಲಾಹನು ಅವರ ನಿಷ್ಠೆ ಮತ್ತು ಪ್ರೇಮವನ್ನು ಮೆಚ್ಚಿದನು. ಆ ಭವನವನ್ನು ತನ್ನ ಭವನವೆಂದು ಸಾರಿದನು. ತನ್ನನ್ನು ಆರಾಧಿಸುವವರು ಆ ಭವನದ ಕಡೆಗೇ ಮುಖ ಮಾಡಿ ಆರಾಧಿಸಬೇಕು ಎಂದು ಆಜ್ಞಾಪಿಸಿದನು. ಲೋಕದ ಯಾವ ಮೂಲೆಯಲ್ಲಾದರೂ ವಾಸಿಸುವ ಪ್ರತಿಯೊಬ್ಬ ಸ್ಥಿತಿವಂತ ಮುಸ್ಲಿಮನೂ ಜೀವನ ದಲ್ಲೊಂದು ಬಾರಿ ಆ ಭವನದ ಸಂದರ್ಶನ ಮಾಡಬೇಕೆಂದೂ ಯಾವ ಪ್ರೇಮದೊಂದಿಗೆ ಇಬ್ರಾಹೀಮ್(ಅ)ರು ಆ ಭವನದ ಪ್ರದಕ್ಷಿಣೆ ಮಾಡುತ್ತಿದ್ದರೋ ಅದೇ ಪ್ರೇಮದೊಂದಿಗೆ ಆ ಭವನದ ಪ್ರದಕ್ಷಿಣೆ ಮಾಡಬೇಕೆಂದೂ ಆಜ್ಞಾಪಿಸಿದನು. 'ನನ್ನ ಭವನದೆಡೆಗೆ ಹೊರಟಾಗ ನಿಮ್ಮ ಮನಸ್ಸುಗಳನ್ನು ಶುದ್ಧವಾಗಿಡಿರಿ. ದೇಹೇಚ್ಛೆಗಳನ್ನು ನಿಯಂತ್ರಿಸಿರಿ. ರಕ್ತಪಾತ, ವ್ಯಭಿಚಾರ ಮತ್ತು ಕೆಟ್ಟ ಮಾತುಗಳಿಂದ ದೂರವಿರಿ. ನಿಮ್ಮ ಒಡೆಯನ ಆಸ್ಥಾನಕ್ಕೆ ಹೋಗುವಾಗ ಯಾವ ಘನತೆ, ಗೌರವ ಮತ್ತು ವಿನಮ್ರತೆಯೊಂದಿಗೆ ಹೋಗಬೇಕೋ ಹಾಗೆಯೇ ಹೋಗಿರಿ' ಎಂದೂ ಆಜ್ಞಾಪಿಸಿದನು. ನಾವು ಭೂಮಿ-ಆಕಾಶಗಳ ಅಧಿಪತಿಯ ಆಸ್ಥಾನಕ್ಕೆ ಹೋಗುತ್ತಿದ್ದೇವೆ ಎಂಬುದು ನಿಮಗೆ ತಿಳಿದಿರಲಿ. ಅವನ ಮುಂದೆ ಎಲ್ಲ ಮನುಷ್ಯರೂ ಅಪೇಕ್ಷಿತರಾಗಿದ್ದಾರೆ. ಈ ರೀತಿ ವಿನಮ್ರತೆಯೊಂದಿಗೆ ನೀವು ಬಂದಾಗ ಮತ್ತು ಪ್ರಾಮಾಣಿಕ ಮನಸ್ಸಿನೊಂದಿಗೆ ನಮ್ಮನ್ನು ಆರಾಧಿಸಿದಾಗ ನಾವು ನಿಮಗೆ ನಮ್ಮ ಅತ್ಯಧಿಕ ಕೊಡುಗೆಗಳನ್ನು ಅನುಗ್ರಹಿಸುವೆವು ಎಂದು ಹೇಳಿದನು.

ಒಂದು ನೆಲೆಯಲ್ಲಿ ಹಜ್ಜ್ ಎಲ್ಲಕ್ಕಿಂತಲೂ ದೊಡ್ಡ ಆರಾಧನೆಯಾಗಿದೆ. ಅಲ್ಲಾಹನ ಪ್ರೇಮ ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿಲ್ಲದೇ ಹೋದರೆ ಅವನು ತನ್ನ ವ್ಯಾಪಾರವನ್ನೂ ಬಂಧು ಮಿತ್ರರನ್ನೂ ಬಿಟ್ಟು ಇಷ್ಟು ದೀರ್ಘ ಯಾತ್ರೆಯ ಸಂಕಷ್ಟವನ್ನು ಸಹಿಸುವುದಾದರೂ ಏಕೆ? ಆದ್ದರಿಂದ ಹಜ್ಜ್ ಮಾಡುವ ನಿರ್ಧಾರವೇ ಪ್ರೇಮ ಮತ್ತು ನಿಷ್ಠೆಯ

ಪುರಾವೆಯಾಗಿದೆ. ಮನುಷ್ಯನು ಈ ಯಾತ್ರೆಗೆ ಹೊರಟಾಗ ಅವನ ಸ್ಥಿತಿಯು ಸಾಮಾನ್ಯ ಯಾತ್ರಿಕನಂತಿರುವುದಿಲ್ಲ. ಈ ಯಾತ್ರೆಯುದ್ದಕ್ಕೂ ಅವನ ಗಮನವು ಹೆಚ್ಚಾಗಿ ಅಲ್ಲಾಹನ ಕಡೆಗೇ ಇರುತ್ತದೆ. ಅವನ ಮನಸ್ಸಿನಲ್ಲಿ ಉತ್ಸಾಹ ಮತ್ತು ಲವಲವಿಕೆ ಹೆಚ್ಚುತ್ತಿರುತ್ತದೆ. ಕಅಬಾ ಭವನವು ಹತ್ತಿರ ಬಂದಂತೆಲ್ಲಾ ಪ್ರೇಮದ ಈ ಅಗ್ನಿಯು ಇನ್ನಷ್ಟು ಪ್ರಜ್ವಲಿಸುತ್ತದೆ. ಪಾಪ ಕಾರ್ಯಗಳು ಮತ್ತು ದೇವನ ಅವಿಧೇಯತೆಯಿಂದ ಮನಸ್ಸು ತನ್ನಿಂತಾನೇ ವಿರಕ್ತವಾಗುತ್ತದೆ. ಹಿಂದಿನ ಪಾಪಗಳಿಗಾಗಿ ಪಶ್ಚಾತ್ತಾಪ ಪಡುತ್ತದೆ. ಇನ್ನು ಮುಂದೆ ಅಲ್ಲಾಹನು ತನಗೆ ವಿಧೇಯತೆಯ ಸೌಭಾಗ್ಯ ಕರುಣಿಸಬೇಕೆಂದು ಪ್ರಾರ್ಥಿಸುತ್ತಿರುತ್ತದೆ. ಆರಾಧನೆ ಮತ್ತು ದೇವ ಸ್ಮರಣೆಯಲ್ಲಿ ಅವರ್ಣನೀಯ ಸುಖದ ಅನುಭವವಾಗುತ್ತದೆ. ಸಾಷ್ಟಾಂಗಗಳು ದೀರ್ಘಗೊಳ್ಳತೊಡಗುತ್ತದೆ. ಅವನ ಆಸ್ಥಾನದಿಂದ ತಲೆ ಎತ್ತಲು ಮನಸ್ಸೇ ಒಪ್ಪುವುದಿಲ್ಲ. ಕುರ್‌ಆನ್ ಓದುವಾಗ ವಿಚಿತ್ರ ಆನಂದದ ಅನುಭವವಾಗುತ್ತದೆ. ಉಪವಾಸ ವ್ರತ ಆಚರಿಸಿದರೆ ಅದರ ಸವಿಯೇ ವಿಶಿಷ್ಟವಾಗಿರುತ್ತದೆ. ಮಕ್ಕಾ ಪಟ್ಟಣವನ್ನು ತಲುಪಿದಾಗ ಇಸ್ಲಾಮಿನ ಆರಂಭ ಕಾಲದ ಇತಿಹಾಸವು ಅವನ ಕಣ್ಣ ಮುಂದೆ ಸುಳಿಯತೊಡಗುತ್ತದೆ. ಅಲ್ಲಿ ಕಣಕಣಗಳಲ್ಲೂ ಅಲ್ಲಾಹನನ್ನು ಪ್ರೀತಿಸಿದವರ ಮತ್ತು ಅವನಿಗಾಗಿ ಪ್ರಾಣಾರ್ಪಣೆಗೈದವರ ಕುರುಹುಗಳು ಕಾಣಸಿಗುತ್ತವೆ. ಕಣಕಣವೂ ಇಸ್ಲಾಮಿನ ಮಹಿಮೆಯ ಸಾಕ್ಷ್ಯ ವಹಿಸುತ್ತದೆ. ಇದು ಅಲ್ಲಾಹನ ವಚನವು ಉತ್ತುಂಗಗೊಂಡ ಪ್ರದೇಶವಾಗಿದೆ ಎಂದು ಅಲ್ಲಿನ ಪ್ರತಿಯೊಂದು ಕಲ್ಲೂ ಸಾರಿ ಹೇಳುತ್ತದೆ. ಈ ರೀತಿ ಮುಸ್ಲಿಮನ ಹೃದಯವು ಅಲ್ಲಾಹನ ಪ್ರೇಮ ಮತ್ತು ಇಸ್ಲಾಮಿನ ಪ್ರೀತಿಯಿಂದ ತುಂಬಿ ತುಳುಕುತ್ತದೆ. ಅಲ್ಲಿಂದ ಅವನು ಎಷ್ಟು ಗಾಢವಾದ ಪ್ರಭಾವವನ್ನು ಹೊಂದಿ ಮರಳುತ್ತಾನೆಂದರೆ ಸಾಯುವ ತನಕವೂ ಅದು ಅವನ ಮನಸ್ಸಿನಿಂದ ಅಳಿದು ಹೋಗುವುದಿಲ್ಲ.

ಧಾರ್ಮಿಕ ಪ್ರಯೋಜನಗಳೊಂದಿಗೇ ಹಜ್ಜ್‌ನಲ್ಲಿ ಅಲ್ಲಾಹನು ಅನೇಕ ಲೌಕಿಕ ಪ್ರಯೋಜನಗಳನ್ನೂ ಇರಿಸಿದ್ದಾನೆ. ಹಜ್ಜ್‌ನಿಂದಾಗಿ ಮಕ್ಕಾ ಪಟ್ಟಣವು ಜಗತ್ತಿನ ಮುಸ್ಲಿಮರ ಕೇಂದ್ರವೆನಿಸಿದೆ. ಲೋಕದ ಎಲ್ಲ ಮೂಲೆಗಳಿಂದಲೂ ಅಲ್ಲಾಹನ ದಾಸರು ಒಂದೇ ಕಾಲದಲ್ಲಿ ಅಲ್ಲಿ ಒಟ್ಟುಗೂಡುತ್ತಾರೆ. ಪರಸ್ಪರ ಭೇಟಿಯಾಗುತ್ತಾರೆ. ಪರಸ್ಪರರಲ್ಲಿ ಇರುವ ಇಸ್ಲಾಮೀ ಪ್ರೀತಿಯು ಇನ್ನಷ್ಟು ವರ್ಧಿಸುತ್ತದೆ. ಮುಸ್ಲಿಮರು ಯಾವುದೇ ದೇಶ ಯಾವುದೇ ಜನಾಂಗದವರಾಗಿದ್ದರೂ ಪರಸ್ಪರ ಸೋದರರಾಗಿದ್ದಾರೆ ಮತ್ತು ಒಂದೇ ಸಮುದಾಯದವರಾಗಿದ್ದಾರೆ ಎಂಬ ಚಿತ್ರವನ್ನು ಅವರ ಮನಸ್ಸಿನ ಮೇಲೆ ಶಾಶ್ವತವಾಗಿ ಮೂಡಿಸುತ್ತದೆ. ಈ ಕಾರಣದಿಂದಾಗಿ ಹಜ್ಜ್ ಒಂದೆಡೆ ಅಲ್ಲಾಹನ ಆರಾಧನೆಯಾಗಿದ್ದರೆ, ಇನ್ನೊಂದೆಡೆ ಅದು ಇಡೀ ಲೋಕದ ಮುಸ್ಲಿಮರ ಸಮ್ಮೇಳನವೂ ಆಗಿದೆ ಹಾಗೂ ಮುಸ್ಲಿಮರಲ್ಲಿ ವಿಶ್ವ ಬಾಂಧವ್ಯ ಮತ್ತು ಏಕತೆಯನ್ನು ಮೂಡಿಸುವ ಅತಿದೊಡ್ಡ ಮಾಧ್ಯಮವಾಗಿದೆ.

## ಇಸ್ಲಾಮಿನ ಸೇವೆ

ನಿಮ್ಮ ಮೇಲೆ ಅಲ್ಲಾಹನ ವತಿಯಿಂದ ವಿಧಿಸಲಾದ ಕೊನೆಯ ಕಡ್ಡಾಯ ಕರ್ತವ್ಯ ಇಸ್ಲಾಮಿನ ಸೇವೆಯಾಗಿದೆ. ಇದು ಇಸ್ಲಾಮಿನ ಆಧಾರ ಸ್ತಂಭಗಳಲ್ಲಿ ಸೇರಿರದಿದ್ದರೂ ಇಸ್ಲಾಮಿೂ ಕರ್ತವ್ಯಗಳಲ್ಲಿ ಇದೊಂದು ಮಹತ್ವದ ಕರ್ತವ್ಯವಾಗಿದೆ. ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಅದಕ್ಕೆ ಬಹಳ ಒತ್ತು ಕೊಡಲಾಗಿದೆ.

ಇಸ್ಲಾಮಿನ ಸೇವೆಯೆಂದರೇನು ಮತ್ತು ಯಾಕಾಗಿ ಅದನ್ನು ಕಡ್ಡಾಯ ಗೊಳಿಸಲಾಗಿದೆ? ಇದನ್ನು ಒಂದು ಉದಾಹರಣೆಯಿಂದ ಸುಲಭವಾಗಿ ನೀವು ತಿಳಿದು ಕೊಳ್ಳಬಹುದು. ಒಬ್ಬ ವ್ಯಕ್ತಿ ನಿಮ್ಮೊಂದಿಗೆ ಸ್ನೇಹ ಬೆಳೆಸಿಕೊಳ್ಳುತ್ತಾನೆ ಎಂದಿಟ್ಟುಕೊಳ್ಳಿ. ಆದರೆ ಅವನು, ಎಲ್ಲ ಪರೀಕ್ಷಾ ಘಟ್ಟಗಳಲ್ಲಿಯೂ ಅವನಿಗೆ ನಿಮ್ಮೊಂದಿಗೆ ಯಾವುದೇ ಸಹಾನುಭೂತಿ ಇಲ್ಲ ಎಂದು ಸಾಬೀತುಪಡಿಸುತ್ತಾನೆ. ಅವನಿಗೆ ನಿಮ್ಮ ಲಾಭ ನಷ್ಟಗಳ ಯಾವ ಪರಿವೆಯೂ ಇಲ್ಲ. ನಿಮಗೆ ನಷ್ಟ ಉಂಟುಮಾಡುವ ಕಾರ್ಯವನ್ನು ಅವನು ತನ್ನ ಸ್ವಾರ್ಥ ಲಾಭಕ್ಕಾಗಿ ನಿಸ್ಸಂಕೋಚವಾಗಿ ಮಾಡುತ್ತಾನೆ. ನಿಮಗೆ ಪ್ರಯೋಜನವಾಗುವ ಕಾರ್ಯದಲ್ಲಿ ಅವನಿಗೆ ಯಾವ ಲಾಭವೂ ಇಲ್ಲ ಎಂಬ ಏಕೈಕ ಕಾರಣದಿಂದಾಗಿ ಅವನು ನಿಮಗೆ ನೆರವಾಗುವುದಿಲ್ಲ. ನಿಮಗೆ ಯಾವುದಾದರೂ ಸಂಕಷ್ಟ ಒದಗಿದಾಗ ಅವನು ನಿಮಗೆ ಯಾವ ಸಹಾಯವನ್ನೂ ಮಾಡುವುದಿಲ್ಲ. ಯಾರಾದರೂ ನಿಮ್ಮ ಬಗ್ಗೆ ಕೆಟ್ಟ ಮಾತುಗಳನ್ನಾಡುತ್ತಿದ್ದರೆ ಅವನೂ ಅವರ ಜೊತೆ ಸೇರಿಕೊಳ್ಳುತ್ತಾನೆ. ನಿಮ್ಮ ವೈರಿಯು ನಿಮ್ಮ ವಿರುದ್ಧ ಯಾವುದೇ ಕಾರ್ಯ ಮಾಡಿದರೆ ಅವನೂ ಅವರೊಂದಿಗೆ ಸಹಕರಿಸುತ್ತಾನೆ. ಇಲ್ಲವೇ ಕನಿಷ್ಠಪಕ್ಷ ನಿಮ್ಮನ್ನು ಅವರ ಕಿರುಕುಳದಿಂದ ರಕ್ಷಿಸಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಈಗ ಹೇಳಿ ಇಂತಹ ವ್ಯಕ್ತಿಯನ್ನು ನೀವು ನಿಮ್ಮ ಮಿತ್ರನೆಂದು ಪರಿಗಣಿಸುತ್ತೀರಾ? ಖಂಡಿತ ಇಲ್ಲ ಎಂದೇ ನೀವು ಹೇಳುವಿರಿ. ಏಕೆಂದರೆ ಅವನು ಕೇವಲ ಬಾಯಿಯಲ್ಲಿ ಮಾತ್ರ ನಿಮ್ಮ ಮಿತ್ರನೆಂದು ವಾದಿಸುತ್ತಾನೆ. ಆದರೆ ವಾಸ್ತವದಲ್ಲಿ ಅವನ ಮನಸ್ಸಿನಲ್ಲಿ ನಿಮ್ಮ ಮಿತ್ರತ್ವವಿಲ್ಲ. ಮಿತ್ರತ್ವವೆಂದರೆ ಒಬ್ಬ ಮನುಷ್ಯನು ಯಾರ ಮಿತ್ರನಾಗಿರುವನೋ ಅವನನ್ನು ಪ್ರೀತಿಸಬೇಕು. ಅವನಿಗೆ ನಿಷ್ಠ ನಾಗಿರಬೇಕು. ಅವನ ಬಗ್ಗೆ ಸಹಾನುಭೂತಿ ಮತ್ತು ಅನುಕಂಪವನ್ನು ಹೊಂದಿರಬೇಕು. ಸಮಯ ಬಂದಾಗ ಅವನಿಗೆ ನೆರವಾಗಬೇಕು. ವೈರಿಗಳ ವಿರುದ್ಧ ಅವನಿಗೆ ಸಹಾಯ ಮಾಡಬೇಕು. ಅವನ ಬಗ್ಗೆ ಕೆಟ್ಟ ಮಾತುಗಳನ್ನು ಕೇಳಲೂ ಸಿದ್ಧನಿರಬಾರದು. ಪರಿಸ್ಥಿತಿ ಹೀಗಿರದಿದ್ದರೆ ಅವನು ಆಷಾಢಭೂತಿಯಾಗಿದ್ದಾನೆ. ಅವನು ನಿಮ್ಮ ಮಿತ್ರನಾಗಿರುವನೆಂದು ಸೋಗು ಹಾಕುತ್ತಿದ್ದಾನೆ ಅಷ್ಟೆ.

ನೀವು ಮುಸ್ಲಿಮ್ ಆಗಿರುತ್ತೀರೆಂದು ವಾದಿಸುವಾಗ ನಿಮ್ಮ ಮೇಲೆ ಯಾವ ಕರ್ತವ್ಯವು ಬಂದು ಬೀಳುತ್ತದೆಂದು ಇದೇ ಉದಾಹರಣೆಯಿಂದ ಊಹಿಸಿಕೊಳ್ಳಿರಿ.

ಮುಸ್ಲಿಮ್ ಆಗುವುದರ ಅರ್ಥ ನಿಮ್ಮಲ್ಲಿ ಇಸ್ಲಾಮಿನ ಬಗ್ಗೆ ಅಭಿಮಾನ, ಈಮಾನಿನ ಬಗ್ಗೆ ಒಲವು, ಇಸ್ಲಾಮಿನ ಪ್ರೇಮ ಮತ್ತು ಮುಸ್ಲಿಮ್ ಸಹೋದರರೊಂದಿಗೆ ನೈಜ ಸಹಾನುಭೂತಿ ಇರಬೇಕೆಂದಾಗಿದೆ. ನೀವು ಲೋಕದ ಯಾವ ಕೆಲಸ ಮಾಡುವುದಿದ್ದರೂ ಇಸ್ಲಾಮಿನ ಹಿತ ಮತ್ತು ಮುಸ್ಲಿಮರ ಒಳಿತು ಸದಾ ನಿಮ್ಮ ಮುಂದಿರಬೇಕು. ನಿಮ್ಮ ವೈಯಕ್ತಿಕ ಲಾಭಕ್ಕಾಗಿ ಅಥವಾ ವೈಯಕ್ತಿಕ ನಷ್ಟದಿಂದ ಪಾರಾಗಲಿಕ್ಕಾಗಿ ಇಸ್ಲಾಮಿನ ಧ್ಯೇಯಗಳಿಗೆ ಮತ್ತು ಮುಸ್ಲಿಮರ ಅಭ್ಯುದಯಕ್ಕೆ ವಿರುದ್ಧವಾದ ಯಾವ ಕೃತ್ಯವನ್ನೂ ಎಸಗಬಾರದು. ಇಸ್ಲಾಮ್ ಮತ್ತು ಮುಸ್ಲಿಮರ ಪಾಲಿಗೆ ಉಪಯುಕ್ತವಾದ ಪ್ರತಿಯೊಂದು ಕಾರ್ಯದಲ್ಲೂ ತನು-ಮನ-ಧನದೊಂದಿಗೆ ಪಾಲ್ಗೊಳ್ಳಬೇಕು ಹಾಗೂ ಇಸ್ಲಾಮ್ ಮತ್ತು ಮುಸ್ಲಿಮರ ಪಾಲಿಗೆ ಹಾನಿಕರವಾದ ಪ್ರತಿಯೊಂದು ಕಾರ್ಯದಿಂದ ದೂರವಿರಬೇಕು. ತನ್ನ ಧರ್ಮ ಮತ್ತು ತನ್ನ ಧಾರ್ಮಿಕ ಸಂಘಟನೆಯ ಗೌರವವನ್ನು ತನ್ನ ಗೌರವವೆಂದು ಪರಿಗಣಿಸಬೇಕು. ನೀವು ಸ್ವತಃ ನಿಮ್ಮ ಅವಮಾನವನ್ನು ಸಹಿಸದಂತೆಯೇ ಇಸ್ಲಾಮ್ ಮತ್ತು ಮುಸ್ಲಿಮರ ಅವಮಾನವನ್ನೂ ಸಹಿಸಬಾರದು. ನೀವು ಸ್ವಯಂ ನಿಮ್ಮ ವಿರುದ್ಧವೇ ನಿಮ್ಮ ಶತ್ರುಗಳಿಗೆ ನೆರವಾಗದಂತೆ ಇಸ್ಲಾಮ್ ಮತ್ತು ಮುಸ್ಲಿಮರ ಶತ್ರುಗಳಿಗೂ ನೆರವಾಗಬಾರದು. ನೀವು ಸ್ವತಃ ನಿಮ್ಮ ಪ್ರಾಣ, ಸೊತ್ತು ಮತ್ತು ಗೌರವದ ರಕ್ಷಣೆಗಾಗಿ ಎಲ್ಲ ರೀತಿಯ ತ್ಯಾಗಗಳಿಗೆ ಸಿದ್ಧರಾಗುವಂತೆ ಇಸ್ಲಾಮ್ ಮತ್ತು ಮುಸ್ಲಿಮರ ರಕ್ಷಣೆಗಾಗಿಯೂ ಎಲ್ಲ ರೀತಿಯ ತ್ಯಾಗಗಳಿಗೆ ಸಿದ್ಧರಾಗಬೇಕು. ತನ್ನನ್ನು ಮುಸ್ಲಿಮ್ ಎಂದು ಹೇಳಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಈ ಗುಣಗಳು ಇರಬೇಕು. ಅನ್ಯಥಾ ಅವನನ್ನು ಕಪಟವಿಶ್ವಾಸಿ ಎಂದು ಪರಿಗಣಿಸಲಾಗುವುದು ಮತ್ತು ಅವನ ವರ್ತನೆಯಿಂದಲೇ ಅವನ ಮಾತು ಸುಳ್ಳೆಂದು ಸಾಬೀತಾಗುವುದು.

ಇಸ್ಲಾಮಿನ ಸೇವೆಯ ಒಂದು ಪ್ರಕಾರವನ್ನು ಧರ್ಮಶಾಸ್ತ್ರದ ಭಾಷೆಯಲ್ಲಿ 'ಜಿಹಾದ್' ಎನ್ನಲಾಗುತ್ತದೆ. ಜಿಹಾದ್ ಎಂಬ ಪದದ ಅರ್ಥ 'ಯಾವುದೇ ಕೆಲಸಕ್ಕಾಗಿ ತನ್ನ ಗರಿಷ್ಠ ಶಕ್ತಿಯನ್ನು ವ್ಯಯಿಸುವುದು' ಎಂದಾಗಿದೆ. ಈ ಅರ್ಥವನ್ನು ಮುಂದಿರಿಸಿ ನೋಡಿದರೆ ಯಾವ ವ್ಯಕ್ತಿಯು ಅಲ್ಲಾಹನ ವಚನದ ಉತ್ತುಂಗತೆಗಾಗಿ ಹಣ, ನಾಲಗೆ, ಲೇಖನಿ ಮತ್ತು ಕೈಕಾಲುಗಳಿಂದ ಪ್ರಯತ್ನ ಮಾಡುತ್ತಾನೋ ಅವನು ಜಿಹಾದ್ ಮಾಡುತ್ತಾನೆ. ಆದರೆ ವಿಶಿಷ್ಟವಾಗಿ ಜಿಹಾದ್ ಎಂಬ ಪದವು ಎಲ್ಲ ಲೌಕಿಕ ಉದ್ದೇಶಗಳಿಂದ ಮುಕ್ತವಾಗಿ ಕೇವಲ ಅಲ್ಲಾಹನ ಸಂಪ್ರೀತಿಗಾಗಿ ಇಸ್ಲಾಮಿನ ವೈರಿಗಳೆದುರು ಮಾಡುವ ಹೋರಾಟಕ್ಕೆ ಬಳಸಲಾಗುತ್ತದೆ. ಶರೀಅತ್ ಪಾರಿಭಾಷಿಕದಲ್ಲಿ ಇಂತಹ ಜಿಹಾದ್‌ಗೆ ಫರ್ಳ್ ಕಿಫಾಯಃ ಎನ್ನಲಾಗುತ್ತದೆ. ಅರ್ಥಾತ್ ಇದು ಎಲ್ಲ ಮುಸ್ಲಿಮರ ಮೇಲೆ ಇರುವಂತಹ ಒಂದು ಸಾಮೂಹಿಕ ಕರ್ತವ್ಯ. ಆದರೆ ಮುಸ್ಲಿಮರ ಒಂದು ಸಂಘಟನೆಯು ಅದನ್ನು ಮಾಡಿದರೆ ಉಳಿದವರು ಆ ಕರ್ತವ್ಯ ನಿರ್ವಹಣೆಯ ಹೊಣೆಯಿಂದ ಮುಕ್ತರಾಗುತ್ತಾರೆ. ಒಂದು ವೇಳೆ ಯಾವುದಾದರೂ ಇಸ್ಲಾಮೀ

ರಾಷ್ಟ್ರದ ಮೇಲೆ ವೈರಿಗಳ ಆಕ್ರಮಣವಾದರೆ ಆ ರಾಷ್ಟ್ರದ ಎಲ್ಲ ಪ್ರಜೆಗಳ ಮೇಲೆ ನಮಾಝ್ ಮತ್ತು ಉಪವಾಸ ವ್ರತದಂತೆಯೇ ಜಿಹಾದ್ ಕೂಡಾ ಕಡ್ಡಾಯವಾಗಿ ಬಿಡುತ್ತದೆ. ಒಂದು ವೇಳೆ ಅವರಲ್ಲಿ ವೈರಿಗಳನ್ನು ಎದುರಿಸುವ ಶಕ್ತಿ ಇಲ್ಲದೆ ಹೋದರೆ, ತನು, ಮನ, ಧನದಿಂದ ಅವರಿಗೆ ಸಹಾಯ ಮಾಡುವುದು ಅವರ ನೆರೆ ರಾಷ್ಟ್ರದ ಎಲ್ಲ ಮುಸ್ಲಿಮರ ಮೇಲೂ ಕಡ್ಡಾಯವಾಗಿದೆ ಮತ್ತು ಅವರ ನೆರವಿನಿಂದಲೂ ವೈರಿಯ ಆಕ್ರಮಣವನ್ನು ಎದುರಿಸಲಾಗದಿದ್ದರೆ ಜಗತ್ತಿನ ಎಲ್ಲ ಮುಸ್ಲಿಮರ ಮೇಲೆ ನಮಾಝ್ ಮತ್ತು ಉಪವಾಸ ವ್ರತ ಕಡ್ಡಾಯವಾಗಿರುವಂತೆಯೇ ಅವರಿಗೆ ನೆರವಾಗುವುದು ಕಡ್ಡಾಯವಾಗಿದೆ. ಒಬ್ಬ ವ್ಯಕ್ತಿ ಕೂಡಾ ಈ ಕರ್ತವ್ಯ ನಿರ್ವಹಣೆಯಲ್ಲಿ ಚ್ಯುತಿ ಮಾಡಿದರೆ ಅಪರಾಧಿ ಎನಿಸುವನು. ಇಂತಹ ಸಂದರ್ಭಗಳಲ್ಲಿ ಜಿಹಾದ್‌ನ ಮಹತ್ವವು ನಮಾಝ್ ಮತ್ತು ಉಪವಾಸ ವ್ರತಗಳಿಗಿಂತಲೂ ಹೆಚ್ಚಾಗುತ್ತದೆ. ಏಕೆಂದರೆ ಅದು ಈಮಾನಿನ ಸತ್ವಪರೀಕ್ಷೆಯ ಘಟ್ಟವಾಗಿದೆ. ಯಾವ ವ್ಯಕ್ತಿಯು ಸಂಕಷ್ಟದ ವೇಳೆ ಇಸ್ಲಾಮ್ ಮತ್ತು ಮುಸ್ಲಿಮರಿಗೆ ನೆರವಾಗುವುದಿಲ್ಲವೋ ಅವನ ವಿಶ್ವಾಸವೇ ಸಂಶಯಾಸ್ಪದವಾಗುತ್ತದೆ. ಹೀಗಿರುತ್ತಾ ಅವನ ನಮಾಝ್ ಯಾವ ಪುರುಷಾರ್ಥಕ್ಕಾಗಿ? ಮತ್ತು ಅವನ ಉಪವಾಸ ವ್ರತಕ್ಕೆ ಏನು ಬೆಲೆ? ಒಂದು ವೇಳೆ ಯಾವನಾದರೂ ದುಷ್ಟ ವ್ಯಕ್ತಿ ಇಂತಹ ಸಂದರ್ಭದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರ ವೈರಿಗಳಿಗೆ ನೆರವಾದರೆ ಖಂಡಿತವಾಗಿಯೂ ಅವನು ಅಪ್ಪಟ ಕಪಟವಿಶ್ವಾಸಿಯಾಗಿದ್ದಾನೆ. ಅವನ ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್ ಎಲ್ಲವೂ ನಿರರ್ಥಕವಾಗಿದೆ.

# ದೀನ್ ಮತ್ತು ಶರೀಅತ್

ಈ ತನಕ ನಾವು ನಿಮಗೆ ತಿಳಿಸಿರುವ ವಿಷಯಗಳೆಲ್ಲವೂ ದೀನ್ ಅಥವಾ ಧರ್ಮಕ್ಕೆ ಸಂಬಂಧಿಸಿದುದಾಗಿದೆ. ಈಗ ನಾವು ಪ್ರವಾದಿ ಮುಹಮ್ಮದ್‌ರ(ಸ) ಶರೀಅತ್‌ನ ಕುರಿತು ನಿಮಗೆ ಕೆಲವು ವಿಷಯಗಳನ್ನು ತಿಳಿಸುವೆವು. ಆದರೆ ಮೊದಲು ಶರೀಅತ್ ಎಂದರೇನು ಹಾಗೂ ಧರ್ಮ ಮತ್ತು ಶರೀಅತ್‌ಗಳಲ್ಲಿರುವ ವ್ಯತ್ಯಾಸವೇನು ಎಂದು ತಿಳಿದುಕೊಳ್ಳಬೇಕಾಗಿದೆ.

## ದೀನ್ ಮತ್ತು ಶರೀಅತ್‌ನ ವ್ಯತ್ಯಾಸ

ಹಿಂದಿನ ಅಧ್ಯಾಯಗಳಲ್ಲಿ ತಿಳಿಸಲಾಗಿರುವಂತೆ ಎಲ್ಲ ಪ್ರವಾದಿಗಳು ಇಸ್ಲಾಮ್ ಧರ್ಮವನ್ನೇ ಬೋಧಿಸುತ್ತಾ ಬಂದಿದ್ದಾರೆ. ಇಸ್ಲಾಮ್ ಧರ್ಮವೆಂದರೆ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳು ಹಾಗೂ ಪರಲೋಕದ ಪುರಸ್ಕಾರ ಮತ್ತು ಶಿಕ್ಷೆಯ ಮೇಲೆ ಪ್ರವಾದಿಗಳು ಬೋಧಿಸಿರುವಂತೆ ವಿಶ್ವಾಸವಿರಿಸುವುದಾಗಿದೆ. ಅಲ್ಲಾಹನ ಗ್ರಂಥಗಳನ್ನು ನಂಬಿ ಎಲ್ಲ ಸ್ವಯಂಕೃತ ಕ್ರಮಗಳನ್ನು ಬಿಟ್ಟು ಈ ಗ್ರಂಥಗಳು ತೋರಿಸಿದ ಕ್ರಮವನ್ನೇ ಸರಿಯೆಂದು ಪರಿಗಣಿಸಬೇಕು. ಅಲ್ಲಾಹನ ಪ್ರವಾದಿಗಳನ್ನು ಅನುಸರಿಸಬೇಕು ಮತ್ತು ಇತರೆಲ್ಲರನ್ನೂ ಬಿಟ್ಟು ಅವರನ್ನೇ ಅನುಸರಿಸಬೇಕು. ಅಲ್ಲಾಹನ ಆರಾಧನೆಯಲ್ಲಿ ಅವನ ಹೊರತು ಇನ್ನಾರನ್ನೂ ಸೇರಿಸಬಾರದು. ಇಂತಹ ಈಮಾನ್ ಅರ್ಥಾತ್ ಸತ್ಯವಿಶ್ವಾಸ ಮತ್ತು ಇಬಾದತ್‌ನ ಹೆಸರೇ ದೀನ್ ಅಥವಾ ಧರ್ಮವೆಂದಾಗಿದ್ದು ಇದು ಎಲ್ಲ ಪ್ರವಾದಿಗಳ ಬೋಧನೆಗಳಲ್ಲೂ ಸಾಮಾನ್ಯವಾಗಿದೆ.

ಇದಲ್ಲದೆ ಇನ್ನೊಂದು ವಸ್ತುವೂ ಇದೆ. ಅದನ್ನು ಶರೀಅತ್ ಎನ್ನುತ್ತಾರೆ. ಇಬಾದತ್‌ನ ಕ್ರಮ, ಸಾಮಾಜಿಕ ನಿಯಮಗಳು, ಪರಸ್ಪರ ವ್ಯವಹಾರ ಮತ್ತು ಸಂಬಂಧದ ನಿಯಮಗಳನ್ನು ಹಲಾಲ್-ಹರಾಮ್‌ನ (ಧರ್ಮಬದ್ಧ ಮತ್ತು ನಿಷಿದ್ಧ) ಮೇರೆಗಳು ಇತ್ಯಾದಿ ವಿಷಯಗಳನ್ನು ಶರೀಅತ್ ಎನ್ನುತ್ತಾರೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲಾಹನು ವಿಭಿನ್ನ ಕಾಲಗಳಲ್ಲಿ ಮತ್ತು ವಿಭಿನ್ನ ಜನಾಂಗಗಳಲ್ಲಿ ಅವುಗಳ ಸ್ಥಿತಿಗತಿಗಳಿಗನುಸಾರವಾಗಿ ತನ್ನ ಪ್ರವಾದಿಗಳ ಮೂಲಕ ವಿಭಿನ್ನ ಶರೀಅತ್‌ಗಳನ್ನು ಕಳುಹಿಸಿದ್ದನು. ಪ್ರತಿಯೊಂದು

ಜನಾಂಗಕ್ಕೆ ಅದರದರ ಸಂಸ್ಕೃತಿ, ಸಭ್ಯತೆ ಮತ್ತು ನೈತಿಕತೆಯ ಶಿಕ್ಷಣ ನೀಡಿ ಅದನ್ನು ಒಂದು ದೊಡ್ಡ ಕಾನೂನಿನ ಅನುಸರಣೆಗೆ ಸಿದ್ಧಗೊಳಿಸಲಿಕ್ಕಾಗಿ ಹೀಗೆ ಮಾಡಲಾಗಿತ್ತು. ಈ ಕಾರ್ಯ ಪೂರ್ಣಗೊಂಡಾಗ ಅಲ್ಲಾಹನು ಪ್ರವಾದಿ ಮುಹಮ್ಮದ್‌ರನ್ನು(ಸ) ಸಮಸ್ತ ವಿಶ್ವಕ್ಕೆ ಎಲ್ಲ ಕಾಲಗಳಿಗೆ ಅನ್ವಯವಾಗುವಂತಹ ಒಂದು ಶರೀಅತ್ ನೀಡಿ ಕಳುಹಿಸಿದನು. ಈಗಲೂ ಧರ್ಮವು ಹಿಂದಿನ ಎಲ್ಲ ಪ್ರವಾದಿಗಳು ಬೋಧಿಸಿದ ಧರ್ಮವೇ ಆಗಿದೆ. ಆದರೆ ಹಳೆಯ ಶರೀಅತ್‌ಗಳು ಈಗ ರದ್ದುಗೊಂಡಿವೆ. ಅವುಗಳ ಸ್ಥಾನದಲ್ಲಿ ಹೊಸ ಶರೀಅತ್ ಒಂದನ್ನು ಸ್ಥಾಪಿಸಲಾಯಿತು. ಅದರಲ್ಲಿ ಎಲ್ಲ ಮನುಷ್ಯರಿಗೆ ಇಬಾದತ್‌ನ ಕ್ರಮ, ಸಾಮಾಜಿಕ ನಿಯಮಗಳು, ಪರಸ್ಪರ ವ್ಯವಹಾರದ ನಿಯಮಗಳು ಮತ್ತು ಹಲಾಲ್-ಹರಾಮ್‌ಗಳ ಮೇರೆಗಳು ಸಮಾನವಾಗಿವೆ.

## ಶರೀಅತ್ ನಿಯಮಗಳನ್ನು ತಿಳಿಯುವ ಮೂಲಗಳು

ಪ್ರವಾದಿ ಮುಹಮ್ಮದ್(ಸ) ಅವರ ಶರೀಅತ್‌ನ ನಿಯಮಗಳು ಮತ್ತು ಕಾನೂನುಗಳನ್ನು ತಿಳಿಯಲು ನಮ್ಮ ಬಳಿ ಎರಡು ಮೂಲಗಳಿವೆ. ಒಂದು ಪವಿತ್ರ ಕುರ್‌ಆನ್, ಇನ್ನೊಂದು ಹದೀಸ್. ಪವಿತ್ರ ಕುರ್‌ಆನ್ ಅಲ್ಲಾಹನ ಗ್ರಂಥವೆಂಬುದು ನಿಮಗೆ ತಿಳಿದೇ ಇದೆ. ಅದರ ಪ್ರತಿಯೊಂದು ಪದವೂ ಅಲ್ಲಾಹನ ವತಿಯಿಂದಾಗಿದೆ. ಹದೀಸ್ ಎಂದರೆ ನಮ್ಮ ಬಳಿ ತಲುಪಿರುವಂತಹ ಪ್ರವಾದಿವಚನಗಳು. ಪ್ರವಾದಿವರ್ಯರ ಇಡೀ ಜೀವನವು ಪವಿತ್ರ ಕುರ್‌ಆನಿನ ವ್ಯಾಖ್ಯಾನವಾಗಿತ್ತು. ಪ್ರವಾದಿಯಾದ ಬಳಿಕ 23 ವರ್ಷಗಳ ಕಾಲ ಅವರು ಯಾವಾಗಲೂ ಶಿಕ್ಷಣ ಮತ್ತು ಮಾರ್ಗದರ್ಶನ ಮಾಡುವುದರಲ್ಲೇ ನಿರತರಾಗಿದ್ದರು. ತಮ್ಮ ನಡೆ-ನುಡಿಗಳ ಮೂಲಕ ಅಲ್ಲಾಹನ ಮೆಚ್ಚುಗೆಯ ಪ್ರಕಾರ ಜೀವನ ಸಾಗಿಸುವ ವಿಧಾನ ಯಾವುದೆಂದು ಜನರಿಗೆ ತಿಳಿಸುತ್ತಿದ್ದರು. ಈ ಪಾವನ ಜೀವನಾವಧಿಯಲ್ಲಿ ಅವರ ಜೊತೆ ಸಹಾಬಿಗಳಾದ ಪುರುಷರು ಮತ್ತು ಮಹಿಳೆಯರು ಹಾಗೂ ಸ್ವಯಂ ಪ್ರವಾದಿವರ್ಯರ ನಿಕಟ ಬಂಧುಗಳು ಮತ್ತು ಪ್ರವಾದಿಯ ಪತ್ನಿಯರು ಇರುತ್ತಿದ್ದರು. ಇವರೆಲ್ಲರೂ ಪ್ರವಾದಿವರ್ಯರ ಪ್ರತಿಯೊಂದು ಮಾತನ್ನು ಗಮನವಿಟ್ಟು ಆಲಿಸುತ್ತಿದ್ದರು. ಅವರ ಎಲ್ಲ ಕಾರ್ಯಗಳನ್ನು ಗಮನವಿಟ್ಟು ನೋಡುತ್ತಿದ್ದರು. ಅವರಿಗೆದುರಾಗುವ ಎಲ್ಲ ವ್ಯವಹಾರಗಳಲ್ಲಿ ಪ್ರವಾದಿವರ್ಯರಿಂದ ಶರೀಅತ್‌ನ ನಿಯಮಗಳನ್ನು ಕೇಳಿ ತಿಳಿಯುತ್ತಿದ್ದರು. ಕೆಲವೊಮ್ಮೆ ಅವರು ಇಂತಿಂತಹ ಕೆಲಸ ಮಾಡಿರಿ ಮತ್ತು ಇಂತಿಂತಹ ಕೆಲಸ ಮಾಡಬೇಡಿರೆಂದು ಹೇಳುತ್ತಿದ್ದರು. ಅಲ್ಲಿ ಹಾಜರಿದ್ದ ಜನರು ಅವರ ಆಜ್ಞೆಯನ್ನು ನೆನಪಿಟ್ಟುಕೊಳ್ಳುತ್ತಿದ್ದರು. ಕೆಲವೊಮ್ಮೆ ಅವರು ಯಾವುದಾದರೊಂದು ಕಾರ್ಯವನ್ನು ಒಂದು ವಿಶಿಷ್ಟ ಕ್ರಮದಲ್ಲಿ ಮಾಡುತ್ತಿದ್ದರು. ನೋಡುವವರು ಅದನ್ನು ನೆನಪಿಟ್ಟುಕೊಳ್ಳುತ್ತಿದ್ದರು ಮತ್ತು ನೋಡದವರಿಗೆ ಅದನ್ನು ವಿವರಿಸುತ್ತಿದ್ದರು. ಅದೇ ರೀತಿ ಕೆಲವೊಮ್ಮೆ ಅವರ ಮುಂದೆ ಯಾರಾದರೊಬ್ಬ ವ್ಯಕ್ತಿ

ಯಾವುದಾದರೂ ಕಾರ್ಯ ಮಾಡುತ್ತಿದ್ದರೆ ಪ್ರವಾದಿ(ಸ) ಒಂದೋ ಅದನ್ನು ನೋಡಿ ಸುಮ್ಮನಿರುತ್ತಿದ್ದರು. ಇಲ್ಲವೇ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದರು ಅಥವಾ ಅದರಿಂದ ತಡೆಯುತ್ತಿದ್ದರು. ಈ ಎಲ್ಲ ವಿಷಯಗಳನ್ನೂ ಜನರು ತಮ್ಮ ಸ್ಮೃತಿಪಟಲದಲ್ಲಿ ಸುರಕ್ಷಿತ ವಾಗಿಡುತ್ತಿದ್ದರು. ಇಂತಹ ಎಷ್ಟು ವಿಷಯಗಳನ್ನು ಸಹಾಬಿಗಳಿಂದ ಜನರು ಕೇಳಿದರೋ ಅವುಗಳನ್ನು ಕೆಲವರು ಕಂಠಪಾಠ ಮಾಡಿಕೊಂಡರು. ಇನ್ನು ಕೆಲವರು ಅವುಗಳನ್ನು ಬರೆದುಕೊಂಡರು. ಈ ಸುದ್ದಿಯನ್ನು ನಮಗೆ ಯಾರು ತಿಳಿಸಿದರು ಎಂಬುದನ್ನು ಕೂಡಾ ನೆನಪಿಟ್ಟುಕೊಂಡರು. ಈ ಎಲ್ಲ ವರದಿಗಳನ್ನೂ ಕಾಲಕ್ರಮೇಣ ಗ್ರಂಥಗಳ ರೂಪದಲ್ಲಿ ಸಂಗ್ರಹಿಸಲಾಯಿತು. ಈ ರೀತಿ ಹದೀಸ್‌ನ ಒಂದು ದೊಡ್ಡ ಭಂಡಾರವೇ ಅಸ್ತಿತ್ವಕ್ಕೆ ಬಂತು. ಇವುಗಳಲ್ಲಿ ವಿಶೇಷವಾಗಿ ಇಮಾಮ್ ಮಾಲಿಕ್, ಇಮಾಮ್ ಬುಖಾರಿ, ಇಮಾಮ್ ಮುಸ್ಲಿಮ್, ಇಮಾಮ್ ತಿರ್ಮಿದಿ, ಇಮಾಮ್ ಅಬೂ ದಾವೂದ್, ಇಮಾಮ್ ನಸಾಈ ಮತ್ತು ಇಮಾಮ್ ಇಬ್ನುಮಾಜಃ ಅವರ ಗ್ರಂಥಗಳು ಅತ್ಯಧಿಕ ಪ್ರಾಮಾಣಿಕವೆಂದು ಪರಿಗಣಿಸಲ್ಪಡುತ್ತವೆ.

## ಫಿಕ್ಹ್ ಅಥವಾ ಕರ್ಮಶಾಸ್ತ್ರ

ಕುರ್‌ಆನ್ ಮತ್ತು ಹದೀಸ್‌ನ ಆಜ್ಞೆಗಳ ಬಗ್ಗೆ ಗಹನವಾದ ಅಧ್ಯಯನ ನಡೆಸಿ ಕೆಲವು ಹಿರಿಯರು ಸಾಮಾನ್ಯ ಜನರ ಅನುಕೂಲತೆಗಾಗಿ ವಿವರವಾದ ಕಾನೂನುಗಳನ್ನು ಕ್ರೋಢೀಕರಿಸಿದರು. ಇವುಗಳನ್ನು ಫಿಕ್ಹ್ ಅಥವಾ ಕರ್ಮಶಾಸ್ತ್ರವೆನ್ನಲಾಗುತ್ತದೆ. ಪ್ರತಿಯೊಬ್ಬನೂ ಪವಿತ್ರ ಕುರ್‌ಆನಿನ ಎಲ್ಲ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ತಿಳಿಯುವುದು ಮತ್ತು ಪ್ರತಿಯೊಬ್ಬನೂ ಶರೀಅತ್‌ನ ನಿಯಮಗಳನ್ನು ಸ್ವಯಂ ತಿಳಿದುಕೊಳ್ಳುವಷ್ಟು ಹದೀಸ್‌ನ ಜ್ಞಾನಗಳಿಸುವುದು ಸಾಧ್ಯವಿಲ್ಲದ ಕಾರಣ ಈ ಮಹಾತ್ಮರು ಅನೇಕ ವರ್ಷಗಳ ಅಧ್ಯಯನ ಮತ್ತು ಸಂಶೋಧನೆಯ ಬಳಿಕ ಈ ಕರ್ಮಶಾಸ್ತ್ರವನ್ನು ಕ್ರೋಡೀಕರಿಸಿದ್ದಾರೆ. ಅವರ ಉಪಕಾರ ಭಾರದಿಂದ ಮುಸ್ಲಿಮ್ ಸಮುದಾಯವು ಎಂದಿಗೂ ಮುಕ್ತವಾಗಲಾರದು. ಇಂದು ಜಗತ್ತಿನ ಕೋಟಿಗಟ್ಟಲೆ ಮುಸ್ಲಿಮರು ಯಾವುದೇ ಪ್ರಯಾಸವಿಲ್ಲದೆ ಶರೀಅತ್‌ನ ವಿಧಿಗಳನ್ನು ಪಾಲಿಸುವುದು ಅವರ ಪರಿಶ್ರಮಗಳ ಪರಿಣಾಮವೇ ಆಗಿದೆ. ಈಗ ಯಾರಿಗೂ ಯಾವುದೇ ವಿಷಯದಲ್ಲಿ ಅಲ್ಲಾಹನ ಮತ್ತು ಪ್ರವಾದಿಯ ಆಜ್ಞೆಗಳನ್ನು ತಿಳಿಯುವುದು ತ್ರಾಸದಾಯಕವಲ್ಲ.

ಆರಂಭದಲ್ಲಿ ಅನೇಕ ಮಹಾತ್ಮರು ಕರ್ಮಶಾಸ್ತ್ರವನ್ನು ತಮ್ಮದೇ ಆದ ವಿಧಾನದಿಂದ ರಚಿಸಿದ್ದರು. ಆದರೆ ಕಾಲ ಕ್ರಮೇಣ ಕೇವಲ ನಾಲ್ಕು ಕರ್ಮಶಾಸ್ತ್ರಗಳು ಜಗತ್ತಿನಲ್ಲಿ ಉಳಿದುಕೊಂಡುವು. ಇಂದು ಜಗತ್ತಿನ ಮುಸ್ಲಿಮರು ಹೆಚ್ಚಾಗಿ ಈ ನಾಲ್ಕು ಕರ್ಮಶಾಸ್ತ್ರಗಳನ್ನೇ ಅನುಸರಿಸುತ್ತಾರೆ:

1. ಇಮಾಮ್ ಅಬೂಹನೀಫ(ರ) ಅವರ ಕರ್ಮಶಾಸ್ತ್ರ. ಇದರ ಕ್ರೋಡೀಕರಣದಲ್ಲಿ

ಇಮಾಮ್ ಅಬೂ ಯೂಸುಫ್, ಇಮಾಮ್ ಮುಹಮ್ಮದ್, ಇಮಾಮ್ ಝುಫರ್(ರ) ಮತ್ತು ಇಂತಹುದೇ ಇನ್ನು ಕೆಲವು ಮಂದಿ ಶ್ರೇಷ್ಠ ಪಂಡಿತರ ಸಲಹೆಯೂ ಸೇರಿತ್ತು. ಇದನ್ನು ಹನಫೀ ಕರ್ಮಶಾಸ್ತ್ರವೆನ್ನುತ್ತಾರೆ.

2. ಇಮಾಮ್ ಮಾಲಿಕ್(ರ) ಅವರ ಕರ್ಮಶಾಸ್ತ್ರ. ಇದನ್ನು ಮಾಲಿಕೀ ಕರ್ಮಶಾಸ್ತ್ರವೆಂದು ಕರೆಯಲಾಗುತ್ತದೆ.

3. ಇಮಾಮ್ ಶಾಫಿಈ(ರ) ಅವರ ಕರ್ಮಶಾಸ್ತ್ರ. ಇದು ಶಾಫಿಈ ಕರ್ಮಶಾಸ್ತ್ರವೆಂದು ಕರೆಯಲ್ಪಡುತ್ತದೆ.

4. ಇಮಾಮ್ ಅಹ್ಮದ್ ಬಿನ್ ಹಂಬಲ್(ರ) ಅವರ ಕರ್ಮಶಾಸ್ತ್ರ. ಇದನ್ನು ಹಂಬಲೀ ಕರ್ಮಶಾಸ್ತ್ರವೆನ್ನಲಾಗುತ್ತದೆ.

ಈ ನಾಲ್ಕೂ ಕರ್ಮಶಾಸ್ತ್ರಗಳು ಪ್ರವಾದಿವರ್ಯರ(ಸ) ನಂತರ ಎರಡು ಶತಮಾನಗಳೊಳಗಾಗಿ ರಚಿಸಲ್ಪಟ್ಟವು. ಇವುಗಳಲ್ಲಿ ಕಂಡು ಬರುವ ಭಿನ್ನಾಭಿಪ್ರಾಯಗಳು ತೀರಾ ಸಹಜವಾದ ಭಿನ್ನಾಭಿಪ್ರಾಯಗಳಾಗಿವೆ. ಕೆಲವು ಮಂದಿ ಯಾವುದಾದರೊಂದು ವಿಷಯದಲ್ಲಿ ಸಂಶೋಧನೆ ನಡೆಸಿದಾಗ ಅಥವಾ ಯಾವುದಾದರೊಂದು ವಿಷಯದ ಅಧ್ಯಯನ ನಡೆಸಿದಾಗ ಅವರ ಸಂಶೋಧನೆ ಮತ್ತು ಅಧ್ಯಯನದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರುವುದು ಸಹಜ. ಆದರೆ ಇವರೆಲ್ಲರೂ ಸತ್ಯಪ್ರಿಯರೂ ಸತ್‌ಸಂಕಲ್ಪವುಳ್ಳವರೂ ಮುಸ್ಲಿಮರ ಹಿತೈಷಿಗಳೂ ಆದ ಮಹಾತ್ಮರಾಗಿದ್ದುದರಿಂದ ಎಲ್ಲ ಮುಸ್ಲಿಮರೂ ಈ ನಾಲ್ಕೂ ಕರ್ಮಶಾಸ್ತ್ರಗಳನ್ನು ಸತ್ಯಪೂರ್ಣವೆಂದು ನಂಬುತ್ತಾರೆ.

ಆದರೆ ಒಂದು ವಿಷಯದಲ್ಲಿ ಒಂದೇ ವಿಧಾನವನ್ನು ಅನುಸರಿಸಬಹುದೇ ವಿನಾ ನಾಲ್ಕು ವಿಭಿನ್ನ ವಿಧಾನಗಳನ್ನು ಅನುಸರಿಸುವುದು ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿನ ವಿದ್ವಾಂಸರು ಈ ನಾಲ್ಕರ ಪೈಕಿ ಯಾವುದಾದರೂ ಒಂದು ಕರ್ಮಶಾಸ್ತ್ರವನ್ನು ಮುಸ್ಲಿಮರು ಅನುಸರಿಸಬೇಕೆನ್ನುತ್ತಾರೆ. ಇವರ ಹೊರತು ವಿದ್ವಾಂಸರ ಒಂದು ವಿಭಾಗವನ್ನು ಯಾವುದೇ ಪ್ರತ್ಯೇಕ ಕರ್ಮಶಾಸ್ತ್ರದ ಅನುಸರಣೆಯ ಅಗತ್ಯವಿಲ್ಲವೆನ್ನುತ್ತದೆ. ಅವರು, ಕುರ್‌ಆನ್ ಹದೀಸ್‌ಗಳ ಜ್ಞಾನ ಇರುವವನು ನೇರವಾಗಿ ಅವುಗಳಿಂದಲೇ ಶರೀಅತ್‌ನ ವಿಧಿಗಳನ್ನು ತಿಳಿಯಬೇಕು. ಆದರೆ ಜ್ಞಾನ ಇಲ್ಲದವನು ತಮಗೆ ವಿಶ್ವಾಸವಿರುವ ಯಾವುದಾದರೂ ವಿದ್ವಾಂಸರ ಅನುಸರಣೆ ಮಾಡಬೇಕು ಎನ್ನುತ್ತಾರೆ. ಇವರನ್ನು 'ಅಹ್ಲುಲ್ ಹದೀಸ್' ಎಂದು ಕರೆಯಲಾಗುತ್ತದೆ. ಮೇಲಿನ ನಾಲ್ಕು ಕರ್ಮಶಾಸ್ತ್ರಗಳನ್ನು ಅನುಸರಿಸುವವರಂತೆ ಇವರೂ ಸತ್ಯದಲ್ಲೇ ಇದ್ದಾರೆ.

## ತಸವ್ವುಫ್

ಕರ್ಮಶಾಸ್ತ್ರವು ಮನುಷ್ಯನ ಬಾಹ್ಯ ಕರ್ಮಗಳಿಗೆ ಸಂಬಂಧಿಸಿದೆ. ಅದು, ಒಬ್ಬ

ಮನುಷ್ಯನು ಅದರ ಅನುಸರಣೆ ಮಾಡುತ್ತಾನೋ ಇಲ್ಲವೋ ಎಂಬುದನ್ನು ಮಾತ್ರ ನೋಡುತ್ತದೆ. ಒಂದು ವೇಳೆ ಅವನು ಅನುಸರಿಸಿದ್ದಾನೆ ಎಂದಾದರೆ ಅನುಸರಿಸುವಾಗ ಅವನ ಮನಸ್ಸಿನ ಸ್ಥಿತಿ ಹೇಗಿತ್ತು ಎಂಬುದನ್ನು ಅದು ನೋಡುವುದಿಲ್ಲ. ಮನಸ್ಸಿನ ಸ್ಥಿತಿಯ ಕುರಿತು ಚರ್ಚಿಸುವ ಶಾಸ್ತ್ರವೇ 'ತಸವ್ವುಫ್' ಆಗಿದೆ.[1] ಉದಾ: ನೀವು ನಮಾಝ್ ಮಾಡುತ್ತೀರೆಂದಿಟ್ಟುಕೊಳ್ಳೋಣ. ಈ ವಿಷಯದಲ್ಲಿ ಕರ್ಮಶಾಸ್ತ್ರವು 'ನೀವು ವುಝೂ ಸರಿಯಾಗಿ ಮಾಡಿರುವಿರಾ, ಕಿಬ್ಲಾಭಿಮುಖವಾಗಿ ನಿಂತಿರುವಿರಾ, ನಮಾಝ್‌ನ ಎಲ್ಲ ವಿಧಿಗಳನ್ನೂ ಪಾಲಿಸಿರುವಿರಾ, ನಮಾಝ್‌ನಲ್ಲಿ ಪಠಿಸಬೇಕಾದುದೆಲ್ಲವನ್ನೂ ಪಠಿಸಿದ್ದೀರಾ. ಯಾವ ಸಮಯಕ್ಕೆ ಎಷ್ಟು ರಕಅತ್‌ಗಳನ್ನು ನಿಗದಿಪಡಿಸಲಾಗಿದೆಯೋ ಅದೇ ಸಮಯದಲ್ಲಿ ಅಷ್ಟೇ ರಕಅತ್‌ಗಳನ್ನು ನಿರ್ವಹಿಸಿರುವಿರಾ' ಎಂಬುದನ್ನು ಮಾತ್ರ ನೋಡುತ್ತದೆ. ಇದೆಲ್ಲವನ್ನೂ ನೀವು ಮಾಡಿದ್ದರೆ ಕರ್ಮಶಾಸ್ತ್ರದ ದೃಷ್ಟಿಯಲ್ಲಿ ನಿಮ್ಮ ನಮಾಝ್ ಪೂರ್ಣಗೊಂಡಿತು. ಆದರೆ ಈ ಆರಾಧನೆಯ ವೇಳೆ ನಿಮ್ಮ ಮನಸ್ಸಿನ ಸ್ಥಿತಿ ಹೇಗಿತ್ತು? ಅಲ್ಲಾಹನ ಕಡೆಗೆ ನಿಮ್ಮ ಗಮನವಿತ್ತೋ ಇಲ್ಲವೋ? ನಿಮ್ಮಲ್ಲಿ ನಮಾಝ್‌ನಿಂದಾಗಿ ಅಲ್ಲಾಹನ ಭಯ. ಅವನು ಸರ್ವಜ್ಞನೂ ಸರ್ವವ್ಯಾಪಿಯೂ ಆಗಿದ್ದಾನೆಂಬ ದೃಢ ನಂಬಿಕೆ ಮತ್ತು ಅವನ ಸಂಪ್ರೀತಿಯನ್ನು ಮಾತ್ರ ಗಳಿಸುವ ಬಯಕೆ ಉಂಟಾಗಿತ್ತೋ ಇಲ್ಲವೋ? ಈ ನಮಾಝ್ ನಿಮ್ಮ ಆತ್ಮವನ್ನು ಎಷ್ಟು ಪರಿಶುದ್ಧಗೊಳಿಸಿತು? ನಿಮ್ಮ ನೈತಿಕತೆಯನ್ನು ಎಷ್ಟರ ಮಟ್ಟಿಗೆ ಸುಧಾರಿಸಿತು? ನಿಮ್ಮನ್ನು ಎಷ್ಟರ ಮಟ್ಟಿಗೆ ಸತ್ಯಸಂಧ ಮತ್ತು ನಿಷ್ಠಾವಂತ ಮುಸ್ಲಿಮನಾಗಿ ಮಾಡಿತು ಎಂಬುದನ್ನು 'ತಸವ್ವುಫ್' ನೋಡುತ್ತದೆ.

ಈ ಎಲ್ಲ ವಿಷಯಗಳು ನಮಾಝ್‌ನ ನೈಜ ಉದ್ದೇಶಗಳಾಗಿದ್ದು ಅವು ಎಷ್ಟರ ಮಟ್ಟಿಗೆ ಉನ್ನತ ಮಟ್ಟದಲ್ಲಿ ದೊರೆಯುತ್ತವೋ ಅಷ್ಟರ ಮಟ್ಟಿಗೆ ನಿಮ್ಮ ನಮಾಝ್ ತಸವ್ವುಫ್‌ನ ದೃಷ್ಟಿಯಲ್ಲಿ ಪೂರ್ಣವಾಗಿರುತ್ತದೆ. ಅದರಲ್ಲಿ ಎಷ್ಟರ ಮಟ್ಟಿಗೆ ಕೊರತೆಯಿರುತ್ತದೋ ಅಷ್ಟರ ಮಟ್ಟಿಗೆ ನಿಮ್ಮ ನಮಾಝ್ ತಸವ್ವುಫ್‌ನ ದೃಷ್ಟಿಯಲ್ಲಿ ಅಪೂರ್ಣವಾಗಿರುತ್ತದೆ. ಇದೇ ರೀತಿ ಶರೀಅತ್‌ನ ಎಲ್ಲ ಆಜ್ಞೆಗಳಲ್ಲಿ ಕರ್ಮಶಾಸ್ತ್ರವು ಆ ಆಜ್ಞೆಯನ್ನು ನಿಮಗೆ ಯಾವ ರೂಪದಲ್ಲಿ ನೀಡಲಾಗಿದೆಯೋ ಅದೇ ರೂಪದಲ್ಲಿ ನೀವು ಅದನ್ನು ಪಾಲಿಸುತ್ತೀರೋ ಇಲ್ಲವೋ ಎಂಬುದನ್ನು ಮಾತ್ರ ನೋಡುತ್ತದೆ. ಆದರೆ ತಸವ್ವುಫ್ ಈ ಆಜ್ಞೆಗಳನ್ನು ಪಾಲಿಸುವಾಗ ನಿಮ್ಮಲ್ಲಿ ನಿಷ್ಠೆ, ಸತ್ಸಂಕಲ್ಪ ಮತ್ತು ನೈಜ ಅನುಸರಣೆ ಎಷ್ಟರ ಮಟ್ಟದಲ್ಲಿತ್ತೆಂಬುದನ್ನು ನೋಡುತ್ತದೆ.

ಈ ವ್ಯತ್ಯಾಸವನ್ನು ನೀವು ಒಂದು ಉದಾಹರಣೆಯಿಂದ ಚೆನ್ನಾಗಿ ತಿಳಿದುಕೊಳ್ಳ

1. ಪವಿತ್ರ ಕುರ್‌ಆನ್ ಭಾಷೆಯಲ್ಲಿ ಇದರ ಹೆಸರು 'ತಝ್ಕಿಯಃ' ಮತ್ತು 'ಹಿಕ್ಮತ್' ಎಂದಾಗಿದೆ. ಹದೀಸ್‌ನಲ್ಲಿ ಅದಕ್ಕೆ 'ಇಹ್ಸಾನ್' ಎಂದು ಹೆಸರಿಸಲಾಗಿದೆ. ಅನಂತರ ಜನರಲ್ಲಿ ಇದು 'ತಸವ್ವುಫ್' ಎಂಬ ಹೆಸರಲ್ಲಿ ಪ್ರಖ್ಯಾತವಾಯಿತು.

ಬಹುದು. ಒಬ್ಬ ವ್ಯಕ್ತಿಯು ನಿಮ್ಮನ್ನು ಭೇಟಿಯಾದಾಗ ನೀವು ಅವನ ಮೇಲೆ ಎರಡು ರೀತಿಯಲ್ಲಿ ದೃಷ್ಟಿ ಬೀರುತ್ತೀರಿ. ಒಂದನೆಯದಾಗಿ ಅವನು ಸರಿಯಾದ ಆರೋಗ್ಯವಂತನಾಗಿರುವನೋ ಇಲ್ಲವೋ, ಅವನು ಅಂಧನೋ, ಕುಂಟನೋ ಮತ್ತು ಕೈಯಿಲ್ಲದವನೋ; ರೂಪವಂತನೋ ಕುರೂಪಿಯೋ, ಒಳ್ಳೆಯ ಬಟ್ಟೆಗಳನ್ನು ಧರಿಸಿದ್ದಾನೋ ಅಥವಾ ಕೊಳಕು ಬಟ್ಟೆಗಳನ್ನು ಧರಿಸಿದ್ದಾನೋ ಎಂದು. ಎರಡನೆಯದಾಗಿ ಅವನ ನಡತೆ ಹೇಗಿದೆ? ಅವನ ಅಭ್ಯಾಸಗಳೇನು? ಅವನ ಬುದ್ಧಿವಂತಿಕೆ ಮತ್ತು ವಿವೇಚನಾ ಶಕ್ತಿ ಹೇಗಿದೆ? ಅವನು ಪಂಡಿತನೋ ಪಾಮರನೋ? ಒಳ್ಳೆಯವನೋ ಕೆಟ್ಟವನೋ ಎಂದು. ಇವುಗಳ ಪೈಕಿ ಮೊದಲನೆಯ ದೃಷ್ಟಿಯು ಕರ್ಮಶಾಸ್ತ್ರದ ದೃಷ್ಟಿಯಾಗಿದ್ದು ಎರಡನೆಯ ದೃಷ್ಟಿಯು ತಸವ್ವುಫ್‌ನ ದೃಷ್ಟಿಯಾಗಿದೆ. ಗೆಳೆತನಕ್ಕಾಗಿ ಒಬ್ಬನನ್ನು ನೀವು ಆರಿಸಬಯಸುವಾಗ ಅವನ ವ್ಯಕ್ತಿತ್ವದ ಈ ಎರಡೂ ಪಾರ್ಶ್ವಗಳನ್ನು ನೀವು ನೋಡುವಿರಿ. ಅವನ ಬಾಹ್ಯವೂ ಅಂತರ್ಯವೂ ಉತ್ತಮವಾಗಿರಬೇಕೆಂದೇ ನೀವು ಬಯಸುವಿರಿ. ಇದೇ ರೀತಿ ಶರೀಅತ್‌ನ ಆಜ್ಞೆಗಳ ಅನುಸರಣೆಯ ಬಾಹ್ಯ ರೂಪವೂ ಆಂತರಿಕ ಸ್ಫೂರ್ತಿಯೂ ಉತ್ತಮವಾಗಿರಬೇಕೆಂಬುದೇ ಇಸ್ಲಾಮಿನ ಬಯಕೆಯಾಗಿದೆ. ಯಾರ ಬಾಹ್ಯ ಅನುಸರಣೆಯು ಉತ್ತಮವಾಗಿದ್ದು ಅಂತರ್ಯದಲ್ಲಿ ಅನುಸರಣೆಯ ಸ್ಫೂರ್ತಿ ಇರುವುದಿಲ್ಲವೋ ಅವನ ಉಪಮೆಯು ಜೀವವಿಲ್ಲದ ಒಬ್ಬ ಸುಂದರ ವ್ಯಕ್ತಿ ಇರುವಂತಿದೆ. ಯಾವ ವ್ಯಕ್ತಿಯ ಕರ್ಮದಲ್ಲಿ ಎಲ್ಲ ಆಂತರಿಕ ಗುಣಗಳಿದ್ದು ಬಾಹ್ಯರೂಪವು ಸರಿಯಾಗಿರುವುದಿಲ್ಲವೋ ಅವನ ಉಪಮೆಯು ಒಬ್ಬ ವ್ಯಕ್ತಿಯು ಬಹಳ ಸಜ್ಜನನೂ ಒಳ್ಳೆಯವನೂ ಆಗಿದ್ದು ಕುರೂಪಿಯೂ ಅಂಗವಿಕಲನೂ ಆಗಿರುವಂತಿದೆ.

ಈ ಉದಾಹರಣೆಯಿಂದ ನಿಮಗೆ ಕರ್ಮಶಾಸ್ತ್ರ ಮತ್ತು ತಸವ್ವುಫ್‌ನ ಪರಸ್ಪರ ಸಂಬಂಧವೇನೆಂದು ತಿಳಿಯುವುದು. ಆದರೆ ದುರದೃಷ್ಟವೆಂದರೆ ಅನಂತರದ ಕಾಲಗಳಲ್ಲಿ ಜ್ಞಾನ ಮತ್ತು ನೀತಿಯ ಅವನತಿಯಿಂದಾಗಿ ಇತರ ಅನೇಕ ಕೆಡುಕುಗಳು ಹುಟ್ಟಿಕೊಂಡಂತೆ ತಸವ್ವುಫ್‌ನ ಈ ಪರಿಶುದ್ಧ ಚಿಲುಮೆ ಕೂಡಾ ಕಳಂಕಿತವಾಯಿತು. ಜನರು ತರತರದ ಇಸ್ಲಾಮೇತರ ತತ್ವಗಳನ್ನು ಪಥಭ್ರಷ್ಟ ಜನಾಂಗಗಳಿಂದ ಕಲಿತು ಅವುಗಳನ್ನು ತಸವ್ವುಫ್‌ನ ಹೆಸರಲ್ಲಿ ಇಸ್ಲಾಮಿನಲ್ಲಿ ಸೇರಿಸಿಕೊಂಡರು. ಚಿತ್ರ ವಿಚಿತ್ರ ವಿಶ್ವಾಸ-ಶ್ರದ್ಧೆಗಳು ಮತ್ತು ಕ್ರಮಗಳಿಗೆ ತಸವ್ವುಫ್ ಎಂಬ ಹೆಸರಿಡಲಾಯಿತು. ಅವುಗಳಿಗೆ ಕುರ್‌ಆನ್ ಮತ್ತು ಹದೀಸ್‌ನಲ್ಲಿ ಯಾವ ಆಧಾರವೂ ಇಲ್ಲ. ಕ್ರಮೇಣ ಇಂತಹ ಜನರು ತಮ್ಮನ್ನು ಶರೀಅತ್‌ನ ಅನುಸರಣೆಯಿಂದ ಮುಕ್ತರೆಂದು ಕೂಡಾ ಸಾರಿಕೊಂಡರು. ಅವರ ಹೇಳಿಕೆ ಪ್ರಕಾರ ತಸವ್ವುಫ್‌ಗೆ ಶರೀಅತ್‌ನೊಂದಿಗೆ ಯಾವ ಸಂಬಂಧವೂ ಇಲ್ಲ. ಇದು ಬೇರೆಯೇ ತತ್ವಶಾಸ್ತ್ರವಾಗಿದೆ. ಸೂಫಿಯಾದವನಿಗೆ ಶರೀಅತ್‌ನ ಕಾನೂನು ಕಟ್ಟಳೆಗಳೊಂದಿಗೆ ಯಾವ ಸಂಬಂಧವೂ ಇಲ್ಲ. ಇಂತಹ ವಿಷಯಗಳು ಸಾಮಾನ್ಯವಾಗಿ ಅಜ್ಞಾನಿಗಳಾದ ಸೂಫಿಗಳಿಂದ ಕೇಳಿಬರುತ್ತದೆ. ಆದರೆ ವಾಸ್ತವದಲ್ಲಿ ಇದು ತೀರಾ ತಪ್ಪಾಗಿದೆ.

ಶರೀಅತ್‌ನ ಆಜ್ಞೆಗಳಿಂದ ಮುಕ್ತವಾದ ತಸವ್ವುಫ್‌ನ ಕಲ್ಪನೆಯೇ ಇಸ್ಲಾಮಿನಲ್ಲಿಲ್ಲ. ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್‌ನ ಕರ್ತವ್ಯಗಳಿಂದ ಯಾವ ಸೂಫಿಯೂ ಮುಕ್ತನಲ್ಲ.

ಸಾಮಾಜಿಕ, ಆರ್ಥಿಕ, ನೈತಿಕ, ವ್ಯಾವಹಾರಿಕ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಹಲಾಲ್ ಹರಾಮ್‌ನ ನಿಯಮಗಳ ಬಗ್ಗೆ ಅಲ್ಲಾಹನು ಮತ್ತು ಪ್ರವಾದಿ ವರ್ಯರು(ಸ) ತಿಳಿಸಿರುವ ಕಾನೂನುಗಳನ್ನು ಉಲ್ಲಂಘಿಸುವ ಹಕ್ಕು ಯಾವ ಸೂಫಿಗೂ ಇಲ್ಲ. ಪ್ರವಾದಿವರ್ಯರನ್ನು(ಸ) ಸರಿಯಾಗಿ ಅನುಸರಿಸದವನು ಮತ್ತು ಅವರು ನಿಶ್ಚಯಿಸಿದ ಕ್ರಮವನ್ನು ಪಾಲಿಸದವನು ಸೂಫಿ ಎಂದು ಕರೆಯಲ್ಪಡಲು ಅರ್ಹನೇ ಅಲ್ಲ. ತಸವ್ವುಫ್ ಎಂಬುದು ವಾಸ್ತವದಲ್ಲಿ ಅಲ್ಲಾಹನ ಮತ್ತು ಪ್ರವಾದಿಯ ನೈಜ ಪ್ರೇಮದ ಹೆಸರು. ಅಲ್ಲಾಹನು ಮತ್ತು ಪ್ರವಾದಿಯ ಅನುಸರಣೆಯಿಂದ ಕೂದಲೆಳೆಯಷ್ಟೂ ದೂರ ಸರಿಯದಿರುವುದೇ ಆ ಪ್ರೇಮದ ಬೇಡಿಕೆಯಾಗಿದೆ. ಆದ್ದರಿಂದ ಇಸ್ಲಾಮೀ ತಸವ್ವುಫ್ ಎಂಬುದು ಶರೀಅತ್‌ನಿಂದ ಭಿನ್ನವಾದ ಯಾವುದೇ ವಸ್ತುವಲ್ಲ. ಬದಲಾಗಿ ಶರೀಅತ್‌ನ ಆಜ್ಞೆಗಳನ್ನು ಅತ್ಯಂತ ನಿಷ್ಠೆ ಮತ್ತು ಸತ್ಸಂಕಲ್ಪದೊಂದಿಗೆ ಪಾಲಿಸುವುದು ಮತ್ತು ಅನುಸರಣೆಯಲ್ಲಿ ಅಲ್ಲಾಹನ ಪ್ರೇಮ ಮತ್ತು ಅವನ ಭಯದ ಸ್ಫೂರ್ತಿಯನ್ನು ತುಂಬುವುದರ ಹೆಸರೇ ತಸವ್ವುಫ್ ಎಂದಾಗಿದೆ.

# ಶರೀಅತ್‌ನ ವಿಧಿಗಳು

ಈ ಕೊನೆಯ ಅಧ್ಯಾಯದಲ್ಲಿ ನಾವು ಶರೀಅತ್‌ನ ತತ್ವಗಳು ಮತ್ತು ಅದರ ಮುಖ್ಯ ವಿಧಿಗಳನ್ನು ವಿವರಿಸುವೆವು. ಅದರಿಂದ ಇಸ್ಲಾಮೀ ಶರೀಅತ್ ಮನುಷ್ಯ ಜೀವನವನ್ನು ಯಾವ ರೀತಿ ಒಂದು ಅತ್ಯುತ್ತಮ ನಿಯಮಕ್ಕೆ ಬದ್ಧಗೊಳಿಸುತ್ತದೆ ಮತ್ತು ಆ ನಿಯಮದಲ್ಲಿ ಎಂತೆಂತಹ ಯುಕ್ತಿಗಳು ಅಡಗಿವೆ ಎಂಬುದು ನಿಮಗೆ ತಿಳಿದು ಬರುವುದು.

## ಶರೀಅತ್‌ನ ತತ್ವಗಳು

ನೀವು ನಿಮ್ಮ ಪರಿಸ್ಥಿತಿಯ ಬಗ್ಗೆ ಯೋಚಿಸಿದರೆ ನೀವು ಲೋಕದಲ್ಲಿ ಬಹಳಷ್ಟು ಸಾಮರ್ಥ್ಯಗಳನ್ನು ತೆಗೆದುಕೊಂಡು ಬಂದಿರುವಿರೆಂದು ತಿಳಿದು ಬರುವುದು. ಪ್ರತಿಯೊಂದು ಸಾಮರ್ಥ್ಯವನ್ನು ಕಾರ್ಯರೂಪಕ್ಕೆ ತರಬೇಕೆಂಬುಧೇ ಅದರ ಬೇಡಿಕೆಯಾಗಿದೆ. ನಿಮಗೆ ಬುದ್ಧಿ ಇದೆ, ಇಚ್ಛಾಶಕ್ತಿ ಇದೆ, ಬಯಕೆಗಳಿವೆ, ದೃಷ್ಟಿ ಇದೆ, ಶ್ರವಣ ಶಕ್ತಿ ಇದೆ, ರುಚಿ ತಿಳಿಯುವ ಶಕ್ತಿ ಇದೆ, ಕೈ ಕಾಲುಗಳಲ್ಲಿ ಶಕ್ತಿ ಇದೆ, ದ್ವೇಷ ಮತ್ತು ಕ್ರೋಧದ ಭಾವನೆಗಳಿವೆ, ಭಯ ಮತ್ತು ಲೋಭದ ವಿಕಾರಗಳಿವೆ. ಈ ಪೈಕಿ ಯಾವ ವಸ್ತುವೂ ನಿರರ್ಥಕವಲ್ಲ. ನಿಮಗೆ ಅದರ ಅಗತ್ಯವಿದೆ ಎಂದೇ ಎಲ್ಲ ವಸ್ತುಗಳನ್ನು ನಿಮಗೆ ನೀಡಲಾಗಿದೆ. ಲೋಕದಲ್ಲಿ ನಿಮ್ಮ ಜೀವನ ಮತ್ತು ಜೀವನದ ಯಶಸ್ಸು ಅಡಗಿರುವುದು ನಿಮ್ಮ ಸಹಜ ಪ್ರಕೃತಿ ಏನನ್ನು ಬಯಸುತ್ತದೋ ಅದನ್ನು ಪೂರ್ತಿಗೊಳಿಸುವುದರಲ್ಲಾಗಿದೆ. ಇದು ನೀವು ನಿಮಗೆ ನೀಡಲ್ಪಟ್ಟ ಎಲ್ಲ ಸಾಮರ್ಥ್ಯಗಳನ್ನು ಬಳಸಿದಾಗ ಮಾತ್ರ ಸಾಧ್ಯವಾಗುತ್ತದೆ.

ಎಷ್ಟು ಸಾಮರ್ಥ್ಯಗಳನ್ನು ನಿಮ್ಮಲ್ಲಿ ಇರಿಸಲಾಗಿದೆಯೋ ಅವುಗಳಿಂದೆಲ್ಲ ಕೆಲಸ ಮಾಡಿಸುವ ಮೂಲಗಳನ್ನು ಕೂಡಾ ನಿಮಗೆ ನೀಡಲಾಗಿದೆ. ಎಲ್ಲಕ್ಕಿಂತಲೂ ಮೊದಲು ಎಲ್ಲ ಅಗತ್ಯ ಭಾಗಗಳನ್ನು ಹೊಂದಿರುವ ನಿಮ್ಮ ಶರೀರವಿದೆ. ಅನಂತರ ನಿಮ್ಮ ಪರಿಸರದ ಲೋಕವಿದೆ. ಅದರಲ್ಲಿ ಎಲ್ಲ ರೀತಿ ಅಸಂಖ್ಯ ಮಾಧ್ಯಮಗಳು ಹರಡಿ ಕೊಂಡಿವೆ. ನಿಮ್ಮ ಸಹಾಯಕ್ಕಾಗಿ ಸ್ವಯಂ ನಿಮ್ಮಂತಹದೇ ಮಾನವರು ಇದ್ದಾರೆ.

ನಿಮ್ಮ ಸೇವೆಗಾಗಿ ಪ್ರಾಣಿಗಳಿವೆ, ವೃಕ್ಷಗಳಿವೆ, ಚರಾಚರ ವಸ್ತುಗಳಿವೆ. ಭೂಮಿ, ನೀರು, ಗಾಳಿ, ಬೆಂಕಿ ಮತ್ತು ಪ್ರಕಾಶ ಹಾಗೂ ಇಂತಹದೇ ಅಸಂಖ್ಯ ವಸ್ತುಗಳಿವೆ. ನೀವು ನಿಮ್ಮ ಜೀವನ ಸಾಗಿಸಲು ಇವುಗಳಿಂದ ಸಹಾಯ ಪಡೆಯಲೆಂದೇ ಇವೆಲ್ಲವನ್ನು ಅಲ್ಲಾಹನು ಸೃಷ್ಟಿಸಿರುವನು.

ಈಗ ಇನ್ನೊಂದು ದೃಷ್ಟಿಯಿಂದ ನೋಡಿರಿ. ನಿಮಗೆ ನೀಡಲ್ಪಟ್ಟಿರುವ ಸಾಮರ್ಥ್ಯಗಳೆಲ್ಲವೂ ನಿಮ್ಮ ಲಾಭಕ್ಕಾಗಿವೆಯೇ ಹೊರತು ಹಾನಿಗಾಗಿ ಅಲ್ಲ. ಆದ್ದರಿಂದ ಅವುಗಳನ್ನು ಬಳಸುವ ಸರಿಯಾದ ವಿಧಾನವು ಕೇವಲ ಲಾಭವಿರುವ ಮತ್ತು ನಷ್ಟವೇ ಇಲ್ಲದ ಅಥವಾ ಒಂದು ವೇಳೆ ಇದ್ದರೂ ಕನಿಷ್ಠವೂ ಅನಿವಾರ್ಯವೂ ಆದ ನಷ್ಟವಿರುವ ವಿಧಾನವೇ ಆಗಿದೆ. ಇದರ ಹೊರತು ಎಷ್ಟು ವಿಧಾನಗಳಿವೆಯೋ ಅವುಗಳೆಲ್ಲವೂ ತಪ್ಪಾಗಿರಬೇಕೆಂದು ಬುದ್ಧಿಯು ಹೇಳುತ್ತದೆ. ಉದಾಹರಣೆಗೆ ಒಂದು ವೇಳೆ ನೀವು ನಿಮಗೆ ನಷ್ಟವುಂಟುಮಾಡುವಂತಹ ಯಾವುದಾದರೂ ಕಾರ್ಯವನ್ನು ಮಾಡಿದರೆ ಅದೂ ತಪ್ಪು. ಅದೇ ರೀತಿ ನೀವು ಯಾವುದಾದರೂ ಸಾಮರ್ಥ್ಯದಿಂದ ಕೆಲಸ ಮಾಡಿಸುವಾಗ ಇತರ ಮನುಷ್ಯರಿಗೆ ನಷ್ಟ ಉಂಟಾದರೆ ಅದೂ ತಪ್ಪಾಗಿದೆ. ಒಂದು ವೇಳೆ ನಿಮಗೆ ನೀಡಲ್ಪಟ್ಟಿರುವಂತಹ ಸಾಧನಾನುಕೂಲತೆಗಳು ವ್ಯರ್ಥ ಪೋಲಾಗಿ ಹೋಗುವಂತೆ ಯಾವುದಾದರೂ ಸಾಮರ್ಥ್ಯವನ್ನು ನೀವು ಬಳಸಿದರೆ ಅದು ಕೂಡಾ ತಪ್ಪಾಗುವುದು. ಯಾವುದೇ ರೀತಿಯಲ್ಲಿ ಹಾನಿಕರವಾದ ವಸ್ತುವಿನಿಂದ ದೂರವಿರಬೇಕೆಂಬುದೇ ಬುದ್ಧಿಯ ಬೇಡಿಕೆಯಾಗಿದೆ. ಒಂದು ವೇಳೆ ಆ ಹಾನಿಯನ್ನು ಸಹಿಸುವುದಾದರೂ ಅದರಿಂದ ದೂರವಿರುವುದು ಸಾಧ್ಯವೇ ಇಲ್ಲದಾಗ ಅಥವಾ ಅದರ ಹಾನಿಗಿಂತಲೂ ಅದರ ಲಾಭ ಹೆಚ್ಚಿದ್ದಾಗ ಮಾತ್ರ.

ಇನ್ನೂ ಮುಂದುವರಿಯಿರಿ. ಲೋಕದಲ್ಲಿ ಎರಡು ವಿಧದ ಮನುಷ್ಯರಿದ್ದಾರೆ. ಮೊದಲನೆಯ ವಿಧದವರು ತಮಗೆ ನೀಡಲ್ಪಟ್ಟಂತಹ ಕೆಲವು ಸಾಮರ್ಥ್ಯಗಳನ್ನು ತಮ್ಮ ಇತರ ಕೆಲವು ಸಾಮರ್ಥ್ಯಗಳಿಗೆ ಹಾನಿಯಾಗುವ ರೀತಿಯಲ್ಲಿ, ಇತರ ಮನುಷ್ಯರಿಗೆ ಹಾನಿಯಾಗುವ ರೀತಿಯಲ್ಲಿ ಅಥವಾ ಅಲ್ಲಾಹನು ಅವರ ಲಾಭಕ್ಕಾಗಿ ನೀಡಿರುವಂತಹ ವಸ್ತುಗಳು ವ್ಯರ್ಥ ಪೋಲಾಗುವ ರೀತಿಯಲ್ಲಿ ಬಳಸುವವರಾಗಿದ್ದಾರೆ. ಇನ್ನೊಂದು ವಿಧದವರು ಉದ್ದೇಶಪೂರ್ವಕವಾಗಿ ಹಾಗೆ ಮಾಡದಿದ್ದರೂ ಅಜ್ಞಾನದಿಂದಾಗಿ ಅಂತಹ ತಪ್ಪುಗಳು ಅವರಿಂದ ಸಂಭವಿಸುತ್ತವೆ. ಪ್ರಥಮ ವಿಧದ ಜನರು ದುಷ್ಟರಾಗಿದ್ದಾರೆ. ಅವರನ್ನು ನಿಯಂತ್ರಣದಲ್ಲಿ ಇಡಬಲ್ಲಂತಹ ಕಾನೂನು ಮತ್ತು ನಿಯಮಗಳು ಅಗತ್ಯವಾಗಿವೆ. ಎರಡನೆಯ ವಿಧದ ಜನರಿಗೆ ಅವರು ತಮ್ಮ ಸಾಮರ್ಥ್ಯಗಳನ್ನು ಸರಿಯಾದ ರೀತಿಯಲ್ಲಿ ಬಳಸುವಂತೆ ಶಿಕ್ಷಣ ನೀಡುವ ಅಗತ್ಯವಿದೆ.

ಅಲ್ಲಾಹನು ತನ್ನ ಪ್ರವಾದಿಯ ಮೂಲಕ ನಮಗೆ ಕಳುಹಿಸಿರುವ ಶರೀಅತ್

ಈ ಬೇಡಿಕೆಯನ್ನೇ ಪೂರ್ತಿಗೊಳಿಸುತ್ತದೆ. ಅದು ನಿಮ್ಮ ಯಾವ ಸಾಮರ್ಥ್ಯವನ್ನೂ ವ್ಯರ್ಥಗೊಳಿಸ ಬಯಸುವುದಿಲ್ಲ. ನಿಮ್ಮ ಯಾವ ಇಚ್ಛೆಯನ್ನೂ ಅಳಿಸ ಬಯಸುವುದಿಲ್ಲ. ನಿಮ್ಮ ಯಾವ ಭಾವನೆಯನ್ನೂ ನಾಶಮಾಡ ಬಯಸುವುದಿಲ್ಲ. ಅದು ನಿಮಗೆ ಲೋಕವನ್ನು ತೊರೆದು ಕಾಡುಗಳಲ್ಲೂ ಪರ್ವತಗಳಲ್ಲೂ ಹೋಗಿ ವಾಸಿಸಲು, ಹಸಿವು ಮತ್ತು ನಗ್ನತೆಯೊಂದಿಗೆ ಜೀವಿಸಲು ನಿಮ್ಮ ದೇಹೇಚ್ಛೆಗಳನ್ನು ದಮನಿಸಿ ನಿಮಗೇ ಕಷ್ಟವನ್ನುಂಟು ಮಾಡಲು ಹಾಗೂ ಲೌಕಿಕ ಸುಖ ಸೌಲಭ್ಯಗಳನ್ನು ನಿಮ್ಮ ಮೇಲೆ ನಿಷಿದ್ಧಗೊಳಿಸಿಕೊಳ್ಳಲು ಎಂದೂ ಹೇಳುವುದಿಲ್ಲ. ಇದು ಅಲ್ಲಾಹನು ರಚಿಸಿದ ಶರೀಅತ್ ಆಗಿದೆ. ಈ ಲೋಕವನ್ನು ಮನುಷ್ಯನಿಗಾಗಿಯೇ ರಚಿಸಿದವನು ಆ ಅಲ್ಲಾಹನೇ ಆಗಿದ್ದಾನೆ. ಅವನು ತನ್ನ ಈ ಲೋಕವೆಂಬ ಕಾರ್ಯಾಗಾರವನ್ನು ನಾಶಮಾಡಲು ಮತ್ತು ವಿರೂಪಗೊಳಿಸಲು ಬಯಸುವನೇ? ಅವನು ಮನುಷ್ಯನಲ್ಲಿ ಯಾವುದೇ ಸಾಮರ್ಥ್ಯವನ್ನು ವ್ಯರ್ಥವಾಗಿಯಾಗಲೀ, ಅನಗತ್ಯವಾಗಿಯಾಗಲೀ ಇರಿಸಿಲ್ಲ. ಕೆಲಸಕ್ಕೆ ಬಾರದ ಯಾವ ವಸ್ತುವನ್ನೂ ಅವನು ಭೂಮಿ ಆಕಾಶಗಳಲ್ಲಿ ಸೃಷ್ಟಿಸಿಲ್ಲ. ಲೋಕದ ಈ ಕಾರ್ಯಾಗಾರವು ಪೂರ್ಣ ಕಳೆಯೊಂದಿಗೆ ನಡೆಯುತ್ತಿರಬೇಕೆಂದೇ ಅವನು ಬಯಸುತ್ತಾನೆ. ಪ್ರತಿಯೊಂದು ಸಾಮರ್ಥ್ಯದಿಂದಲೂ ಮನುಷ್ಯನು ಪೂರ್ಣ ಪ್ರಯೋಜನ ಪಡೆಯಬೇಕು. ಲೋಕದ ಎಲ್ಲ ವಸ್ತುಗಳಿಂದಲೂ ಪ್ರಯೋಜನ ಪಡೆಯಬೇಕು. ಭೂಮಿ ಆಕಾಶಗಳಲ್ಲಿ ಒದಗಿಸಲಾಗಿರುವ ಎಲ್ಲ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಆದರೆ ಹಾಗೆ ಬಳಸುವಾಗ ಅಜ್ಞಾನ ಅಥವಾ ದುಷ್ಟತೆಯಿಂದಾಗಿ ತನಗೆ ಅಥವಾ ಇತರರಿಗೆ ಹಾನಿಯನ್ನುಂಟು ಮಾಡಿಕೊಳ್ಳಬಾರದು. ಅಲ್ಲಾಹನು ಶರೀಅತ್‌ನ ಎಲ್ಲ ನಿಯಮಗಳನ್ನು ಇದೇ ಉದ್ದೇಶಕ್ಕಾಗಿ ರಚಿಸಿರುವನು. ಎಷ್ಟು ವಸ್ತುಗಳು ಮನುಷ್ಯನಿಗೆ ಹಾನಿಕರವಾಗಿವೆಯೋ ಅವೆಲ್ಲವನ್ನೂ ಶರೀಅತ್ ನಿಷಿದ್ಧಗೊಳಿಸುತ್ತದೆ ಮತ್ತು ಎಷ್ಟು ವಸ್ತುಗಳು ಲಾಭದಾಯಕವಾಗಿವೆಯೋ ಅವುಗಳನ್ನು ಧರ್ಮಬದ್ಧವೆಂದು ಸಾರುತ್ತದೆ. ಯಾವ ಕೆಲಸಗಳಿಂದ ಮನುಷ್ಯನು ತನಗೆ ಅಥವಾ ಇತರರಿಗೆ ನಷ್ಟವನ್ನುಂಟುಮಾಡಿಕೊಳ್ಳುತ್ತಾನೋ ಅವೆಲ್ಲವನ್ನೂ ಶರೀಅತ್ ನಿಷೇಧಿಸುತ್ತದೆ. ಅವನಿಗಾಗಲೀ ಇತರ ಮನುಷ್ಯರಿಗಾಗಲೀ ಲಾಭವಿರುವ ಮತ್ತು ಯಾರಿಗೂ ಹಾನಿ ಇಲ್ಲದಂತಹ ಎಲ್ಲ ಕೆಲಸಗಳನ್ನು ಶರೀಅತ್ ಅನುಮತಿಸುತ್ತದೆ. ಮನುಷ್ಯನಿಗೆ ಲೋಕದಲ್ಲಿ ತನ್ನ ಎಲ್ಲ ಇಚ್ಛೆಗಳನ್ನೂ ಅಗತ್ಯಗಳನ್ನೂ ಪೂರ್ತಿಗೊಳಿಸುವ ಮತ್ತು ತನ್ನ ಲಾಭಕ್ಕಾಗಿ ಎಲ್ಲ ವಿಧದ ಪ್ರಯತ್ನಗಳನ್ನು ನಡೆಸುವ ಹಕ್ಕನ್ನು ನೀಡಬೇಕೆಂಬ ತತ್ವದ ಮೇಲೆಯೇ ಅದರ ಎಲ್ಲ ಕಾನೂನುಗಳೂ ಆಧಾರಿತವಾಗಿವೆ. ಆದರೆ ಆ ಹಕ್ಕನ್ನು ಅವನು ಅಜ್ಞಾನ ಮತ್ತು ದುಷ್ಟತನದಿಂದ ಇತರರ ಹಕ್ಕುಗಳಿಗೆ ಚ್ಯುತಿಯಾಗದಂತೆ ಬಳಸಬೇಕು ಮತ್ತು ಸಾಧ್ಯವಿದ್ದಷ್ಟು ಇತರರಿಗೂ ಅದರಿಂದ ನೆರವಾಗಬೇಕು. ಯಾವ ಕಾರ್ಯಗಳಿಂದ ಒಂದೆಡೆ ಲಾಭವೂ ಇನ್ನೊಂದೆಡೆ ನಷ್ಟವೂ ಉಂಟಾಗುತ್ತದೋ ಅವುಗಳ ಬಗ್ಗೆ ಶರೀಅತ್‌ನ ತತ್ವವು ದೊಡ್ಡ ಲಾಭಕ್ಕಾಗಿ

ಸಣ್ಣ ನಷ್ಟವನ್ನು ಸಹಿಸಿಕೊಳ್ಳಬೇಕೆಂದೂ ದೊಡ್ಡ ನಷ್ಟದಿಂದ ಪಾರಾಗಲಿಕ್ಕಾಗಿ ಸಣ್ಣ ಲಾಭವನ್ನು ಬಿಟ್ಟು ಬಿಡಬೇಕೆಂದೂ ಆಗಿದೆ.

ಪ್ರತಿಯೊಬ್ಬ ವ್ಯಕ್ತಿಯು ಎಲ್ಲ ಕಾಲಗಳಲ್ಲಿ ಎಲ್ಲ ವಸ್ತುಗಳ ಮತ್ತು ಎಲ್ಲ ಕೆಲಸಗಳ ಬಗ್ಗೆ ಅದರಲ್ಲಿ ಯಾವ ಲಾಭವಿದೆ ಮತ್ತು ಯಾವ ನಷ್ಟವಿದೆ ಎಂದು ತಿಳಿಯುವುದು ಅಸಾಧ್ಯವಾಗಿದೆ. ಆದ್ದರಿಂದ ಸರ್ವಜ್ಞನಾದ ಅಲ್ಲಾಹನು ಮನುಷ್ಯರ ಪೂರ್ಣ ಜೀವನಕ್ಕಾಗಿ ಒಂದು ಸರಿಯಾದ ಸಂಹಿತೆಯನ್ನು ರಚಿಸಿರುವನು. ಈ ಸಂಹಿತೆಯ ಅನೇಕ ಔಚಿತ್ಯಗಳು ಶತಮಾನಗಳ ಹಿಂದೆ ಜನರಿಗೆ ತಿಳಿದಿರಲಿಲ್ಲ. ಆದರೆ ಇಂದು ವಿಜ್ಞಾನದ ಪ್ರಗತಿಯಿಂದಾಗಿ ಅವುಗಳ ಮೇಲಿದ್ದ ಪರದೆಯು ಸರಿದಿವೆ. ಇಂದಿಗೂ ಅದರ ಅನೇಕ ಔಚಿತ್ಯಗಳನ್ನು ಜನರು ತಿಳಿದಿಲ್ಲ. ವಿಜ್ಞಾನದಲ್ಲಿ ಪ್ರಗತಿಯಾದಷ್ಟೂ ಅವು ಪ್ರಕಟವಾಗುತ್ತಾ ಹೋಗುವುವು. ಯಾರು ತಮ್ಮ ಅಪೂರ್ಣ ಜ್ಞಾನ ಮತ್ತು ಅಪೂರ್ಣ ಬುದ್ಧಿಯ ಮೇಲೆ ಭರವಸೆ ಇಡುತ್ತಾರೋ ಅವರು ಶತಮಾನಗಳ ತನಕ ತಪ್ಪುಗಳನ್ನು ಎಸಗುತ್ತಾ, ಎಡವುತ್ತಾ ಕೊನೆಗೊಮ್ಮೆ ಇದೇ ಶರೀಅತ್‌ನ ಯಾವುದಾದರೊಂದು ನಿಯಮವನ್ನು ಅನುಸರಿಸಲು ನಿರ್ಬಂಧಿತರಾಗುತ್ತಾರೆ. ಆದರೆ ಅಲ್ಲಾಹನ ಪ್ರವಾದಿಯ ಮೇಲೆ ಭರವಸೆಯಿರಿಸಿದವರು ಅಜ್ಞಾನ ಮತ್ತು ತಿಳಿಗೇಡಿತನದ ನಷ್ಟಗಳಿಂದ ಪಾರಾಗುತ್ತಾರೆ. ಏಕೆಂದರೆ ಅವರಿಗೆ ಅದರ ಔಚಿತ್ಯಗಳು ತಿಳಿದಿರಲಿ ತಿಳಿಯದಿರಲಿ ಎಲ್ಲ ಅವಸ್ಥೆಯಲ್ಲೂ ಕೇವಲ ಅಲ್ಲಾಹನ ಪ್ರವಾದಿಯ ಮೇಲಿನ ವಿಶ್ವಾಸದಿಂದಾಗಿ ಅವರು ಅಪ್ಪಟ ಹಾಗೂ ಸರಿಯಾದ ಜ್ಞಾನದ ಮೇರೆಗೆ ರಚಿಸಲಾದ ಕಾನೂನನ್ನು ಪಾಲಿಸುತ್ತಾರೆ.

## ಹಕ್ಕುಗಳ ನಾಲ್ಕು ವಿಧಗಳು

ಶರೀಅತ್‌ನ ಪ್ರಕಾರ ಪ್ರತಿಯೊಬ್ಬ ಮನುಷ್ಯನ ಮೇಲೆ ನಾಲ್ಕು ರೀತಿಯ ಹಕ್ಕುಗಳು ಇರುತ್ತವೆ: 1. ಅಲ್ಲಾಹನ ಹಕ್ಕುಗಳು. 2. ಸ್ವಯಂ ಅವನ ಆತ್ಮ ಮತ್ತು ಶರೀರದ ಹಕ್ಕುಗಳು. 3. ಇತರ ಮನುಷ್ಯರ ಹಕ್ಕುಗಳು. 4. ಅವನ ಕೆಲಸಕ್ಕಾಗಿ ಮತ್ತು ಪ್ರಯೋಜನಕ್ಕಾಗಿ ಅವನ ಅಧಿಕಾರದಲ್ಲಿ ನೀಡಲ್ಪಟ್ಟಂತಹ ವಸ್ತುಗಳ ಹಕ್ಕುಗಳು– ಈ ನಾಲ್ಕೂ ವಿಧದ ಹಕ್ಕುಗಳನ್ನು ಸರಿಯಾಗಿ ಅರಿತು ಅವುಗಳನ್ನು ಪೂರೈಸುವುದೇ ಒಬ್ಬ ನೈಜ ಮುಸ್ಲಿಮನ ಕರ್ತವ್ಯ. ಶರೀಅತ್ ಈ ಎಲ್ಲ ಹಕ್ಕುಗಳನ್ನು ಬೇರೆ ಬೇರೆಯಾಗಿ ವಿವರಿಸುತ್ತದೆ. ಅವುಗಳನ್ನು ಪೂರೈಸಲಿಕ್ಕಾಗಿ ಎಲ್ಲ ಹಕ್ಕುಗಳೂ ಒಟ್ಟಿಗೆ ಪೂರೈಸಲ್ಪಡುವ ಮತ್ತು ಸಾಧ್ಯವಿದ್ದಷ್ಟರ ಮಟ್ಟಿಗೆ ಯಾರ ಹಕ್ಕಿಗೂ ಚ್ಯುತಿಯಾಗದಂತಹ ಕ್ರಮವನ್ನು ನಿಶ್ಚಯಿಸುತ್ತದೆ.

## ಅಲ್ಲಾಹನ ಹಕ್ಕುಗಳು

ಮನುಷ್ಯನು ಕೇವಲ ಅಲ್ಲಾಹನ ಮೇಲೆ ವಿಶ್ವಾಸವಿರಿಸಬೇಕು ಮತ್ತು ಅವನೊಂದಿಗೆ ಯಾರನ್ನೂ ಪಾಲುದಾರರಾಗಿ ಸೇರಿಸಬಾರದು ಎಂಬುದು ಅಲ್ಲಾಹನ ಪ್ರಥಮ ಹಕ್ಕಾಗಿದೆ. ಈ ಹಿಂದೆ ನಾವು ನಿಮಗೆ ತಿಳಿಸಿರುವಂತೆ 'ಲಾ ಇಲಾಹ ಇಲ್ಲಲ್ಲಾಹ್'

ಎಂಬ ವಚನದ ಮೇಲೆ ವಿಶ್ವಾಸವಿರಿಸುವುದರಿಂದ ಈ ಹಕ್ಕು ಸಂದಾಯವಾಗುತ್ತದೆ.

ಅಲ್ಲಾಹನ ಎರಡನೆಯ ಹಕ್ಕು ಅವನ ವತಿಯಿಂದ ಬಂದ ಮಾರ್ಗದರ್ಶನವನ್ನು ಮನಸಾರೆ ಸ್ವೀಕರಿಸಬೇಕು ಎಂದಾಗಿದೆ. ಈ ಹಕ್ಕು 'ಮುಹಮ್ಮದುರ್‍ರಸೂಲುಲ್ಲಾಹ್' ಎಂಬ ವಚನದ ಮೇಲೆ ವಿಶ್ವಾಸವಿರಿಸುವುದರಿಂದ ಸಂದಾಯವಾಗುತ್ತದೆ. ಅದರ ವಿವರಣೆಯನ್ನು ನಾವು ಈ ಮೊದಲೇ ತಿಳಿಸಿರುವೆವು.

ಅಲ್ಲಾಹನ ಪೂರ್ಣ ಅನುಸರಣೆ ಮಾಡಬೇಕೆಂಬುದೇ ಅವನ ಮೂರನೆಯ ಹಕ್ಕಾಗಿದೆ. ಅಲ್ಲಾಹನ ಗ್ರಂಥ ಮತ್ತು ಪ್ರವಾದಿವರ್ಯರ(ಸ) ಜೀವನ ಚರ್ಯೆಯಲ್ಲಿ ವಿವರಿಸಲಾಗಿರುವಂತಹ ಕಾನೂನಿನ ಅನುಸರಣೆಯಿಂದ ಈ ಹಕ್ಕು ಸಂದಾಯವಾಗುತ್ತದೆ. ಇದರ ಬಗ್ಗೆಯೂ ನಾವು ಈ ಮೊದಲೇ ವಿವರಿಸಿದ್ದೇವೆ.

ಅಲ್ಲಾಹನ ನಾಲ್ಕನೆಯ ಹಕ್ಕು ಅವನ ಇಬಾದತ್ ಮಾಡಬೇಕೆಂಬುದಾಗಿದೆ. ಈ ಹಕ್ಕನ್ನು ಪೂರೈಸಲಿಕ್ಕಾಗಿಯೇ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿರುವಂತಹ ಕಡ್ಡಾಯ ಕರ್ತವ್ಯಗಳನ್ನು ಮನುಷ್ಯನ ಮೇಲೆ ವಹಿಸಲಾಗಿದೆ. ಈ ಹಕ್ಕು ಇತರೆಲ್ಲ ಹಕ್ಕುಗಳಿಗಿಂತಲೂ ಪ್ರಧಾನವಾಗಿರುವುದರಿಂದ ಇದನ್ನು ಪೂರೈಸುವಾಗ ಇತರ ಹಕ್ಕುಗಳನ್ನು ಅಲ್ಪಸ್ವಲ್ಪ ತ್ಯಾಗ ಮಾಡಬೇಕಾಗುತ್ತದೆ. ಉದಾಹರಣೆಗೆ ನಮಾಝ್, ಉಪವಾಸ ವ್ರತ ಇತ್ಯಾದಿ ಕಡ್ಡಾಯ ಕರ್ತವ್ಯಗಳನ್ನು ನೆರವೇರಿಸುವಾಗ ಮನುಷ್ಯನು ಸ್ವಯಂ ತನ್ನ ಆತ್ಮ ಮತ್ತು ಶರೀರದ ಅನೇಕ ಹಕ್ಕುಗಳನ್ನು ತ್ಯಾಗ ಮಾಡುತ್ತಾನೆ. ನಮಾಝಿಗಾಗಿ ಮನುಷ್ಯನು ಪ್ರಭಾತದ ವೇಳೆ ಏಳುತ್ತಾನೆ. ತಣ್ಣೀರಿನಿಂದ ವುಝೂ ಮಾಡುತ್ತಾನೆ. ಹಗಲು ರಾತ್ರಿ ಅನೇಕ ಸಲ ತನ್ನ ಅಗತ್ಯ ಕೆಲಸಗಳನ್ನು ಮತ್ತು ತನ್ನ ಅಭಿರುಚಿಯ ಮನೋರಂಜನೆಗಳನ್ನು ತೊರೆಯುತ್ತಾನೆ. ರಮಝಾನಿನ ಪೂರ್ಣ ತಿಂಗಳಲ್ಲಿ ಹಸಿವು ದಾಹಗಳನ್ನು ಸಹಿಸುತ್ತಾನೆ. ಶಾರೀರಿಕ ಬಯಕೆಗಳನ್ನು ತಡೆದಿರಿಸುತ್ತಾನೆ. ಝಕಾತನ್ನು ನೀಡುವಾಗ ಸೊತ್ತಿನ ಮೇಲಿನ ಪ್ರೇಮವನ್ನು ಅಲ್ಲಾಹನ ಪ್ರೀತಿಗಾಗಿ ತ್ಯಾಗ ಮಾಡುತ್ತಾನೆ. ಹಜ್ಜ್‌ನ ವೇಳೆ ಪ್ರಯಾಣದ ಸಂಕಷ್ಟಗಳನ್ನು ಮತ್ತು ಸಂಪತ್ತಿನ ತ್ಯಾಗವನ್ನು ಸಹಿಸಿಕೊಳ್ಳುತ್ತಾನೆ. ಜಿಹಾದ್‌ನಲ್ಲಿ ತನ್ನ ಪ್ರಾಣವನ್ನೂ ಧನವನ್ನೂ ತ್ಯಾಗ ಮಾಡಲ್ಪಡುತ್ತಾನೆ. ಇದೇ ರೀತಿ ಇತರ ಮನುಷ್ಯರ ಹಕ್ಕುಗಳೂ ಅಲ್ಲಾಹನ ಹಕ್ಕಿಗಾಗಿ ಅಲ್ಪಸ್ವಲ್ಪ ತ್ಯಾಗ ಮಾಡಲ್ಪಡುತ್ತವೆ. ಉದಾಹರಣೆಗೆ ನಮಾಝಿನ ವೇಳೆ ಒಬ್ಬ ನೌಕರನು ತನ್ನ ಒಡೆಯನ ಕೆಲಸವನ್ನು ಬಿಟ್ಟು ತನ್ನ ಅತಿ ದೊಡ್ಡ ಒಡೆಯನ ಆರಾಧನೆಗಾಗಿ ಹೋಗುತ್ತಾನೆ. ಹಜ್ಜ್‌ನಲ್ಲಿ ಒಬ್ಬ ವ್ಯಕ್ತಿಯು ಎಲ್ಲ ವ್ಯವಹಾರಗಳನ್ನು ತೊರೆದು ಪವಿತ್ರ ಮಕ್ಕಾ ಪಟ್ಟಣದ ಯಾತ್ರೆ ಕೈಗೊಳ್ಳುತ್ತಾನೆ. ಇದರಿಂದ ಅನೇಕ ಜನರ ಹಕ್ಕುಗಳು ಪ್ರಭಾವಿತವಾಗುತ್ತವೆ. ಜಿಹಾದ್‌ನ ವೇಳೆ ಮನುಷ್ಯನು ಕೇವಲ ಅಲ್ಲಾಹನಿಗಾಗಿ ಇತರರ ಪ್ರಾಣ ತೆಗೆಯುತ್ತಾನೆ ಮತ್ತು ಸ್ವತಃ ತನ್ನ ಪ್ರಾಣದ ಬಲಿ ನೀಡುತ್ತಾನೆ. ಇದೇ ರೀತಿ ಮನುಷ್ಯರ

ವಶದಲ್ಲಿರುವಂತಹ ಅನೇಕ ವಸ್ತುಗಳು ಕೂಡಾ ಅಲ್ಲಾಹನ ಹಕ್ಕಿಗಾಗಿ ಬಲಿಯಾಗುತ್ತವೆ. ಉದಾಹರಣೆಗೆ ಪ್ರಾಣಿಗಳ ಬಲಿದಾನ ಮತ್ತು ಸೊತ್ತಿನ ವ್ಯಯ ಇತ್ಯಾದಿ.

ಆದರೆ ಅಲ್ಲಾಹನು ತನ್ನ ಹಕ್ಕುಗಳಿಗೆ ಕೆಲವು ಮೇರೆಗಳನ್ನು ನಿಶ್ಚಯಿಸಿರುವನು. ಆ ಮೇರೆಯು, ಅವನ ಯಾವ ಹಕ್ಕಿಗಾಗಿ ಇತರ ಹಕ್ಕುಗಳ ಎಷ್ಟರ ಮಟ್ಟಿನ ಬಲಿದಾನವು ಅಗತ್ಯವೋ ಅದಕ್ಕಿಂತ ಹೆಚ್ಚಾಗಬಾರದೆಂಬುದೇ ಆಗಿದೆ. ಉದಾಹರಣೆಗೆ ನಮಾಝನ್ನು ತೆಗೆದುಕೊಳ್ಳಿ- ನಿಮ್ಮ ಮೇಲೆ ಅಲ್ಲಾಹನು ಕಡ್ಡಾಯಗೊಳಿಸಿರುವ ನಮಾಝ್‌ಗಳನ್ನು ನಿರ್ವಹಿಸುವಲ್ಲಿ ಎಲ್ಲ ರೀತಿಯ ಸೌಲಭ್ಯಗಳನ್ನು ಇರಿಸಿದ್ದಾನೆ. ವುಝೂವಿಗೆ ನೀರು ಸಿಗದಿದ್ದರೆ ಅಥವಾ ನೀವು ರೋಗಿಯಾಗಿದ್ದರೆ ತಯಮ್ಮುಮ್ ಮಾಡಬಹುದು. ಪ್ರಯಾಣದಲ್ಲಿದ್ದರೆ ನಮಾಝ್‌ನಲ್ಲಿ ಕಡಿತ ಮಾಡಬಹುದು. ರೋಗಿಯಾಗಿದ್ದರೆ ಕುಳಿತೋ ಮಲಗಿಯೋ ನಮಾಝ್ ಮಾಡಬಹುದು. ಇನ್ನು ನಮಾಝ್‌ನಲ್ಲಿ ಪಠಿಸುವಂತಹದ್ದು ಕೂಡಾ ಹೆಚ್ಚೇನಿಲ್ಲ. ಒಂದು ಸಮಯದ ನಮಾಝಿಗೆ ಕೆಲವು ನಿಮಿಷಗಳಿಗಿಂತ ಹೆಚ್ಚು ವ್ಯಯವಾಗುವುದಿಲ್ಲ. ಬಿಡುವಿರುವ ವೇಳೆಯಲ್ಲಾದರೆ ಮನುಷ್ಯನು ಬಯಸಿದರೆ ಇಡೀ ಸೂರಃ ಬಕರಃವನ್ನು ಪಠಿಸಬಹುದು. ಆದರೆ ವ್ಯಾಪಾರ ವಹಿವಾಟಿನ ಸಮಯಗಳಲ್ಲಿ ದೀರ್ಘ ನಮಾಝ್ ಮಾಡುವುದರಿಂದ ತಡೆಯಲಾಗಿದೆ. ಒಂದು ವೇಳೆ ಕಡ್ಡಾಯ ನಮಾಝ್‌ಗಳಿಗೆ ಹೊರತಾಗಿ ಒಬ್ಬ ವ್ಯಕ್ತಿಯು ಐಚ್ಛಿಕ ನಮಾಝ್‌ಗಳನ್ನು ಮಾಡಿದರೆ ಅದನ್ನು ಅಲ್ಲಾಹನು ಮೆಚ್ಚುತ್ತಾನೆ. ಆದರೆ ಅದಕ್ಕಾಗಿ ನೀವು ರಾತ್ರೆಯ ನಿದ್ರೆಯನ್ನೂ ದಿನದ ಆರಾಮವನ್ನೂ ನಿಮ್ಮ ಮೇಲೆ ಪೂರ್ಣವಾಗಿ ನಿಷೇಧಿಸಿಕೊಳ್ಳಬೇಕೆಂದು ಅಲ್ಲಾಹನು ಬಯಸುವುದಿಲ್ಲ ಅಥವಾ ನಿಮ್ಮ ಸಂಪಾದನೆಯ ಸಮಯವನ್ನು ನಮಾಝ್‌ನಲ್ಲಿ ವ್ಯಯಿಸಬೇಕೆಂದೋ ಇತರ ಮನುಷ್ಯರ ಹಕ್ಕುಗಳಲ್ಲಿ ಚ್ಯುತಿ ಮಾಡಿ ನಮಾಝ್ ಮಾಡುತ್ತಿರಬೇಕೆಂದೋ ಅಲ್ಲಾಹನು ಬಯಸುವುದಿಲ್ಲ.

ಇದೇ ರೀತಿ ಉಪವಾಸ ವ್ರತಗಳಲ್ಲಿಯೂ ಎಲ್ಲ ರೀತಿಯ ಸೌಲಭ್ಯಗಳನ್ನಿರಿಸಲಾಗಿದೆ. ಕೇವಲ ವರ್ಷದಲ್ಲಿ ಒಂದು ತಿಂಗಳು ಉಪವಾಸ ವ್ರತ ಕಡ್ಡಾಯವಾಗಿದೆ. ಅದನ್ನು ಪ್ರಯಾಣದ ಸಂದರ್ಭದಲ್ಲಿ ಮತ್ತು ರೋಗಾವಸ್ಥೆಯಲ್ಲಿ ಮುಂದೂಡಬಹುದಾಗಿದೆ. ಉಪವಾಸಿಗನು ರೋಗಿಯಾಗಿ ಅವನ ಪ್ರಾಣಕ್ಕೆ ಅಪಾಯ ಒದಗಿದರೆ ಅವನು ಉಪವಾಸ ವ್ರತವನ್ನು ತೊರೆಯಬಹುದಾಗಿದೆ. ಉಪವಾಸ ವ್ರತಕ್ಕಾಗಿ ನಿಶ್ಚಯಿಸಿದ ಸಮಯಕ್ಕಿಂತ ಒಂದು ನಿಮಿಷದ ಹೆಚ್ಚಳ ಮಾಡುವುದು ಕೂಡಾ ಸರಿಯಲ್ಲ. ಸಹ್ರಿಯು ಅಂತಿಮ ವೇಳೆಯ ತನಕ ತಿನ್ನುವ ಅನುಮತಿ ಇದೆ. ಇಫ್ತಾರ್‌ನ ಸಮಯವಾಗುತ್ತಲೇ ತಕ್ಷಣ ಉಪವಾಸ ತೊರೆಯಬೇಕೆನ್ನುವ ಆಜ್ಞೆ ಇದೆ. ಕಡ್ಡಾಯ ಉಪವಾಸ ವ್ರತಗಳ ಹೊರತು ಒಬ್ಬ ವ್ಯಕ್ತಿ ಐಚ್ಛಿಕ ಉಪವಾಸಗಳ ಮೂಲಕ ಅಲ್ಲಾಹನ ಇನ್ನಷ್ಟು ಸಂಪ್ರೀತಿ

ಯನ್ನು ಸಂಪಾದಿಸಬಹುದಾಗಿದೆ. ಆದರೆ ನಿರಂತರ ಉಪವಾಸವಿದ್ದು ಲೌಕಿಕ ಕೆಲಸ ಕಾರ್ಯಗಳನ್ನು ಮಾಡದಷ್ಟು ನೀವು ಅಶಕ್ತರಾಗಬೇಕೆಂದು ಅಲ್ಲಾಹನು ಇಷ್ಟ ಪಡುವುದಿಲ್ಲ.

ಝಕಾತ್‌ಗೆ ಕೂಡಾ ಅಲ್ಲಾಹನು ಒಂದು ಕನಿಷ್ಠ ಮಿತಿಯನ್ನು ನಿರ್ಧರಿಸಿದ್ದಾನೆ. ಅದು ಕೂಡಾ ಒಂದು ನಿಶ್ಚಿತ ಪ್ರಮಾಣದ ಸೊತ್ತಿರುವ ಸ್ಥಿತಿವಂತರ ಮೇಲೆ ಕಡ್ಡಾಯವಾಗಿದೆ. ಇದಕ್ಕಿಂತ ಹೆಚ್ಚು ಯಾರಾದರೂ ದೇವಮಾರ್ಗದಲ್ಲಿ ದಾನಧರ್ಮ ಮಾಡಿದರೆ ಅದರಿಂದ ಅಲ್ಲಾಹನು ಸಂತುಷ್ಟನಾಗುತ್ತಾನೆ. ಆದರೆ ನೀವು ನಿಮ್ಮ ಶರೀರ ಮತ್ತು ನಿಮ್ಮ ಸಂಬಂಧಿಕರ ಹಕ್ಕುಗಳನ್ನು ಬಲಿ ನೀಡಿ ಎಲ್ಲವನ್ನೂ ದಾನ ಧರ್ಮದ ರೂಪದಲ್ಲಿ ಕೊಟ್ಟು ಬಿಡಬೇಕೆಂದೂ ಸ್ವಯಂ ಕಂಗಾಲಾಗಿ ಕುಳಿತುಕೊಳ್ಳಬೇಕೆಂದೂ ಅಲ್ಲಾಹನು ಬಯಸುವುದಿಲ್ಲ. ಇದರಲ್ಲೂ ಸಮತೋಲನ ಪಾಲಿಸಬೇಕೆಂಬ ಆಜ್ಞೆ ಇದೆ.

ಇನ್ನು ಹಜ್ಜ್– ಇದನ್ನು ಕೇವಲ ಪ್ರಯಾಣದ ವೆಚ್ಚವನ್ನು ಭರಿಸಬಲ್ಲ ಮತ್ತು ಯಾತ್ರೆಯ ಸಂಕಷ್ಟಗಳನ್ನು ಸಹಿಸಬಲ್ಲಂತಹ ಜನರ ಮೇಲೆ ಮಾತ್ರ ಕಡ್ಡಾಯಗೊಳಿಸಿದೆ. ಅದೂ ಜೀವನದಲ್ಲಿ ಒಮ್ಮೆ ಮಾತ್ರ. ನಿಮಗೆ ಅನುಕೂಲವಾಗುವ ಸಮಯದಲ್ಲಿ ಅದನ್ನು ನಿರ್ವಹಿಸಿದರೂ ಸಾಕೆಂಬ ಸೌಲಭ್ಯವನ್ನೂ ಇರಿಸಲಾಗಿದೆ. ಹಜ್ಜ್‌ಗೆ ಹೋಗುವಾಗ ಮಾರ್ಗದಲ್ಲಿ ಯುದ್ಧ ನಡೆಯುತ್ತಿದ್ದರೆ ಅಥವಾ ಅಶಾಂತಿಯಿಂದಾಗಿ ಪ್ರಾಣಕ್ಕೆ ಅಪಾಯವಿದ್ದರೆ ಹಜ್ಜ್‌ನ ಇರಾದೆಯನ್ನು ಮುಂದೂಡಬಹುದಾಗಿದೆ. ವೃದ್ಧರಾದ ತಂದೆ ತಾಯಿಗಳಿಗೆ ನಿಮ್ಮ ಅನುಪಸ್ಥಿತಿಯಿಂದ ಯಾವುದೇ ಕಷ್ಟ ಆಗದಂತೆ ಅವರ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ ಅಲ್ಲಾಹನು ತನ್ನ ಹಕ್ಕಿಗಾಗಿ ಇತರರ ಹಕ್ಕುಗಳನ್ನು ಗರಿಷ್ಠ ಪ್ರಮಾಣದಲ್ಲಿ ಪರಿಗಣನೆಗೆ ತೆಗೆದುಕೊಂಡಿದ್ದಾನೆ.

ಅಲ್ಲಾಹನ ಹಕ್ಕಿಗಾಗಿ ಮನುಷ್ಯರ ಹಕ್ಕುಗಳನ್ನು ಅತ್ಯಧಿಕವಾಗಿ ಜಿಹಾದ್‌ನ ವೇಳೆ ಬಲಿ ನೀಡಲಾಗುತ್ತದೆ. ಏಕೆಂದರೆ ಅದರಲ್ಲಿ ಮನುಷ್ಯನು ತನ್ನ ಪ್ರಾಣ ಮತ್ತು ಸೊತ್ತನ್ನು ಅಲ್ಲಾಹನ ಮಾರ್ಗದಲ್ಲಿ ಬಲಿ ನೀಡುವುದು ಮಾತ್ರವಲ್ಲ, ಇತರರ ಪ್ರಾಣ ಮತ್ತು ಸೊತ್ತುಗಳನ್ನು ಬಲಿ ತೆಗೆದುಕೊಳ್ಳುತ್ತಾನೆ. ಆದರೆ ನಾವು ಈ ಹಿಂದೆ ವಿವರಿಸಿರುವಂತೆ ಒಂದು ದೊಡ್ಡ ನಷ್ಟದಿಂದ ಪಾರಾಗಲಿಕ್ಕಾಗಿ ಸಣ್ಣ ನಷ್ಟವನ್ನು ಸಹಿಸಿಕೊಳ್ಳುವುದೇ ಇಸ್ಲಾಮಿನ ತತ್ವವಾಗಿದೆ. ಈ ತತ್ವವನ್ನು ಗಮನದಲ್ಲಿಟ್ಟು ನೋಡಿದರೆ, ಸತ್ಯದ ವಿರುದ್ಧ ಅಸತ್ಯವು ಮೆರೆಯುವುದು, ಅಲ್ಲಾಹನ ಧರ್ಮದ ವಿರುದ್ಧ ಸತ್ಯನಿಷೇಧ, ಬಹುದೇವಾರಾಧನೆ ಮತ್ತು ನಾಸ್ತಿಕತೆ ಪ್ರಬಲವಾಗುವುದು ಮತ್ತು ಲೋಕದಲ್ಲಿ ಪಥಭ್ರಷ್ಟತೆಯೂ ಅನೈತಿಕತೆಯೂ ವ್ಯಾಪಿಸುವುದು ಕೆಲವು ನೂರು, ಕೆಲವು ಸಾವಿರ ಅಥವಾ ಕೆಲವು ಲಕ್ಷ ಮಂದಿಯ ನಾಶಕ್ಕಿಂತ ಎಷ್ಟೋ ದೊಡ್ಡ ನಷ್ಟವಾಗಿದೆ.

ಆದ್ದರಿಂದ ಈ ದೊಡ್ಡ ನಷ್ಟದಿಂದ ಪಾರಾಗಲಿಕ್ಕಾಗಿ ಅಲ್ಲಾಹನು ಮುಸ್ಲಿಮರಿಗೆ

ತಮ್ಮ ಪ್ರಾಣ ಸೊತ್ತುಗಳ ಈ ಸಣ್ಣ ನಷ್ಟವನ್ನು ನನ್ನ ಸಂಪ್ರೀತಿಗಾಗಿ ಸಹಿಸಿಕೊಳ್ಳಿರೆಂದು ಹೇಳಿದ್ದಾನೆ. ಆದರೆ ಇದರ ಜೊತೆಗೆ ಎಷ್ಟು ರಕ್ತಪಾತ ಅನಿವಾರ್ಯವೋ ಅದಕ್ಕಿಂತ ಸ್ವಲ್ಪವೂ ಹೆಚ್ಚು ಮಾಡಬಾರದೆಂದು ಆಜ್ಞಾಪಿಸಿರುವನು. ವೃದ್ಧರು, ಮಕ್ಕಳು, ಮಹಿಳೆಯರು, ಗಾಯಾಳುಗಳು ಮತ್ತು ರೋಗಿಗಳ ಮೇಲೆ ಕೈ ಮಾಡಬಾರದೆಂದು ಆಜ್ಞಾಪಿಸಿದ್ದಾನೆ. ಯಾರು ಅಸತ್ಯದ ನೆರವಿಗಾಗಿ ಖಡ್ಗವೆತ್ತುತ್ತಾರೋ ಅವರ ವಿರುದ್ಧ ಮಾತ್ರ ಯುದ್ಧ ಮಾಡಬೇಕು. ವೈರಿ ರಾಷ್ಟ್ರದಲ್ಲಿ ಅನಗತ್ಯವಾಗಿ ನಾಶ ನಷ್ಟಗಳನ್ನು ಹಬ್ಬಿಸಬಾರದು. ವೈರಿಗಳ ವಿರುದ್ಧ ಜಯಗಳಿಸಿದಾಗ ಅವರೊಂದಿಗೆ ನ್ಯಾಯ ಪಾಲಿಸಬೇಕು. ಅವರು ಸತ್ಯಧರ್ಮದ ವೈರವನ್ನು ಬಿಟ್ಟುಬಿಟ್ಟಾಗ ಯುದ್ಧವನ್ನು ಕೊನೆಗೊಳಿಸಬೇಕು. ಈ ಎಲ್ಲ ವಿಷಯಗಳಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹನ ಹಕ್ಕುಗಳನ್ನು ಪೂರೈಸಲು ಮನುಷ್ಯರ ಹಕ್ಕುಗಳ ಎಷ್ಟರ ಮಟ್ಟಿನ ತ್ಯಾಗವು ಅನಿವಾರ್ಯವೋ ಅದಕ್ಕಿಂತ ಹೆಚ್ಚಿನ ತ್ಯಾಗವು ಧರ್ಮಬದ್ಧವಲ್ಲ.

## ಆತ್ಮ ಮತ್ತು ಶರೀರದ ಹಕ್ಕುಗಳು

ಈಗ ಎರಡನೆಯ ವಿಧದ ಹಕ್ಕುಗಳನ್ನು ತೆಗೆದುಕೊಳ್ಳಿ. ಅದು ಮನುಷ್ಯನ ಮೇಲೆ ಅವನ ಸ್ವಂತ ಆತ್ಮ ಮತ್ತು ಶರೀರದ ಹಕ್ಕುಗಳಾಗಿವೆ.

ಮನುಷ್ಯನು ಅತ್ಯಧಿಕವಾಗಿ ಸ್ವಯಂ ತನ್ನ ಮೇಲೆ ಅನ್ಯಾಯ ಮಾಡುತ್ತಾನೆ ಎಂದರೆ ನಿಮಗೆ ಆಶ್ಚರ್ಯವಾಗದಿರದು. ವಾಸ್ತವದಲ್ಲಿ ಇದು ಆಶ್ಚರ್ಯಕರ ವಿಷಯವೇ ಆಗಿದೆ. ಏಕೆಂದರೆ ತನಗೆ ಎಲ್ಲಕ್ಕಿಂತಲೂ ಹೆಚ್ಚಾಗಿ ತನ್ನ ಮೇಲೆಯೇ ಪ್ರೀತಿಯಿದೆ ಎಂದು ಪ್ರತಿಯೊಬ್ಬ ಮನುಷ್ಯನೂ ಭಾವಿಸುತ್ತಾನೆ. ತಾನೇ ತನ್ನ ವೈರಿಯಾಗಿದ್ದಾನೆ ಎಂಬುದನ್ನು ಪ್ರಾಯಶಃ ಯಾರೂ ಒಪ್ಪಿಕೊಳ್ಳಲಾರ. ಆದರೆ ಸ್ವಲ್ಪ ಯೋಚಿಸಿದರೆ ಈ ವಾಸ್ತವಿಕತೆಯು ನಿಮಗೆ ತಿಳಿದು ಬರುವುದು.

ಮನುಷ್ಯನಲ್ಲಿ ಒಂದು ದೊಡ್ಡ ದೌರ್ಬಲ್ಯವಿದೆ. ಒಂದು ಇಚ್ಛೆಯು ಅವನಲ್ಲಿ ಪ್ರಬಲವಾದಾಗ ಅವನದರ ಗುಲಾಮನಾಗಿ ಬಿಡುತ್ತಾನೆ. ಅದಕ್ಕಾಗಿ ಉದ್ದೇಶಪೂರ್ವಕವಾಗಿಯೋ ಅಥವಾ ಅರಿವಿಲ್ಲದೆಯೋ ತನಗೆ ಬಹಳಷ್ಟು ನಷ್ಟವನ್ನುಂಟುಮಾಡುತ್ತಾನೆ. ಒಬ್ಬನಿಗೆ ಮದ್ಯಪಾನದ ಚಟ ಹಿಡಿದು ಬಿಟ್ಟರೆ ಅವನು ಅದರ ಹಿಂದೆ ಹುಚ್ಚನಾಗುವುದನ್ನು ನೀವು ಕಾಣುತ್ತೀರಿ. ಆರೋಗ್ಯ, ಧನ ಮತ್ತು ಗೌರವ ಇತ್ಯಾದಿ ಎಲ್ಲ ವಸ್ತುಗಳ ನಷ್ಟವನ್ನು ಅವನು ಅದಕ್ಕಾಗಿ ಸಹಿಸಿಕೊಳ್ಳುತ್ತಾನೆ. ಇನ್ನೊಬ್ಬ ವ್ಯಕ್ತಿಗೆ ಬಗೆಬಗೆಯ ತಿನಿಸುಗಳನ್ನು ತಿನ್ನುವ ಚಟವಿರುತ್ತದೆ. ಅದಕ್ಕಾಗಿ ಅವನು ತನ್ನ ಪ್ರಾಣವನ್ನೇ ಅಪಾಯಕ್ಕೆ ಸಿಲುಕಿಸುತ್ತಾನೆ. ಮತ್ತೊಬ್ಬ ವ್ಯಕ್ತಿ ಲೈಂಗಿಕ ಬಯಕೆಗಳ ದಾಸನಾಗಿ ಬಿಡುತ್ತಾನೆ. ತನ್ಮೂಲಕ ತನ್ನದೇ ವಿನಾಶಕ್ಕೆ ಕಾರಣವಾಗುವಂತಹ ವರ್ತನೆಗಳನ್ನು ಅವನು ಮಾಡುತ್ತಾನೆ. ನಾಲ್ಕನೆಯ ವ್ಯಕ್ತಿಯೊಬ್ಬ ಆಧ್ಯಾತ್ಮಿಕ ಉನ್ನತಿಯ ಹಿಂದೆ ಹುಚ್ಚನಂತೆ

ಬಿದ್ದಿರುತ್ತಾನೆ. ಅವನು ತನ್ನ ಆತ್ಮದ ಬೆನ್ನು ಹತ್ತಿರುವವನಂತೆ ಕಾಣಿಸುತ್ತಾನೆ. ತನ್ನ ಶರೀರದ ಎಲ್ಲ ಬಯಕೆಗಳನ್ನೂ ಅವನು ದಮನಿಸುತ್ತಾನೆ. ತನ್ನ ಶಾರೀರಿಕ ಬೇಡಿಕೆ ಗಳನ್ನು ಪೂರ್ತಿಗೊಳಿಸುವುದಿಲ್ಲ, ವಿವಾಹವಾಗುವುದಿಲ್ಲ, ತಿನ್ನುವುದಿಲ್ಲ, ಕುಡಿಯುವುದಿಲ್ಲ, ಬಟ್ಟೆ ತೊಡುವುದಿಲ್ಲ, ಕೆಲವೊಮ್ಮೆ ಉಸಿರಾಡುವುದನ್ನೂ ಅವನು ಮೆಚ್ಚುವುದಿಲ್ಲ. ಕಾಡುಗುಡ್ಡಗಳಲ್ಲಿ ಹೋಗಿ ಅವನು ಕುಳಿತಿರುತ್ತಾನೆ ಮತ್ತು ಈ ಲೋಕವು ತನಗಾಗಿ ಸೃಷ್ಟಿಸಲ್ಪಡಲೇ ಇಲ್ಲ ಎಂದು ಭಾವಿಸುತ್ತಾನೆ.

ನಾವು ಕೇವಲ ಉದಾಹರಣೆಗಾಗಿ ಮಾನವನ ತೀವ್ರವಾದ ಕೆಲವು ನಿದರ್ಶನಗಳನ್ನು ಮುಂದಿಟ್ಟಿದ್ದೇವೆ. ಅನ್ಯಥಾ ಅದರ ಅನೇಕ ರೂಪಗಳು ಹಗಲಿರುಳು ನಮ್ಮ ಪರಿಸರ ದಲ್ಲಿ ಕಂಡು ಬರುತ್ತವೆ.

ಇಸ್ಲಾಮೀ ಶರೀಅತ್ ಮನುಷ್ಯನ ಅಭ್ಯುದಯವನ್ನು ಬಯಸುವುದರಿಂದ 'ನಿನ್ನ ಮೇಲೆ ಸ್ವತಃ ನಿನ್ನ ಹಕ್ಕುಗಳೂ ಇವೆ' ಎಂದು ಅವನನ್ನು ಎಚ್ಚರಿಸುತ್ತದೆ.

ಅದು ಅವನನ್ನು ಅವನಿಗೆ ಹಾನಿಕರವಾದ ಎಲ್ಲ ವಸ್ತುಗಳಿಂದ ತಡೆಯುತ್ತದೆ. ಉದಾಹರಣೆಗೆ ಶರಾಬು, ಶೇಂದಿ, ಅಫೀಮು ಮತ್ತಿತರ ಮಾದಕ ಪದಾರ್ಥಗಳು, ಹಂದಿ ಮಾಂಸ, ಕ್ರೂರ ಮತ್ತು ವಿಷಕಾರಿ ಪ್ರಾಣಿಗಳು, ರಕ್ತ ಮತ್ತು ಸತ್ತ ಪ್ರಾಣಿಗಳು ಇತ್ಯಾದಿ. ಏಕೆಂದರೆ ಮನುಷ್ಯನ ಆರೋಗ್ಯ, ಚಾರಿತ್ರ್ಯ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ಮೇಲೆ ಈ ವಸ್ತುಗಳು ಬಹಳ ದುಷ್ಪರಿಣಾಮ ಬೀರುತ್ತವೆ. ಇದಕ್ಕೆದುರಾಗಿ ಅದು ಶುದ್ಧ ಮತ್ತು ಉಪಯುಕ್ತ ವಸ್ತುಗಳನ್ನು ಅವನಿಗೆ ಅನುಮತಿಸುತ್ತದೆ. ಮಾತ್ರವಲ್ಲ ತನ್ನ ದೇಹವನ್ನು ಶುದ್ಧ ಆಹಾರದಿಂದ ವಂಚಿಸಬಾರದೆಂದು ಅವನಿಗೆ ಆಜ್ಞಾಪಿಸುತ್ತದೆ. ಏಕೆಂದರೆ ಅವನ ಮೇಲೆ ಅವನ ದೇಹದ ಹಕ್ಕುಗಳೂ ಇವೆ. ಅದು ಶರೀರವನ್ನು ನಗ್ನಗೊಳಿಸುವುದರಿಂದ ತಡೆಯುತ್ತದೆ. ಅಲ್ಲಾಹನು ನಿನ್ನ ದೇಹದ ಅಲಂಕಾರಕ್ಕಾಗಿ ಇಳಿಸಿರುವ ವಸ್ತ್ರವನ್ನು ಉಪಯೋಗಿಸಬೇಕೆಂದು ಅವನಿಗೆ ಆಜ್ಞಾಪಿಸುತ್ತದೆ. ತನ್ನ ಶರೀರದ ಲಜ್ಜಾಸ್ಪದ ಭಾಗಗಳನ್ನು ಎಂದೂ ತೆರೆಯಬಾರದೆಂದು ವಿಧಿಸುತ್ತದೆ.

ಅದು ಅವನಿಗೆ ಉಪಜೀವನ ಸಂಪಾದನೆಯ ಆಜ್ಞೆ ನೀಡುತ್ತದೆ. ಕೆಲಸವಿಲ್ಲದೆ ಕುಳಿತುಕೊಳ್ಳಬಾರದು. ಭಿಕ್ಷೆ ಬೇಡಬಾರದು, ಹಸಿವಿನಿಂದ ಸಾಯಬಾರದು, ಅಲ್ಲಾಹನು ನಿನಗೆ ನೀಡಿರುವಂತಹ ಸಾಮರ್ಥ್ಯಗಳನ್ನು ಉಪಯೋಗಿಸಿ ಎಷ್ಟು ಸಂಪನ್ಮೂಲಗಳನ್ನು ನಿನ್ನ ಪಾಲನೆ ಪೋಷಣೆಗಾಗಿ ಭೂಮಿ ಆಕಾಶಗಳಲ್ಲಿ ಅಲ್ಲಾಹನು ಸೃಷ್ಟಿಸಿರುವನೋ ಅವುಗಳನ್ನು ಧರ್ಮಬದ್ಧ ಮಾರ್ಗದಲ್ಲಿ ಗಳಿಸಲು ಪ್ರಯತ್ನಿಸಬೇಕೆಂದು ಆಜ್ಞಾಪಿಸುತ್ತದೆ.

ಅದು ಅವನ ದೈಹಿಕ ಬೇಡಿಕೆಗಳನ್ನು ದಮನಿಸುವುದರಿಂದ ತಡೆಯುತ್ತದೆ ಮತ್ತು ಆ ಬೇಡಿಕೆಗಳನ್ನು ಪೂರೈಸಲಿಕ್ಕಾಗಿ ವಿವಾಹ ಮಾಡಿಕೊಳ್ಳಬೇಕೆಂದು ಆಜ್ಞಾಪಿಸುತ್ತದೆ.

ಅದು ಅವನನ್ನು ಆತ್ಮ ನಿಗ್ರಹದಿಂದಲೂ ತಡೆಯುತ್ತದೆ. ಸುಖ, ವಿಶ್ರಾಂತಿ ಮತ್ತು

ಜೀವನದ ಸವಿಯನ್ನು ನಿನ್ನ ಮೇಲೆ ನಿಷೇಧಿಸಿಕೊಳ್ಳಬೇಡ ಎಂದು ಅವನಿಗೆ ಆಜ್ಞಾಪಿಸುತ್ತದೆ. ನೀನು ಆಧ್ಯಾತ್ಮಿಕ ಪ್ರಗತಿ ಅಲ್ಲಾಹನ ಸಾಮಿಪ್ಯ ಮತ್ತು ಪರಲೋಕದ ಮೋಕ್ಷ ಬಯಸುವುದಾದರೆ ಅದಕ್ಕಾಗಿ ಲೋಕ ತ್ಯಾಗದ ಅಗತ್ಯವಿಲ್ಲ. ಇದೇ ಲೋಕ ದಲ್ಲಿದ್ದುಕೊಂಡು ಲೋಕದ ಎಲ್ಲ ವ್ಯವಹಾರಗಳಲ್ಲಿಯೂ ಭಾಗಿಯಾಗುತ್ತಾ ಅಲ್ಲಾಹನನ್ನು ಸ್ಮರಿಸುತ್ತಿರುವುದು, ಅವನ ಅವಿಧೇಯತೆಯಿಂದ ದೂರವಿರುವುದು ಮತ್ತು ಅವನು ನೀಡಿದ ಕಾನೂನುಗಳನ್ನು ಪಾಲಿಸುವುದು ಇಹ–ಪರಗಳ ಎಲ್ಲ ವಿಜಯಗಳ ಮೂಲವಾಗಿದೆ.

ಅದು ಆತ್ಮಹತ್ಯೆಯನ್ನು ನಿಷೇಧಿಸುತ್ತದೆ. ನಿನ್ನ ಪ್ರಾಣವು ವಾಸ್ತವದಲ್ಲಿ ಅಲ್ಲಾಹನ ಒಡೆತನಕ್ಕೆ ಸೇರಿದ್ದು ಅದನ್ನು ಒಂದು ವಿಶ್ವಸ್ಥ ನಿಧಿಯ ರೂಪದಲ್ಲಿ ನಿನಗೆ ನೀಡಲಾಗಿದೆ. ಅಲ್ಲಾಹನು ನಿಶ್ಚಯಿಸಿದ ಸಮಯದ ತನಕ ಅದರಿಂದ ಪೂರ್ಣ ಪ್ರಯೋಜನ ಪಡೆಯಬೇಕು. ಅದನ್ನು ವ್ಯರ್ಥಗೊಳಿಸಬಾರದು ಎಂದು ಸಾರುತ್ತದೆ.

## ಇತರ ಮನುಷ್ಯರ ಹಕ್ಕುಗಳು

ಒಂದೆಡೆ ಮನುಷ್ಯನಿಗೆ ಶರೀಅತ್ ಅವನ ಆತ್ಮ ಮತ್ತು ಶರೀರದ ಹಕ್ಕುಗಳನ್ನು ಪೂರೈಸಬೇಕೆಂದು ಆಜ್ಞಾಪಿಸಿದ್ದರೆ ಇನ್ನೊಂದೆಡೆ ಆ ಹಕ್ಕುಗಳನ್ನು ಪೂರೈಸುವಾಗ ಇತರರ ಹಕ್ಕುಗಳಿಗೆ ಚ್ಯುತಿಯಾಗುವಂತಹ ಯಾವುದೇ ವಿಧಾನವನ್ನು ಅನುಸರಿಸ ಬಾರದೆಂದೂ ಅವನಿಗೆ ವಿಧಿಸಿದೆ. ಏಕೆಂದರೆ ಈ ರೀತಿ ತನ್ನ ಬಯಕೆ–ಬೇಡಿಕೆಗಳನ್ನು ಪೂರ್ತಿಗೊಳಿಸಿದರೆ ಮನುಷ್ಯನ ಸ್ವಂತ ಆತ್ಮವು ಕೆಡುತ್ತದೆ ಮತ್ತು ಇತರರಿಗೂ ತರತರದ ನಷ್ಟಗಳು ಉಂಟಾಗುತ್ತವೆ. ಆದ್ದರಿಂದ ಶರೀಅತ್ ಕಳ್ಳತನ, ದರೋಡೆ, ಲಂಚ, ವಂಚನೆ, ಬಡ್ಡಿ ಮತ್ತು ಮೋಸಗಾರಿಕೆಯ ಎಲ್ಲ ವಿಧಾನಗಳನ್ನೂ ನಿಷೇಧಿಸಿದೆ. ಏಕೆಂದರೆ ಈ ಎಲ್ಲ ವಿಧಾನಗಳಿಂದ ಮನುಷ್ಯನು ಗಳಿಸುವ ಲಾಭವು ವಾಸ್ತವದಲ್ಲಿ ಇತರರ ನಷ್ಟದಿಂದ ಬರುತ್ತದೆ. ಸುಳ್ಳು, ಪರನಿಂದೆ, ಚಾಡಿಕೋರತನ ಮತ್ತು ವೃಥಾ ಆರೋಪ ಹೊರಿಸುವುದು ಕೂಡಾ ನಿಷಿದ್ಧವಾಗಿದೆ. ಏಕೆಂದರೆ ಈ ಎಲ್ಲ ಕೃತ್ಯಗಳು ಇತರರಿಗೆ ಹಾನಿಕಾರಕವಾಗಿದೆ. ಜೂಜು, ಸಟ್ಟಾ ಮತ್ತು ಲಾಟರಿಯನ್ನು ನಿಷೇಧಿಸಲಾಗಿದೆ. ಏಕೆಂದರೆ ಅದರಲ್ಲಿ ಒಬ್ಬ ವ್ಯಕ್ತಿಯ ಲಾಭವು ಸಹಸ್ರಾರು ಮಂದಿಯ ನಷ್ಟದ ಮೇಲೆ ಆಧರಿಸಿರುತ್ತದೆ. ಮೋಸ, ವಂಚನೆಯ ವ್ಯವಹಾರಗಳು ಮತ್ತು ಒಂದು ವರ್ಗದ ನಷ್ಟಕ್ಕೆ ಕಾರಣವಾಗುವಂತಹ ಎಲ್ಲ ವ್ಯಾಪಾರಿ ಒಪ್ಪಂದಗಳನ್ನು ನಿಷೇಧಿಸಲಾಗಿದೆ. ಕೊಲೆ, ಕ್ಷೋಭೆ ಮತ್ತು ಗಲಭೆಯನ್ನು ನಿಷೇಧಿಸಲಾಗಿದೆ. ಏಕೆಂದರೆ ಒಬ್ಬ ವ್ಯಕ್ತಿಗೆ ತನ್ನ ಯಾವುದಾದರೂ ಲಾಭಕ್ಕಾಗಿ ಅಥವಾ ತನ್ನ ಯಾವುದಾದರೂ ಇಚ್ಛೆಯನ್ನು ಪೂರ್ತಿಗೊಳಿಸಲಿಕ್ಕಾಗಿ ಇತರರ ಪ್ರಾಣಹರಣ ಮಾಡುವ ಅಥವಾ ಅವರಿಗೆ ಕಷ್ಟ ಕೊಡುವ ಹಕ್ಕು ಇಲ್ಲ. ವ್ಯಭಿಚಾರ ಮತ್ತು ಸಲಿಂಗರತಿಯನ್ನು ನಿಷೇಧಿಸಲಾಗಿದೆ.

ಏಕೆಂದರೆ ಈ ಕೃತ್ಯಗಳು ಒಂದೆಡೆ ಅದನ್ನು ಎಸಗುವವರ ಚಾರಿತ್ರ್ಯವನ್ನು ಕೆಡಿಸುತ್ತದೆ. ಇನ್ನೊಂದೆಡೆ ಇಡೀ ಸಮಾಜದಲ್ಲಿ ನಿರ್ಲಜ್ಜೆ, ಅನೈತಿಕತೆ ವ್ಯಾಪಕವಾಗುತ್ತದೆ. ಮಾರಕ ರೋಗಗಳು ಉಂಟಾಗುತ್ತವೆ. ಪೀಳಿಗೆಗಳು ಹಾಳಾಗುತ್ತವೆ. ಕ್ಷೋಭೆಯುಂಟಾಗುತ್ತದೆ. ಮಾನವೀಯ ಸಂಬಂಧಗಳು ಕೆಡುತ್ತವೆ ಮತ್ತು ಸಂಸ್ಕೃತಿ ನಾಗರಿಕತೆಗಳ ಬೇರು ಕೀಳಲ್ಪಡುತ್ತವೆ.

ಒಬ್ಬ ವ್ಯಕ್ತಿಯು ತನ್ನ ಆತ್ಮ ಮತ್ತು ಶರೀರದ ಹಕ್ಕುಗಳನ್ನು ಪೂರೈಸಲಿಕ್ಕಾಗಿ ಇತರರ ಹಕ್ಕುಗಳನ್ನು ಕಬಳಿಸದಂತೆ ಶರೀಅತ್ ಈ ನಿರ್ಬಂಧಗಳನ್ನು ಹೇರಿದೆ. ಆದರೆ ಮಾನವ ನಾಗರಿಕತೆಯ ಪ್ರಗತಿ ಮತ್ತು ಅಭ್ಯುದಯಕ್ಕೆ ಒಬ್ಬನು ಇನ್ನೊಬ್ಬನಿಗೆ ನಷ್ಟವುಂಟು ಮಾಡದೇ ಇದ್ದರೆ ಮಾತ್ರ ಸಾಲದು. ಬದಲಾಗಿ ಅದಕ್ಕೆ ಜನರು ಪರಸ್ಪರರ ಒಳಿತಿಗಾಗಿ ನೆರವಾಗುವಂತೆ ಅವರ ಪರಸ್ಪರ ಸಂಬಂಧಗಳನ್ನು ರೂಪಿಸಬೇಕು. ಈ ಉದ್ದೇಶಕ್ಕಾಗಿ ಶರೀಅತ್ ರಚಿಸಿರುವ ಕಾನೂನುಗಳ ಒಂದು ಸಾರಾಂಶವನ್ನು ಮಾತ್ರ ನಾವಿಲ್ಲಿ ವಿವರಿಸುತ್ತೇವೆ–

ಮನುಷ್ಯ ಸಂಬಂಧಗಳ ಆರಂಭವು ಕುಟುಂಬದಿಂದಾಗುತ್ತದೆ. ಆದುದರಿಂದ ಮೊಟ್ಟ ಮೊದಲು ಅದನ್ನೇ ನೋಡೋಣ. ಕುಟುಂಬವೆಂದರೆ ಪತಿ, ಪತ್ನಿ ಮತ್ತು ಮಕ್ಕಳು. ಅದಕ್ಕೆ ಇಸ್ಲಾಮಿನ ನಿಯಮವೇನೆಂದರೆ ಸಂಪಾದನೆ ಮಾಡುವುದು, ಕುಟುಂಬದ ಅಗತ್ಯಗಳನ್ನು ಪೂರೈಸುವುದು ಮತ್ತು ತನ್ನ ಮಡದಿ ಮಕ್ಕಳ ಸಂರಕ್ಷಣೆ ಮಾಡುವುದು ಪುರುಷನ ಕರ್ತವ್ಯವಾಗಿದೆ. ಪುರುಷನು ದುಡಿದು ತಂದುದರಿಂದ ಮನೆಯ ವ್ಯವಸ್ಥೆಯನ್ನು ನಡೆಸುವುದು, ಪತಿ ಮತ್ತು ಮಕ್ಕಳಿಗೆ ಹೆಚ್ಚೆಚ್ಚು ಸುಖ ಒದಗಿಸುವುದು ಹಾಗೂ ಮಕ್ಕಳನ್ನು ತರಬೇತಿಗೊಳಿಸುವುದು ಮಹಿಳೆಯ ಕರ್ತವ್ಯವಾಗಿದೆ. ತಂದೆ–ತಾಯಿಗಳನ್ನು ಅನುಸರಿಸುವುದು, ಅವರನ್ನು ಗೌರವಿಸುವುದು ಮತ್ತು ಪ್ರಾಯವಾದ ಬಳಿಕ ಅವರ ಸೇವೆ ಮಾಡುವುದು ಮಕ್ಕಳ ಕರ್ತವ್ಯವಾಗಿದೆ. ಕುಟುಂಬದ ಈ ವ್ಯವಸ್ಥೆಯನ್ನು ಸರಿಪಡಿಸಲಿಕ್ಕಾಗಿ ಇಸ್ಲಾಮ್ ಎರಡು ಉಪಾಯಗಳನ್ನು ಕೈಗೊಂಡಿದೆ. ಒಂದನೆಯದಾಗಿ ಪತಿ ಮತ್ತು ತಂದೆಯನ್ನು ಮನೆಯ ವ್ಯವಸ್ಥಾಪಕನೆಂದು ನೇಮಿಸಲಾಗಿದೆ. ಏಕೆಂದರೆ ಯಾವ ರೀತಿ ಒಂದು ನಗರದ ವ್ಯವಸ್ಥೆಯು ನಗರ ಪಾಲಕನ ಹೊರತು ಮತ್ತು ಒಂದು ಶಾಲೆಯ ವ್ಯವಸ್ಥೆಯು ಓರ್ವ ಮುಖ್ಯೋಪಾಧ್ಯಾಯನ ಹೊರತು ಸರಿಯಾಗಿ ನಡೆಯಲಾರದೋ ಅದೇ ರೀತಿ ಒಂದು ಮನೆಯ ವ್ಯವಸ್ಥೆಯೂ ಓರ್ವ ವ್ಯವಸ್ಥಾಪಕನಿಲ್ಲದೆ ಸರಿಯಾಗಿ ನಡೆಯಲಾರದು. ಯಾವ ಮನೆಯಲ್ಲಿ ಪ್ರತಿಯೊಬ್ಬರೂ ತನ್ನ ಇಚ್ಛೆಯ ಒಡೆಯನಾಗಿರುತ್ತಾನೋ ಆ ಮನೆಯಲ್ಲಿ ಅವ್ಯವಸ್ಥೆ ತಾಂಡವವಾಡುವುದು. ಸುಖ ಸಂತೋಷಗಳು ನಾಮಾವಶೇಷವಾಗುವುವು. ಪತಿ ಒಂದೆಡೆ ಹೋದರೆ ಪತ್ನಿಯು ಇನ್ನೊಂದು ದಾರಿ ಹಿಡಿಯುವಳು ಮತ್ತು ಮಕ್ಕಳ

ಸ್ಥಿತಿಯೂ ಶೋಚನೀಯವಾಗುವುದು. ಈ ಎಲ್ಲ ಅವ್ಯವಸ್ಥೆಗಳನ್ನು ದೂರ ಮಾಡಲು ಮನೆಗೆ ಒಬ್ಬ ವ್ಯವಸ್ಥಾಪಕನ ಅಗತ್ಯವಿದೆ ಮತ್ತು ಅದು ಪುರುಷನೇ ಆಗಬಲ್ಲ. ಏಕೆಂದರೆ ಅವನು ಮನೆಯವರ ಪಾಲನೆ ಪೋಷಣೆ ಮತ್ತು ಸಂರಕ್ಷಣೆಯ ಹೊಣೆಗಾರನಾಗಿರುತ್ತಾನೆ. ಎರಡನೆಯ ಉಪಾಯವೇನೆಂದರೆ ಮನೆಯ ಹೊರಗಿನ ಎಲ್ಲ ಕಾರ್ಯಗಳ ಹೊಣೆಗಾರಿಕೆಯನ್ನು ಪುರುಷನ ಮೇಲೆ ಹಾಕಿ ಮಹಿಳೆಗೆ ಅನಗತ್ಯವಾಗಿ ಮನೆಯಿಂದ ಹೊರ ಹೋಗಬಾರದೆಂದು ಆಜ್ಞಾಪಿಸಲಾಗಿದೆ. ಆಕೆಯನ್ನು ಮನೆಯ ಹೊರಗಿನ ಎಲ್ಲ ಕರ್ತವ್ಯಗಳಿಂದ ಮುಕ್ತಗೊಳಿಸಿರುವುದು ಆಕೆ ನೆಮ್ಮದಿಯೊಂದಿಗೆ ಮನೆಯೊಳಗಿನ ಕರ್ತವ್ಯವನ್ನು ನಿರ್ವಹಿಸಬೇಕು ಮತ್ತು ಆಕೆಯು ಹೊರ ಹೋಗುವುದರಿಂದ ಮನೆಯ ನೆಮ್ಮದಿ ಹಾಗೂ ಮಕ್ಕಳ ತರಬೇತಿಯಲ್ಲಿ ಯಾವುದೇ ಅಡಚಣೆಯುಂಟಾಗಬಾರದು ಎಂಬ ಕಾರಣಕ್ಕಾಗಿದೆ. ಮಹಿಳೆಯರು ಮನೆಯಿಂದ ಹೊರಗೆ ಕಾಲಿಡಲೇ ಬಾರದೆಂದು ಇದರರ್ಥವಲ್ಲ. ಅಗತ್ಯ ಬಿದ್ದಾಗ ಹೊರ ಹೋಗುವ ಅನುಮತಿ ಅವರಿಗಿದೆ. ಆದರೆ ಶರೀಅತ್‌ನ ಉದ್ದೇಶವು ಅವಳ ಕರ್ತವ್ಯಗಳ ನೈಜ ಕ್ಷೇತ್ರ ಅವಳ ಮನೆಯಾಗಿದ್ದು ಮನೆಯ ಜೀವನವನ್ನು ಉತ್ತಮ ಪಡಿಸಲು ಅವಳ ಎಲ್ಲ ಸಾಮರ್ಥ್ಯವೂ ವ್ಯಯವಾಗಬೇಕೆಂದೇ ಆಗಿದೆ.

ರಕ್ತ ಸಂಬಂಧಗಳಿಂದ ಮತ್ತು ವಿವಾಹ ಬಾಂಧವ್ಯಗಳಿಂದ ಕುಟುಂಬದ ಕ್ಷೇತ್ರವು ವಿಸ್ತರಿಸುತ್ತದೆ. ಈ ಕ್ಷೇತ್ರದಲ್ಲಿ ಯಾರು ಪರಸ್ಪರ ಸಂಬಂಧಿಗಳಾಗುತ್ತಾರೋ ಅವರ ಸಂಬಂಧವನ್ನು ಸರಿಪಡಿಸಲಿಕ್ಕಾಗಿ ಮತ್ತು ಅವರು ಪರಸ್ಪರ ಸಹಕಾರಿಗಳಾಗುವಂತೆ ಶರೀಅತ್ ಅನೇಕ ನಿಮಯಗಳನ್ನು ಗೊತ್ತು ಪಡಿಸಿದೆ. ಅವು ಬಹಳ ಯುಕ್ತಿಪೂರ್ಣವಾಗಿದ್ದು ಆ ಪೈಕಿ ಕೆಲವು ನಿಯಮಗಳನ್ನು ಇಲ್ಲಿ ವಿವರಿಸಲಾಗುತ್ತಿದೆ:

1. ಯಾವ ಸ್ತ್ರೀ–ಪುರುಷರಿಗೆ ನೈಸರ್ಗಿಕವಾಗಿ ಪರಸ್ಪರ ಬೆರೆತು ವಾಸಿಸಬೇಕಾಗುತ್ತದೋ ಅವರೊಳಗೆ ಪರಸ್ಪರ ವಿವಾಹ ಸಂಬಂಧಗಳನ್ನು ನಿಷಿದ್ಧಗೊಳಿಸಲಾಗಿದೆ. ಉದಾಹರಣೆಗೆ ತಾಯಿ ಮತ್ತು ಮಗ, ತಂದೆ ಮತ್ತು ಮಗಳು, ಮಲತಾಯಿ ಮತ್ತು ಮಗ, ಮಲತಂದೆ ಮತ್ತು ಮಗಳು, ಸೋದರ ಮತ್ತು ಸೋದರಿ, ಸ್ತನಪಾನ ಸಂಬಂಧದ ಸೋದರ ಮತ್ತು ಸೋದರಿ, ಚಿಕ್ಕಪ್ಪ–ದೊಡ್ಡಪ್ಪ ಮತ್ತು ಸೋದರ ಪುತ್ರಿ, ಪಿತೃಸೋದರಿ ಮತ್ತು ಸೋದರ ಪುತ್ರ, ಸೋದರ ಮಾವ ಮತ್ತು ಸೊಸೆ, ಮಾತೃ ಸೋದರಿ ಮತ್ತು ಸೋದರ ಪುತ್ರ, ಅತ್ತೆ ಮತ್ತು ಅಳಿಯ, ಮಾವ ಮತ್ತು ಸೊಸೆ– ಈ ಎಲ್ಲ ಸಂಬಂಧಗಳನ್ನು ನಿಷಿದ್ಧಗೊಳಿಸುವುದರಿಂದ ಅನೇಕ ಪ್ರಯೋಜನಗಳಿವೆ. ಅವುಗಳ ಪೈಕಿ ಒಂದು ಪ್ರಯೋಜನವೇನೆಂದರೆ ಇಂತಹ ಸ್ತ್ರೀ–ಪುರುಷರ ಮಧ್ಯೆ ಪರಸ್ಪರ ಸಂಬಂಧವು ಅತ್ಯಂತ ಪರಿಶುದ್ಧವಾಗಿರುತ್ತದೆ ಮತ್ತು ನಿಷ್ಕಪಟ ಪ್ರೇಮದೊಂದಿಗೆ ಅವರು ನಿಸ್ಸಂಕೋಚವಾಗಿ ಪರಸ್ಪರ ಸಹಬಾಳ್ವೆ ನಡೆಸಬಲ್ಲರು.

2. ನಿಷಿದ್ಧ ಸಂಬಂಧಗಳ ಹೊರತು ಕುಟುಂಬದ ಇತರ ಸ್ತ್ರೀ–ಪುರುಷರ ಮಧ್ಯೆ ವಿವಾಹ ಬಂಧನವನ್ನು ಅನುಮತಿಸಲಾಗಿದೆ. ಇದರಿಂದ ಪರಸ್ಪರ ಸಂಬಂಧಗಳು ಇನ್ನಷ್ಟು ಬೆಳೆಯುತ್ತವೆ. ಪರಸ್ಪರರ ಅಭ್ಯಾಸಗಳನ್ನೂ ಅಭಿರುಚಿಗಳನ್ನೂ ತಿಳಿದಿರುವವರ ಮಧ್ಯೆ ವಿವಾಹ ಸಂಬಂಧವು ಇನ್ನಷ್ಟು ಯಶಸ್ವಿಯಾಗುತ್ತದೆ. ಅಪರಿಚಿತ ಕುಟುಂಬಗಳ ಮಧ್ಯೆ ಏರ್ಪಡುವ ವಿವಾಹ ಸಂಬಂಧವು ಹೆಚ್ಚಾಗಿ ಅಸಾಮರಸ್ಯದ ಪರಿಸ್ಥಿತಿಯನ್ನುಂಟು ಮಾಡುತ್ತವೆ. ಆದ್ದರಿಂದಲೇ ಇಸ್ಲಾಮಿನಲ್ಲಿ ಪರಸ್ಪರ ಸಾಮರಸ್ಯ ಇರುವವರ ಮಧ್ಯೆ ವಿವಾಹ ಸಂಬಂಧವನ್ನು ಹೆಚ್ಚು ಪ್ರೋತ್ಸಾಹಿಸಲಾಗಿದೆ.

3. ಕುಟುಂಬದಲ್ಲಿ ಬಡವರು ಮತ್ತು ಧನಿಕರು, ಸುಸ್ಥಿತಿಯಲ್ಲಿರುವವರು ಮತ್ತು ದುಃಸ್ಥಿತಿಯಲ್ಲಿರುವವರು ಮುಂತಾದ ಎಲ್ಲ ವಿಧದ ಜನರು ಇರುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಎಲ್ಲಕ್ಕಿಂತ ಹೆಚ್ಚು ಹಕ್ಕು ಇರುವುದು ಅವನ ಸಂಬಂಧಿಕರದ್ದಾಗಿದೆ ಎಂಬುದು ಇಸ್ಲಾಮಿನ ನಿಲುವು. ತನ್ನ ಸಂಬಂಧಿಕರ ಬಗೆಗಿನ ಈ ಕಾರುಣ್ಯಕ್ಕೆ ಇಸ್ಲಾಮ್ ಬಹಳ ಮಹತ್ವ ನೀಡಿದೆ. ಸಂಬಂಧಿಕರ ಹಿತಚಿಂತನೆ ಮಾಡದಿರುವುದು ಈ ಕರುಣೆಯ ಸಂಬಂಧವನ್ನು ಕಡಿದು ಹಾಕುತ್ತದೆ ಮತ್ತು ಇಸ್ಲಾಮಿನಲ್ಲಿ ಇದು ಬಹುದೊಡ್ಡ ಪಾಪವಾಗಿದೆ. ಒಬ್ಬ ಸಂಬಂಧಿಕನಾದ ಬಡವನ ಮೇಲೆ ಯಾವುದೇ ಸಂಕಷ್ಟವೆರಗಿದರೆ ಅವನ ಸ್ಥಿತಿವಂತ ಸಂಬಂಧಿಕರ ಮೇಲೆ ಅವನ ನೆರವಿಗೆ ಧಾವಿಸುವುದು ಕಡ್ಡಾಯವಾಗುತ್ತದೆ. ದಾನ ಧರ್ಮಗಳಲ್ಲಿಯೂ ಸಂಬಂಧಿಕರ ಹಕ್ಕನ್ನು ಇತರರಿಗಿಂತ ಹೆಚ್ಚೆಂದು ಪರಿಗಣಿಸಲಾಗಿದೆ.

4. ವಾರೀಸು ಹಕ್ಕಿನ ಕಾನೂನು ಕೂಡಾ ಹೇಗೆ ರಚಿಸಲಾಗಿದೆಯೆಂದರೆ ಒಬ್ಬ ವ್ಯಕ್ತಿಯು ಏನಾದರೂ ಸೊತ್ತು ಬಿಟ್ಟು ಸತ್ತರೆ, ಅದು ಹೆಚ್ಚಿರಲಿ – ಕಡಿಮೆ ಇರಲಿ ಒಂದೆಡೆ ಸಂಗ್ರಹವಾಗದಂತೆ ಮತ್ತು ಅವನ ಸಂಬಂಧಿಕರೆಲ್ಲರಿಗೂ ಹಂಚಿ ಹೋಗುವಂತೆ ಮಾಡಲಾಗಿದೆ. ಮಗ–ಮಗಳು, ಪತಿ–ಪತ್ನಿ, ತಾಯಿ–ತಂದೆ, ಸೋದರ–ಸೋದರಿಯರು ಮನುಷ್ಯನ ಅತ್ಯಧಿಕ ಸಮೀಪದ ಹಕ್ಕುದಾರರಾಗಿದ್ದಾರೆ. ಆದ್ದರಿಂದ ವಾರೀಸು ಸೊತ್ತಿನಲ್ಲಿ ಮೊದಲು ಅವರ ಪಾಲನ್ನು ನಿರ್ಣಯಿಸಲಾಗಿದೆ. ಒಂದು ವೇಳೆ ಈ ಪೈಕಿ ಯಾರೂ ಇಲ್ಲದಿದ್ದರೆ ಅನಂತರ ಯಾವ ಸಂಬಂಧಿಕರು ಹೆಚ್ಚು ನಿಕಟರಾಗಿದ್ದಾರೋ ಅವರಿಗೆ ಪಾಲು ದೊರೆಯುತ್ತದೆ. ಈ ರೀತಿ ಒಬ್ಬ ಮನುಷ್ಯನು ಸತ್ತ ಬಳಿಕ ಅವನು ಬಿಟ್ಟಗಲಿದ ಸೊತ್ತು ಅನೇಕ ಬಂಧುಗಳ ಕೆಲಸಕ್ಕೆ ಬರುತ್ತದೆ. ಇಸ್ಲಾಮಿನ ಈ ಕಾನೂನು ಜಗತ್ತಿನಲ್ಲಿಯೇ ಸರಿಸಾಟಿಯಿಲ್ಲದ ಕಾನೂನಾಗಿದೆ. ಈಗ ಇತರ ಜನಾಂಗಗಳು ಅದನ್ನು ಅಳವಡಿಸಲು ಆರಂಭಿಸಿವೆ. ಆದರೆ ಮುಸ್ಲಿಮರು ತಮ್ಮ ಅಜ್ಞಾನ ಮತ್ತು ತಿಳಿಗೇಡಿತನದಿಂದಾಗಿ ಅನೇಕ ವೇಳೆ ಈ ಕಾನೂನನ್ನು ಉಲ್ಲಂಘಿಸುತ್ತಿರುವುದು ಖೇದಕರವಾಗಿದೆ. ಮುಖ್ಯವಾಗಿ ಸ್ತ್ರೀಯರ ಪಾಲನ್ನು ಕೊಡದಿರುವುದು ಭಾರತೀಯ ಉಪ ಭೂಖಂಡದಲ್ಲಿ

ಮುಸ್ಲಿಮರಲ್ಲಿ ವ್ಯಾಪಕವಾಗಿದೆ. ಇದು ದೊಡ್ಡ ಅನ್ಯಾಯವಾಗಿದ್ದು ಪವಿತ್ರ ಕುರ್‌ಆನಿನ ಆಜ್ಞೆಗಳ ಸ್ಪಷ್ಟ ಉಲ್ಲಂಘನೆಯಾಗಿದೆ.

ಕುಟುಂಬದ ಬಳಿಕ ಮನುಷ್ಯನ ಸಂಪರ್ಕವು ಅವನ ಮಿತ್ರರು, ನೆರೆಹೊರೆಯವರು, ಕೇರಿಯವರು, ನಗರದವರು ಮತ್ತು ಯಾವುದಾದರೊಂದು ರೀತಿಯಲ್ಲಿ ಅವನೊಂದಿಗೆ ವ್ಯವಹರಿಸುವವರೊಂದಿಗೆ ಇರುತ್ತದೆ. ಈ ಕುರಿತು ಇಸ್ಲಾಮಿನ ವಿಧಿ ಹೀಗಿದೆ: ಅವರೆಲ್ಲರೊಂದಿಗೂ ಸತ್ಯ, ನ್ಯಾಯ ಮತ್ತು ಸದಾಚಾರದೊಂದಿಗೆ ವರ್ತಿಸಬೇಕು. ಯಾರಿಗೂ ಕಷ್ಟ ಕೊಡಬಾರದು, ಯಾರ ಮನಸ್ಸನ್ನೂ ನೋಯಿಸಬಾರದು. ಅಸಭ್ಯ ಮಾತು ಮತ್ತು ಬೈಗುಳಗಳಿಂದ ದೂರವಿರಬೇಕು. ಪರಸ್ಪರ ಸಹಕರಿಸಬೇಕು. ರೋಗಿಗಳ ಆರೈಕೆ ಮಾಡಬೇಕು. ಯಾರಾದರೂ ತೀರಿಕೊಂಡರೆ ಅವನ ಅಂತ್ಯ ಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಯಾರಿಗಾದರೂ ಸಂಕಷ್ಟ ಒದಗಿದರೆ ಅವನೊಂದಿಗೆ ಅನುಕಂಪ ತೋರಿಸಬೇಕು. ಬಡವರು, ನಿರ್ಗತಿಕರು ಮತ್ತು ಅಶಕ್ತರಿಗೆ ಗೌಪ್ಯವಾಗಿ ಸಹಾಯ ಒದಗಿಸಬೇಕು. ಅನಾಥೆಯರ ಮತ್ತು ವಿಧವೆಯರ ಮೇಲ್ವಿಚಾರಣೆಯನ್ನು ನಡೆಸಬೇಕು. ಹಸಿದವನಿಗೆ ಉಣ ಬಡಿಸಬೇಕು. ನಗ್ನರಾದವರಿಗೆ ಬಟ್ಟೆ ತೊಡಿಸಬೇಕು. ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ನೆರವಾಗಬೇಕು. ಅಲ್ಲಾಹನು ನಿಮಗೆ ಸಂಪತ್ತು ನೀಡಿದ್ದರೆ ಅದನ್ನು ನಿಮ್ಮ ಐಶಾರಾಮದಲ್ಲಿ ವ್ಯಯಿಸಬಾರದು. ಆದುದರಿಂದಲೇ ಚಿನ್ನ ಬೆಳ್ಳಿಯ ಪಾತ್ರೆಗಳನ್ನು ಬಳಸುವುದನ್ನೂ ರೇಶ್ಮೆ ಬಟ್ಟೆಗಳನ್ನು ಧರಿಸುವುದನ್ನೂ ನಿಮ್ಮ ಹಣವನ್ನು ವ್ಯರ್ಥ ಮನೋರಂಜನೆ ಮತ್ತು ಆಡಂಬರಗಳಲ್ಲಿ ವ್ಯಯಿಸುವುದನ್ನೂ ಇಸ್ಲಾಮ್ ನಿಷೇಧಿಸಿದೆ. ಏಕೆಂದರೆ ಸಹಸ್ರಾರು ವ್ಯಕ್ತಿಗಳಿಗೆ ಆಹಾರ ಒದಗಿಸಬಲ್ಲಂತಹ ಸಂಪತ್ತನ್ನು ಯಾವ ವ್ಯಕ್ತಿಯೂ ತನ್ನ ಮೇಲೆ ಮಾತ್ರ ಖರ್ಚು ಮಾಡಿ ಬಿಡಬಾರದು. ಅನೇಕರ ಹೊಟ್ಟೆ ತುಂಬಬಲ್ಲಂತಹ ಸಂಪತ್ತು ಕೇವಲ ಒಂದು ಆಭರಣದ ರೂಪದಲ್ಲಿ ನಿಮ್ಮ ಮೈ ಮೇಲೆ ಇರುವುದು, ಒಂದು ಪಾತ್ರೆಯ ರೂಪದಲ್ಲಿ ನಿಮ್ಮ ಮೇಜನ್ನು ಅಲಂಕರಿಸುವುದು, ಒಂದು ಜಮಖಾನೆಯ ರೂಪದಲ್ಲಿ ನಿಮ್ಮ ಕೋಣೆಯಲ್ಲಿ ಬಿದ್ದಿರುವುದು ಅಥವಾ ಸುಡುಮದ್ದಿನ ರೂಪದಲ್ಲಿ ಸುಟ್ಟು ಬೂದಿಯಾಗುವುದು ಅನ್ಯಾಯವಾಗಿದೆ.

ಇಸ್ಲಾಮ್ ನಿಮ್ಮ ಸಂಪತ್ತನ್ನು ನಿಮ್ಮಿಂದ ಕಸಿಯಬಯಸುವುದಿಲ್ಲ. ನೀವು ಸಂಪಾದಿಸಿದ ಅಥವಾ ವಾರೀಸು ಹಕ್ಕಿನಲ್ಲಿ ಪಡೆದ ಸೊತ್ತಿನ ಮಾಲಕರು ನೀವೇ ಆಗಿದ್ದೀರಿ. ನೀವು ನಿಮ್ಮ ಸೊತ್ತಿನಿಂದ ಪೂರ್ಣ ಪ್ರಯೋಜನ ಪಡೆಯುವ ಹಕ್ಕನ್ನು ಇಸ್ಲಾಮ್ ಮನ್ನಿಸು ತ್ತದೆ. ಯಾವ ಅನುಗ್ರಹವು ಅಲ್ಲಾಹನಿಂದ ನಿಮಗೆ ದೊರೆತಿದೆಯೋ ಅದರ ಪ್ರಭಾವವು ನಿಮ್ಮ ಬಟ್ಟೆ ಬರೆ, ಮನೆ ಅಥವಾ ವಾಹನಗಳಲ್ಲಿ ಪ್ರಕಟಗೊಳ್ಳುವುದನ್ನೂ ಇಸ್ಲಾಮ್ ಅನುಮತಿಸುತ್ತದೆ. ಆದರೆ ನೀವು ಒಂದು ಸರಳ ಮತ್ತು ಸಂತುಲಿತ ಜೀವನ ಸಾಗಿಸಬೇಕು. ನಿಮ್ಮ ಬೇಡಿಕೆಗಳು ಮಿತಿಮೀರಬಾರದು. ನಿಮ್ಮ ಮಾತ್ರವಲ್ಲ ನಿಮ್ಮ

ಬಂಧುಗಳ, ಮಿತ್ರರ, ನೆರೆಕರೆಯವರ, ಸಮುದಾಯದವರ, ದೇಶವಾಸಿಗಳ ಮತ್ತು ಇತರ ಮನುಷ್ಯರ ಹಕ್ಕುಗಳ ಬಗ್ಗೆಯೂ ಗಮನವಿರಬೇಕು ಎಂಬುದೇ ಅವರ ಶಿಕ್ಷಣದ ಉದ್ದೇಶ.

ಇನ್ನು ಈ ಸಣ್ಣ ಕ್ಷೇತ್ರಗಳಿಂದ ಹೊರಬಂದು ಇಡೀ ಲೋಕದ ಮುಸ್ಲಿಮರಿಗೆ ವ್ಯಾಪಿಸಿರುವ ದೊಡ್ಡ ಕ್ಷೇತ್ರದೆಡೆಗೆ ದೃಷ್ಟಿ ಹಾಯಿಸೋಣ. ಮುಸ್ಲಿಮರು ಪರಸ್ಪರರ ಹಿತದಲ್ಲಿ ನೆರವಾಗಲು ಮತ್ತು ಕೆಡುಕು ಉಂಟಾಗುವ ಸಂದರ್ಭಗಳೇ ಬರದಂತೆ ಸಾಧ್ಯವಿದ್ದಷ್ಟು ನೋಡಿಕೊಳ್ಳಲು ಈ ಕ್ಷೇತ್ರದಲ್ಲಿ ಇಸ್ಲಾಮ್ ಕೆಲವು ಕಾನೂನು ಮತ್ತು ನಿಯಮಗಳನ್ನು ನಿರ್ಣಯಿಸಿದೆ. ಉದಾಹರಣೆಗಾಗಿ ಆ ಪೈಕಿ ಕೆಲವು ನಿಯಮಗಳ ಕಡೆಗೆ ನಾವಿಲ್ಲಿ ಬೆಳಕು ಚೆಲ್ಲುತ್ತೇವೆ:

1. ಸಮೂಹದ ಚಾರಿತ್ರ್ಯ ಸಂರಕ್ಷಣೆಗಾಗಿ ಪರಸ್ಪರ ವಿವಾಹ ನಿಷಿದ್ಧವಲ್ಲದ ಸ್ತ್ರೀ–ಪುರುಷರು ಮುಕ್ತವಾಗಿ ಬೆರೆಯದಂತೆ ಆದೇಶಿಸಲಾಗಿದೆ. ಸ್ತ್ರೀಯರ ಸಮಾಜ ಮತ್ತು ಪುರುಷರ ಸಮಾಜ ಬೇರೆ ಬೇರೆಯಾಗಿರಬೇಕು. ಸ್ತ್ರೀಯರು ಹೆಚ್ಚಾಗಿ ತಮ್ಮ ಮನೆವಾರ್ತೆಯ ಕರ್ತವ್ಯದ ಕಡೆಗೆ ಗಮನ ಹರಿಸಬೇಕು. ಯಾವುದಾದರೂ ಅಗತ್ಯಕ್ಕಾಗಿ ಮನೆಯಿಂದ ಹೊರಬರುವುದು ಅನಿವಾರ್ಯವಾದಾಗ ಶೃಂಗಾರದೊಂದಿಗೆ ಹೊರಬರಬಾರದು. ಸರಳ ಉಡುಪು ಧರಿಸಿದ್ದು ಮೈ ಪೂರ್ತಿ ಮುಚ್ಚಿರಬೇಕು. ಅನಗತ್ಯವಾಗಿ ಮುಖ ಮತ್ತು ಕೈಯನ್ನು ತೋರಿಸಬಾರದು. ಯಾವುದಾದರೂ ನೈಜ ಅಗತ್ಯ ಬಂದಾಗ ಮುಖ ಮತ್ತು ಕೈಯ ಪರದೆಯನ್ನು ಸರಿಸಬಹುದು. ಇದರ ಜೊತೆಗೆ ಪರಸ್ತ್ರೀಯರನ್ನು ನೋಡಬಾರದೆಂದು ಪುರುಷರಿಗೆ ಆದೇಶಿಸಲಾಗಿದೆ. ಅಕಸ್ಮಾತ್ ದೃಷ್ಟಿ ಬಿದ್ದು ಬಿಟ್ಟರೆ ಅದನ್ನು ಬೇರೆಡೆಗೆ ತಿರುಗಿಸಬೇಕು. ಮತ್ತೊಮ್ಮೆ ನೋಡುವ ಪ್ರಯತ್ನ ಮಾಡುವುದು ಪಾಪವಾಗಿದೆ. ಅವರನ್ನು ಭೇಟಿಯಾಗುವ ಪ್ರಯತ್ನವನ್ನು ಮಾಡುವುದು ಇನ್ನಷ್ಟು ದೊಡ್ಡ ಪಾಪ. ಪ್ರತಿಯೊಬ್ಬ ಸ್ತ್ರೀ–ಪುರುಷರು ತಮ್ಮ ಚಾರಿತ್ರ್ಯವನ್ನು ಸಂರಕ್ಷಿಸಬೇಕು. ದೈಹಿಕ ಬಯಕೆಗಳ ಈಡೇರಿಕೆಗೆ ಅಲ್ಲಾಹನು ನಿಶ್ಚಯಿಸಿರುವ ವಿವಾಹ ಬಂಧನದ ಪರಿಧಿಯಿಂದ ಹೊರಬರುವುದಂತಿರಲಿ ಅದರ ಬಯಕೆಯೂ ಮನಸ್ಸಿನಲ್ಲಿ ಉಂಟಾಗದಂತೆ ನೋಡಿಕೊಳ್ಳಬೇಕು.

2. ಸಮಾಜದ ಚಾರಿತ್ರ್ಯ ಸಂರಕ್ಷಣೆಗಾಗಿಯೇ ರಚಿಸಲಾಗಿರುವ ಇನ್ನೊಂದು ನಿಯಮವೇನೆಂದರೆ ಯಾವ ಪುರುಷನೂ ಹೊಕ್ಕಳು ಮತ್ತು ಮೊಣಕಾಲಿನ ಮಧ್ಯದ ಭಾಗವನ್ನು ಮತ್ತು ಯಾವ ಸ್ತ್ರೀಯೂ ತನ್ನ ಮುಂಗೈ ಮತ್ತು ಮುಖದ ಹೊರತಾದ ಭಾಗಗಳನ್ನು ಯಾರ ಮುಂದೆಯೂ ತೆರೆಯಬಾರದು. ಅದು ಅವರ ಹತ್ತಿರದ ಸಂಬಂಧಿಕರಾದರೂ ಸರಿಯೆ. ಇದನ್ನು ಶರೀಅತ್‌ನ ಭಾಷೆಯಲ್ಲಿ ಸತ್ರ್ ಎನ್ನುತ್ತಾರೆ. ಇದನ್ನು ಮರೆಸುವುದು ಪ್ರತಿಯೊಬ್ಬ ಸ್ತ್ರೀ- ಪುರುಷರ ಮೇಲೆ ಕಡ್ಡಾಯವಾಗಿದೆ.

ಜನರಲ್ಲಿ ಲಜ್ಜೆಯ ಗುಣ ಉಂಟಾಗಬೇಕು ಮತ್ತು ಅನೈತಿಕತೆ ಹರಡುವಂತಹ ಅಶ್ಲೀಲತೆಗಳು ಸಮಾಜದಲ್ಲಿ ವ್ಯಾಪಕವಾಗಬಾರದು ಎಂಬುದೇ ಇಸ್ಲಾಮಿನ ಉದ್ದೇಶವಾಗಿದೆ.

3. ಚಾರಿತ್ರ್ಯವನ್ನು ಹಾಳುಗೆಡಹುವಂತಹ ಕೆಟ್ಟ ಕಾಮನೆಗಳನ್ನು ಉತ್ತೇಜಿಸುವ ಸಮಯ, ಆರೋಗ್ಯ ಮತ್ತು ಹಣವನ್ನು ಪೋಲು ಮಾಡುವ ಯಾವುದೇ ರೀತಿಯ ಮನೋರಂಜನೆ ಮತ್ತಿತರ ಚಟುವಟಿಕೆಗಳನ್ನು ಇಸ್ಲಾಮ್ ಮೆಚ್ಚುವುದಿಲ್ಲ. ಮನೋರಂಜನೆಯೂ ಅತ್ಯಗತ್ಯವಾದುದು. ಮನುಷ್ಯನಲ್ಲಿ ಜೀವನದ ಸ್ಫೂರ್ತಿ ಮತ್ತು ಕೆಲಸದ ಶಕ್ತಿ ಉಂಟು ಮಾಡುವಲ್ಲಿ ದುಡಿಮೆ ಮತ್ತು ಶ್ರಮದ ಜೊತೆಗೆ ಮನೋರಂಜನೆಯೂ ಅಗತ್ಯವಾಗಿದೆ. ಆದರೆ ಅದು ಆತ್ಮಕ್ಕೆ ಸ್ಫೂರ್ತಿಯನ್ನು ನೀಡುವಂತದ್ದಾಗಿರಬೇಕೇ ಹೊರತು ಅದನ್ನು ಇನ್ನಷ್ಟು ಕೆಡಿಸುವಂತಹದ್ದಾಗಿರಬಾರದು. ಸಹಸ್ರಾರು ಮಂದಿ ಒಟ್ಟಿಗೆ ಕುಳಿತು ವೀಕ್ಷಿಸುವಂತಹ ಅಪರಾಧದ ಕಟ್ಟುಕತೆಗಳು ಮತ್ತು ಅಶ್ಲೀಲ ದೃಶ್ಯಗಳು ಬಾಹ್ಯ ನೋಟಕ್ಕೆ ಎಷ್ಟೇ ಮನೋಹರವಾಗಿದ್ದರೂ ಅವು ಎಲ್ಲ ಜನಾಂಗಗಳ ಚಾರಿತ್ರ್ಯ ಮತ್ತು ಅಭಿರುಚಿಯನ್ನು ಕೆಡಿಸುವ ವಸ್ತುಗಳಾಗಿವೆ.

4. ಸಾಮುದಾಯಿಕ ಐಕ್ಯ ಮತ್ತು ಕ್ಷೇಮಾಭ್ಯುದಯಕ್ಕಾಗಿ ಗುಂಪುಗಾರಿಕೆಯಿಂದ ದೂರವಿರಬೇಕು. ಒಬ್ಬರನ್ನೊಬ್ಬರು ವಿರೋಧಿಸಬಾರದು. ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾದರೆ ಸತ್ಸಂಕಲ್ಪದೊಂದಿಗೆ ಕುರ್‌ಆನ್ ಮತ್ತು ಹದೀಸ್‌ನಿಂದ ಅದರ ತೀರ್ಮಾನ ಮಾಡುವ ಪ್ರಯತ್ನ ಮಾಡಬೇಕು. ಒಂದು ವೇಳೆ ಇತ್ಯರ್ಥವಾಗದಿದ್ದರೆ ಪರಸ್ಪರ ಜಗಳಾಡುವ ಬದಲು ಅದರ ತೀರ್ಮಾನವನ್ನು ಅಲ್ಲಾಹನಿಗೆ ಬಿಟ್ಟು ಬಿಡಬೇಕೆಂದು ಅದು ಮುಸ್ಲಿಮರಿಗೆ ಆದೇಶಿಸುತ್ತದೆ. ಸಮಾಜ ಕಲ್ಯಾಣದ ಕಾರ್ಯಗಳಲ್ಲಿ ಪರಸ್ಪರ ಸಹಕರಿಸಬೇಕು. ಸಮುದಾಯದ ನಾಯಕರನ್ನು ಅನುಸರಿಸಬೇಕು. ಗಲಭೆ ಗೊಂದಲಗಳಿಂದ ದೂರವಿರಬೇಕು. ಪರಸ್ಪರ ಗಲಭೆಗಳ ಮೂಲಕ ತಮ್ಮ ಶಕ್ತಿ ಮತ್ತು ಸಾಮುದಾಯಿಕ ಘನತೆಗೆ ಕುಂದುಂಟು ಮಾಡಬಾರದು ಎಂದೂ ಅದು ಆದೇಶಿಸುತ್ತದೆ.

5. ಮುಸ್ಲಿಮರಿಗೆ ಮುಸ್ಲಿಮೇತರ ಜನಾಂಗಗಳಿಂದ ವಿದ್ಯೆ ಮತ್ತು ಕಲೆಗಳನ್ನು ಹಾಗೂ ಅವುಗಳ ಉಪಯುಕ್ತ ವಿಧಾನಗಳನ್ನು ಕಲಿಯುವ ಪೂರ್ಣ ಅನುಮತಿ ಇದೆ. ಆದರೆ ಜೀವನದಲ್ಲಿ ಅವರ ಅಂಧಾನುಕರಣೆಯಿಂದ ದೂರವಿರಬೇಕೆಂದು ಆದೇಶಿಸಲಾಗಿದೆ. ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಅಂಧವಾಗಿ ಅನುಕರಿಸುವುದು ತನ್ನ ನಿಂದ್ಯತೆ ಮತ್ತು ನಿಕೃಷ್ಟತೆಯನ್ನು ಅಂಗೀಕರಿಸಿದಾಗ ಮಾತ್ರ. ಇದು ಗುಲಾಮಗಿರಿಯ ಅತ್ಯಂತ ಕೆಟ್ಟ ರೂಪವಾಗಿದೆ. ತನ್ನ ಸೋಲಿನ ಪ್ರತ್ಯಕ್ಷ ಘೋಷಣೆಯಾಗಿದೆ. ಇದರ ಅಂತಿಮ ಪರಿಣಾಮವೇನೆಂದರೆ ಅಂಧಾನುಕರಣೆ ಮಾಡುವ ಜನಾಂಗದ ಸಂಸ್ಕೃತಿ ನಾಶವಾಗಿಬಿಡುತ್ತದೆ. ಆದ್ದರಿಂದ ಪ್ರವಾದಿ

ಮುಹಮ್ಮದ್‌ರು(ಸ) ಇತರ ಜನಾಂಗದ ಅನುಕರಣೆ ಮಾಡುವುದನ್ನು ಬಲವಾಗಿ ತಡೆದಿದ್ದಾರೆ. ಯಾವುದೇ ಜನಾಂಗದ ಶಕ್ತಿಯು ಅದರ ವಸ್ತ್ರಧಾರಣೆ ಮತ್ತು ಜೀವನ ಕ್ರಮವನ್ನು ಅವಲಂಬಿಸಿರದೆ ಅದರ ಜ್ಞಾನ, ಸಂಘಟನೆ ಮತ್ತು ಕ್ರಿಯಾ ಶಕ್ತಿಯನ್ನು ಅವಲಂಬಿಸಿರುತ್ತದೆ ಎಂಬುದು ಸಾಮಾನ್ಯ ಬುದ್ಧಿಯ ಮನುಷ್ಯನೂ ತಿಳಿಯಬಲ್ಲ ವಿಷಯವಾಗಿದೆ. ಆದ್ದರಿಂದ ನೀವು ಶಕ್ತಿ ಬಯಸುವುದಾದರೆ ಇತರ ಜನಾಂಗಗಳಿಂದ ಅವರು ಶಕ್ತಿ ಗಳಿಸುವ ವಸ್ತುಗಳನ್ನು ಪಡೆಯಬೇಕೇ ಹೊರತು ಜನಾಂಗಗಳು ದಾಸ್ಯಕ್ಕೆ ಒಳಗಾಗಿ ಕಟ್ಟಕಡೆಗೆ ಇತರರಲ್ಲಿ ಲೀನವಾಗಿ ತನ್ನ ಸಾಮುದಾಯಿಕ ಅಸ್ತಿತ್ವವನ್ನೇ ಕಳೆದುಕೊಳ್ಳುವ ವಸ್ತುಗಳನ್ನಲ್ಲ.

ಮುಸ್ಲಿಮೇತರರೊಂದಿಗೆ ವ್ಯವಹರಿಸುವಾಗ ಸಂಕುಚಿತ ಮನೋಭಾವ ಮತ್ತು ಸಂಕುಚಿತ ದೃಷ್ಟಿಕೋನದಿಂದ ದೂರವಿರಬೇಕೆಂದು ಆದೇಶಿಸಲಾಗಿದೆ. ಅವರ ಮಹಾತ್ಮರನ್ನು ಹೀಯಾಳಿಸುವ ಮತ್ತು ಅವರ ಧರ್ಮವನ್ನು ನಿಂದಿಸುವ ಎಲ್ಲ ಕೆಲಸ ಗಳನ್ನೂ ನಿಷೇಧಿಸಲಾಗಿದೆ. ಅವರೊಂದಿಗೆ ಜಗಳ ಕಾಯುವ ಮನೋಭಾವ ಇಟ್ಟು ಕೊಳ್ಳಬಾರದೆಂದೂ ಆದೇಶಿಸಲಾಗಿದೆ. ಅವರು ನಮ್ಮೊಂದಿಗೆ ಶಾಂತಿ ಸಮಾಧಾನ ದೊಂದಿಗಿದ್ದು ನಮ್ಮ ಹಕ್ಕುಗಳಲ್ಲಿ ಹಸ್ತಕ್ಷೇಪ ನಡೆಸದೇ ಇದ್ದರೆ ನಾವೂ ಅವರೊಂದಿಗೆ ಶಾಂತಿ ಮತ್ತು ಮೈತ್ರಿಯೊಂದಿಗಿರಬೇಕು ಮತ್ತು ನ್ಯಾಯ ಪಾಲಿಸಬೇಕೆಂದು ಆದೇಶಿಸ ಲಾಗಿದೆ. ನಮ್ಮ ಇಸ್ಲಾಮೀ ಸಭ್ಯತೆಯ ಬೇಡಿಕೆಯೇನೆಂದರೆ ನಾವು ಅವರೊಂದಿಗೆ ಅತ್ಯಧಿಕ ಮಾನವೀಯ ಅನುಕಂಪ ಮತ್ತು ಸಚ್ಚಾರಿತ್ರ್ಯದೊಂದಿಗೆ ವರ್ತಿಸಬೇಕು. ದುರ್ನಡತೆ, ಅನ್ಯಾಯ ಮತ್ತು ಸಂಕುಚಿತ ಮನಸ್ಸು ಓರ್ವ ಮುಸ್ಲಿಮನಿಗೆ ಭೂಷಣ ವಾದುದಲ್ಲ. ಮುಸ್ಲಿಮರನ್ನು ಲೋಕದಲ್ಲಿ ಸೃಷ್ಟಿಸಿರುವುದು ಸಚ್ಚಾರಿತ್ರ್ಯ, ಸಭ್ಯತೆ ಮತ್ತು ಒಳ್ಳೆಯತನದ ಅತ್ಯುತ್ತಮ ಮಾದರಿಯಾಗಿ ತಮ್ಮ ತತ್ವಗಳ ಮೂಲಕ ಜನರ ಮನಸೂರೆಗೊಳ್ಳಲಿಕ್ಕಾಗಿದೆ.

## ಇತರ ಸೃಷ್ಟಿಗಳ ಹಕ್ಕುಗಳು

ಕೊನೆಯದಾಗಿ, ನಾವು ಸಂಕ್ಷಿಪ್ತವಾಗಿ ನಾಲ್ಕನೇ ವಿಧದ ಹಕ್ಕುಗಳ ಕುರಿತು ವಿವರಿಸುವೆವು:

ಅಲ್ಲಾಹನು ಅಸಂಖ್ಯ ಸೃಷ್ಟಿಗಳ ಮೇಲೆ ಮನುಷ್ಯನಿಗೆ ಅಧಿಕಾರವನ್ನು ದಯಪಾಲಿಸಿದ್ದಾನೆ. ಮನುಷ್ಯನು ತನ್ನ ಶಕ್ತಿಯಿಂದ ಅವುಗಳನ್ನು ಅಧೀನಗೊಳಿಸುತ್ತಾನೆ. ಅವುಗಳಿಂದ ಕೆಲಸ ಮಾಡಿಸುತ್ತಾನೆ. ಅವುಗಳಿಂದ ಪ್ರಯೋಜನ ಪಡೆಯುತ್ತಾನೆ. ಉನ್ನತ ಸೃಷ್ಟಿಯಾಗಿರುವ ನೆಲೆಯಲ್ಲಿ ಅವನಿಗೆ ಹಾಗೆ ಮಾಡುವ ಪೂರ್ಣ ಅಧಿಕಾರ ಇದೆ. ಆದರೆ ಆ ವಸ್ತುಗಳಿಗೂ ಮನುಷ್ಯನ ಮೇಲೆ ಕೆಲವು ಹಕ್ಕುಗಳಿವೆ. ಆ ಹಕ್ಕುಗಳೇ ನೆಂದರೆ ಮನುಷ್ಯನು ಅವುಗಳನ್ನು ವ್ಯರ್ಥವಾಗಿ ಪೋಲು ಮಾಡಬಾರದು. ಅವುಗಳಿಗೆ

ಅನಗತ್ಯವಾಗಿ ಕಷ್ಟ ಅಥವಾ ನಷ್ಟವನ್ನುಂಟು ಮಾಡಬಾರದು. ತನ್ನ ಲಾಭಕ್ಕಾಗಿ ಅವುಗಳಿಗೆ ಅನಿವಾರ್ಯವಾದಷ್ಟು ಕನಿಷ್ಠ ನಷ್ಟ ಉಂಟುಮಾಡಬೇಕು. ಅವುಗಳನ್ನು ಬಳಸಲು ಅತ್ಯುತ್ತಮ ವಿಧಾನವನ್ನು ಅನುಸರಿಸಬೇಕು.

ಶರೀಅತ್‌ನಲ್ಲಿ ಈ ಬಗ್ಗೆ ಅನೇಕ ವಿಧಿಗಳನ್ನು ನಿಶ್ಚಯಿಸಲಾಗಿದೆ. ಉದಾಹರಣೆಗೆ ಪ್ರಾಣಿಗಳನ್ನು ಕೊಲ್ಲುವ ಅನುಮತಿಯನ್ನು ಕೇವಲ ಅವುಗಳ ನಷ್ಟದಿಂದ ಪಾರಾಗಲಿಕ್ಕಾಗಿ ಅಥವಾ ಆಹಾರಕ್ಕಾಗಿ ಕೊಡುತ್ತದೆಯೇ ಹೊರತು ಆಟ ವಿನೋದಗಳಿಗಾಗಿ ಯಾವ ಪ್ರಾಣಿಯನ್ನೂ ವಧಿಸಬಾರದೆಂದು ಆದೇಶಿಸುತ್ತದೆ. ತಿನ್ನುವ ಪ್ರಾಣಿಗಳನ್ನು ಕೊಲ್ಲಲು ದಿಬ್ಹ್ ಮಾಡುವ ವಿಧಾನವನ್ನು ನಿರ್ಣಯಿಸಲಾಗಿದೆ. ಇದು ಆ ಪ್ರಾಣಿಯಿಂದ ಉಪಯುಕ್ತ ಮಾಂಸ ಪಡೆಯುವ ಅತ್ಯುತ್ತಮ ವಿಧಾನವಾಗಿದೆ. ಇದರ ಹೊರತು ಕಡಿಮೆ ಕಷ್ಟಕರವಾದ ವಿಧಾನಗಳಾದರೆ ಅದರಿಂದ ಮಾಂಸದ ಅನೇಕ ಪ್ರಯೋಜನಗಳು ವ್ಯರ್ಥವಾಗುತ್ತವೆ. ಒಂದು ವೇಳೆ ಮಾಂಸದ ಪ್ರಯೋಜನಗಳು ಸುರಕ್ಷಿತವಾಗಿರುವುದಾದರೆ ವಧೆಯ ಕ್ರಮವು ಹೆಚ್ಚು ಕಷ್ಟಕರವಾಗಿರುತ್ತದೆ. ಇಸ್ಲಾಮ್ ಈ ಎರಡೂ ವಿಧಾನಗಳಿಂದ ದೂರವಿರಬಯಸುತ್ತದೆ. ಇಸ್ಲಾಮಿನಲ್ಲಿ ಜಾನುವಾರುಗಳಿಗೆ ಕಿರುಕುಳ ನೀಡಿ ಕರುಣೆ ಇಲ್ಲದೆ ಅವುಗಳನ್ನು ಕೊಲ್ಲುವುದು ತೀರಾ ಅಪ್ರಿಯವಾಗಿದೆ. ಅದು ವಿಷ ಜಂತುಗಳನ್ನು ಮತ್ತು ಕ್ರೂರ ಮೃಗಗಳನ್ನು ಕೊಲ್ಲಲು ಅನುಮತಿಸಿರುವುದು ಮನುಷ್ಯನ ಪ್ರಾಣವು ಅವುಗಳ ಪ್ರಾಣಕ್ಕಿಂತ ಹೆಚ್ಚು ಅಮೂಲ್ಯವಾಗಿದೆ ಎಂಬ ಕಾರಣಕ್ಕಾಗಿ ಮಾತ್ರ. ಆದರೆ ಅವುಗಳನ್ನು ಕೂಡಾ ಕಿರುಕುಳ ನೀಡಿ ಕೊಲ್ಲುವುದು ಯುಕ್ತವಲ್ಲ. ಸವಾರಿಗಾಗಿ ಅಥವಾ ಸರಕು ಹೇರಲಿಕ್ಕಾಗಿ ಬಳಸಲ್ಪಡುವ ಪ್ರಾಣಿಗಳನ್ನು ಹಸಿವಿನಿಂದಿರಿಸುವುದು, ಅವುಗಳಿಂದ ಅತ್ಯಂತ ಕಠಿಣ ಶ್ರಮ ಮಾಡಿಸುವುದು ಮತ್ತು ಕರುಣೆ ಇಲ್ಲದೆ ಅವುಗಳನ್ನು ಹೊಡೆಯುವುದರಿಂದ ತಡೆಯಲಾಗಿದೆ. ವಿನಾ ಕಾರಣ ಹಕ್ಕಿಗಳನ್ನು ಸೆರೆಯಲ್ಲಿಡುವುದು ಕೂಡಾ ಅಪ್ರಿಯವೆನಿಸಿದೆ. ಪ್ರಾಣಿಗಳಂತಿರಲಿ ಮರಗಿಡಗಳಿಗೆ ಕೂಡಾ ವಿನಾಕಾರಣ ನಷ್ಟ ಉಂಟು ಮಾಡುವುದನ್ನು ಇಸ್ಲಾಮ್ ನಿಷೇಧಿಸುತ್ತದೆ. ನೀವು ಅವುಗಳ ಫಲ-ಪುಷ್ಪಗಳನ್ನು ಉಪಯೋಗಿಸಬಹುದೇ ಹೊರತು ಅವುಗಳನ್ನು ವ್ಯರ್ಥವಾಗಿ ನಾಶ ಮಾಡಬಾರದು. ವೃಕ್ಷಗಳಿಗಂತೂ ಜೀವವಿದೆ. ನಿರ್ಜೀವಿಗಳಾದ ವಸ್ತುಗಳನ್ನು ಕೂಡ ವ್ಯರ್ಥಗೊಳಿಸಲು ಇಸ್ಲಾಮ್ ಅನುಮತಿಸುವುದಿಲ್ಲ. ನೀರನ್ನು ಕೂಡಾ ವ್ಯರ್ಥ ಮಾಡಬಾರದೆಂದು ಅದು ಆದೇಶಿಸುತ್ತದೆ.

## ವಿಶ್ವವ್ಯಾಪಿ ಹಾಗೂ ಶಾಶ್ವತ ಶರೀಅತ್

ಇದು ಪ್ರವಾದಿ ಮುಹಮ್ಮದ್(ಸ) ಅವರ ಮೂಲಕ ಇಡೀ ವಿಶ್ವಕ್ಕೆ ಎಲ್ಲ ಕಾಲಗಳಿಗಾಗಿ ನೀಡಲ್ಪಟ್ಟ ಶರೀಅತ್‌ನ ಕಾನೂನು ಮತ್ತು ನಿಯಮಗಳ ಒಂದು ಸ್ಥೂಲ ಸಾರಾಂಶವಾಗಿದೆ. ಈ ಶರೀಅತ್‌ನಲ್ಲಿ ಮನುಷ್ಯರ ಮಧ್ಯೆ ವಿಶ್ವಾಸ ಮತ್ತು ಕರ್ಮಗಳ

ಹೊರತು ಇನ್ನಾವ ವಿಷಯದಲ್ಲೂ ಅಂತರವಿರಿಸಲಾಗಿಲ್ಲ. ಯಾವ ಧರ್ಮ ಮತ್ತು ಶರೀಅತ್‌ಗಳಲ್ಲಿ ವಂಶ, ದೇಶ ಮತ್ತು ವರ್ಣದ ದೃಷ್ಟಿಯಿಂದ ಮನುಷ್ಯರಲ್ಲಿ ಭಿನ್ನತೆಯನ್ನು ಕಲ್ಪಿಸಲಾಗಿದೆಯೋ ಅವುಗಳು ಎಂದೂ ವಿಶ್ವಧರ್ಮವಾಗಲಾರವು. ಏಕೆಂದರೆ ಒಂದು ವಂಶದ ಮನುಷ್ಯ ಇನ್ನೊಂದು ವಂಶದವನಾಗಲಾರ. ಇಡೀ ವಿಶ್ವವು ಸಂಕ್ಷಿಪ್ತಗೊಂಡು ಒಂದು ರಾಷ್ಟ್ರದೊಳಗೆ ಸೀಮಿತಗೊಳ್ಳುವುದೂ ಸಾಧ್ಯವಿಲ್ಲ. ಅಂತೆಯೇ ಆಫ್ರಿಕಾದವನ ಕರಿಯ ಬಣ್ಣ, ಚೀನಾದವನ ಹಳದಿ ವರ್ಣ ಮತ್ತು ಆಂಗ್ಲನ ಬಿಳಿವರ್ಣ ಎಂದೂ ಬದಲಾಗಲಾರದು. ಆದ್ದರಿಂದ ಇಂತಹ ಧರ್ಮ ಮತ್ತು ಕಾನೂನುಗಳು ಅನಿವಾರ್ಯವಾಗಿ ಒಂದೇ ಜನಾಂಗಕ್ಕೆ ಸೀಮಿತವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಇಸ್ಲಾಮ್ ಒಂದು ವಿಶ್ವವ್ಯಾಪಿ ಶರೀಅತ್ ಆಗಿದೆ. 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್‌ರಸೂಲುಲ್ಲಾಹ್' ಎಂಬ ಪವಿತ್ರ ವಚನದ ಮೇಲೆ ವಿಶ್ವಾಸವಿರಿಸುವ ಪ್ರತಿಯೊಬ್ಬನೂ ಈ ಶರೀಅತ್‌ನ ಮೇರೆಗೆ ಮುಸ್ಲಿಮ್ ಸಮುದಾಯದಲ್ಲಿ ಸಂಪೂರ್ಣ ಸಮಾನವಾದ ಹಕ್ಕುಗಳೊಂದಿಗೆ ಶಾಮೀಲಾಗುತ್ತಾನೆ. ಇಲ್ಲಿ ವಂಶ, ಭಾಷೆ, ದೇಶ, ವರ್ಗ, ವರ್ಣವೇ ಮೊದಲಾದ ಯಾವುದರ ಅಂತರವೂ ಉಳಿಯುವುದಿಲ್ಲ.

ಈ ಶರೀಅತ್ ಒಂದು ಶಾಶ್ವತ ಶರೀಅತ್ ಆಗಿದೆ. ಇದರ ಕಾನೂನುಗಳು ಒಂದು ವಿಶಿಷ್ಟ ಜನಾಂಗ ಮತ್ತು ವಿಶಿಷ್ಟ ಕಾಲದ ಆಚಾರ ಸಂಪ್ರದಾಯಗಳನ್ನು ಒಳಗೊಂಡಿಲ್ಲ. ಬದಲಾಗಿ ಮನುಷ್ಯನು ಯಾವ ಪ್ರಕೃತಿಯಲ್ಲಿ ಸೃಷ್ಟಿಸಲ್ಪಟ್ಟಿರುವನೋ ಅದೇ ಪ್ರಕೃತಿಯ ನಿಯಮಗಳನ್ನೊಳಗೊಂಡಿದೆ. ಈ ಪ್ರಕೃತಿಯು ಎಲ್ಲ ಕಾಲ ಮತ್ತು ಎಲ್ಲ ಸ್ಥಿತಿಗಳಲ್ಲಿ ಸ್ಥಿರವಾಗಿರುವಾಗ ಎಲ್ಲ ಕಾಲ ಮತ್ತು ಎಲ್ಲ ಸ್ಥಿತಿಗಳಲ್ಲಿ ಅದರ ನಿಯಮದ ಮೇಲೆ ರಚಿತವಾದ ಕಾನೂನುಗಳೂ ಸ್ಥಿರವಾಗಿರಬೇಕು.